ಡಾ. ಶಿವರಾಮ ಕಾರಂತರ
"ಚಿಗುರಿದ ಕನಸು" ಕಾದಂಬರಿ ಆಧಾರಿತ

# ಚಿಗುರಿದ ಕನಸು

**ಚಿತ್ರಕಥೆ**
(ನಿರ್ದೇಶಕರ ಟಿಪ್ಪಣಿ ಮತ್ತು ಚಿತ್ರೀಕರಣದ ವಿವರಗಳೊಂದಿಗೆ)

ನಿರ್ದೇಶನ

**ಟಿ.ಎಸ್. ನಾಗಾಭರಣ**

ಚಿತ್ರಕಥೆ

**ಜಯಂತ ಕಾಯ್ಕಿಣಿ**

**ಟಿ.ಎಸ್. ನಾಗಾಭರಣ**

ಸಂಭಾಷಣೆ

**ಜಯಂತ ಕಾಯ್ಕಿಣಿ**

**ಪ್ರಕಾಶಕರು:**
ಟೋಟಲ್ ಕನ್ನಡ
638, 31ನೇ ಅಡ್ಡ ರಸ್ತೆ, 10ನೇ 'ಬಿ' ಮುಖ್ಯ ರಸ್ತೆ
ಜಯನಗರ 4ನೇ ವಿಭಾಗ, ಬೆಂಗಳೂರು – 560 011
ದೂರವಾಣಿ: 080–4146 0325 ಸನಿಹವಾಣಿ: 92434 55672
ಮಿಂಚಂಚೆ: support@totalkannada.com
ಅಂತರ್ಜಾಲ: www.totalkannada.com

**ಚಿಗುರಿದ ಕನಸು: ಚಿತ್ರಕಥೆ**
(ನಿರ್ದೇಶಕರ ಟಿಪ್ಪಣಿ ಮತ್ತು ಚಿತ್ರೀಕರಣದ ವಿವರಗಳೊಂದಿಗೆ)

**ಲೇಖಕರು**: ಟಿ.ಎಸ್. ನಾಗಾಭರಣ

**ಪ್ರಕಾಶಕರು**:
ಟೋಟಲ್ ಕನ್ನಡ
638, 31ನೇ ಅಡ್ಡ ರಸ್ತೆ, 10ನೇ 'ಬಿ' ಮುಖ್ಯ ರಸ್ತೆ
ಜಯನಗರ 4ನೇ ವಿಭಾಗ, ಬೆಂಗಳೂರು – 560 011
ದೂರವಾಣಿ: 080–4146 0325 ಸನಿಹವಾಣಿ: 92434 55672
ಮಿಂಚಂಚೆ: support@totalkannada.com
ಅಂತರ್ಜಾಲ: www.totalkannada.com

**ಹಕ್ಕುಗಳು**: ಲೇಖಕರದು

**ISBN**: 978-93-83727-03-2

**ಪುಟಗಳು**: xx+216

**ಪ್ರತಿಗಳು**: 1000

**ಪ್ರಥಮ ಮುದ್ರಣ**: ಏಪ್ರಿಲ್ 2014

**ಬೆಲೆ**: ₹ 200/-

**ಡಿ.ಟಿ.ಪಿ:** ಪ್ರಸನ್ನಕುಮಾರ್. ಎಂ

**ಪುಟವಿನ್ಯಾಸ**: ಮೋಹನ್ ಕಾಮಾಕ್ಷಿ – +91 94487 07758

**ಮುದ್ರಕರು**:
ಬಿ.ಕೆ. ಇಂಪ್ರೆಶ್ಷನ್ಸ್
ಬೆಂಗಳೂರು

# ಮುನ್ನುಡಿ

ಈ ಕಾದಂಬರಿಯ ಬರವನ್ನು ಬಹು ಮೊದಲೇ ಸೂಚಿಸಿದ್ದೆನಾದರೂ ಅಚ್ಚು ಮನೆಯ ವಾಸ ಇದಕ್ಕೆ ಸಾಕಷ್ಟು ಕಾಲ ಹಿಡಿಯಿತು. ಅಂತು ಈಗ ಅದನ್ನು ತಮ್ಮ ಮುಂದೆ ಇರಿಸುತ್ತಿದ್ದೇನೆ. ಇದೂ ನನ್ನಿತರ ಬರಹಗಳಂತೆ ಕನ್ನಡ ಜಿಲ್ಲೆಯ ಒಂದು ಚಿತ್ರವನ್ನು ಕೊಡುತ್ತದೆ. ಇದು 'ಅಸಾಧ್ಯ'ದ ಚಿತ್ರವಲ್ಲ. ನಿರಾಶೆಯ ಚಿತ್ರವಲ್ಲ. ಸಾಧ್ಯದ ಚಿತ್ರ–ತಕ್ಕ ಕಾಲ. ತಕ್ಕ–ಸನ್ನಿವೇಷ, ತಕ್ಕ ವ್ಯಕ್ತಿ, ತಕ್ಕ ಸಾಹಸಗಳು ಕೂಡಿ ಬಂದಾಗ–ಒದಗಿ ಬರುವ ಒಂದು ಆಶಾದಾಯಕ ಪರಿಸ್ಥಿತಿಯನ್ನು ಇಲ್ಲಿ ಚಿತ್ರಿಸಲು ಪ್ರಯತ್ನಿಸಿದ್ದೇನೆ. ಬರಿಯ ಕೃಷಿ ಜೀವನದ ಚಿತ್ರವೇ ಇಲ್ಲಿನ ಮುಖ್ಯವಸ್ತುವಾದುದರಿಂದ ಓದುಗರಿಗೆ ಹೇಗೆ ಅನಿಸೀತೆಂದು ಹೇಳಲಾರೆ. ಆದರೆ ಇಲ್ಲಿನ ವ್ಯಕ್ತಿಗಳ ಸಂಖ್ಯೆಯು ಮಿತವಾಗಿದ್ದರೂ, ಅವರ ಸಾಂಸಾರಿಕ ಜೀವನದ ಒಂದೆರೆಡು ಪ್ರಾಮುಖ್ಯ ಸೆಲೆಯನ್ನು ಸೇರಿಕೊಂಡು, ಸಚಿತ್ರದ ಅಂಗವಾಗಿ ಬಂದಿದೆ.

ನಮ್ಮ ಜಿಲ್ಲೆಯ ಘಟ್ಟದ ಸರಹದ್ದಿನಲ್ಲಿ, ಅದರ ಆಚೆಯೂ ಈಚೆಯೂ 'ಬಂಗಾಡಿ'ಯಂತೆ ಎಷ್ಟೆಷ್ಟೋ ಪ್ರದೇಶಗಳಿವೆ–ಕೃಷಿಕನ ಕನಸಾಗಬಲ್ಲಂಥವು. ಆದರೆ ಅವನ್ನು ಆದರ್ಶವಾಗಿ ಮಾಡಿತೋರಿಸಲು ಲೂಯಿ ಬ್ರೂಮ್ ಫೀಲ್ಡ್‌ನಂತಹ ಸಾಹಸಿಗಳಾಗಿದ್ದಲ್ಲಿ–ಸುತ್ತಲಿನ ಜೀವನಕ್ಕೆ, ಈ ಲೇಖಕ ತೋರಿದ ಆಸೆಗಿಂತ ನೂರುಮಡಿ ಚೆಲುವಿನ ದಾರಿಯನ್ನು ತೋರಿಸಲು ಸಾಧ್ಯವಾದೀತು. ಕಾದಂಬರಿ ಹೇಳಬಹುದಾದ ಸಂದೇಶವನ್ನು ನನ್ನ ಮುನ್ನುಡಿ ಹೇಳಬೇಕಾಗಿಲ್ಲವಲ್ಲ.

*27–6–1951* ಇತಿ
*ಪುತ್ತೂರು* ***ಶಿವರಾಮ ಕಾರಂತ***

***(27–09–1951ರಲ್ಲಿ ಚಿಗುರಿದ ಕನಸು ಕಾದಂಬರಿಯು ಪ್ರಕಟವಾದಾಗ ಶ್ರೀ ಶಿವರಾಮ ಕಾರಂತರು ಬರೆದ ಮುನ್ನುಡಿ.)***

# ಒಂದು ರಾಜ ಯೋಗ..

ಶಿವರಾಮ ಕಾರಂತರ ಕಾದಂಬರಿಯನ್ನಾಧರಿಸಿದ 'ಚಿಗುರಿದ ಕನಸು' ಚಿತ್ರಕ್ಕೆ ಚಿತ್ರಕಥೆ–ಸಂಭಾಷಣೆ ಬರೆಯಬೇಕೆಂದು ಕೋರಿ ನಾಗಾಭರಣ ನನ್ನ ಬಳಿ ಬಂದಾಗ, ನಾನು ಒಪ್ಪಿಕೊಳ್ಳಲು ಮುಖ್ಯ ಕಾರಣ– ಅದು ರಾಜ್‌ಕುಮಾರ್ ಮನೆಯ ಚಿತ್ರವಾದ್ದರಿಂದ, ನನ್ನ ಎಂದಿನ ಆರಾಧ್ಯ ಜೀವ ರಾಜ್‌ಕುಮಾರ್ ಜೊತೆ ತುಸುವಾದರೂ ಸಂಪರ್ಕ, ಸನಿಹದ ಒಡನಾಟ ಸಿಗಬಹುದು ಎಂಬುದೇ ಆಗಿತ್ತು. ನನ್ನ ಕನಸು ಚಿಗುರಿಯೇ ಬಿಟ್ಟಿತು.

ಸುಮಾರು ಎರೆಡು ತಿಂಗಳು ಕಾಲ ಅವರ ಆಪ್ತ ಮನೆಯಲ್ಲಿ ನಡೆದ ಚಿತ್ರದ 'ಕಥಾ ಸತ್ಸಂಗ' ನನ್ನ ಬಾಳಿನ ಅನುಪಮ ಅನುಭವಗಳಲ್ಲೊಂದಾಗಿದೆ. ರಾಜ್‌ಕುಮಾರ್ ಸಹೋದರ ವರದಪ್ಪನವರೇ ಈ ಸತ್ಸಂಗದ ಸೂತ್ರಧಾರ. ಕಥೆಯ ದೃಶ್ಯಗಳನ್ನು ನಾನು, ನಾಗಾಭರಣ ಮತ್ತು ವರದಪ್ಪ ಚರ್ಚಿಸುತ್ತ, ಹೆಣೆಯುತ್ತ ಹೋದಂತೆ ರಾಜ್‌ಕುಮಾರ್ ತನ್ಮಯರಾಗಿ ಆಲಿಸುತ್ತ ಪಕ್ಕನೆ ಯಾವುದೋ ಒಂದು ದೃಶ್ಯದಲ್ಲಿ ಮುಳುಗಿಬಿಡುತ್ತಾರೆ. ಮತ್ತು ತಾವೇ ಒಂದು ಪಾತ್ರದೊಳಗೆ ಹೊಕ್ಕು ಆ ಪಾತ್ರದ ಮಾತುಗಳನ್ನು ಆಡಿ ಅಭಿನಯಿಸಲು ತೊಡಗುತ್ತಿದ್ದರು. ತಂದೆ–ಮಗ–ಅಜ್ಜಿ–ನಾಯಕಿ ಹೀಗೆ ಯಾವುದೋ ಒಂದು ಪಾತ್ರದ ಅವರ ಪರಕಾಯ ಪ್ರವೇಶ ಆ ಸನ್ನಿವೇಶವನ್ನು ಬೇರೆಯದೇ ನೆಲೆಗೆ ಏರಿಸಿ ಬಿಡುತ್ತಿತ್ತು. ಅದರಲ್ಲಿ ಬಾಲ್ಯದಲ್ಲೇ ಊರು ತೊರೆದು ಮುಂಬೈ, ದಿಲ್ಲಿ ಅಂತಹ ಹೋರಾಟದ ಬದುಕು ನಡೆಸಿದ ತಂದೆ ಒಂದು ದಿನ ತರುಣ ಮಗನ ಬಾಯಲ್ಲಿ ಹೊಸತಾಗಿ ಕಲಿತ ಕನ್ನಡ ಭಾಷೆ ಕೇಳಿ ತನ್ನ ಬೇರುಗಳ ಕುರಿತು ಉಮ್ಮಳವನ್ನು ಮಗನ ಜೊತೆಯಲ್ಲಿ ಹಂಚಿಕೊಳ್ಳುವ ದೃಶ್ಯ ಇದೆ. 'ಮಾತಾಡು ಕಂದ.., ನಿನ್ನ ಬಾಯಲ್ಲಿ ಈವತ್ತು ಕನ್ನಡ ಕೇಳಿ ಮುಚ್ಚಿ ಹೋದ ಪ್ರಪಂಚವೊಂದರ ಬಾಗಿಲು ತೆರೆದಂತಾಯ್ತು. ಮೈ ಜುಮ್ಮಂತು...' ಎನ್ನುವ ಮಾತು ಬಂದಿದ್ದೇ ರಾಜ್‌ಕುಮಾರ್ ಅದನ್ನು ಇನ್ನೂ ಭಾವಪರವಶವಾಗಿ ತಮ್ಮಷ್ಟಕ್ಕೆ ತಾವೇ ಹೇಳಿ ಕಣ್ಣೀರುಗರೆಯುತ್ತಿದ್ದರು. ಆಮೇಲೆ ಕೆನ್ನೆಯಲ್ಲಿ ಕಂಬನಿ ಇದ್ದಾಗಲೇ ಹೊಸ ಆಟಿಗೆ ಹಿಡಿದು ನಗುವ ಮಗುವಿನಂತೆ ನಮ್ಮನ್ನೆಲ್ಲಾ ಮುಗುಳು ನಗುತ್ತ ಸುಮ್ಮನೆ ನೋಡುತ್ತಿದ್ದರು. 'ಬಡ್ಡೀ ಮಗಂದು.. ಮನಸ್ಸು ನೋಡಿ.. ಒಳ್ಳೊಳ್ಳೇ ಭಾವಪೂರ್ಣ ಸನ್ನಿವೇಶಗಳಲ್ಲಿ ನುಗ್ಗಿಯೇ ಬಿಡುತ್ತೆ..' ಎನ್ನುತ್ತ 'ತಿನ್ನಿ ತಿನ್ನಿ' ಎಂದು ಎದುರಿನ ಟೀಪಾಯಿ ಮೇಲಿನ ಕುರುಕಲು ತಿಂಡಿಯನ್ನು ತಿನ್ನಲು ಎಲ್ಲರಿಗೂ ಪುಸಲಾಯಿಸುತ್ತಿದ್ದರು. 'ಡ್ರಿಂಕ್ಸ್ ತಗೋವಾಗ ಕುರುಕಲು ತಿಂಡಿ ತಗೋತಾರಲ್ಲಾ.. ಹಾಗೇ ಇದು ಕಥೆಗೆ ಚಾಕಣ, ತಿಂದಷ್ಟೂ ಕಥೆಗೆ ನಶೆ...' ಎನ್ನುತ್ತಿದ್ದರು.

ನಾನಂತು ಈ ಕಥಾ ಸತ್ಸಂಗದುದ್ದಕ್ಕೂ ಅಯಾಚಿತವಾಗಿ ಪ್ರತ್ಯಕ್ಷನಾದ ದೇವರನ್ನು ನೋಡುವ ಭಕ್ತನಂತೆ ಅವರನ್ನೇ ನೋಡುತ್ತ ಕೂತಿರುತ್ತಿದ್ದೆ. ಅವರ ಶರ್ಟಿನ ಮಡಿಸಿದ ಸಡಿಲು ತೋಳು, ಮೈಕಾಂತಿ, ಕೂರುವ ಭಂಗಿ, ಮಂಡಿಯ ನೋವನ್ನೂ ಮಧುರ ಯಾತನೆಯಂತೆ 'ಆಹಾ' ಎಂದು ಭರಿಸುವ ಬಗೆ, ದೃಶ್ಯದ ಕುರಿತ ತಮ್ಮ ಅಸಮ್ಮತಿಯನ್ನೂ ಅವರು ನಯವಾಗಿ ಮಂಡಿಸುವ ರೀತಿ, ಮಂತ್ರಮುಗ್ಧರಾಗಿ ಎಲ್ಲರನ್ನೂ ಆಲಿಸುವ ಮೌನ... ಅವರ ಮನಸ್ಸು ಅವರ ಹೊರಗೇ ಇದ್ದಂತೆ ಭಾಸವಾಗುತ್ತಿತ್ತು. ಆಗಾಗ ಕುಶಲೋಪರಿ, ಉಪಚಾರ ಕೇಳಲು ಪಾರ್ವತಮ್ಮನವರು ಬಂದಾಗ– 'ಕೇಳು ಈ ಸನ್ನಿವೇಶ... ಎಷ್ಟು

ಚೆನ್ನಾಗಿದೆ' ಎಂದು ವರ್ಣಿಸಬೇಕು. ನಮ್ಮ ಸಂವಾದ ನಡೆಯುತ್ತಿದ್ದಾಗ ಯಾವುದೇ ಅತಿಥಿಗಳು ಬಂದರೂ ಎದ್ದು ಅವರನ್ನು ಅಕ್ಕರೆಯಿಂದ ಮಾತನಾಡಿಸಬೇಕು. ಅವರಿಗೆ ನಮ್ಮೆಲ್ಲರನ್ನು ಪರಿಚಯಿಸಬೇಕು.

ವರದಪ್ಪ ಜತೆಗಿದ್ದರೇ ಅವರಿಗೆ ಸ್ಥೈರ್ಯ, ಸಮಾಧಾನ. ತುಸುವೇ ಅವರು ಕಾಣದಾದರೂ 'ಎಲ್ಲಿ ವರದಪ್ಪಾ... ಎಲ್ಲಿ ವರದಪ್ಪಾ...' ಎಂದು, 'ತುಸು ತಾಳಿ.. ಅವರು ಬಂದ ಮೇಲೆ ಮುಂದುವರೆಸೋಣ' ಎನ್ನುವರು. ಕಥೆಯ ನೆಪದಲ್ಲಿ ಎಷ್ಟೊಂದು ಸಂಗತಿಗಳ ಮೆಲುಕು. ಕನ್ನಡ ಮಾತ್ರವಲ್ಲ ಇಡೀ ಭಾರತೀಯ ಚಿತ್ರರಂಗದ ಇತಿಹಾಸದ ಅಪರೂಪದ ಕ್ಷಣಗಳೆಲ್ಲ ಈ ಸೋದರರ ಮೂಲಕ ಇಲ್ಲಿ ಮಿಂಚಿ ಮರೆಯಾಗುತ್ತಿದ್ದವು. ದಿಲೀಪ್ ಕುಮಾರ, ರಾಜ್ ಕಪೂರ್‌ರಿಂದ ಹಿಡಿದು ಇತ್ತೀಚಿನ ಚಿತ್ರಗಳ ತನಕ ಭಾರತೀಯ ಸಿನಿಮಾದ ಅಷ್ಟೂ ರಸಗಳನ್ನು ಅರೆದು ಕುಡಿದು ಮಾಗಿದ ಈ ಸೋದರರ ನಡುವಿನ ಕಣ್ಮಿಂಚಿನ ನೋಟದ ವಿನಿಮಯ ಅಪರೂಪದ್ದಾಗಿರುತ್ತಿತ್ತು. ಹೇಳುವ ಮೊದಲೇ ಅವರಿಬ್ಬರಿಗೆ ಪರಸ್ಪರ ಎಲ್ಲ ತಿಳಿದು ಹೋಗುತ್ತಿತ್ತು.

ನಾನು ಸಿನಿಮಾಕ್ಕೆ ಹಾಡು ಬರೆದಿಲ್ಲ ಎಂದು ಎಷ್ಟೇ ಗೋಗರೆದರೂ, ಇಬ್ಬರೂ 'ಇಲ್ಲ ಇಲ್ಲ ನೀವು ಎರೆಡಾದರೂ ಬರೀಲೇಬೇಕು' ಎಂದು ಹಠ ಹಿಡಿದರು. ಒಂದು, ಚಿತ್ರದ ಆಶಯ ಗೀತೆ. ಅದನ್ನು ರಾಜ್‌ಕುಮಾರ್ ಅವರೇ ಹಾಡುವವರಿದ್ದರಿಂದ ನನಗೂ ಉಮೇದು ಬಂತು. ಅದನ್ನೊಂದು ಗಂಗಾ ತೀರದ ದೋಣಿಗಾರನ ಹಾಡು ಮಾಡಿದರೆ ಹೇಗೆ ಎಂದು ನಾನು ಸೂಚಿಸಿದ್ದೇ ತಡ. ಒಮ್ಮೆಗೇ ಎಸ್.ಡಿ. ಬರ್ಮನ್ ಅವರನ್ನು ಅವಾಹಿಸಿಕೊಂಡು ರಾಜಕುಮಾರ್ 'ಸುನೋ ಮೇರೆ ಬಂಧೂರೇ... ಸುನೋ ಮೇರೆ ಮಿತವಾ.. ಸುನೋ ಮೇರೆ ಸಾಥಿರೇ..' ಎಂಬ ಬರ್ಮನ್ ಹಾಡನ್ನು ಉತ್ಕಂಠಿತರಾಗಿ ಹಾಡಿಬಿಟ್ಟರು. ಬರ್ಮನ್ ದನಿ 'ಪಹಾಡಿ' ರಾಗಕ್ಕೆ ಹೇಗೆ ತಕ್ಕುದಾಗಿದೆ ಮತ್ತು ಈ ರಾಗ ಕೇಳಿದ ತಕ್ಷಣ ಪರ್ವತಶ್ರೇಣಿಗಳೇ ಹೇಗೆ ಕಣ್ಣಿಗೆ ಕಟ್ಟುತ್ತವೆ– ಹೀಗೆ 'ಹಾಡು–ಹರಟೆ' ಶುರುವಾಗಿ ರಾಗ ಮತ್ತು ಭಾವಗಳ ಕುರಿತು ಆ ಇಡೀ ದಿನ ಸತ್ಸಂಗ ನಡೆಯಿತು.

*ಕಾಡಿನ ಮೌನ ಗಾಳಿಯಲಿ*
*ನಾಡಿನ ಮಾತು ಧೂಳಿಯಲಿ*
*ಸಂತೆಯ ವೇಶಕೆ ಉಂಟೆ ಕೊನೆ*
*ಸಂಜೆಗೆ ಮರಳಲು ಎಲ್ಲಿ ಮನೆ*

–ನನ್ನ ಥೀಮ್ ಸಾಂಗ್‌ನ ಈ ಸೊಲ್ಲುಗಳನ್ನು ತುಂಬಾ ಇಷ್ಟದಿಂದ ಗುನುಗುನಿಸುತ್ತಿದ್ದರು. ಇದರ ರೆಕಾರ್ಡಿಂಗ್ ವೇಳೆ ನಾನು ಗೋಕರ್ಣದಲ್ಲಿದ್ದೆ. 'ಕವಿಗಳೆಲ್ಲಿ? ಕವಿಗಳಿದ್ರೇನೆ ಸ್ಫೂರ್ತಿ' ಎಂದು ನಾಗಾಭರಣರನ್ನು ಕೇಳಿದರಂತೆ.

ನಮ್ಮ ಸಂಗೀತ ನಿರ್ದೇಶಕ ವಿ. ಮನೋಹರ್ ಹೊಸ ಹೊಸ ಟ್ಯೂನ್‌ಗಳನ್ನು ಆಡಿಸಿ ತೋರಿಸಿದಾಗಲೆಲ್ಲ ಅದಕ್ಕೆ ಸೂಕ್ಷ್ಮ ತಿರುವುಗಳನ್ನು ಇಬ್ಬರೂ ಸೂಚಿಸೋದು, ನಂತರ ರಾಜಕುಮಾರ್ ಆ ರಾಗದ ಆಲಾಪಕ್ಕೂ ಹೋಗಿ, ವಿಸ್ತರಿಸಿ ಥಟ್ಟನೆ ನಿಲ್ಲಿಸಿ ವರದಪ್ಪನವರೆಡೆ

‘ನೋಡಿದೆಯಾ ಇನ್ನೂ ಹೇಗೆ ಹಾಡ್ತಿದಿನಿ’ ಎನ್ನೋ ರೀತಿ ನೋಡೋದು. ವರದಪ್ಪ ಶಾಭಾಷ್ ಅನ್ನೋದು.. ಇಬ್ಬರೂ ತೀರ ತನ್ಮಯರಾಗಿ ಅಷ್ಟೇ ಕುಶಲತೆಯಿಂದ ವೀಳ್ಯದ ಎಲೆಗಳನ್ನು ತೊಡೆಗೆ ಒರೆಸಿ ತಟ್ಟಿ ಸುಣ್ಣ ಸವರಿ ಬಾಯಿಗಿಟ್ಟುಕೊಳ್ಳೋದು.

ರಾಜ್‌ಕಪೂರ್‌ನ ‘ತೀಸ್ರೀ ಕಸಂ’ದಲ್ಲಿ (ಶಂಕರ್–ಜೈ ಕಿಶನ್) ‘ ಆ ಆ ಆಭೀ ಜಾ, ರಾತ್ ಢಲ್‌ನೇ ಲಗೀ, ಚಾಂದ ಛುಪನೇ ಚಲಾ’ ಅಂತೊಂದು ಹಾಡಿದೆಯಲ್ಲ. ಅದನ್ನು ನೆನೆಸಿಕೊಂಡು ಅಣ್ಣ ತಮ್ಮ ಇಬ್ಬರೂ – ‘ಇಂಥ ಕೆಲ ಹಾಡು ನೋಡಿ. ಭಲೇ ಕಿಲಾಡಿ, ಪಲ್ಲವಿಯಲ್ಲೇ ಎಂಥ ಮೋಡಿ ಮಾಡಿ ಬಿಡ್ತವೆ ಅಂದ್ರೆ, ಪಲ್ಲವಿ ಬಿಟ್ಟು ಮುಂದೆ ಹೋಗೋಕೇ ಬಿಡೋಲ್ಲ.. ಅಲ್ಲೇ ಗಿರಕಿ ಹೊಡೀತಾ ಇರ್ತೀವಿ’ ಎಂದು ನಗುತ್ತಿದ್ದರು. ‘ಬೈ ಚಾನ್ಸ್ ಸಾಹಸ ಮಾಡಿ ಚರಣಕ್ಕೆ ಹೋದರೂ.. ಅದನ್ನು ಬೇಗ ಒಂದೇ ಸಲ ಮುಗಿಸಿ ಧಬಾರನೆ ಮತ್ತೆ ಪಲ್ಲವಿಗೇ ಮತ್ತೆ ಬಂದು ಬೀಳ್ತೀವಿ’ ಎಂದು ಉದಾಹರಣೆ ಅಂತ ‘ಲವ್ ಇನ್ ಟೋಕಿಯೋ’ದ ‘ಮುಝೋ ತುಂ ಮಿಲ್‌ಗಯೆ ಹದಂ..’ದ ಇಡೀ ಹಾಡಿನ ಧಾಟಿಯನ್ನು ‘ಲಲಾಲಲಾ’ದಲ್ಲೇ ವರದಪ್ಪ ಹಾಡಿ ತೋರಿಸಿದರು.

‘ಚಿಗುರಿದ ಕನಸು’ ಕಾದಂಬರಿಯಲ್ಲಿ ಒಬ್ಬನಿಗೆ ಪುಟ್ಟ ಕುರುಡಿಯೊಬ್ಬಳನ್ನು ಗಂಟುಹಾಕುವ ಹುನ್ನಾರ ನಡೆದು ಅದರಿಂದ ತಪ್ಪಿಸಿಕೊಳ್ಳಲು ಅವನು ಊರು ಬಿಡುತ್ತಾನೆ. ಅದನ್ನು ಚಿತ್ರದಲ್ಲಿ ಹಾಗೆಯೇ ಇಟ್ಟುಕೊಳ್ಳಲು ಮನಸ್ಸಾಗದೇ ಅವಳನ್ನು ಕುರುಡಿ ಮಾಡದೆ ಬರೇ ವಯಸ್ಸಿನಲ್ಲಿ ಪುಟ್ಟವಳು ಎಂಬ ಕಾರಣ ಇಟ್ಟುಕೊಂಡೆವು. ಇದರಿಂದ ‘ಬಾಲವಿವಾಹ ವಿರೋಧಿ’ ಅಂಶವೂ ಸೇರಿದಂತಾಗಿತ್ತು. ಇದಕ್ಕೆ ರಾಜಕುಮಾರ್ ತುಂಬಾ ಸಮಾಧಾನಪಟ್ಟುಕೊಂಡು – ‘ಅಬ್ಬ, ಅವಳ ಕುರುಡು ಕಳೆದು ಪುಣ್ಯ ಕಟ್ಟಿಕೊಂಡಿರಿ. ಇಲ್ದಿದ್ರೆ ಪಾಪದ್ದು ತುಂಬಾ ಕಷ್ಟಪಟ್ಟಿರೋಳು ಬದುಕಿನಲ್ಲಿ’ ಎಂದರು.! ಒಂದು ಸಣ್ಣ ಕಲ್ಪಿತ ಪಾತ್ರದ ಇಡೀ ಬಾಳನ್ನು ಕಥೆಯಾಚೆಗೆ ಅವರು ಯೋಚಿಸಿದ್ದರು. ಎಲ್ಲವೂ ಅವರಿಗೆ ನಿಜವಾಗುವ ರೀತಿ ಮೈಜುಮ್ಮೆನಿಸುವಂತಿತ್ತು.

ನಾನಿದ್ದಾಗೆಲ್ಲ ಊಟದಲ್ಲಿ ಮೀನು ಇರುವಂತೆ ಎಚ್ಚರ ವಹಿಸುತ್ತಿದ್ದರು. ‘ನಾವು ಕರಾವಳಿಯವರು ಮೀನ್ ಮೈಂಡೆಡ್’ ಎಂದ ನನ್ನ ಮಾತನ್ನು ಮತ್ತೆ ಮತ್ತೆ ಚಪ್ಪರಿಸಿ ನೆನಪಿಸಿಕೊಂಡು ‘ಅದೇನದು ಹೇಳಿ’ ಎಂದು ಹೊಸಬರೆದುರು ಹೇಳಿಸಿ ಆನಂದಪಡುತ್ತಿದ್ದರು– ಮಕ್ಕಳಿಂದ ಹಾಡು ಹೇಳಿಸಿದಂತೆ. ಅವರು ಊಟಕ್ಕೆ ಕೂತಾಗ, ಅದಾಗಲೇ ತಮ್ಮ ಊಟ ಮುಗಿಸಿ ಓಡಾಡುತ್ತಿದ್ದ ಮನೆ ಮಕ್ಕಳನ್ನು, ಮೊಮ್ಮಕ್ಕಳನ್ನು ‘ಅಪ್ಪಾ ಬಾ’ ‘ಅಮ್ಮಾ ಬಾ’ ಎಂದು ಬಳಿ ಕರೆದು ತುತ್ತು ಉಣಿಸುತ್ತಿದ್ದರು.

ಗಾಜನೂರಿನ ತಮ್ಮ ಬಾಲ್ಯವನ್ನು ನೆನೆಯುತ್ತ, ಕಣ್ಣಿಗೆ ಕಟ್ಟುವಂತೆ ವರ್ಣಿಸುತ್ತಿದ್ದರು: ‘ಹೀಗೆ.. ಹೀಗೆ ಮನೆಯೊಳಗೆ ಕಾಲಿಟ್ಟರೆ .. ಇಲ್ಲೇ ಎಡಬದಿಗೆ ಒರೆಯೋ ಕಲ್ಲು.. ಅಮ್ಮ ಯಾವಾಗ್ಲೂ ಅಲ್ಲಿ ಮಸಾಲೆ ಅರೀತಾನೇ ಇರೋಳು ಪಾಪ. ಸಣ್ಣ ಅಟ್ಟ ಇತ್ತು. ಕೂತುಕೊಳ್ಳೋಕೂ ಆಗದಷ್ಟು ಇಕ್ಕಟ್ಟಾದ ಅಟ್ಟ. ಅಲ್ಲಿ ಉಪ್ಪು ಇಟ್ಟಿರೋರು. ಸಣ್ಣ ಏಣಿ ಹತ್ತಿ ಉಪ್ಪು ತರೋಕೆ ಅಲ್ಲಿ ಅಮ್ಮ ಬಗ್ಗಿ ಒಳ್ಳೇ ಹಾವು ಹರಿದು ಹೋದ ಹಾಗೆ ಹೋಗೋಳು..’ ಎಂದು ಬಾಗಿ ಈಜುವವರಂತೆ ಕೈ ಮುಂದೆ ಮಾಡಿ ತೋರಿಸುತ್ತಿದ್ದರು. ದೀಪವನ್ನು ತೂಗಿ

ಹಾರಿಸುವ ದೊಡ್ಡ ಗಾಳಿಪಟ ಮಾಡೋದು ಹೇಗೆ, ಅದನ್ನು ಹಾರಿಸೋದು ಹೇಗೆ, ರಾತ್ರಿ ಆಕಾಶದಲ್ಲಿ ಅದು ಹೇಗೆ ಉಜ್ವಲವಾಗಿ ಕಾಣುತ್ತದೆ, ಅದಕ್ಕೂ ಗಾಳಿಯಿಂದ ಒಂದು ವಿಶಿಷ್ಟ ಸದ್ದು ಹೇಗೆ ಬರುತ್ತದೆ.. ಎಂದೆಲ್ಲ ಹೇಳುತ್ತ ಅಣ್ಣ ತಮ್ಮ ಇಬ್ಬರೂ ಆ ಕಾಲದಲ್ಲಿ ಮುಳುಗಿ ಮರೆಯಾಗುವರು.

ಕಥೆಯ ಚರ್ಚೆ ನಡೆಯುತ್ತಿದ್ದಾಗ ರಾಜಕುಮಾರ್ ನಡು ನಡುವೆ ಸುಮ್ಮನೆ ಮುಖ ಮುಚ್ಚಿಕೂತಿರುತ್ತಿದ್ದರು. ವಿಶ್ರಾಂತಿ ತಗೋತಿದ್ದಾರೆ ಎಂದು ನಾವು ಅಂದುಕೊಳ್ಳುವಷ್ಟರಲ್ಲಿ ಥಟ್ಟನೆ 'ಹೀಗೆ ಮಾಡಿದರೆ ಹೇಗೆ' ಎಂದು ಕಥೆಗೆ ಹೊಸದೊಂದು ಸನ್ನಿವೇಶವನ್ನು ಸೃಷ್ಟಿಸುತ್ತಿದ್ದರು. 'ಸುಮ್ಮನೆ ಅಂದಕೊಂಡು ಬಿಡಬೇಡಿ. ಹೇಳಿ.. ಹೇಳಿ.. ಹೇಳಿ.. ಕಥೆ ಇನ್ನೊಬ್ಬರಿಗೆ ಹೇಳುವಾಗಲೇ ಅದರ ಸತ್ವ ಗೊತ್ತಾಗೋದು. ಕಥೆ ಇರೋದೇ ಹೇಳೋಕೆ' ಎನ್ನುತ್ತಿದ್ದರು.

ಕಥೆಯಲ್ಲಿ ಕಗ್ಗಂಟು ಬಂದು ನಾವೆಲ್ಲ ತಬ್ಬಿಬ್ಬಾಗಿ ಬಗೆಹರಿಯದೆ ಮಂಕಾಗಿ ಕೂತಾಗ ಸೋದರರಿಬ್ಬರೂ. 'ಈವತ್ತು ಇದನ್ನು ಇಲ್ಲಿಗೇ ಬಿಡೋಣ. ಎಳೆದರೆ ಹಾಳಾಗುತ್ತೆ. ಅದರ ಪಾಡಿಗೆ ಅದನ್ನು ಬಿಡಿ. ಆಮೇಲೆ ಅದೇ ಮಾಡ್ಕೊಳ್ಳತ್ತೆ' ಎಂದು ನಮ್ಮನ್ನು ಹಗುರಗೊಳಿಸುತ್ತಿದ್ದರು. ಹೀಗೆ ಕಥೆಯ ಕುರಿತು ಘನ ಮೀಮಾಂಸಕರಿಂದಲೂ ಸಿಗದ ಸರಳ ವಿವೇಕದ ಮಾತುಗಳನ್ನು ನಾನು ಇಲ್ಲಿ ಕಲಿತೆ.

ಯಾವ ಸಮಯದಲ್ಲೂ ರಾಜಕುಮಾರ್ ಮುಖದಲ್ಲೊಂದು ತುಂಟ ತೇಜ ಇತ್ತು. ಎಲ್ಲವನ್ನೂ ಮೀರಿ ನಗುವ ಚಾಪ್ಲಿನ್ ಥರದ ದೃಷ್ಟಿಕೋನದ ಮುಗುಳು ಅದು. 'ಶಂಕರ್ ಗುರು' ಶೂಟಿಂಗ್‌ಗೆ ಸಿಮ್ಲಾಕ್ಕೆ ಹೋಗಿದ್ದಾಗ, ಚಿ.ಉದಯಶಂಕರ್ ಮತ್ತು ಇತರ ಸ್ನೇಹಿತರು ಯಾವುದೋ ಖ್ಯಾತ 'ಸೂರ್ಯಾಸ್ತದ ಪಾಯಿಂಟ್' ನೋಡಲು ಇವರನ್ನು ಕರೆದೊಯ್ದರಂತೆ. 'ಎಲ್ರೂ ತದೇಕಚಿತ್ತರಾಗಿ ಗುಡ್ಡಗಳಾಚೆಗೆ ಸೂರ್ಯಾಸ್ತಕ್ಕಾಗೇ ದೃಷ್ಟಿ ನೆಟ್ಟುಕೂತಿದ್ದರೆ ನನ್ನ ಲಕ್ಷ್ಯ ಮಾತ್ರ ಅಲ್ಲೇ ಪಕ್ಕ ಕೆಂಡಗಳ ಮೇಲೆ ಕೋಳಿಯನ್ನು ಸುಡ್ತಾ ಇದ್ದ ಹುಡುಗನ ಮೇಲಿತ್ತು. ಅಬ್ಬಬ್ಬಾ ಅದೆಷ್ಟು ಚೆನ್ನಾಗಿ ಮಸಾಲೆ ಹಚ್ಚಿ, ಉರಿವ ಕೆಂಡಗಳ ಮೇಲೆ ಹದವಾಗಿ ಸುಡ್ತಿದ್ದಾ ಅಂತೀರಿ.. ನಾನಂತೂ ಅದ್ಯಾವಾಗ ರೆಡಿ ಆಗತ್ತೋ ಅಂತ ಅದನ್ನೇ ನೋಡ್ತಾ ಇದ್ದೆ. ಸೂರ್ಯಾಸ್ತ ಆಗಿದ್ದೇ ಗೊತ್ತಾಗಲಿಲ್ಲ ಬಡ್ಡೀ ಮಗಂದು!' ಎನ್ನುತ್ತ ಹಾಯಾಗಿ ನಕ್ಕರು.

'ಜಾಗ' ಎನ್ನುವ ಶಬ್ದವನ್ನು ಕಥೆಯ ಚರ್ಚೆಯಲ್ಲಿ ರಾಜಕುಮಾರ್ ತುಂಬಾ ಚೆನ್ನಾಗಿ ಬಳಸುತ್ತಿದ್ದರು. 'ಈ ಜಾಗ ಅಭಿನಯಕ್ಕೆ ಚೆನ್ನಾಗಿದೆ', ಹಾಡಿಗೆ ಇದೊಳ್ಳೇ ಜಾಗ', ಈ ಜಾಗದಲ್ಲೇ ಅಜ್ಜಿ ಪ್ರವೇಶ ಆಗಬೇಕು'–ಹೀಗೆ. ಕಾರಂತರ ಕಾದಂಬರಿಯನ್ನು ಇಂದಿನ ಮನಸ್ಸುಗಳಿಗೆ ಕೊಡುವಾಗ ಮಾಡಿಕೊಳ್ಳಲೇ ಬೇಕಾದ ಕೆಲವು ಅನಿವಾರ್ಯ ಬದಲಾವಣೆಗಳನ್ನು ಸೂಚಿಸುತ್ತ, ವರದಪ್ಪನವರು ನನ್ನನ್ನು ಮತ್ತೆ ಮತ್ತೆ 'ಮೂಲಕ್ಕೆ ಅಪಚಾರ ಆಗಿಲ್ಲ ತಾನೆ? ಎಂದು ಕೇಳುತ್ತಿದ್ದರು. ಆಗೊಮ್ಮೆ ರಾಜಕುಮಾರ್ 'ಕಾರಂತರು ಖಂಡಿತ ಅರ್ಥ ಮಾಡ್ಕೋತಾರೆ. ಇದನ್ನೆಲ್ಲಾ ಮೀರಿದ ಜಾಗದಲ್ಲಿದ್ದಾರೆ ಅವರು. ಅವರಲ್ಲದೆ ಇನ್ಯಾರು ಅರ್ಥ ಮಾಡ್ಕೋಬೇಕು ಇದನ್ನು' ಎಂದರು.

'ಚಿಗುರಿದ ಕನಸು' ಚಿತ್ರದ ಕೊನೆಯಲ್ಲಿ, ಹತ್ತಿರದವರ ಸಾವನ್ನು ಕಂಡು ಬದು–ಕಿಗೆ ವಿಮುಖನಾಗಿ ಹೊರಟ ನಾಯಕನನ್ನು ತಡೆದು ನಿಲ್ಲಿಸುವ ವೃದ್ಧನೊಬ್ಬನ ಬಾಯಲ್ಲಿ ಒಂದು ಮಾತು ಇರಿಸಿದ್ದೆ– 'ನಾವು ಬದ್ಕಿದೀವಿ ಅನ್ನೋ ಒಂದೇ ಕಾರಣ ಸಾಕು ಮಗಾ.. ಇನ್ನೂ ಚೆನ್ನಾಗಿ ಬದುಕೋಕೆ! ಈ ಮಾತು ಅವರಿಗೆ ತುಂಬಾ ಹಿಡಿಸಿತ್ತು. 'ಹೌದಲ್ಲ.. ಇದಕ್ಕೂ ಬೇರೆ ಕಾರಣ ಯಾಕೆ ಬೇಕು? ವಾಹ್..' ಎಂದು ಕಣ್ಮುಚ್ಚಿ ಆಸ್ವಾದಿಸಿದರು. ಈ ಸಾಲು ಕಾರಂತರದಲ್ಲ. ನನ್ನದು ಎಂದು ಅವರಿಗೆ ಹೇಳಬೇಕೆನಿಸಿತು. ಮಳ್ಳನಂತೆ ಹೇಳಿಯೂ ಬಿಟ್ಟೆ. ಸುಂದರವಾಗಿ ನಕ್ಕರು.

ಬಾಲ್ಯದಿಂದಲೂ ನನ್ನ ಮನದಲ್ಲಿ ಒಂದು ಅಭಯದ ಶಕ್ತಿಯಾಗಿ ಬೆಳೆದು ಬಂದ ಅವರ ಬಗ್ಗೆ ನಾನು 'ಬೊಗಸೆಯಲ್ಲಿ ಮಳೆ' ಎಂಬ ನನ್ನ ಅಂಕಣದಲ್ಲಿ ಬರೆದಿದ್ದನ್ನು, ಒಂದು ದಿನ ಈ ಸತ್ಸಂಗದ ಸಂದರ್ಭದಲ್ಲೇ ಸಮಯ ಸಾಧಿಸಿ, ಇನ್ಯಾರೂ ಇಲ್ಲದಾಗ ಅವರಿಗೆ ಓದಿ ತೋರಿಸಿಯೂ ಬಿಟ್ಟೆ. ಅವರು ನನ್ನ ಕೈಯನ್ನು ತಮ್ಮೆದೆಗೆ ಒತ್ತಿ 'ನೋಡಿ.. ನೋಡಿ.. ನನ್ನ ಚಿತ್ರಗಳಿಂದ ನಿಮಗೆ ಏನೆಲ್ಲಾ ಸಿಗ್ತು.. ನನಗದೆಲ್ಲಾ ಸಿಗಲೇ ಇಲ್ಲ.. ಸುಮ್ನೆ ಕೆಲಸ ಮಾಡ್ತಾ ಬಂದೆ ಅಷ್ಟೆ..' ಎಂದು ಬೆಚ್ಚಗೆ ತಬ್ಬಿ ಹೆಗಲಿಗೆ ಮುತ್ತಿಟ್ಟರು.

ಮುಕ್ಕೋಟಿ ಹೃದಯಗಳ ಕಪ್ಪು ಆಕಾಶದಲ್ಲೀಗ ಸೋದರ ಗಾಳಿಪಟಗಳ ಉಜ್ವಲ ದೀಪ..

***ಜಯಂತ ಕಾಯ್ಕಿಣಿ***

## *ನನ್ನ ಕನಸು ಚಿಗುರಿದ್ದು ಹೀಗೆ...*

1975ರ ಒಂದು ದಿನ ಡಾ. ಶಿವರಾಮ ಕಾರಂತರ ಮುಂದೆ ನಿಂತು "ಚೋಮನ ದುಡಿ"ಯ ಪಾತ್ರಗಳ ವಸ್ತ್ರವಿನ್ಯಾಸವನ್ನು ಅವರಿಗೆ ಒಪ್ಪಿಸಿ ಅವರ ಪ್ರತಿಕ್ರಿಯೆಗೆ ಕಾಯುತ್ತಿದ್ದಾಗ–ನಾನು ಮತ್ತು ಬನ್ನಿಕೌಲ್ ಸಿದ್ಧಪಡಿಸಿದ್ದ ವಿನ್ಯಾಸಗಳನ್ನು ಮೂಲೆಗೆಸೆದು, ಸರಸರನೆ ಬಿಳಿಹಾಳೆಯ ಮೇಲೆ ಬಣ್ಣಬಣ್ಣದ ತನ್ನ ಕಾದಂಬರಿಯ ಪಾತ್ರಗಳನ್ನು ಸೃಷ್ಟಿಸಿ, 'ಇಂವ ಚೋಮ', 'ಇವಳು ಬೆಳ್ಳಿ' ಅನ್ನುತ್ತ ನಮ್ಮನ್ನು ಅವಾಕ್ಕಾಗಿಸಿದಾಗ... ಅಂದು ಚಿಗುರೊಡೆದ ಆಸೆ "ಒಂದಲ್ಲ ಒಂದು ದಿನ ಇವರ ಒಂದು ಕಾದಂಬರಿಯನ್ನು ಚಲನಚಿತ್ರಮಾಡಿ ಇವರಿಗೆ ತೋರಿಸಬೇಕು". ಆ ಆಸೆ ಕನಸಾಗಿ ಕಾಡಿ ಹಲವು ವರ್ಷಗಳ ಹಲವು ನಿರರ್ಥಕ ಪ್ರಯತ್ನಗಳಾಗಿ ಹೋದವು.

ಚಿಗುರಿದ ಕನಸು ನನಸಾದದ್ದು 2001ರಲ್ಲಿ. ನಾನು ಡಾ.ರಾಜ್ ಹಾಗೂ ವರದಣ್ಣನವರಿಗೆ ಈ ಕಾದಂಬರಿಯನ್ನು ಮತ್ತೆ ಪರಿಚಯಿಸಿದಾಗ ಶ್ರೀಮತಿ ಮಾಲಿನಿ ಮಲ್ಯರಿಂದ ಚಿತ್ರೀಕರಣದ ಹಕ್ಕುಗಳನ್ನು ಪಡೆದು ಸತತವಾಗಿ ಒಂದು ವರ್ಷ ಚಿತ್ರಕಥೆಯ ಮೇಲೆ ಕೆಲಸಮಾಡಿ ಚಿತ್ರೀಕರಿಸಿದೆ. ಜಯಂತ ಕಾಯ್ಕಿಣಿಯಂಥಹ ಸೃಜನಶೀಲ ಪ್ರತಿಭೆಯನ್ನು ಡಾ.ರಾಜ್ ಕುಟುಂಬಕ್ಕೆ, ಅಷ್ಟೇ ಏಕೆ ಇಡೀ ಕನ್ನಡ ಚಲನಚಿತ್ರ ಕುಟುಂಬಕ್ಕೆ ಪರಿಚಯಿಸಿದ ಹೆಮ್ಮೆ ನನಗಿದೆ. ಚಿತ್ರಕಥೆ, ಸಂಭಾಷಣೆ, ಅಲ್ಲದೆ ಹಾಡುಗಳು ಅವರ ಪ್ರಥಮ ಚಲನಚಿತ್ರ ಪ್ರವೇಶದ ಆಯಸ್ಕಾಂತಗಳಾದವು.

ಚಿತ್ರೀಕರಣ ಸಿದ್ಧತೆಯ ಸಮುದಾಯಗಳಲ್ಲಿನ ಅನುಭವಗಳನ್ನು ಜಯಂತ ಕಾಯ್ಕಿಣಿ ದಾಖಲಿಸಿದ್ದಾರೆ. ಅಲ್ಲದೆ ನಾನು ಕೂಡ ನನ್ನ ಟಿಪ್ಪಣಿಗಳಲ್ಲಿ ಕೆಲವನ್ನು ಸ್ಮರಿಸಿದ್ದೇನೆ. ಏಕಮುಖ ಸಿದ್ಧತೆ ಅಥವಾ ಏಕಮುಖ ವ್ಯಾಖ್ಯಾನಕ್ಕಿಂತ, ಕಥೆಯ ಹಲವು ಮಗ್ಗಲುಗಳನ್ನು ಅಭ್ಯಸಿಸುವ, ಅರ್ಥೈಸುವ ಹಾಗೂ ಪ್ರಶ್ನಿಸುವ ಕೆಲವಾದರೂ ಮನಸ್ಸುಗಳು ಒಟ್ಟಾಗಿ ಕೆಲಸ ಮಾಡಿದಾಗ ಅಪೂರ್ವವಾದ ಕೃತಿಯೊಂದು ಮೂಡಿಬರಲು ಸಾಧ್ಯ ಎನ್ನುವುದಕ್ಕೆ "ಚಿಗುರಿದ ಕನಸು" ಚಿತ್ರಕಥೆಯೇ ಸಾಕ್ಷಿ.

1951ರಲ್ಲಿ ಮುದ್ರಿತವಾದ ಕಾದಂಬರಿ 2003ರಲ್ಲಿ ಪ್ರಸ್ತುತವಾಗುವ ಸಾರ್ವಕಾಲಿಕ ಸತ್ಯವನ್ನು "ಚಿಗುರಿದ ಕನಸು" ಕನ್ನಡ ಚಿತ್ರದ ಮರು ಅವತರಣಿಕೆ "ಸ್ವದೇಶ್"ನಲ್ಲಿ ಮೂಡಿರುವುದನ್ನು ಪ್ರಶ್ನಿಸದ ಮಾಧ್ಯಮ ಹಾಗೂ ಉದ್ಯಮವನ್ನು ನನ್ನ ಒಂಟಿಧ್ವನಿ ಪ್ರಶ್ನಿಸುತ್ತ "ಸ್ವದೇಶ್"ನ ಲೇಖಕರೆಂದು ಕರೆದುಕೊಂಡ ನಿರ್ಮಾಣ ಮೇಲ್ವಿಚಾರಕರ ನೈತಿಕತೆಯನ್ನು ಸಂದೇಹಿಸುತ್ತ ಮೂಲ ಲೇಖಕರನ್ನು ಗೌರವಿಸದೆ ತನ್ನ ಮೂಲವನ್ನು ಹುಡುಕಲು ಹೊರಟ "ಸ್ವದೇಶ್"ನ ಪಾತ್ರಧಾರಿ ಶಾರುಖ್ ಖಾನ್‌ರನ್ನು ಶ್ಲಾಘಿಸುತ್ತ ನನ್ನ ಕನಸು ಚಿಗುರಿದ್ದು ಹೀಗೆ ಎಂಬುದನ್ನು ನಿಮ್ಮ ಮುಂದಿಡುತ್ತಿದ್ದೇನೆ.

ಕರ್ನಾಟಕ ಚಲನಚಿತ್ರ ಅಕಾಡೆಮಿಯ ಪ್ರಥಮ ಅಧ್ಯಕ್ಷನಾಗಿ ಅಕಾಡೆಮಿಯ ರೂಪುರೇಷೆಗಳನ್ನು ನಿರ್ಧರಿಸುತ್ತಿದ್ದಾಗ ಸಿನಿಮಾ ಶೈಕ್ಷಣಿಕವಾಗಿ ಬೆಳೆಯಲು ಬೆಳೆಸಲು ಬೇಕಾದ ಆಕರಗಳನ್ನು ಗಮನಿಸಿ ಅವುಗಳನ್ನು ನೀಗಿಸುವ ನಿಟ್ಟಿನಲ್ಲಿ ಹಲವು ಯೋಚನೆಗಳನ್ನು,

ಯೋಜನೆಗಳನ್ನು ಕೈಗೆತ್ತಿಕೊಂಡೆ. ಅವುಗಳಲ್ಲಿ ಒಂದು 'ಚಿತ್ರಕಥಾ ಪಠ್ಯಗಳ ಮುದ್ರಣ.' "ಚಲನಚಿತ್ರದಲ್ಲಿ ಶಿಕ್ಷಣ, ಶಿಕ್ಷಣದಲ್ಲಿ ಚಲನಚಿತ್ರ" ಎಂಬ ಘೋಷವಾಕ್ಯದೊಂದಿಗೆ ಪ್ರಾರಂಭವಾದ ಅಕಾಡೆಮಿಯ ಆಶಯ ಹಾಗೆಯೇ ಮುಂದುವರೆಯಲಿ ಎಂದು ಆಶಿಸುತ್ತ ನನ್ನ ಚಲನಚಿತ್ರಯಾನದಲ್ಲಿ ನಾನು ಮತ್ತು ನನ್ನ ಪ್ರೇಕ್ಷಕರು ಗುರುತಿಸಿದ ಕೆಲವು ಪ್ರಯೋಗಗಳ ಚಿತ್ರಕಥೆಯನ್ನು ಓದುಗರ ಹಾಗೂ ಸಿನಿಮಾಸಕ್ತರ ಉಪಯೋಗಕ್ಕಾಗಿ ಪ್ರಕಟಿಸಲು ಹರ್ಷಿಸುತ್ತೇನೆ.

ಸಿನಿಮಾ ಮತ್ತು ಇನ್ನುಳಿದ ಸಾಹಿತ್ಯ ಪ್ರಕಾರಗಳಿಗೂ ಇರುವ ವ್ಯತ್ಯಾಸವನ್ನು ಗಮನಿಸಿಯೇ ಚಿತ್ರಕಥೆಗಳ ಓದಿನ ಒಳಗೆ ವಿಹರಿಸಬೇಕಾಗುತ್ತದೆ ಎನ್ನುವುದು ನನ್ನ ಅಭಿಪ್ರಾಯ. ಸಾಹಿತ್ಯ ಕೃತಿಗಳ ಅಮೂರ್ತ ಅನುಭವವನ್ನು ಚಲನಚಿತ್ರಗಳು ಮೂರ್ತ ಅನುಭವಗಳಾಗಿ ಪರಿವರ್ತಿಸುವುದರಿಂದ ಮತ್ತು ಓದುವವನ ಕಲ್ಪನಾ ಲೋಕದ ಚಿತ್ರಿಕೆಗಳಿಗೆ ಏಕಸ್ವಾಮ್ಯ ಸ್ಥಾಪಿಸುವುದರಿಂದ ಕೆಲವೊಮ್ಮೆ ಪ್ರೇಕ್ಷಕ ಮತ್ತು ಓದುಗರ ಮುಖಾಮುಖಿಯಾಗುವ ಸಾಧ್ಯತೆಯಿರುತ್ತದೆ. ಈ ಕಾರಣದಿಂದಾಗಿಯೇ ಚಿತ್ರಕಥಾ ಸಾಹಿತ್ಯವು ತನ್ನದೇ ಆದ ಸಾಹಿತ್ಯಿಕ ಆಯಾಮವೊಂದನ್ನು ಸೃಷ್ಟಿಸಿಕೊಳ್ಳಬೇಕಾದ ಅವಶ್ಯಕತೆ ಇದೆ. ಕನ್ನಡದ ಮಟ್ಟಿಗೆ ಕೆಲವೇ ಚಿತ್ರಕಥಾ ಸಾಹಿತ್ಯ ಕೃತಿಗಳು ಪ್ರಕಟವಾಗಿರುವುದರಿಂದ ಅವುಗಳ ಶೈಲಿ, ವ್ಯಾಕರಣ, ಬಂಧ, ಓಘ ಇವುಗಳ ನಿರ್ದಿಷ್ಟ ಸ್ವರೂಪ ಪಕ್ವವಾಗಿಲ್ಲ. ಈ ದಿಸೆಯಲ್ಲಿಟ್ಟ ಹೆಜ್ಜೆಗಳಲ್ಲಿ ನನ್ನದೂ ಒಂದು ಪ್ರಾಯೋಗಿಕ ಹೆಜ್ಜೆ ಎಂಬುದರ ಅರಿವಿನೊಡನೆ ಈ ಚಿತ್ರಕಥೆಯನ್ನು ನಿಮ್ಮ ಕೈಯಲ್ಲಿ ಇರಿಸುತ್ತಿದ್ದೇನೆ.

ಚಲನಚಿತ್ರ, ರಂಗನಾಟಕದ ಪರಿಷ್ಕೃತ ರೂಪವೇ ಎಂಬುದು ಒಂದು ಪ್ರಶ್ನೆ. ಒಂದು ರೀತಿಯಲ್ಲಿ ಹೌದು ಎಂದಾದರೆ ಇನ್ನೊಂದು ರೀತಿಯಲ್ಲಿ ಅದರ ವಿಸ್ತೃತ ರೂಪ ಎಂದೇ ಹೇಳಬಹುದು. ಚಲನಚಿತ್ರ ಪ್ರಾರಂಭವಾದದ್ದೇ ರಂಗರೂಪಗಳನ್ನು ದೃಶ್ಯ ರೂಪಗಳನ್ನಾಗಿ ಮಾರ್ಪಡಿಸುತ್ತ. ಹೀಗಾಗಿ ಅದರ ಛಾಪು ಈಗಲೂ ಇದೆ. ನಾಟಕಗಳನ್ನು ಓದುವ ಮತ್ತು ಅವುಗಳನ್ನು ನಂತರ ರಂಗರೂಪಕ್ಕೆ ತರುವ ವಿಧಾನಗಳನ್ನು ನಾವು ಗಮನಿಸಿದಾಗ ಅದೇ ಶೈಲಿಯಲ್ಲಿ ಚಲನಚಿತ್ರದ ಚಿತ್ರಕಥೆ ಹಾಗೂ ಸಿನಿಮಾ ದೃಶ್ಯ ರೂಪ ನಮ್ಮ ಕಣ್ಣಮುಂದೆ ಬರುತ್ತದೆ. ಚಲನಚಿತ್ರಕ್ಕೆ ಪೂರಕವಾದ ಶ್ರವ್ಯ ಸಾಮಾಗ್ರಿ ಮತ್ತು ದೃಶ್ಯ ಸಾಮಾಗ್ರಿ ಇವೆರಡನ್ನೂ ಬೇರೆ ಬೇರೆಯಾಗಿ ವಿಭಜಿಸಲೂಬಹುದು. ಒಟ್ಟಾರೆಯಾಗಿ ಹೇಳುತ್ತಲೂ ಹೋಗಬಹುದು. ಚಿತ್ರಕಥೆ ಸಂಭಾಷಣೆ ಹಾಗೂ ಅಲ್ಲಿ ನಡೆಯುವ ಕ್ರಿಯೆಗಳ ಸಮೀಕರಣವನ್ನು ನಾವು ಕಾಣಬಹುದು ಆದರೆ ಚಿತ್ರಿಕೆಗಳು ಕಣ್ಣಮುಂದೆ ಮೂಡುವುದಿಲ್ಲ ಹೀಗಾಗಿ ಚಿತ್ರಕಥಾ ಸೃಷ್ಟಿಯೊಂದನ್ನು ಓದುವ ಕ್ರಮವನ್ನು ಅಥವಾ ಓದುವ ಇತಿಮಿತಿಗಳನ್ನು ಅರ್ಥಮಾಡಿಕೊಂಡೆ ಚಲನಚಿತ್ರ ಕಥಾ–ಸಾಹಿತ್ಯವನ್ನು ನಾವು ಸ್ವೀಕರಿಸಬೇಕಾಗುತ್ತದೆ. ಪಾತ್ರಗಳಲ್ಲಿರುವ ಪಾತ್ರಪೋಷಣೆಗಳನ್ನು ನವಿರಾದ ಭಾವಗಳನ್ನು, ತೀವ್ರ ಸಂವೇದನೆಗಳನ್ನು ಚಿತ್ರಕಥೆ ಓದುವವನ ಪರಿಭಾವಕ್ಕೆ ಮತ್ತು ಆತನ ಕಲ್ಪನೆಗೆ ಬಿಡುತ್ತ ಹೋಗುತ್ತದೆ. ಅದಕ್ಕೆ ಬೇಕಾದ ಸೂಕ್ಷ್ಮಗಳನ್ನು ಸದೃಢೀಕರಿಸುತ್ತ ಹೋಗುತ್ತದೆ. ಆದರೆ ನಿಜವಾಗಿಯೂ ಬಿಂಬ–ಭಾವದಲ್ಲಿ ಮೂಡುವುದು ಏನು ಎಂಬುದು ತಕ್ಷಣವೇ ಹೊಳೆಯದಿರಬಹುದು ಆದರೆ ಅದು ಹೀಗಿರಬಹುದು ಎಂಬ ವ್ಯಾಖ್ಯೆಯನ್ನು ಅದು ಕೊಡುತ್ತದೆ.

ಚಿತ್ರಕಥಾ ಲೇಖನ ಒಂದು ಕ್ರಿಯಾಶೀಲ ನಿರ್ಮಿತಿಯಾಗಿರುವುದರಿಂದ ಕಥಾಹಂದರ ಹೇಗಿತ್ತು ಅದರ ನಂತರ ಹೇಗಾಯಿತು ಎಂಬುದರ ಬಗ್ಗೆ ಕೂಡ ಚರ್ಚೆಯನ್ನು ಏರ್ಪಡಿಸಬಲ್ಲದು. ಕಥೆಯ ಹಂತದಲ್ಲಿದ್ದಂತಹ ಹಲವು ಸೂಕ್ಷ್ಮಗಳು ಚಿತ್ರಕಥೆಯಲ್ಲಿ ಇಲ್ಲದಿರಬಹುದು ಹಾಗೆಯೇ ಕಥೆಯಲ್ಲಿ ಇಲ್ಲದಂತಹ ಹಲವು ಸೂಕ್ಷ್ಮಗಳು ಚಿತ್ರಕಥೆಯಲ್ಲಿ ಸೇರಬಹುದು ಈ ದೃಷ್ಟಿಯಲ್ಲಿಯೂ ಕೂಡ ಸೃಜನಶೀಲ, ಕ್ರಿಯಾಶೀಲ ನಿರ್ಮಿತಿಗಿರುವಂತಹ ಎಲ್ಲ ಸಾಧ್ಯತೆಗಳನ್ನು ಚಿತ್ರಕಥಾ ಸಾಹಿತ್ಯ ತನ್ನದಾಗಿಸಿಕೊಳ್ಳುತ್ತದೆ. ಕೆಲವೊಮ್ಮೆ ಚಿತ್ರಕಥೆಯೇ ಇಲ್ಲದೆ ಚಿತ್ರೀಕರಣ ಮಾಡುವುದು ಕೆಲವರಿಗೆ ಸಾಧ್ಯವಾಗಬಹುದೋ ಏನೋ. ಆದರೆ ಅದು ಒಂದು ರೀತಿ ಹಬ್ಬದ ಊಟವನ್ನು ನೆಲದ ಮೇಲೆ ಹಾಕಿಕೊಂಡು ತಿಂದಂತೆಯೇ. ಚಿತ್ರಕಥೆ ಎಷ್ಟು ಸಮರ್ಥವಾಗಿ ಇಡೀ ತಂಡವನ್ನು ಆವರಿಸಿಕೊಳ್ಳುತ್ತದೆಯೋ ಅಷ್ಟೇ ಸಮರ್ಥವಾಗಿ ಚಿತ್ರಿಕೆಗಳು ಮೂಡುತ್ತವೆ, ಚಲನಚಿತ್ರ ತನ್ನ ಗುರಿಯನ್ನು ಮುಟ್ಟುತ್ತದೆ. ಹೀಗಾಗಿ ನಿರ್ದೇಶಕ, ಸಂಕಲನಕಾರ, ಛಾಯಾಗ್ರಾಹಕ ಈ ಮೂವರು ಮುಖ್ಯರ ಜೊತೆಜೊತೆಯಲ್ಲಿಯೇ ನಟ–ನಟಿಯರ ಒಂದು ಸಾಂಘಿಕ ಕ್ರಿಯೆ ಚಿತ್ರಕಥಾ ಸಾಹಿತ್ಯವನ್ನು ಚಲನಚಿತ್ರವನ್ನಾಗಿ ಮಾರ್ಪಡಿಸುತ್ತದೆ. ಆದ್ದರಿಂದ ಚಿತ್ರಕಥೆಯ ಹಂತದಲ್ಲಿಯೇ ಎಲ್ಲರಿಗು ಅದರ ದರ್ಶನಭಾಗ್ಯ ಸಾಧ್ಯವಾಗುವುದು ಬಹಳ ಮುಖ್ಯವೆನಿಸುತ್ತದೆ. ಆ ದೂರದರ್ಶನದ ಜೊತೆಜೊತೆಯಲ್ಲಿಯೇ ಎಲ್ಲರು ಒಮ್ಮುಖವಾಗಿ ಕೆಲಸಮಾಡುವುದು ಬಹಳ ಮುಖ್ಯಕೂಡ. ಚಲನಚಿತ್ರಕ್ಕೆ ಕಥೆ ಬೀಜವಾದರೆ ಚಿತ್ರಕಥೆ ಅಂಕುರ. ಇನ್ನುಳಿದ ಸಾಧನ ಸಲಕರಣೆಗಳು ಕಲಾವಿದರೊಟ್ಟಿಗೆ ಬಳಕೆಯೊಂದಿಗೆ ಒಂದು ವೃಕ್ಷವಾಗುತ್ತದೆ. ಇಂತಹ ಮಾದರಿ ಚಿತ್ರಕಥೆಗಳು ಚಲನಚಿತ್ರ ನಿರ್ಮಾಣದ ಪರಂಪರೆಯನ್ನು ನಮಗೆ ಐತಿಹಾಸಿಕವಾಗಿ ಮುಟ್ಟಿಸುತ್ತದೆ ಹಾಗೂ ಹುಟ್ಟುಹಾಕುತ್ತದೆ. ಅದೊಂದು ಪಾರದರ್ಶಕ ಯೋಜನೆಯಾಗುತ್ತದೆ. ಅದರ ಉನ್ನತೀಕರಣ ಚಿತ್ರಕಥೆಯಿದ್ದಾಗ ಮಾತ್ರ ಸಾಧ್ಯವಾಗುತ್ತದೆ. ಸಾಹಿತಿಯ ಆತ್ಮಸಂಗಾತದಿಂದ ಹುಟ್ಟುವ ಕಥಾಗತಿತ ಸಂಗಾತವನ್ನೇ ಪ್ರವೇಶಿಸಲು ಪ್ರಥಮ ಪೂರಕ ನಿರ್ಮಿತಿ ಈ ಚಿತ್ರಕಥೆ. ಇಲ್ಲಿ ಸಾಹಿತಿ ನಿರ್ದೇಶಕನೂ ಆಗುತ್ತಾನೆ. ಚಲನಚಿತ್ರ ಒಟ್ಟಾರೆಯಾಗಿ ಬಯಸುವ ದೃಶ್ಯಾವಳಿಗಳಲ್ಲಿ ಆಹಾರ್ಯಾದಿ ಸಾಧನ ಸಲಕರಣೆಗಳು ಕಲಾವಂತಿಕೆಯ ಸ್ಪರ್ಶ ಇತ್ಯಾದಿಗಳೆಲ್ಲವೂ ಚಿತ್ರಕಥೆಯಿದ್ದಾಗ ದಟ್ಟವಾಗುತ್ತ ಸೃಜನಶೀಲವಾಗುತ್ತ ದಟ್ಟವಾದ ನಿರ್ಮಿತಿಯೊಂದಕ್ಕೆ ಸಾಕ್ಷಿಯಾಗುತ್ತದೆ.

ದೃಶ್ಯ ಹಾಗೂ ಶ್ರವ್ಯ ಮಾಧ್ಯಮಗಳ ಒಗ್ಗೂಡುವಿಕೆ ಇಲ್ಲಿನ ಕ್ರಿಯಾಶೀಲ ನಿರ್ಮಿತಿ. ಅಲ್ಲಿ ಭಾಷೆ, ಸಂಗೀತ, ಪರಿಸರ ಧ್ವನಿಗಳು ಪೂರಕ ಅಂಶಗಳಾಗಿ ಕೆಲಸಮಾಡುತ್ತವೆ. ಚಲನಚಿತ್ರದಲ್ಲಿ ಬಳಸಿದ ಭಾಷೆ ಚಿತ್ರಕಥಾ ಹಂದರದಲ್ಲಿಯೇ ಸ್ಪಷ್ಟವಾಗಿ ಗೋಚರಿಸಿದಾಗ ಅದು ಆ ನಟ–ನಟಿಯರ ಮುಖಾಂತರ ಇನ್ನೊಂದು ಆಯಾಮವನ್ನು ಕಟ್ಟಿಕೊಡುತ್ತದೆ. ಹೀಗೆ ಭಾಷೆಯ ಒಟ್ಟಾರೆ ಬೆಳವಣಿಗೆ ಅದ್ಭುತವಾಗಿ ರೂಪುಗೊಳ್ಳುತ್ತದೆ. ಇಂದಿನ ನಮ್ಮ ಕನ್ನಡ ಭಾಷೆಯ ಸ್ವರೂಪವನ್ನು ನಿರ್ಧರಿಸುವಲ್ಲಿ ಚಲನಚಿತ್ರಗಳು ಬಹಳಷ್ಟು ಮುಂಚೂಣಿಯಲ್ಲಿ ಕೆಲಸ ಮಾಡಿವೆ. ಇನ್ನು ಚಿತ್ರಬ್ರಹ್ಮನೆಂದು ಕರೆಯಲ್ಪಡುವ ನಿರ್ದೇಶಕ, ಚಲನಚಿತ್ರದ ಮೊದಲ ಹಂತದಲ್ಲಿ ಅಂದರೆ ಚಿತ್ರಕಥಾ ಹಂತದಲ್ಲಿಯೇ ತನ್ನೆಲ್ಲ ಇತಿಮಿತಿಗಳನ್ನು ನಿರ್ಧರಿಸಿಕೊಳ್ಳುತ್ತಾನೆ. ಅದು ವ್ಯಾವಹಾರಿಕವಾಗಿರಬಹುದು, ರಾಜಕೀಯವಾಗಿರಬಹುದು, ಸಾಮಾಜಿಕವಾಗಿರಬಹುದು ಹಾಗೆಯೇ ಸೃಜನಶೀಲವೂ ಆಗಿರಬಹುದು. ತನ್ನ ಸಿನಿಮಾದ ತಿರುವು ಬಿಂದುಗಳನ್ನು ಆತ ನಿರ್ಧರಿಸಿದಾಗ ಮಾತ್ರ

ಉತ್ತಮ ಚಲನಚಿತ್ರದತ್ತ ಆ ಚಿತ್ರಕಥೆ ಹೆಜ್ಜೆಹಾಕುತ್ತದೆ. ಚಲನಚಿತ್ರ ಕಥೆಯ ಚಿತ್ರಕಥೆಯನ್ನು ಓದುವ ಕ್ರಮವೊಂದನ್ನು ನಾವು ಅಂದುಕೊಳ್ಳಬೇಕು ಎಂದು ನನಗನಿಸುತ್ತದೆ.

"ಚಿಗುರಿದ ಕನಸು" ಚಿತ್ರಕಥೆಯ ಸ್ವರೂಪವನ್ನು ನೀವು ಗಮನಿಸಿದಾಗ ಕೆಲವೆಡೆ **ಹಸ್ತಪ್ರತಿಯಲ್ಲಿ ಇದೆ ಆದರೆ ಚಲನಚಿತ್ರದಲ್ಲಿ ಇಲ್ಲ** ಎಂಬ ಅಂಶವು ಗಮನಕ್ಕೆ ಬರುತ್ತದೆ ಆದರೂ ಅದನ್ನು ಮುದ್ರಿಸಿದ್ದೇವೆ. ಕಾರಣ ಹೇಗೆ ಚಿತ್ರಕಥೆಯಲ್ಲಿದ್ದ ಹಲವು ಅಂಶಗಳು ನಂತರ ಚಲನಚಿತ್ರದಲ್ಲಿ ಇರಲಿಲ್ಲ ಅದಕ್ಕೆ ಕಾರಣವೇನು ಎಂಬುದನ್ನು ನಿರ್ದೇಶಕರ ಟಿಪ್ಪಣಿಯೊಡನೆ ನಿಮ್ಮ ಓದಿಗೆ ಸಹಾಯವಾಗುವಂತೆ ಮುದ್ರಿಸಿದ್ದೇವೆ. ಇದರ ಮುಖಾಂತರ ಎಷ್ಟೋ ಸಲ ಕೆಲವು ಒಳ್ಳೆಯ ಮತ್ತು ಕೆಲವು ಅನಿರೀಕ್ಷಿತ ಅಂಶಗಳು ನಮ್ಮ ಗಮನಕ್ಕೆ ಸಿನಿಮಾ ನೋಡಿದ ನಂತರ ಅನುಭವಕ್ಕೆ ಬರುತ್ತದೆ. ಈ ದೃಷ್ಟಿಯಿಂದ ಚಿತ್ರಕಥೆಯನ್ನು ಓದುವಾಗ ಸ್ವಲ್ಪ ಅಡೆತಡೆಯಾದರೂ ಕೂಡ ಈ ಸಾಧ್ಯತೆಗಳನ್ನು ಬಳಸಿಕೊಳ್ಳುವ ಮತ್ತು ಅದರ ಮುಖಾಂತರ ಓದುವ ಕ್ರಿಯೆಯಲ್ಲಿ ನಿಮ್ಮದೇ ಆದಂತಹ ಶೈಲಿಯನ್ನು ರೂಪಿಸಿಕೊಳ್ಳುವ ಚಿತ್ರಕಥಾ ಸಾಹಿತ್ಯದ ಮೆರುಗನ್ನು ಸವಿಯುವ ನಿಟ್ಟಿನಲ್ಲಿ ಇದೊಂದು ಪ್ರಥಮ ಹೆಜ್ಜೆಯಾಗಲಿ ಎಂದು ನಾನು ಆಶಿಸುತ್ತೇನೆ. ಒಟ್ಟಾರೆ ಇಂದಿನ ಚಲನಚಿತ್ರದ ಶೈಕ್ಷಣಿಕ ಬೇಕು–ಬೇಡಗಳನ್ನು ಗಮನಿಸಿದಾಗ ಇಂತಹ ಚಿತ್ರಕಥೆಗಳ ಅವಶ್ಯಕತೆ ಬಹಳ ಇದೆ ಎಂಬ ಅರಿವಿನೊಡನೆ ಈ ಪ್ರಯೋಗವನ್ನು ಕನ್ನಡ ಸಾಹಿತ್ಯ ಹಾಗೂ ಕನ್ನಡ ಸಿನಿಮಾ ವಿದ್ಯಾರ್ಥಿಗಳು ಸ್ವೀಕರಿಸುತ್ತಾರೆ ಎಂಬ ನಂಬಿಕೆಯೊಡನೆ ನಿಮ್ಮೊಂದಿಗೆ ನನ್ನ ಕನಸುಗಳನ್ನು ಹಂಚಿಕೊಳ್ಳುತ್ತಿದ್ದೇನೆ. ಧನ್ಯವಾದಗಳು...

***ಟಿ.ಎಸ್. ನಾಗಾಭರಣ***


ಡಾ॥ರಾಜ್‌ಕುಮಾರ್
ಶ್ರೀ ವಜ್ರೇಶ್ವರಿ ಫಿಲಂಸ್
ಡಾ॥ಶಿವರಾಮಕಾರಂತರ
ಶಿವರಾಜ್‌ಕುಮಾರ್
ಜ್ಞಾನಪೀಠ
ರಾಷ್ಟ್ರಪ್ರಶಸ್ತಿ
ಚಿಗುರಿದ
PEPSI
ಶ್ರೀಮತಿ ಪಾರ್ವತಮ್ಮರಾಜ್‌ಕುಮಾರ್
OM
ಹಂಚಿಕೆದಾರರು : ಶ್ರೀ ವಜ್ರೇಶ್ವರಿ ಕಂಬೈನ್ಸ್. ಶ್ರೀ ವಜ್ರೇಶ್ವರಿ ಮೂವೀಸ್
ಕಲಾ ಜ್ಯೋತಿ ಪುನೀತ್ ರಾಜ್‌ಕುಮಾರ್ ಅಭಿಮಾನಿ ಬಳಗ, ನಂದಿನಿ ಲೇಔಟ್ ಇವರಿಂದ ತ್ರಿಭುವನ್ ಚಿತ್ರಮಂದಿರದಲ್ಲಿ ಇಂದು ಬೆಳಗಿನ
ದರ್ಶನಕ್ಕೆ ಸಿಹಿ ಹಂಚಲಾಗುವುದು. ★ ಇಂದು ಊರ್ವಶಿ ಚಿತ್ರಮಂದಿರದಲ್ಲಿ ಹ್ಯಾಟ್ರಿಕ್ ಹೀರೊ ಶಿವರಾಜ್‌ಕುಮಾರ್ ಭಾವಚಿತ್ರಕ್ಕೆ ಮಧ್ಯಾಹ್ನ 12
ಗಂಟೆಗೆ ಭಾರಿ ಹೂವಿನ ಹಾರ.
ಡಾಕ್ ಶಿವರಾಜ್‌ಕುಮಾರ್ ಸೇನಾ ಸಮಿತಿ, ಗಾಂಧಿನಗರ ಇವರಿಂದ ಇಂದು ತ್ರಿಭುವನ್ ಚಿತ್ರಮಂದಿರದಲ್ಲಿ ಬೆಳಿಗ್ಗೆ 8 ಘಂಟೆಗೆ ಶಿವರಾಜ್‌ಕುಮಾರ್
ರ ಚಿತ್ರಕ್ಕೆ ಭಾರಿ ಹೂವಿನ ಹಾರ ಮತ್ತು 1.30ಕ್ಕೆ ಸಿಹಿ ಹಂಚಲಾಗುವುದು. ★ ಪುನೀತ್ ರಾಜ್‌ಕುಮಾರ್ ಸೇನಾ ಸಮಿತಿ ಹಾಗೂ ಡಾ। ರಾಜ್–
ರಾಜ್‌ಕುಮಾರ್ ಅಭಿಮಾನಿಗಳು, ಶಿವಾಜಿನಗರ, ಇವರಿಂದ ನಾಗ ಚಿತ್ರಮಂದಿರದಲ್ಲಿ ಶಿವಣ್ಣನವರ ಭಾವ ಚಿತ್ರಕ್ಕೆ ಭಾರಿ ಹೂವಿನ ಹಾರ.

ಬಿಡುಗಡೆ ದಿನಾಂಕ: 02–10–2003



# ಸಾರಾಂಶ

ಮಾನವ ಎಷ್ಟೇ ಮುಂದುವರೆದಿದ್ದರೂ, ಎಷ್ಟೇ ಸಾಧನೆಗಳನ್ನು ಸಾಧಿಸಿದ್ದರೂ ಆತ ಹೇಗೆ ಮತ್ತು ಯಾಕೆ ಈ ಭೂಮಿ ಮೇಲೆ ಬಂದ ಎನ್ನುವ ಕುತೂಹಲ ಅವನನ್ನು ಕಾಡುತ್ತಿರುವಂಥದ್ದೇ..! ಹಾಗೆಯೇ ನಾವು ಏನನ್ನೇ ಮಾಡುತ್ತಿದ್ದರು, ಎಲ್ಲೇ ಇದ್ದರೂ ನಮ್ಮ ಮೂಲ ಯಾವುದು ಮತ್ತು ಎಲ್ಲಿ ಎಂಬ ವಿಚಾರ ಒಂದಲ್ಲ ಒಂದು ಸಮಯದಲ್ಲಿ ನಮ್ಮನ್ನು ಕಾಡುವಂಥದ್ದೇ. ಈ ಕಥಾಹಂದರವನ್ನು ಹೊಂದಿರುವ "ಚಿಗುರಿದ ಕನಸು" ಚಿತ್ರ ನಮ್ಮ ಮನಸ್ಸಿಗೆ ಬಹಳವಾಗಿ ಹತ್ತಿರವಾಗುತ್ತದೆ. ಚಿತ್ರದ ನಾಯಕ ಉತ್ತಮ ಹಂತದ ವಿದ್ಯಾಭ್ಯಾಸ ಮಾಡಿಯೂ ನಗರದ ಆಕರ್ಷಣೆಗೆ ಒಳಗಾಗದೆ, ತನ್ನ ತಂದೆ–ತಾಯಿಯ ಆಶಯಗಳ ಕೀಲಿಕೈ ಕೂಡ ಆಗದೆ ತನ್ನ ದಾರಿಯೇ ಬೇರೆ, ನನ್ನ ತುಡಿತದ ಮೂಲವೇ ಬೇರೆ ಎಂದು ಹರಿಯುತ್ತಿರುವ ಜೀವನದ ವಿರುದ್ಧ ದಿಕ್ಕಿನಲ್ಲಿ ಪ್ರಯಾಣ ಬೆಳಸುವ ಪಯಣಿಗನಾಗುತ್ತಾನೆ.

ತನ್ನ ಮೂಲವನ್ನು ಹುಡುಕಿಕೊಂಡು ಬರುವ ಶಂಕರನಿಗೆ ಎಷ್ಟೋ ವರ್ಷಗಳಿಂದ ದತ್ತಣ್ಣನ ಅಂದರೆ ಶಂಕರನ ತಾತನ ಬರುವಿಕೆಗಾಗಿ ಕಾಯುತ್ತಿರುವ ಅಜ್ಜಿ ಸಿಗುತ್ತಾರೆ. ಅಜ್ಜಿಯ ಮೂಲಕ ತನ್ನ ಕುಟುಂಬದ ಮೂಲವೇನೆಂಬುದನ್ನು ತಿಳಿಯುತ್ತಾನೆ. ತಾನು ಮೂಲವನ್ನು ತಲುಪಿದುದರ ಜೊತೆಗೆ ಎಲ್ಲವೂ ನಶಿಸಿಹೋಗಿರುವುದನ್ನು ಮತ್ತೆ ಕಟ್ಟುವ ಅಜ್ಜಿಯ ಆಸೆಯನ್ನು ತನ್ನ ಆಸೆಯನ್ನಾಗಿಸಿಕೊಂಡು ಎಲ್ಲವನ್ನು ಬಿಟ್ಟು ಬಂಗಾಡಿಗೆ ಬಂದು ನೆಲೆಯೂರುತ್ತಾನೆ.

ಪ್ರಪಂಚದ ಯಾವ ಜಾಗವೇ ಆದರೂ ಕೆಟ್ಟವರು ಮತ್ತು ಒಳ್ಳೆಯವರ ಮಿಶ್ರಣವೇ ಆಗಿರುತ್ತದೆ ಎಂಬುದು ನಮ್ಮ ಸಾಮಾನ್ಯ ಪರಿಜ್ಞಾನಕ್ಕೆ ತಿಳಿದಿರುವಂತೆಯೇ, ಶಂಕರ ಬಂಗಾಡಿಗೆ ಬಂದುದನ್ನು ಸಹಿಸಲಾಗದೆ ಆ ಊರಿನ ಬೇರೆ ಯಾರೂ ಆಗಿರದೆ ಶಂಕರನ ಸಂಬಂಧಿಯೇ ಆದ ಶಾನುಭೋಗ ಶಂಕರನ ಮೇಲೆ ಕತ್ತಿ ಮಸೆಯುತ್ತಲೇ ಇರುತ್ತಾನೆ. ಶಂಕರ ಮಾಡುವ ಎಲ್ಲ ಕೆಲಸಗಳಿಗೆ ಏನಾದರೊಂದು ತೊಡಕನ್ನು ನೀಡುತ್ತಲೇ ಇರುತ್ತಾನೆ. ಬಂಧು–ಬಾಂಧವರ ಪರ–ವಿರೋಧದ ನಡುವೆಯೇ ತನ್ನ ಮೂಲಕ್ಕೆ ಸಂಬಂಧಿಸಿದ ಕೆಲಸಕಾರ್ಯಗಳಲ್ಲಿ ಶಂಕರ ಮಗ್ನನಾಗುತ್ತಾನೆ. ದಿನಗಳು ಕಳೆದಂತೆ ಬಿತ್ತಿಬೆಳೆದ ನೆಲದ ಫಲವತ್ತತೆಯನ್ನು ಸಂಭ್ರಮಿಸುವಾಗ ಆತ್ಮಸಂತೋಷದಿಂದ ಅಜ್ಜಿ ಕೊನೆಯುಸಿರೆಳೆಯುತ್ತಾರೆ. ನಂತರದ ದಿನಗಳಲ್ಲಿ ಶಾನುಭೋಗರ ಮಗಳು ಶ್ರೀಮತಿಗೆ ಶಂಕರನ ಮೇಲೆ ಅನುರಾಗವಾಗುತ್ತದೆ. ಈ ಅನುರಾಗವನ್ನು ವಿರೋಧಿಸುವ ಶಾನುಭೋಗ ತನ್ನ ಕೋಪದ ಕೈಗೆ ಬುದ್ಧಿಯನ್ನು ಕೊಟ್ಟು ತನ್ನ ಮಗಳನ್ನು ಕಳೆದುಕೊಳ್ಳುತ್ತಾನೆ. ಹೀಗೆ ತನ್ನನ್ನು ಪ್ರೀತಿಸುತಿದ್ದವರನ್ನೆಲ್ಲ ಕಳೆದುಕೊಂಡ ಶಂಕರ ತಾನು ಬಂದು ಸಾಧಿಸಿದ್ದಾದರೂ ಏನು ಎಂಬ ಜಿಜ್ಞಾಸೆಗೆ ಒಳಗಾಗುತ್ತಾನೆ. ಜೀವನವೆಂದರೆ ಅನಿರೀಕ್ಷತೆಗಳ ಆಗರ ಎಂದು ಮುತ್ತಯ್ಯ ತಿಳಿಸಿ ಕೊಡುವಾಗ ಶಂಕರನ ತಂದೆ, ತಾಯಿ ಅಲ್ಲಿಗೆ ಬಂದು ಆತನ ವಿಷಾದ, ಮನಸ್ಸಿನ ಬೇಗುದಿಗಳನ್ನೆಲ್ಲ ಹೋಗಲಾಡಿಸುತ್ತಾರೆ. ಮುಂದೆ ಶಂಕರ ಬಂಗಾಡಿಯಲ್ಲಿ ಆತ್ಮತೃಪ್ತಿ ಹೊಂದುತ್ತ ಕುಟುಂಬದವರೊಂದಿಗೆ ಜೀವನ ಸಾಗಿಸುತ್ತಾನೆ. ಚಿಗುರಿದ ಕನಸನ್ನು ಪೋಷಿಸುತ್ತ ತನ್ನ ಜೀವನವನ್ನು ಅದರಲ್ಲಿ ಕಾಣುತ್ತ ಶಂಕರ ಮುಂದಿನ ಹೆಜ್ಜೆಗಳತ್ತ ಅಡಿಯಿಡುತ್ತಾನೆ.

# SUMMARY

No matter how advanced human race claims to be, in spite of all our achievements, there is always one fundamental question, that boggles our mind. The question is "why were we born and what is the purpose of our life!" Because of this very reason, no matter what we do, we always ask ourselves "where do we belong?!". This question is the heartstring of the story "Chigurida kanasu".

Protagonist of the movie 'Shankar' is a well educated urban lad. But the colourful city life doesn't attract him, nor does the riches of his parents. He is an individual with a slightly different heart beat who likes to take chances, who doesn't hesitate to swim against the flow of life. He believes in his individuality and wants to make an identity of his own.

Shankar bids farewell to his girlfriend varalaxmi and sets out a journey to discover the place from where his family hailed. On that adventurous journey he meets his grandmother who would be awaiting shankar's grandfather. The striking similarity between him and his grandfather makes her forget all the bygone mishaps. She explains to him the story of his forefathers and why did his grandfather leave the place 'Bangadi', the very place that's associated to Shankar's name. He finds out about the land that he owns, now left barren. He decides to back his grandmother's dream and to stay in Bangadi.

It's by the virtue of human kind any place has good and bad elements in it. Thus the Shyanubhog or the village accountant of Bangadi, who happens to be a far relative of Shankar's, starts to conspire against him. Against all the odds Shankar's hard work pays off as he starts cultivating in his ancestral lands. Watching all this, his grandmother dies a happy soul. Shyanobhog's daughter falls in love with Shankar. Disturbed by this, Shyanbhog gets on his nerves and his wrath costs him the life of his own daughter. All the turbulence in his life pushes Shankar to doldrums. He starts to brood over the loss of all his loved ones. But life is unpredictable. Shankar's parents return to Bangadi and advice him to do the job he believes in. His partner Varalaxmi decides to stay in Bangadi to serve as a doctor. Hence Shankar's budding dreams are nurtured to reality!.

## ತಾರಾಗಣ

ಶಿವರಾಜ್ ಕುಮಾರ್
ರೇಖಾ ಉನ್ನಿಕೃಷ್ಣನ್
ವಿದ್ಯಾ ವೆಂಕಟೇಶ್
ಅನಂತನಾಗ್
ಅಶೋಕ್
ಅವಿನಾಶ್
ಸುಂದರ್ ರಾಜ್
ಕೃಷ್ಣೇಗೌಡ
ರಾಜು ಅನಂತಸ್ವಾಮಿ
ರಾಜೇಶ್ವರಿ ವರ್ಮ
ರಾಧಾ ತ್ರಿಪಾಠಿ
ಪುಷ್ಪಾಸ್ವಾಮಿ
ಶೈಲಜಾ ಸೋಮಶೇಖರ್
ಭವಾನಿ ಶಂಕರ್
ವೆಂಕಟಾದ್ರಿ
ರತಿಶಂಕರ್ ತ್ರಿಪಾಠಿ
ರಾಜಾರಾಮ್
ಮಾ. ಅಭಿನಾಶ್
ಮಾ. ಶಾಶ್ವತ್
ಮಾ. ಪ್ರತೀಕ್
ಬೇಬಿ ಸಿಂಧು
ಬೇಬಿ ಅರ್ಪಿತ

## ಮುಖ್ಯ ತಂತ್ರಜ್ಞರು

**ಸಂಭಾಷಣೆ**
ಜಯಂತ ಕಾಯ್ಕಿಣಿ

**ಕಲೆ**
ದಿನೇಶ ಮಂಗಳೂರು

**ಸಾಹಸ**
ರಾಮಶೆಟ್ಟಿ

**ನೃತ್ಯ**
ತಾರಾ

**ನಿರ್ಮಾಣ ಮೇಲ್ವಿಚಾರಣೆ**
ರಾಘವೇಂದ್ರ ರಾಜ್‌ಕುಮಾರ್

**ಚಿತ್ರಕಥೆ**
ಜಯಂತ ಕಾಯ್ಕಿಣಿ
ಟಿ.ಎಸ್. ನಾಗಾಭರಣ

**ಸಂಕಲನ**
ಎಸ್. ಮನೋಹರ್

**ಸಂಗೀತ**
ವಿ. ಮನೋಹರ್

**ಛಾಯಾಗ್ರಹಣ**
ಬಿ.ಸಿ. ಗೌರಿಶಂಕರ್

**ನಿರ್ಮಾಪಕರು**
ಪಾರ್ವತಮ್ಮ ರಾಜ್‌ಕುಮಾರ್

**ನಿರ್ದೇಶನ**
ಟಿ.ಎಸ್. ನಾಗಾಭರಣ

# ದೃಶ್ಯ–1

***ಹಗಲು–ಬನಾರಸ್‌ನ ಹೊರಭಾಗ***

(ಬನಾರಸ್ ನಗರದ ಕೆಲವು ಸ್ಥಳಗಳಾದ ವಿಶ್ವೇಶ್ವರ ದೇವಸ್ಥಾನ, ಗಂಗಾಘಾಟ್, ಹಳೇ ಪಟ್ಟಣ, ಹೊಸ ಪಟ್ಟಣ, ನದಿ ಇವುಗಳನ್ನು ತೋರಿಸುತ್ತ ವಿಶಾಲವಾದ ಕಾಲೇಜಿನ ಆವರಣವನ್ನು ತೋರಿಸುತ್ತಿದ್ದಂತೆಯೇ ಕಾಲೇಜಿನ ಆವರಣದಲ್ಲಿ ವೇದಿಕೆಯ ಮೇಲೆ ನಿಂತಿರುವ ಗೌರವಾನ್ವಿತ ವ್ಯಕ್ತಿಯೊಬ್ಬರು ವಿದ್ಯಾರ್ಥಿಗಳಿಗೆ ಪ್ರಮಾಣವನ್ನು ಭೋಧಿಸುತ್ತಿದ್ದಾರೆ. ವಿದ್ಯಾರ್ಥಿಗಳು ಅದನ್ನು ಪುನರುಚ್ಛರಿಸುವುದರ ಮೂಲಕ ಪ್ರಮಾಣವನ್ನು ಮಾಡುತ್ತಿದ್ದಾರೆ.)



| | | |
|---|---|---|
| ಅಧಿಕಾರಿ | : | Do you promise that to the utmost of your opportunity and ability you will promote the cause of morality and sound learning? |
| ವಿದ್ಯಾರ್ಥಿಗಳು | : | I do promise |
| ಅಧಿಕಾರಿ | : | Do you uphold and advance social order and the well being of your fellowmen? |
| ವಿದ್ಯಾರ್ಥಿಗಳು | : | I do promise |
| ಅಧಿಕಾರಿ | : | Let noble thoughts flow to our mind |
| ವಿದ್ಯಾರ್ಥಿಗಳು | : | Let noble thoughts flow to our mind |

| | | |
|---|---|---|
| ಅಧಿಕಾರಿ | : | From every corner |
| ವಿದ್ಯಾರ್ಥಿಗಳು | : | From every corner |
| ಅಧಿಕಾರಿ | : | We pledge today |
| ವಿದ್ಯಾರ್ಥಿಗಳು | : | We pledge today |
| ಅಧಿಕಾರಿ | : | To serve our land |
| ವಿದ್ಯಾರ್ಥಿಗಳು | : | To serve our land |
| ಅಧಿಕಾರಿ | : | In our choosen field |
| ವಿದ್ಯಾರ್ಥಿಗಳು | : | In our choosen field |
| ಅಧಿಕಾರಿ | : | To the best of our ability |
| ವಿದ್ಯಾರ್ಥಿಗಳು | : | To the best of our ability |
| ಅಧಿಕಾರಿ | : | Jai hind |
| ವಿದ್ಯಾರ್ಥಿಗಳು | : | Jai hind |

(ಪ್ರಮಾಣವಚನ ಸ್ವೀಕರಿಸಿದ ನಂತರ ವಿದ್ಯಾರ್ಥಿಗಳು ಪರಸ್ಪರ ಶುಭಾಶಯಗಳನ್ನು ವಿನಿಮಯ ಮಾಡಿಕೊಳ್ಳುತ್ತಾರೆ. ಅತ್ತ ಅಧಿಕಾರಿಗಳು ಸಹ.)

## ದೃಶ್ಯ–2

*ಹಗಲು–ವಿದ್ಯಾರ್ಥಿನಿಲಯದ ಹೊರಗೆ*

(ಶಿಕ್ಷಣವನ್ನು ಮುಗಿಸಿ ಊರಿಗೆ ಹೊರಡುವ ಸಮಯ ಸಮೀಪವಿರುವುದರಿಂದ ವಿದ್ಯಾರ್ಥಿ ನಿಲಯದ ಅಂಗಳದಲ್ಲಿ ನಿಂತಿರುವ ಪಂಕಜ್ ಬಂದು ಮೊದಲಿಗೆ ವಿದ್ಯಾರ್ಥಿ ನಿಲಯದ ಮಹಡಿಯಲ್ಲಿ ನಿಂತಿರುವ ಸೀತಾರಾಮನ ವಿಳಾಸವನ್ನು ಕೇಳುತ್ತಾನೆ. ಆಗ ಸೀತು;)

*ಹಸ್ತಪ್ರತಿಯಲ್ಲಿ: (ಚಲನಚಿತ್ರದಲ್ಲಿ ಇಲ್ಲ)*

*ತೆಲುಗು1 : ಏಮಪ್ಪಾ, ಮೀರು ಅಡ್ರೆಸ್ ಚಪ್ಪೇ ಲೇದು? ಇಪ್ಪುಡು ಚಪ್ತಾವ?*
*ತೆಲುಗು2 : 111, ಕುಚೇದ್ಗುಡ, ಹೈದರಾಬಾದ್*
*ತಮಿಳು1 : ಎನ್ನಯ್ಯ, ನಿಂಗಳ್ ಅಡ್ರೆಸ್ ಕೊಡ್‌ಕಿಲೆ*
*ತಮಿಳು2 : ಎಳ್ದುಕೋ ನಂಬರ್ 220, ನುಂಗಂಬಾಕಂ, ಚೆನ್ನೈ*
*ಮರಾಠಿ1 : ಪಕ್ಕಾ, ಪುಣ್ಯಾಲಾ ಏ ಬರಣ್?*
*ಮರಾಠಿ2 : ಜರೂರ್, ಬನ್‌ದಾಸ್*
*ಬೆಂಗಾಲಿ : ಏ ಗಿವ್ ಮಿ ಯುವರ್ ಅಡ್ರೆಸ್ ಯಾರ್*
*ಬೆಂಗಾಲಿ : ಹೌವ್ ಮೆನಿ ಟೈಮ್ಸ್ ಯು ಹ್ಯಾವ್ ಟೇಕನ್ ಮೈ ಅಡ್ರೆಸ್! ಅಗೇನ್ ಆಸ್ಕಿಂಗ್ ಮಿ.. ಐ ವಿಲ್ ರೈಟ್ ಟು ಯೂ ಮೈಸೆಲ್ಫ್ ಓಕೇ?*

ಪಂಕಜ್ : ಓ ಯಾರ್ ಸೀತಾರಾಮ್
ಸೀತಾರಾಮ್ : ಹಾ ಬೋಲ್
ಪಂಕಜ್ : ಆಪ್ನಾ ಅಡ್ರೆಸ್ ಬೋಲ್ನಾ ಯಾರ್
ಸೀತಾರಾಮ್ : ಹಾ ಸೀತಾರಾಮ್ ಪಂಡಿತ್
ಪಂಕಜ್ : ಏಕ್ ಮಿನಿಟ್ ಏಕ್ ಮಿನಿಟ್, ಸೀತಾರಾಮ್ ಪಂಡಿತ್
ಸೀತಾರಾಮ್ : ಮುದ್ರಾಡಿ
ಪಂಕಜ್ : ಮುದ್ರಾಡಿ
ಸೀತಾರಾಮ್ : ಸೌತ್ ಕ್ಯಾನ್ರಾ
ಪಂಕಜ್ : ಸೌತ್ ಕ್ಯಾನ್ರಾ
ಸೀತಾರಾಮ್ : ಕರ್ನಾಟಕ
ಪಂಕಜ್ : ಕರ್ನಾಟಕ, ಶಂಕರ್ ಕಹಾ ಹೈ?

| | | |
|---|---|---|
| ಸೀತಾರಾಮ್ | : | ರೂಮ್ ಮೆ ಹೈ |
| ಪಂಕಜ್ | : | ಉಸ್ಕಾ ಅಡ್ರೆಸ್ ಬತಾನಾ |
| ಸೀತಾರಾಮ್ | : | ಉಸ್ಸೇ ಹಿ ಪೂಚೋ ಯಾರ್ |
| ಪಂಕಜ್ | : | ವೋ ಚಲ್ ಮೆ ಆರಹಾಹೂ<br>(ಶಂಕರನಿಗೆ) |
| ಸೀತಾರಾಮ್ | : | ಶಂಕರ್, ಪಂಕಜ್ ತೇರ ಅಡ್ರೆಸ್ ಪೂಚ್ರಹಾಹೆ ದೇದೊ. (ಕೋಣೆಯೊಳಗೆ ಕುಳಿತಿರುವ ಶಂಕರನ ಕಡೆ ತಿರುಗಿ ಕೇಳುತ್ತಾನೆ) |
| ಶಂಕರ್ | : | ನಹಿ |
| ಸೀತಾರಾಮ್ | : | ಕ್ಯೂ, ಕ್ಯಾ ಹುವಾ ಶಂಕರ್? ಕೊಡಪ್ಪ ನಿನ್ ಅಡ್ರೆಸ್ ಅವನ್ಗೆ. |
| ಪಾಟೀಲ್ | : | ಅತಿ ಆತಪ್ಪ ನಿಂದು. ಅಡ್ರೆಸ್ ಕೊಡ್ಲೇ ಪಾ. ಅಪ್ಪ ದೆಹಲೀಲಿ ದೊಡ್ಡ ಸರ್ಕಾರಿ ಸಾಹೇಬ್ರು, ನಮ್ಮಂಥ ಸಣ್ಣ ಮಂದಿಗೆ ಎಲ್ಲಿ ಅಡ್ರೆಸ್ ಕೊಡ್ತೇರಿ. ನಾಳೆ ನಾವೆಲ್ಲ ನಿಮ್ಮನೆಗ್ ಬಂದು ನೌಕ್ರಿ ಕೊಡ್ರಿ ಅಂಥ ಮುತ್ಗೆ ಹಾಕ್ಬಿಟ್ರೆ? |
| ಶಂಕರ್ | : | ಮಾಫ್ ಕರ್ನಾ ಯಾರ್. ಮೇರಾ ಅಡ್ರೆಸ್ ನಹೀ ಹೈ ಪಾಟೀಲ್. ನಂಗೆ ವಿಳಾಸ ಇಲ್ಲ. |
| ಸೀತಾರಾಮ್ | : | ಶಂಕರ್, ಡೋಂಟ್ ಬಿ ಫಸ್ಸೀ. ಅಟ್ ಲೀಸ್ಟ್ ನಿನ್ ಡೆಲ್ಲಿ ಅಡ್ರೆಸ್ ಆದ್ರು ಕೊಡೊ? |
| ಶಂಕರ್ | : | ಪ್ಲೀಸ್ ಸೀತಾರಾಮ್. ವೋ ಮೆರಾ ಅಡ್ರೆಸ್ ನಹಿ ಹೈ. ಅದು ನನ್ ಆಂಬಿಶಿಯಸ್ ತಂದೆ ತಾಯಿಗಳ ಅಡ್ರೆಸ್. ಅವರು ಕಟ್ಟಿಕೊಂಡಿರೋ ಪೊಳ್ಳು ಸ್ಟೇಟಸ್‌ನ ಅಡ್ರೆಸ್. ಅದು ನಂಗೆ ಬಿಲ್ಕುಲ್ ಇಷ್ಟ ಇಲ್ಲ. ಆಪ್ ಸಬ್ ದೇಕ್ತೇ ರಹೋ ಮೈ ಮೇರಾ ಅಡ್ರೆಸ್ ಖುದ್ ಬನಾವೂಂಗಾ. ಔರ್ ಆಪ್ ಸಬ್ಕೋ ವಹಾ ಬುಲಾವೂಂಗ. ಐ ರಿಯಲಿ ಮೀನ್ ಇಟ್. |
| ಈಶಾನ್ | : | ವಾಹ್ ಕ್ಯಾ ಬಾತ್ ಹೈ. ಏಕ್ ಇಂಜಿನಿಯರ್ ಅಪ್ನೆ ಅಡ್ರೆಸ್ ಕಿ ತಲಾಷ್ ಮೇ ಕ್ಯಾ. ಓ ಜಾನೇ ದೋ ಯಾರ್. ಅಪನಿ ಗರ್ಲ್‌ಫ್ರೆಂಡ್ ಕಾ ಅಡ್ರೆಸ್ ದೇದೆ ಯಾರ್. |
| ಶಂಕರ್ | : | ಚಲ್ ಯಾರ್<br>(ಎಲ್ಲ ಸ್ನೇಹಿತರನ್ನು ನಿಲ್ಲಿಸಿ ಶಂಕರ್ ಫೋಟೋ ತೆಗೆಯುತ್ತಾನೆ)<br>.. ಚಾ ಚಾ ಜರಾ ಸ್ಮೈಲ್ ಕರೋನ. (ಫೋಟೋ ತೆಗೆದ ನಂತರ) |

|  |  |  |
|---|---|---|
|  |  | .. ಸೀತು (ಕರೆದು ತಾನು ಫೋಟೋಗೆ ನಿಲ್ಲಲು ಹೋಗುವನು) |
| ಪಾಟೀಲ್ | : | ಏ ಏ ಒಂದ್ ಮಿನಿಟ್ ನಿಂದ್ರೋ |

*(ಚಲನಚಿತ್ರದಲ್ಲಿ ಇಲ್ಲ)*

|  |  |  |
|---|---|---|
| *ಪಾಟೀಲ್* | *:* | *(ಫೋಟೋ ತೆಗೆದ ನಂತರ) ಥ್ಯಾಂಕ್ಸ್ ಪಾ. ಒಂದ್ ಚಲೋ ಕಾಪಿ ನನ್ ವಿಳಾಸಕ್ ಕಳಿಸ್‌ಬೇಕಾ ಮತ್ತ. ನೋಡ್ರಪ್ಪಾ, ನಾಕ್ ವರ್ಷದಾಗ ಹ್ಯಾಂಗ್ ಬೆಳಸೀನಿ ನೋಡ್ರೋ* |
| *ಶಂಕರ* | *:* | *ವಾಹ್, ಯೂನಿವರ್ಸಿಟಿ ಸೇ ತೋ ಸಬ್ ಧಿಮಾಕ್. ಧಿಮಾಕ್ ಸಾಲಿಡ್ ಬನಾಕೇ ನಿಕಲ್ ತೇ ಹೈಂ. ಲೇಕಿನ್ ಅಪ್‌ನಾ ಪಾಟೀಲ್ ತೋ ಬಾಡಿ ಸಾಲಿಡ್ ಬನಾಕೇ ಜಾ ರಹಾ ಹೈ* |
| *ಸೀತಾರಾಮ* | *:* | *ಬ್ಯಾಡ್‌ಲಕ್. ಪಾಸಾಗ್ ಬಿಟ್ಟ ಈ ಸಲ. ಫೇಲಾಗಿ ಇನ್ನೊಂದ್ ವರ್ಷ ಇದ್ದಿದ್ರೆ ಚೆಸ್ಟು, ಬೈಸಿಪ್ಸ್ ಎಲ್ಲಾ ಸಾಲಿಡ್ ಮಾಡ್ಕೊಂಡೇ ಹೋಗ್ತಿದ್ದ. ಅಲ್ವೇನೋ?* |
| *ಪಾಟೀಲ್* | *:* | *ಏನ್ ಮಾಡೋದ್ರಿ? ಎಷ್ಟು ಪ್ರಯತ್ನಪಟ್ರೂ ಪಾಸಾಗೇ ಹೋತು ನೋಡ್ರಿ. ಮನೀಗ್ ಹೋಗ್ಲೇಬೇಕ್ ಈಗ* |

|  |  |  |
|---|---|---|
| ಸೀತಾರಾಮ್ | : | ಏ ಬಾಡಿ ಬಿಲ್ಡರ್ ನೀನ್ಹಿಂಗ್ ಮಾಡುದ್ರೆ ಇಲ್ಲೆ ಇರ್ಬೇಕಾಗುತ್ತೆ. |
| ಪಾಟೀಲ್ | : | ಏನ್ಮಾಡೋದ್ಲೇ ಸೀತಾರಾಮು ಟಿಕೇಟ್ ಬೇರೆ ತಂದ್ಬಿಟಿಯಲ್ಲ. ಊರಿಗ್ ಹೋಗಾಕ ಬೇಕು ಈಗ. |
| ಶಂಕರ್ | : | ಹೀಗೆ ಹೋಗಬೇಡ. ಶರ್ಟ್ ಹಾಕೊಂಡ್ ಹೋಗು |
| ಪಾಟೀಲ್ | : | ನೀನ್ ಬುಡುಪಾ, ಕಮಾಲಾ ಮಾಡಿದಿ. ಇಂಜಿನಿಯರಿಂಗ್ ಕಲಿಯಾಕ್ ಬಂದಾವ ಸೀತಾರಾಮ್‌ನ್ ಜೊತೆ ಕೂಡಿ ಕನ್ನಡಾನು ಕಲ್ತ್‌ಬಿಟ್ಟಲ್ಲೋ. ಇದೆಂತ ಹುಚ್ಚು ಅಂತೀನಿ. (ಆತ ಕನ್ನಡ ಕಲಿತಿದ್ದಕ್ಕೆ ಅಚ್ಚರಿಪಟ್ಟು ಕೇಳುತ್ತಾನೆ) |
| ಶಂಕರ್ | : | ಪಾಟೀಲ್, ಆಪ್ಕೊ ಮಿರ್ಚಿ ಬಜ್ಜಿಕಾ ಹುಚ್, ಈಶಾನ್‌ಕೋ ಕ್ರಿಕೆಟ್ ಕಾ ಹುಚ್, ಇಸೀ ತರಹ್ ಮುಝೆ ಕನ್ನಡ್‌ಕಾ ಹುಚ್. ಕೋಯಿ ಪ್ರಾಬ್ಲಮ್? (ಎಂದು ತನ್ನ ಕನ್ನಡ ಕಲಿಕೆಯ ಬಗ್ಗೆ ಸಮರ್ಥನೆ ಕೊಡುತ್ತಾನೆ) |

| | | |
|---|---|---|
| ಪಾಟೀಲ್ | : | ನೋ ಪ್ರಾಬ್ಲಮ್. ಅಲ್ಲಾ ಮುಂಬೈನಾಗ್ ಹುಟ್ಟಿ ದಿಲ್ಲಿಯಾಗ್ ಬೆಳ್ದಿರೋ ಹಿಂದಿ ಮನ್ಸಾ ನೀನು ಒಂದೇ ವರ್ಷನಾಗ್ ಕನ್ನಡ ಕಲ್ತ್‌ಬಿಟ್ಯಲ್ಲೋ. ಅಬ್ಬಬ್ಬ ಕನ್ನಡದ್ ಮ್ಯಾಗ್ ಎಂಥಾ ಪ್ರೀತಿ ಪಾ.<br>(ಆಶ್ಚರ್ಯದಿಂದ ಕೇಳುತ್ತಾನೆ) |
| ಸೀತಾರಾಮ್ | : | ಪ್ರೀತಿ ಹೌದು ಪ್ರೀತಿ. ಆದ್ರೆ ಕನ್ನಡದ್ ಮೇಲಲ್ಲ ಕನ್ನಡತಿ ಮೇಲೆ. ದಿಲ್ಲಿಯಲ್ಲಿರೋ ಕನ್ನಡತಿ ಮೇಲೆ.<br>(ಕನ್ನಡ ಕಲಿಕೆಯ ಹಿಂದಿರುವ ಉದ್ದೇಶವನ್ನು ಪಾಟೀಲನಿಗೆ ಸೀತಾರಾಮ ತಿಳಿಸಿಕೊಡುತ್ತಾನೆ. ತಪ್ಪಿಸಿಕೊಳ್ಳಲು ಪ್ರಯತ್ನಿಸುವ ಶಂಕರನನ್ನು ಪಾಟೀಲ ತಡೆದು ಉತ್ಸಾಹದಿಂದ) |
| ಪಾಟೀಲ್ | : | ಏ ಇವ್ನ..<br>(ಎಂದು ಶಂಕರನನ್ನು ಎತ್ತಿಕೊಂಡು ಸಂಭ್ರಮಿಸುತ್ತಾನೆ) |
| ಶಂಕರ್ | : | ಏ ಏ ಉತಾರೋ ಯಾರ್ |
| ಪಾಟೀಲ್ | : | ಏ ನಮ್ ಕನ್ನಡದ್ ಹುಡ್ಗೀಗೆ ಮೋಸ ಗೀಸ ಮಾಡಿದ್ರೆ ನೋಡ್ ಮತ್ತ.. |
| ಶಂಕರ್ | : | ನಾನು ಅವಳನ್ನ ಪ್ರೀತಿಸ್ತಿನಿ |
| ಪಾಟೀಲ್ | : | ಹಂಗಾದ್ರ ಆಕಿ ಹೆಸ್ರ್ಹೇಳೊ |
| ಸೀತಾರಾಮ್ | : | ಅಯ್ಯೋ ಸಿಕ್ಹಾಕೊಂಡ |
| ಶಂಕರ್ | : | ವರಲಕ್ಷ್ಮಿ |
| ಪಂಕಜ್ | : | ವರಲಕ್ಷ್ಮೀ ಹೇ ಬತಾದಿಯಾ<br>(ಸ್ನೇಹಿತನ ಗೆಳತಿಯ ಹೆಸರನ್ನು ತಿಳಿದು ಸಂತಸ ಪಡುತ್ತಾನೆ) |
| ಪಾಟೀಲ | : | ವರಲಕ್ಷ್ಮೀ<br>(ಪಾಟೀಲ್ ಶಂಕರನನ್ನು ಬೀಳಿಸಿ ಹುಡುಗಿಯ ಹೆಸರನ್ನು ತಿಳಿದ ಸಂಭ್ರಮವನ್ನು ಪಡುತ್ತ ಅವನಿಂದ ತಪ್ಪಿಸಿಕೊಂಡು ಓಡಿಹೋಗುತ್ತಾನೆ ಶಂಕರ್ ಅವನನ್ನು ಹಿಂದೆಯೇ ಅಟ್ಟಿಸಿಕೊಂಡು ಹೋಗುತ್ತಾನೆ) |

**ನಿರ್ದೇಶಕರ ಟಿಪ್ಪಣಿ:**

**ಚಿಗುರಿದ ಕನಸು ಕಾದಂಬರಿಯ ಮೂಲ ಆಶಯವನ್ನು ಮೊಟ್ಟಮೊದಲ ದೃಶ್ಯದಲ್ಲೇ ಸೆರೆಹಿಡಿಯಬೇಕೆಂಬ ಕುತೂಹಲದಿಂದ ಸೀತಾರಾಮ್ ಜೊತೆ ಇದ್ದ ನಾಯಕನಟ, ಬನಾರಸ್‌ನಲ್ಲಿ ತನ್ನ ಸ್ನೇಹಿತರೊಡಗೂಡಿ ಕಾನ್ವೊಕೇಷನ್ ಮುಗಿಸಿಕೊಂಡು ಅದರ ನಂತರ ಪ್ರತಿಯೊಬ್ಬರೂ ಊರಿಗೆ ಹೊರಡಬೇಕೆನ್ನುವ ಇಚ್ಛೆಯನ್ನು, ಅಭಿಲಾಷೆಯನ್ನು ವ್ಯಕ್ತ ಪಡಿಸುತ್ತಿರಬೇಕಾದರೆ ತನಗೆ ಯಾವುದೇ ವಿಳಾಸ ಇಲ್ಲ ಎನ್ನುವ ಮಾತಿನ ಮುಖಾಂತರ**

ತನ್ನ ಮೂಲನೆಲೆಯ ಬಗ್ಗೆ ತನಗಿರುವ ಕಾಳಜಿಯನ್ನು ತೋರುತ್ತಾನೆ. ನಿಧಾನವಾಗಿ ಅದು ಕಥೆಯ ಉದ್ದಕ್ಕೂ ಬಿಚ್ಚಿಕೊಳ್ಳುತ್ತದೆ. ಮೊಟ್ಟಮೊದಲ ದೃಶ್ಯದಲ್ಲಿಯೇ ಬನಾರಸ್‌ನ್ನು ಶೈಕ್ಷಣಿಕ ಕಾಶಿ ಎಂಬುದನ್ನು ಬಿಂಬಿಸಲಾಗಿದೆ. ಆ ಶೈಕ್ಷಣಿಕ ಕಾಶಿಯಲ್ಲಿ ಶಿಕ್ಷಣದ ಅಭ್ಯಾಸಗಳನ್ನು ಮುಗಿಸಿದ, ವೃತ್ತಿ ಬದುಕಿನತ್ತ ತಿರುಗಿದ ಮನಸ್ಸುಗಳ ಹುಡುಕಾಟವನ್ನು ಹೇಳುವಂತೆ ಮೊದಲ ದೃಶ್ಯ ಪ್ರಾರಂಭವಾಗುತ್ತದೆ. ಇಲ್ಲಿ ಬಹಳ ಮುಖ್ಯವಾದದ್ದು ನಾವು ಆ ಬನಾರಸ್‌ನ ವಿಶ್ವವಿದ್ಯಾನಿಲಯದ ಕ್ಯಾಂಪಸ್‌ನಲ್ಲಿ ನಮ್ಮ ಚಲನಚಿತ್ರದ ಚಿತ್ರೀಕರಣವನ್ನು ಪ್ರಾರಂಭಿಸಿದಾಗ ನಮಗೆ ಒತ್ತಾಸೆಯಾಗಿ ನಿಂತ ಅಲ್ಲಿನ ಕುಲಪತಿಗಳು ಮತ್ತು ಪ್ರಾಧ್ಯಾಪಕರು ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಬನಾರಸ್‌ನ ಕೆಲವು ರಂಗಭೂಮಿಯ ನಟರನ್ನು ನಾನಿಲ್ಲಿ ಸ್ಮರಿಸಿಕೊಳ್ಳಬೇಕಾಗುತ್ತದೆ. ಅವರೆಲ್ಲರ ಸಹಕಾರದಿಂದ ಬನಾರಸ್‌ನ ಒಟ್ಟಾರೆ ಚಿತ್ರೀಕರಣ ಬಹಳ ಸುಲಭವಾಗಿ ಮುಗಿಯಿತು. ಇದು ಈ ಚಿತ್ರದ ಹೆಗ್ಗಳಿಕೆಯೂ ಹೌದು.

## ದೃಶ್ಯ–3

***ಹಗಲು–ಬನಾರಸ್ (ನದಿದಂಡೆ)***

| | | |
|---|---|---|
| | | (ಗಂಗಾನದಿಯ ದಂಡೆಯಲ್ಲಿ, ತನ್ನ ಮುಂದಿನ ಜೀವನ ಏನು, ಹೇಗೆ ಎಂದು ಭವಿಷ್ಯದ ಬಗೆಗೆ ಚಿಂತಾಕ್ರಾಂತನಾಗಿ ಯೋಚಿಸುತ್ತ ಕುಳಿತಿರುವ ಶಂಕರನ ಬಳಿ ಚಾಚಾ ಬರುತ್ತಾರೆ) |
| ಚಾಚಾ | : | ಶಂಕರ್ ಬೇಟೆ |
| ಶಂಕರ್ | : | ಅರೆ ಚಾಚಾ ಆವೋ ಬೈಟೋ |
| ಚಾಚಾ | : | ಕ್ಯೂಂ ಬೇಟಾ, ಘರ್ ಜಾನೇಕ ಮನ್ ನಹೀ ಕರ್ತಾಹೈ ಕ್ಯಾ? |
| ಶಂಕರ್ | : | ನಹೀ ಚಾಚಾ, ಐಸಾ ನಹಿ, ಚಾಚಾ ಆಪ್ಕಾ ಗಾಂವ್ ಕಹಾ ಹೈ? |
| ಚಾಚಾ | : | ಹಿಮಾಲಯ್ ಕಾ ಗೋದ್‌ಮೆ. ಚಮೋಲಿ ನಾಮ್ ಕಾ ಗಾಂವ್ ಹೈ ಮೇರಾ. ಹಮ್ ಪಹಾಡೀ ಲೋಗ್ ಹೈ ಬೇಟಾ. ಪ್ರಕೃತಿಕೆ ಸಾಥ್ ಜುಡೇ ಹುಯೇ ಲೋಗ್ ಹೈ ಬೇಟಾ. |



| | | |
|---|---|---|
| ಶಂಕರ್ | : | ಉಸ್ಸೇ ಛೋಡ್‌ಕರ್ ಆಪ್ ಯಹಾಂ ಕ್ಯೂ ಆಯಾಹೋ ಚಾಚಾ? |
| ಚಾಚಾ | : | ಉನ್ ಖುಬ್‌ಸೂರತ್ ಪಹಾಡಿಯೋಂಸೆ ದಿಲ್ ಭರ್ತಾ ಹೈ ಪೇಟ್ ನಹಿ ಭರ್ತಾ ಬೇಟಾ. ಇಸಿಲಿಯೇ ಇಸ್ ಪಾಪಿ ಪೇಠ್ ಕೆ ಲಿಯೇ ಹಮ್ ಪಹಾಡ್‌ಸೆ ಉತಾರ್‌ಕರ್ ನೀಚೆ ಆಜಾತೆ |

| | | |
|---|---|---|
| ಶಂಕರ್ | : | ಆಪ್ ಕಿತ್ನೆ ಲಕ್ಕಿ ಹೋ ಚಾಚಾ. ಆಪ್ಕೊ ಅಪ್ನಾ ಗಾಂವ್ ಹೈ. ಮುಝೆ ತೋ ಗಾಂವ್ ಛೋಡೋ. ಉಸ್ಕಾ ಐಸಾ ಅಸ್ತಿತ್ವ ನಹಿ. |
| ಚಾಚಾ | : | ನಾ ಬೇಟಾ ನಾ, ಹರ್ ಗಂಗಾಕೀ ಎಕ್ ಗಂಗೋತ್ರಿ ಜರೂರ್ ಹೋತಿಹೈ. ತುಮ್ನೆ ಪೂಛಾ ನಹಿ ಹೋಗಾ ಆಪ್ನೆ ಮಾ ಬಾಪ್ಸೇ. ಪೂಛೋ ಬೇಟಾ |
| ಶಂಕರ್ | : | ಜೋ ಉನ್ಹೇ ನಹಿ ಪತಾ ವೋ ಹಮೆ ಕ್ಯಾ ಪತಾಯೇಂಗೆ? |
| ಚಾಚಾ | : | ಪತಾ ಕರೋ ಬೇಟ ಬತಾ ಕರೋ. ಪೂಛೋ ಅಪ್ನೆ ಬಾಪ್ ಸೆ. ಪೂಛೋ ಅಪ್ನೆ ಆಪ್ಸೆ. ಜಬ್ ತಕ್ ಸವಾಲ್ ನಹಿ ಕರೋಗೆ ತಬ್ ತಕ್ ದಿಶಾ ನಹಿ ಮಿಲೇಗಿ. ತುಮ್ಹೆ ತುಮಾರಿ ಮಂಜಿಲ್ ಜರೂರ್ ಮಿಲೇಗಿ. ಅಂತರ್ ನಾದ್ ಸುನೋ, ದಿಲ್ ಕಿ ಪುಕಾರ್ ಸುನೋ, ಪಹುಂಚ್ ಜಾವೋಗಿ ಅಪ್ನೆ ಜಗಾ.<br>(ಚಾಚಾರ ಮಾತುಗಳಿಂದ ಸ್ಫೂರ್ತಿಪಡೆವ ಶಂಕರ ತನ್ನಲ್ಲಿ ಕೆಲವು ಭಾವನೆಗಳ ತೊಳಲಾಟಕ್ಕೆ ನಾಂದಿಹಾಡುತ್ತಾನೆ. ಈ ಭಾವನೆಗಳ ಹರಿವನ್ನು ವ್ಯಕ್ತಪಡಿಸುವ ಹಾಡೊಂದು ಪ್ರಾರಂಭವಾಗುತ್ತದೆ.) |

# ದೃಶ್ಯ–4

*ಹಗಲು–ಬನಾರಸ್*
*ಹಾಡು: ಬಂಧುವೇ ಓ ಬಂಧುವೇ*
*ಸಾಹಿತ್ಯ: ಜಯಂತ ಕಾಯ್ಕಿಣಿ*
*ಹಾಡಿದವರು: ಡಾ. ರಾಜ್‌ಕುಮಾರ್*

**(ಜ್ಞಾನೋದಯವಾದವನಂತೆ ಎದ್ದು ನಿಲ್ಲುವ ಶಂಕರ ಗಂಗಾ ನದಿಯ ತಟದಲ್ಲಿ ನಿಂತು ಗಂಗೆಯನ್ನು ಸ್ಪರ್ಷಿಸುತ್ತ ಆತ್ಮಾನಂದವನ್ನು ಹೊಂದುತ್ತಾನೆ)**

ಬಂಧುವೇ ಓ ಬಂಧುವೇ

**(ದೋಣಿಯಲ್ಲಿ ಏಕಾಂತವಾಗಿ ಸಂಚಾರ ಮಾಡುತ್ತ ಗಂಗಾನದಿಯ ತಟವನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದಾನೆ)**

ಗಂಗವ್ವ ಗಂಗಾಮಾಯೆ ಮಮತೆಯ ಧಾರೆ
ಗುರಿಯಿರದೆ ಅಲೆವ ನನ್ನ ಮೂಲವ ತೋರೆ
ಯಾವುದೋ ದಡದಿಂದ ಕರೆದಿದೆ ಅನುಬಂಧ
ಎಲ್ಲಿಯದೋ ಈ ಸೆಳೆತ ಹೋ

**(ಸೀತಾರಾಮ ಗಂಗೆಯಲ್ಲಿಳಿದು ಸಂಧ್ಯಾವಂದನೆ ಮಾಡುತ್ತಿರುವುದನ್ನು ನೋಡುತ್ತಾನೆ, ತಟದಲ್ಲಿ ಪುರೋಹಿತರು ಮಾಡುತ್ತಿರುವ ವಿಧಿ, ವಿಧಾನ ಮತ್ತು ಉಪದೇಶಗಳನ್ನು ಮತ್ತು ಅಲ್ಲಿ ನಡೆಯುತ್ತಿರುವ ಧಾರ್ಮಿಕ ಆಚರಣೆಗಳನ್ನು ನೋಡಿ ಪುಳಕಿತನಾಗುತ್ತಿದ್ದಾನೆ)**

ಕಾಡಿನ ಮೌನ ಗಾಳಿಯಲೀ
ನಾಡಿನ ಮಾತು ಧೂಳಿಯಲೀ
ಸಂತೆಯ ವೇಷಕೆ ಉಂಟೆ ಕೊನೆ
ಸಂಜೆಗೆ ಮರಳಲು ಎಲ್ಲಿ ಮನೆ
ಪ್ರೀತಿಯ ರೆಕ್ಕೆ ಬೀಸಿ ಬಾನೆಲ್ಲ ಹಾರಿ
ತೇಲುವ ಮನಸೀಗಿಲ್ಲಿ ಬಾಳೆಲ್ಲ ದಾರಿ
ಕಾಣದ ನೆಲದಿಂದ ಮಣ್ಣಿನ ಹೊಸ ಗಂಧ
ಎಲ್ಲಿಯದೋ ಈ ಸೆಳೆತ ಹೋ

**(ರಾತ್ರಿ ಸಮಯ ಬೆಂಕಿಯ ಮುಂದೆ ಎಲ್ಲರೂ ತಮಾಷೆಯಾಗಿ ಕಾಲಕಳೆಯುತ್ತಿರುವ ಸಂದರ್ಭದಲ್ಲಿ ಶಂಕರ ಗಂಭೀರವಾಗಿ ಕುಳಿತಿದ್ದಾನೆ.)**

**(ನಗರದ ಪ್ರಮುಖ ಬೀದಿಗೆ ಬಂದಾಗ ಅಲ್ಲಿ ಕಾಣಸಿಗುವ ವಸ್ತುಗಳಿಂದ ಆಕರ್ಷಿತನಾದ ಶಂಕರ ವರಲಕ್ಷ್ಮಿಗೆ ಒಂದು ಉಂಗುರವನ್ನು ತಗೆದುಕೊಳ್ಳುತ್ತಾನೆ. ಈಶಾನ್ ಏನೆಂದು ಕೇಳಿದಾಗ ಸೀತಾರಾಮ ಅದು ಶಂಕರನ ಹುಡುಗಿಗೆ ತಗೆದುಕೊಂಡದ್ದು ಎಂದು ತಿಳಿಸುತ್ತಾನೆ)**

ನಡೆಯದೆ ದಾರಿ ದಕ್ಕೋದಿಲ್ಲ
ಕೇಳದೆ ಏನೂ ಸಿಕ್ಕೋದಿಲ್ಲ
ಪ್ರೀತಿಯ ಹನಿ ಪ್ರತಿ ಕಂಗಳಲ್ಲು
ಭಾವವು ಇಲ್ಲದೆ ಎಲ್ಲಾ ಕಲ್ಲು

**(ವಿದ್ಯಾಭ್ಯಾಸ ಮುಗಿದ ಕಾರಣ ಎಲ್ಲರೂ ಹೊರಡುವ ಸಂದರ್ಭದಲ್ಲಿ ಶಂಕರ ಚಾಚಾರ ಕಾಲಿಗೆ ಬಿದ್ದು ಆಶೀರ್ವಾದ ಪಡೆಯುತ್ತಾನೆ. ಚಾಚಾ ಭಾವಪೂರ್ಣವಾಗಿ ಬೀಳ್ಕೊಡುತ್ತಾರೆ. ಶಂಕರ ಭಾವುಕನಾಗಿ ಅವರಿಗೆ ವಂದನೆ ಹೇಳಿ ತನ್ನ ಪಯಣವನ್ನು ಮುಂದುವರೆಸುತ್ತಾನೆ)**

ಕಲ್ಲಾಗಿ ನಿಂತ ನಮ್ಮ ಶಾಪವ ನೀಗು
ಹುಲ್ಲನ್ನು ಚಿಗುರಿಸೋ ಸ್ಪರ್ಶವ ನೀಡು
ತೀರದ ದಾಹ ಅಲೆಗಳ ಆರೋಹ
ಎಲ್ಲಿಗೆ ಈ ಸೆಳೆತ ಹೋ...

(ಶಂಕರ ಮತ್ತು ಆತನ ಸಂಗಡಿಗರೆಲ್ಲರು ವಾರಣಾಸಿಯನ್ನು ತೊರೆಯುತ್ತಿದ್ದಾರೆ. ಇದರಿಂದ ಶಂಕರ ತುಸು ಹೆಚ್ಚು ಭಾವುಕನಾಗಿದ್ದಾನೆ)

# ದೃಶ್ಯ–5

**ಹಗಲು–ವಾರಣಾಸಿ**

(ರೈಲುನಿಲ್ದಾಣಕ್ಕೆ ಬಂದು ಸ್ನೇಹಿತರೆಲ್ಲರು ಪರಸ್ಪರ ಬೀಳ್ಕೊಂಡು ತಮ್ಮ ತಮ್ಮ ಊರಿಗೆ ಪ್ರಯಾಣಿಸುತ್ತಿದ್ದಾರೆ. ಮೊದಲಿಗೆ ಪಂಕಜ್ ಎಲ್ಲರಿಗೂ ಅಪ್ಪುಗೆಯನ್ನು ನೀಡಿ ನಿರ್ಗಮಿಸುತ್ತಾನೆ. ನಂತರ ಈಶಾನ್ ಹೊರಡುತ್ತಾನೆ. ಸೀತಾರಾಮ ಹೊರಡಲು ಮುಂದಾದಾಗ ಶಂಕರ ಅವನ ಬಳಿ ಬಂದು ಭಾವನಾತ್ಮಕವಾಗಿ ತನ್ನ ಮಾತನ್ನು ಆರಂಭಿಸುತ್ತಾನೆ)

***ಹಸ್ತಪ್ರತಿಯಲ್ಲಿ: (ಚಲನಚಿತ್ರದಲ್ಲಿ ಇಲ್ಲ)***

***ಈಶಾನ್ : ಆ ಜಾನಾ ಅಸ್ಸಾಂಕೊ ಕಭೀ, ಕಂ ಸೇ ಕಂ ಶಾದಿ ಕೇ ಬಾದ್. ಹನಿಮೂನ್ ಕೇಲಿಯೇ ತೋ ಆ ಜಾನಾ ಯಾರ್***

***ಪಾಟೀಲ್ : ಹನೀಮೂನ್***

***ಶಂಕರ್ : ಜೀ ಹ್ಞಾಂ ಹನಿಮೂನ್***

***ಶಂಕರ್ : ಸೋ ನೋ ಚಾನ್ಸ್ ಫಾರ್ ಯೂ ಮಿಸ್ಟರ್ ಹನುಮಾನ್***

***ಪಾಟೀಲ್ : ಬರ್ತೀನಿ, ನಿಮ್ ಅಡ್ರೆಸ್ ಸಿಕ್ ಕೊಡ್ಲೆ ಬರ್ತೀನಪ್ಪ***

***ಈಶಾನ್ : ಅಬೇ ಇಂಜಿನಿಯರ್ ಬನ್‌ಕೇ ಜಾ ರಹೇ ಹೋ. ಅಬ್ ಮಾಕೆ ಹಾಥ್ ಕಾ ಖಾನಾ ನಹೀಂ. ಖುದ್ ಕೀ ಕಮಾಯಿ ಕಿ ರೋಟಿ ಖಾವೋ.***

(ಈಶಾನ್ ಮತ್ತು ಮತ್ತೊಬ್ಬ ಸ್ನೇಹಿತ ಎಲ್ಲರಿಗೂ ಹೇಳಿ ಹೊರಡುತ್ತಾರೆ, ಆಗ ಶಂಕರ್, ಸೀತಾರಾಮನಿಗೆ)

ಶಂಕರ್ : ಸೀತಾರಾಮ್ ನಿನ್ನ ಹುಟ್ಟೂರಿಗೆ, ನಿನ್ನದೇ ಆದ ನಾಡಿಗೆ ಹೋಗ್ತಾ ಇರೋ ನಿನ್ನ ನೋಡಿ ನಂಗೆ ಅಸೂಯೆ ಆಗ್ತಿದೆ. ಐ ಫೀಲ್ ಟೆರಿಬಲಿ ಜೆಲಸ್. ನಂಗು ಒಂದು ಹುಟ್ಟೂರು ಇರ್ಬೇಕಿತ್ತು. ಈ ಕ್ವಾರ್ಟಸ್ ಇಂದ ಕ್ವಾರ್ಟಸ್‌ಗೆ ಹೋಗೋ ಪ್ರಯಾಣ ಸಾಕಾಗಿದೆ ಸೀತಾರಾಮ್.

ಸೀತಾರಾಮ್ : ಲೋ ಇನ್ನು ಡೆಲ್ಲಿಗ್ ಹೋಗಿ ನಿನ್ ವರಲಕ್ಷ್ಮೀನ ಬೆಚ್ಚ್‌ಬೀಳ್ಸೋದಿದೆ ನೀನು. ನೀನ್ ಕನ್ನಡ ಮಾತಾಡೋದ್ ಕೇಳಿ ಅವ್ಳು ದಂಗಾಗ್ಬುಡ್ಬೇಕು. ಆಗ

ನನ್ ಶ್ರಮ ಸಾರ್ಥಕ. ಈ ನಿನ್ ಕನ್ನಡ ಮಾಸ್ಟ್ರನ್ನ ಮರೀಬೇಡ ದೋಸ್ತ್.

ಶಂಕರ್ : ಏಯ್ ನೆವರ್, ಕಭಿನಹೀ..

(ಪಾಟೀಲ್ ಮತ್ತು ಸೀತಾರಾಮನಿಗೆ ಬೀಳ್ಕೊಟ್ಟು ಶಂಕರ್ ತನ್ನ ಹುಟ್ಟೂರಾದ ದೆಹಲಿಗೆ ತೆರಳುವನು)

*ಹಸ್ತಪ್ರತಿಯಲ್ಲಿ: (ಚಲನಚಿತ್ರದಲ್ಲಿ ಇಲ್ಲ)*

*ಸೀತಾರಾಮ್ : **ಕನ್ನಡದ ಹುಡುಗಿಗೆ ಮನಸೋತವನು ನೀನು, ಕನ್ನಡ ಮಾತಿಗೆ ಮರುಳಾದವನು, ಕನ್ನಡ ನಾಡಿಗೆ ಯಾವಾಗ್ ಬರ್ತೀಯ?***

*ಶಂಕರ್ : **ಶ್ಯೂರ್ ಬಂದೇ ಬರ್ತೀನಿ ಒಂದು ದಿನ. ಟೇಕ್ ಕೇರ್***




**ನಿರ್ದೇಶಕರ ಟಿಪ್ಪಣಿ:**

**ಬನಾರಸ್ ಬೀಳ್ಕೊಡುಗೆ ಶಂಕರನ ಮನಸ್ಸಿನಲ್ಲಿ ಹಲವಾರು ಭಾವನೆಗಳ ಅಲೆಗಳನ್ನು ಎಬ್ಬಿಸುತ್ತದೆ. ಅದರಲ್ಲಿ ಬಹಳ ಮುಖ್ಯವಾದದ್ದು ಅಷ್ಟು ದಿನಗಳ ಸ್ನೇಹವನ್ನು ತನ್ನ ಅನುಭವದ ಸಾರವನ್ನು, ಶಿಕ್ಷಣದ ಮಹತ್ವವನ್ನು ಸ್ನೇಹಿತರೊಡಗೂಡಿ ಕಲಿತಿದ್ದನ್ನು ಬಿಟ್ಟು ಹೊರಡುತ್ತಾನೆ. ಚಾಚಾ ಮತ್ತು ಸ್ನೇಹಿತರೆಲ್ಲರ ಒಡನಾಟವನ್ನು ಕಳಚಿಕೊಳ್ಳುತ್ತ ಜೊತೆಜೊತೆಯಲ್ಲಿಯೇ ತಾನು ಎಲ್ಲಿಗೆ ಹೋಗಬೇಕು, ಮತ್ತೆ ತನ್ನ ತಂದೆ ತಾಯಿಯರ ಬಳಿಗೆ. ಆದರೆ ಅವನ ಒಂದು ಕೊರತೆ ಏನಪ್ಪ ಅಂದ್ರೆ ಎಲ್ಲರಿಗೂ ಒಂದು ಮೂಲವಿದೆ, ಆದರೆ ನನ್ನ ಮೂಲ ಏನು ಎಂಬುದು. ನನ್ನ ಮೂಲ ಯಾವುದು ಎಂಬ ಪ್ರಶ್ನೆಯೊಡನೆ ತನ್ನ ತಂದೆ ತಾಯಿಯರ ಈಗಿನ ದೆಹಲಿ ವಾಸ್ತವ್ಯದ ಕಡೆಗೆ ಮುಖಮಾಡುತ್ತಾನೆ. ಚಿತ್ರಕಥೆಯ ಒಟ್ಟಾರೆ ಅಂದದಲ್ಲಿ ನಮಗೆ ಶಂಕರನ ಕನ್ನಡದ ಮಾತುಗಳಿಗೆ ಒಂದು ಲಾಜಿಕಲ್ ಆಯಾಮವನ್ನು ಕೊಡುವುದಕ್ಕೆ ಶಂಕರನ ಪ್ರೇಯಸಿ ವರಲಕ್ಷ್ಮಿ ಕನ್ನಡದವಳು ಎನ್ನುವ ಮಾತನ್ನು ಇಲ್ಲಿ**

ಹೇಳುತ್ತೇವೆ. ಹೀಗಾಗಿ ಅವಳಿಗೋಸ್ಕರ ಕನ್ನಡವನ್ನು ಕಲಿಯುತ್ತಾನೆ ಮತ್ತು ಕನ್ನಡದ ಮಾಸ್ತರ ಸೀತಾರಾಮನಾಗುತ್ತಾನೆ. ಸೀತಾರಾಮನ ಪಾತ್ರಕ್ಕೆ ಮುಂದೆ ಬಹಳ ಮುಖ್ಯವಾದ ಪಾತ್ರಪೋಷಣೆ ಇರುವುದರಿಂದ ಮತ್ತು ವರಲಕ್ಷ್ಮಿಯ ಪಾತ್ರದಲ್ಲಿ ಹಲವು ತಿರುವುಗಳಿರುವುದರಿಂದ ಮತ್ತು ಹಲವು ಜಾಯಮಾನಗಳಿಗೆ ಹೊಂದಿಕೊಳ್ಳಬೇಕಾದ ಪಾತ್ರವಾದ್ದರಿಂದ ಈ ರೀತಿಯ ಪ್ರಸ್ತುತಿಯನ್ನು ಕಾಪಾಡಿಕೊಂಡು ಬರಲಾಯಿತು.

# ದೃಶ್ಯ–6

***ಹಗಲು–ನವದೆಹಲಿಯ ರೈಲುನಿಲ್ದಾಣ***

| | | |
|---|---|---|
| | | (ನವದೆಹಲಿ ರೈಲು ನಿಲ್ದಾಣದಲ್ಲಿ ರೈಲಿನಿಂದ ಇಳಿಯುವ ಶಂಕರ, ವಯಸ್ಸಾದ ಮಹಿಳೆಯೊಬ್ಬರು ಮಗುವನ್ನು ಎತ್ತಿಕೊಂಡು ಲಗೇಜ್ ತರುತ್ತಿರುವುದನ್ನು ನೋಡಿ ತನ್ನ ಲಗೇಜ್ಗಳನ್ನು ಸಮೀಪದಲ್ಲಿ ಇಟ್ಟು ಅವರಿಗೆ ಸಹಾಯ ಮಾಡಲು ಧಾವಿಸುತ್ತಾನೆ) |
| ಶಂಕರ್ | : | ಮಾಜಿ.. ಕೌನ್ಸಿ ಗಾಡಿ ಹೈ ಆಪ್ಕಿ? |



| | | |
|---|---|---|
| ವೃದ್ಧಮಹಿಳೆ | : | ಇಲಹಾಬಾದ್‌ಕಿ ಗಾಡಿ ಆಗಯೀ ಕ್ಯಾ? |
| ಶಂಕರ್ | : | ಅಭಿ ಭಿ ಟೈಮ್ ಹೈ.. ಆವ್.. |
| ವೃದ್ಧಮಹಿಳೆ | : | ನಹಿ.. ನಹಿ.. ಮೆ ಚಲೀ ಜಾವೂಂಗೀ.. |
| ಶಂಕರ್ | : | ಪೆಹೆಲೆ ಆಪ್ ಆರಾಮ್ ಕೀಜೀಯೆ.. ಆವ್.. (ಅವರ ಲಗೇಜ್‌ನ್ನು ತಗೆದುಕೊಂಡು ಅವರು ವಿಶ್ರಾಂತಿ ತಗೆದುಕೊಳ್ಳಲೆಂದು ಆವರನ್ನು ಅಲ್ಲಿಯೇ ಇದ್ದ ಕುರ್ಚಿಯ ಮೇಲೆ ಕೂರಿಸುತ್ತಾನೆ. ನಂತರ ತನ್ನ ಲಗೇಜ್ ಇಟ್ಟಿದ್ದ ಜಾಗಕ್ಕೆ ಬಂದಾಗ ಅದು ಅಲ್ಲಿ ಇಲ್ಲದಿರುವುದನ್ನು ಕಂಡು ಗಾಬರಿಯಿಂದ ಪಕ್ಕದಲ್ಲಿ ನಿಂತಿದ್ದ ವ್ಯಕ್ತಿಯೊಬ್ಬನಿಗೆ) .. ಭಾಯ್ ಸಾಬ್ ಮೇರಾ ಲಗ್ಗೇಜ್ ದೇಖಾ? |
| ಪ್ರಯಾಣಿಕ | : | ನಹಿತೋ (ತನಗೆ ಗೊತ್ತಿಲ್ಲವೆಂದು ಹೇಳುತ್ತಾನೆ. ಆಗ ಅಲ್ಲಿಯೇ ಮರೆಯಲ್ಲಿದ್ದ ಶಂಕರನಿಗೆ ಅಚ್ಚರಿಯನ್ನು ನೀಡಬೇಕೆಂದು |

ಬಂದಿದ್ದ ವರಲಕ್ಷ್ಮಿ ಹೊರಬಂದು ಶಂಕರನಿಗೆ)

| | | |
|---|---|---|
| ವರಲಕ್ಷ್ಮಿ | : | ಟ್ಯಾಕ್ಸಿ ಚಾಯಿಯೇ ಸಾಬ್? ಬೋಲಿಯೇ ಕಹಾ ಜಾನಾ ಹೈ? |
| | | (ವರಲಕ್ಷ್ಮಿಯನ್ನು ನೋಡಿ ಶಂಕರ್ ಸಂತೋಷದಿಂದ) |
| ಶಂಕರ್ | : | ವರೂ.. |
| | | (ಓಡಿಬಂದು ಇಬ್ಬರು ಕೈ ಕೈ ಹಿಡಿದು ಸಂಧಿಸುವರು) |

*ಹಸ್ತಪ್ರತಿಯಲ್ಲಿ: (ಚಲನಚಿತ್ರದಲ್ಲಿ ಇಲ್ಲ)*

| | | |
|---|---|---|
| *ವರಲಕ್ಷ್ಮಿ* | *:* | *ಶಂಕರ್ ಇಂತಝಾರ್ ಕರಾಯಾ ತುಂ ನೇ, ದೋ ದಿನ್ ಸೇ ವೈಟ್ ಕರ್ ಕರ್‌ಕೇ ಪಾಗಲ್ ಹೋಗಯೀ ಹೂಂ* |
| *ಶಂಕರ್* | *:* | *ಪಾಗಲ್ ತೋ ಕಬ್ ಕೀ ಹೋ ತುಂ!* |
| *ಡ್ರೈವರ್* | *:* | *ಸರ್ ಶಂಕರ್ ಸರ್* |
| *ವರಲಕ್ಷ್ಮಿ* | *:* | *ಬೈಠೋ ಅಭೀ ಫಟಾಫಟ್* |
| *ಶಂಕರ್* | *:* | *ವರೂ ಕಿಡ್ನ್ಯಾಪ್ ಕರ್‌ರಹೀಹೋ ಮುಝೇ* |
| *ಡ್ರೈವರ್* | *:* | *ಸಾಬ್ ಶಂಕರ್ ಸಾಬ್ ಮೈ ಮೈ* |
| *ಡ್ರೈವರ್* | *:* | *ಸತ್ಯಾ ನಾಶ್* |

# ದೃಶ್ಯ–7

***ಹಗಲು– ದೆಹಲಿಯ ರಸ್ತೆಗಳು (ಕಾರಿನ ಒಳಭಾಗ)***

(ದೆಹಲಿ ನಗರದಲ್ಲಿ ಶಂಕರನ ಮನೆಯ ದಾರಿಯತ್ತ ಕಾರು ಚಲಿಸುತ್ತಿದೆ. ವರಲಕ್ಷ್ಮಿ ಕಾರನ್ನು ಚಲಾಯಿಸುತ್ತಿದ್ದಾಳೆ. ಆಗ ಶಂಕರ ವರಲಕ್ಷ್ಮಿಗೆ)

ಶಂಕರ್ : ವರೂ ತಕ್‌ಲೀಫ್ ಕ್ಯೂಂ ಲೀ, ಪಪ್ಪಾನೆ ಡ್ರೈವರ್‌ಕೊ ಬೇಝಾ ಥಾ ನಾ?

ವರಲಕ್ಷ್ಮೀ : ಮೈ ತುಮ್ಹೇ ಸರ್‌ಪ್ರೈಸ್ ದೇನಾ ಚಾಹ್‌ತೀ ಥಿ

ಶಂಕರ್ : ಕ್ಯಾ ಸರ್‌ಪ್ರೈಸ್?

ವರು : ಕೋಯಿ ಔರ್ ತುಮೇ ದೇಖ್ನೇಸೆ ಪೆಹಲೇ, ಐ ವಾಂಟೆಡ್ ಟು ಸೀ ಯು

ಶಂಕರ್ : ಸರ್‌ಪ್ರೈಸ್ ಕಿ ಬಚ್ಚೀ, ಅಸಲಿ ಸರ್‌ಪ್ರೈಸ್ ತೊ ಮೈ ದೇನಾ ವಾಲಾ ಹ್ಞೂ, ರೆಡಿ ಹೋ ಜಾವ್

ವರು : ಸರ್‌ಪ್ರೈಸ್, ಕ್ಯಾ ಸರ್‌ಪ್ರೈಸ್ ಹೇ?

ಶಂಕರ್ : ವರೂ ಹೇಗೆ ಇದಿಯಾ? ನಿನ್ನನ್ನ ಬನಾರಸ್‌ನಲ್ಲಿ ತುಂಬ ತುಂಬ ಮಿಸ್ ಮಾಡ್ದೆ.

ವರೂ : ಕನ್ನಡ!! ತುಮ್? ರಿಯಲಿ?!

(ಶಂಕರ ಕನ್ನಡ ಮಾತನಾಡಿದ್ದನ್ನು ನೋಡಿ ಅತ್ಯಾಶ್ಚರ್ಯಗೊಂಡ ವರೂ, ಕಾರನ್ನು ನಿಲ್ಲಿಸಿ ಹೊರಗಡೆ ಬಂದು)

ಶಂಕರ್ : ವೈ ಡಿಡ್ ಯು ಸ್ಟಾಪ್ ದ ಕಾರ್?

ವರು : ಶಂಕರ್, ಇಟ್ಸ್ ಇನ್‌ಕ್ರೆಡೆಬಲ್. ವಾವ್ ಬೋಲೋ ಬೋಲೋನ ಶಂಕರ್ ಔರ್ ಭಿ ಬೋಲೋ

ಶಂಕರ್ : ನೀನ್ ಯಾಕೆ ಇಷ್ಟು ಚೆನ್ನಾಗಿದ್ಯ ಅಂತ ನನಿಗ್ ಈಗ್ ಗೊತ್ತಾಯ್ತು

ವರು : ಯಾಕೆ? ಯಾಕೆ?

ಶಂಕರ್ : ಯಾಕಂದ್ರೆ ನಿಮ್ಮ ಕನ್ನಡಾನೆ ಅಷ್ಟು ಚೆಂದ

ವರು : ಅದು ನನ್ ಭಾಷೆಯಾಗಿರೋದ್ರಿಂದ್ಲೇ ನಿನಗ ಅಷ್ಟು ಚೆನ್ನಾಗ್ ಕಾಣ್ತಿರೋದು

ಶಂಕರ್ : ಬಖ್‌ವಾಸ್

ವರು : ಅಂದ್ರೆ ಅಂದ್ರೆ?

ಶಂಕರ್ : ತಲಹರಟೆ ತಲಹರಟೆ ತಲಹರಟೆ

(ಶಂಕರ ಕನ್ನಡವನ್ನು ಚೆನ್ನಾಗಿ ಬಲ್ಲವನಂತೆ

ಮಾತನಾಡುತ್ತಿರುವುದನ್ನು ನೋಡಿ ಆಶ್ಚರ್ಯಗೊಂಡ ವರಲಕ್ಷ್ಮಿ ಸಂತೋಷದಿಂದ ಹಿಗ್ಗಿ ಶಂಕರನಿಗೆ)

ವರು : ವಾವ್ ನಾವಿಬ್ರು ಕನ್ನಡದಲ್ ಮಾತಾಡ್ತಿದಿವ? ಅದ್ಹೇಗ್ ಕಲ್ತ್‌ಬಿಟ್ಯೋ ನೀನು?
(ಶಂಕರ, ನಾವು ಹಾಗೇ ಎನ್ನುವಂತೆ ಕಾಲರ್ ಎತ್ತಿ ವರೂಳನ್ನು ನೋಡುವನು)

*ಹಸ್ತಪ್ರತಿಯಲ್ಲಿ: (ಚಲನಚಿತ್ರದಲ್ಲಿ ಇಲ್ಲ)*

*ಶಂಕರ : ಮ್ಯಾಜಿಕ್ಕೂ ಇಲ್ಲ. ಲಾಜಿಕ್ಕೂ ಇಲ್ಲ. ಮನಸುದ್ರೆ ಅದೇನದು, ಊಂ.. ಊಂ..ಮಾರ್ಗ. ಹ್ಞಾಂ! ಮನಸಿದ್ರೆ ಮಾರ್ಗ.*

*ವರೂ : ಬರೀ ಮನಸಿದ್ರೆ ಅಲ್ಲ, ನನ್ ಮೇಲ್ ಮನಸಿದ್ರೆ ಮಾತ್ರ ಮಾರ್ಗ.*

*ಶಂಕರ : ಸರಿ ಸರಿ, ಹಾಗಂತ ಮಾರ್ಗದ ಮಧ್ಯಾನೇ ನಿಂತ್ ಬಿಡೋದಾ? ಚಲೋ ಚಲೋ ಘರ್ ಚಲೋ*

*ವರೂ : ಊಹೂಂ.. ಇನ್ನೊಂದ್ಸಲ ವರೂ ಅನ್ನು. ಒಂದ್ ಸಲ ಮನೆ ಸೇರಿದ್ಮೇಲೆ ಮುಗ್ದೇಹೋಯ್ತು. ಎಲ್ರೆದ್ರೂ ವರಲಕ್ಷ್ಮೀ ವರಲಕ್ಷ್ಮೀ ಅಂತ ಮಹಾ ಅಫಿಷಿಯಲ್ ಆಗಿ ಪ್ರೊಫೆಸರ್ ಅಟೆಂಡೆನ್ಸ್ ಕರೆಯೋಥರ ನನ್ ಹೆಸ್ರ್ ಕರೀತಿರ್ತಿಯ. ಐ ಡೋಂಟ್ ಲೈಕ್ ಇಟ್. ಮತ್ತೆ ನನಗ್ ಹೀಗ್ ಎಕ್ಸ್‌ಕ್ಲೂಸಿವ್ ಆಗಿ ಸಿಗೋದೆ ಇಲ್ಲ ನೀನು.*

*ಶಂಕರ : ವರೂ ಅಲ್ಲ ವರೀ ಅನ್ಬೇಕು ನಿನ್ನ. ಮೈ ಕ್ಯೂಟ್ ಡೆವಿಲ್ ಕಮ್ ಆನ್ ಲೆಟ್ಸ್‌ಗೋ.*

ವರೂ : ಹೇಯ್ ಇನ್ನೊಂದ್ಸಲ ನನ್ನ ವರೂ ವರೂ ಅನ್ನೋ
(ಪ್ರೀತಿಯಿಂದ ಕೇಳಿಕೊಳ್ಳುತ್ತಾಳೆ)

ಶಂಕರ್ : ವರೀ ವರೀ.. (ತಲೆಗೆ ಢಿಕ್ಕಿ ಹೊಡೆದು) ಲೆಟ್ಸ್ ಗೋ..
(ಹೊರಡಲನುವಾಗುವನು)

ವರೂ : (ಹೋಗುತ್ತಿದ್ದ ಶಂಕರ್‌ನನ್ನು ತಡೆದು)
ನಂಗೇನೋ ಭಯ. ಮನೇಲೆ ನಿನ್ ಪೇರೆಂಟ್ಸ್ ಏನೋ ಮಹಾ ಪ್ಲಾನ್ ಮಾಡ್ತಿರೋ ಹಾಗಿದೆ. ಒಂದು ಖೆಡ್ಡಾ ಆಪರೇಷನ್ ನಡೀತಿರೋ ಹಾಗಿದೆ.

ಶಂಕರ್ : ಖೆಡ್ಡಾ? ಮತಲಬ್?

(ಖೆಡ್ಡಾ ಅನ್ನುವ ಪದ ಅರ್ಥವಾಗದೆ ಹಾಗಂದರೇನು ಎಂದು ಕೇಳುತ್ತಾನೆ)

ವರೂ : ಖೆಡ್ಡಾ ಅಂದ್ರೆ ಆನೆಗಳ್ನ ಹಿಡಿಯೋಕೆ ಅಂತ ಮಾಡೋ ದೊಡ್ಡ ಗುಂಡಿ, ತಮ್ಟೆ ಬಾರ್ಸಿ ಆನೆಗಳ್ನ ಆ ಕಡೆ ಓಡಿಸ್ತಾರೆ. ಡುಮ್ ಅಂತ ಆನೆ ಆ ಖೆಡ್ಡದಲ್ಲಿ ಬಿದ್ಬಿಡುತ್ತೆ. ಸೋ ನಿನಗೂ ಅಂತ ಒಂದ್ ಖೆಡ್ಡಾ ರೆಡಿಯಾಗ್ತಿದೆ.

ಶಂಕರ್ : ವಾಟ್ ಡೂ ಯೂ ಮೀನ್? ನಾನೇನ್ ಆನೇನ?

ವರೂ : ಬಿದ್ಮೇಲ್ ತಾನೆ ಗೊತ್ತಾಗೋದು.

(ವರಲಕ್ಷ್ಮಿ ತನ್ನ ಪ್ರಿಯತಮನ ಮೇಲಿರುವ ಕಾಳಜಿ ಮತ್ತು ಕಳಕಳಿಯನ್ನು ವ್ಯಕ್ತಪಡಿಸುತ್ತಾಳೆ)

*ಹಸ್ತಪ್ರತಿಯಲ್ಲಿ: (ಚಲನಚಿತ್ರದಲ್ಲಿ ಇಲ್ಲ)*

***ವರೂ : ಬಿ ಕೇರ್ ಫುಲ್ ಶಂಕರ್, ಐ ಕಾಂಟ್ ಲಿವ್ ವಿತೌಟ್ ಯೂ..***

***ಶಂಕರ : ಚುಪ್. ಯಾರ್ ಖೆಡ್ಡಾದಲ್ಲು ಬೀಳೋ ಅಷ್ಟು ದಡ್ಡ ಅಲ್ಲ ನಾನು. ವರೂ ಕನ್ನಡದಲ್ಲಿ ಕಿಸ್ ಮಾಡೋದು ಹೇಗೆ?!***

***ವರೂ : ಯೂ!!!!***

# ದೃಶ್ಯ–8

***ಹಗಲು–ಶಂಕರನಮನೆಯ ಹೊರಗೆ***

| | | |
|---|---|---|
| | | (ಸರ್ಕಾರಿ ಅಧಿಕಾರಿ ತಂದೆಯ ಮನೆಗೆ ಬರುವ ಶಂಕರ್ ಕಾರು ಇಳಿದು ತಾಯಿ ಪ್ರತಿಮಾನನ್ನು ಕಂಡು ಅವರತ್ತ ಓಡಿ ಬಂದು ಕಾಲಿಗೆ ನಮಸ್ಕರಿಸಿ) |
| ಶಂಕರ್ | : | ಹಾಯ್ ಮಾ |
| ಪ್ರತಿಮಾ | : | ಕಬ್ ಸೆ ವೈಟ್ ಕರ್ ರಹೆಹೋ ತುಮ್ಹಾರ? ಸಿರ್ಫ್ ಪೆಹೆರ್ ಭೂನೇ ಸೇ ಕಾಮ್ ನಹೀ ಹೋಗಾ. ಅಬ್ ಸೇ ಜೋ ಹಮ್ ಕಹೇಂಗೇ ವಹೀ ಕರ್‌ನಾ ಹೈ ತುಮ್ಹೇ. ಬಡಾ ಆದ್ಮಿ ಬನ್‌ನಾ ಹೈ ನಹೀ? |
| ವರೂ | : | ಖೆಡ್ಡ ಖೆಡ್ಡಾ |
| | | (ವರೂ ಶಂಕರನನ್ನು ಎಚ್ಚರಿಸುತ್ತಾಳೆ. ಇದನ್ನು ಶಂಕರ್‌ನ ತಾಯಿ ನೋಡುವರು. ಏನೆಂದು ವರೂಗೆ ಕೇಳುವಳು) |
| ಪ್ರತಿಮಾ | : | ಕ್ಯಾ? |
| ವರೂ | : | ಕುಚ್ ನಹೀ ಮಾಜೀ |
| | | (ಅಷ್ಟರಲ್ಲಿ ತಂದೆ ಸುಂದರ್ ರಾವ್ ಅಲ್ಲಿಗೆ ಬಂದು ಶಂಕರ್‌ನನ್ನು ನೋಡಿ ಸಂತೋಷಗೊಂಡು) |
| ಸುಂದರ್ ರಾವ್ | : | ಅರೆ ಶಂಕರ್, ಕಬ್ ಆಯೇ ಬೇಟಾ? |
| ಶಂಕರ್ | : | ಅಬೀ ಆಯೇ ಪಪ್ಪಾ (ಕಾಲಿಗೆ ಬಿದ್ದು ಆಶೀರ್ವಾದ ಪಡೆಯುವನು) |
| ಸುಂದರ್ ರಾವ್ | : | ಜೀತೆ ರಹೋ (ಆಶಿರ್ವಾದ ಮಾಡುತ್ತಾರೆ)<br>.. ಅಚ್ಚೆ ತೊ ಹೋ? |
| ಶಂಕರ್ | : | ಫೈನ್.. |
| | | (ಕಾರಿನ ಹತ್ತಿರ ಲಗ್ಗೇಜುಗಳನ್ನು ತಗೆದುಕೊಳ್ಳಲು ಬರುವ ವರಲಕ್ಷ್ಮಿಗೆ ಪ್ರತಿಮಾ) |
| ಪ್ರತಿಮಾ | : | ವರಲಕ್ಷ್ಮಿ, ತುಮ್ಹಾರೆ ಘರ್‌ಸೆ ದಸ್ ಬಾರ್ ಫೋನ್ ಆ ಚುಕಾ ಹೈ. ತುಮ್ ಝುರಾ ಜಲ್ದಿ ಘರ್ ಜಾವ್ ತು. (ಆಕೆಯನ್ನು ಕಳುಹಿಸುವ ತವಕದಿಂದಿರುತ್ತಾಳೆ) |
| ವರೂ | : | ಓಕೆ ಮಾ ಜಿ |
| ಪ್ರತಿಮಾ | : | ಚಲೊ.. ಜಲ್ದಿ ಜಾವ್..<br>.. ಶಂಕರ್, ಮಾಜಿ ಕೇಲಿಯೇ ಬನಾರಸೀ ಸಾಡಿ ಲಾಯೇ ಹೋ ಕೀ ನಹೀಂ. |

| | | |
|---|---|---|
| ಶಂಕರ್ | : | ಲಾಯಾ ಹ್ಞಂ |
| ವರೂ | : | ತೋ ಮೇ ಸಾಡಿ ದೇಖ್‌ಕೇ ಜಾವ್ಹೋಂಗಿ |
| ಪ್ರತಿಮಾ | : | ಅರೆ ಕ್ಯಾ ಬೇಕಾರ್‌ಕಿ ಬಾತ್ ಕರ್‌ರಹೀಹೋ. ಅಭೀ ತೋ ಆಯಾ ಹ್ಯೆ, ಝರಾ ರಿಲ್ಯಾಕ್ಸ್ ಕರ್‌ನೇ ದೋ (ತನ್ನ ನಿರ್ಧಾರಕ್ಕೆ ಸಮರ್ಥನೆ ಕೊಟ್ಟು ಅವಳನ್ನು ಕಳುಹಿಸಲು ಮುಂದಾಗುತ್ತಾಳೆ) |
| ವರೂ | : | ಓಕೆ ಮಾ ಜೀ. ಮೇ ಚಲೀ<br>(ಎಂದು ಶಂಕರ್‌ನನ್ನು ಆಕಡೆ ಎಳೆದುಕೊಂಡು ಹೋಗಿ) ..ಶಂಕರ್ ಬಾದ್ ಮೆ ಮಿಲೇಂಗೆ ವಹೀ ಪರ್. ಖೆಡ್ಡಾ ಜೋಪಾನ (ಎಂದು ಎಚ್ಚರಿಸಿ ಹೋಗುತ್ತಾಳೆ) |
| ಶಂಕರ್ | : | ಓಕೆ, ಸರಿ.. |
| ವರೂ | : | ಬ್ಯೆ ಅಂಕಲ್, ಬ್ಯೆ ಮಾಜೀ<br>(ಶಂಕರನ ತಾಯಿ ವರೂ ಹತ್ತಿರ ಬಂದು) |
| ಪ್ರತಿಮಾ | : | ವರಲಕ್ಷ್ಮೀ, ಯೇ ತುಮ್ನೇ ಮಾಜೀ ಮಾಜೀ ಕ್ಯೂ ಲಗಾ ರಖಾ ಹ್ಯೆ? ಬಾತ್ ಸುನೋ ಆಜ್ ಸೆ ಸಿರ್ಫ್ ಮುಝೆ ಆಂಟಿ ಕೆಹ್ನಾ. ಆಂಟಿ, ಸಮ್ಝಾ? |
| ವರೂ | : | ಓಕೆ ಮಾಜೀ..<br>(ಮತ್ತೆ ಮಾಜೀ ಎಂದು ಕರೆದಿದ್ದಕ್ಕೆ ಗೊಂದಲಗೊಂಡು ನಂತರ)<br>.. ಆಂಟೀ<br>(ನಂತರ ಆಕೆ ತನ್ನ ಗಂಡನ ಬಳಿ ಬಂದು) |
| ಪ್ರತಿಮಾ | : | ಠೀಕ್ ಹ್ಯೆ.. ಸುನೋ ಜೀ ಯೇ ಲಡ್ಕೀ ತೋ ಮಾಜೀ.. ಮಾಜೀ ಕೆಹಕೆ ಬೇಟೇಕೆ ಖಾ ಜಾಯೇಗಿ |
| ಸುಂದರ್ ರಾವ್ | : | ನಹೀ |
| ಪ್ರತಿಮಾ | : | ತುಮ್ ಚುಪ್ ರಹೋ ಜೀ |
| ಸುಂದರ್ ರಾವ್ | : | ಮ್ಯೆನೆ ಕುಚ್ ಕಹಾ ಹೀ ನಹೀ |
| ಪ್ರತಿಮಾ | : | ಹಾ ಟೀಕ್ ಹ್ಯೆ ಟೀಕ್ ಹ್ಯೆ. ಚಲಿಯೇ ಅಂದರ್ |
| ಸುಂದರ್ ರಾವ್ | : | ಬ್ಯೆ<br>(ಹೆಂಡತಿ ಹೋದ ಮೇಲೆ ಸುಂದರ್ ರಾವ್ ವರೂಗೆ ಬ್ಯೆ ಮಾಡುವನು) |

**ನಿರ್ದೇಶಕರ ಟಿಪ್ಪಣಿ:**

**ಶಂಕರ ದೆಹಲಿಗೆ ಬಂದ ಕೂಡಲೆ ವರಲಕ್ಷ್ಮಿಯ ಭೇಟಿ ಮತ್ತು ತುಂಟಾಟ, ಕಾತರತೆ ಮತ್ತು ಪ್ರೀತಿಯನ್ನು ಉತ್ಸುಕನಾಗಿ ಸ್ವೀಕರಿಸುತ್ತಾನೆ ಮತ್ತು ತಾನು ಆಕೆಗೆ ಕೊಡಬೇಕೆಂದ ಉಡುಗೊರೆ ಕನ್ನಡ ಮಾತನಾಡುವುದು. ಇದನ್ನು ಕೊಡುತ್ತ ಇಬ್ಬರೂ ಬಹಳ ಹತ್ತಿರವಾಗುತ್ತ**

ಹೋಗುತ್ತಾರೆ. ಆದರೆ ಮನೆಯಲ್ಲಿ ತಾಯಿಯ ಉದ್ದೇಶ ಬೇರೆಯೇ ಇದೆ ಎಂಬುದನ್ನು ವರೂ ಆತನಿಗೆ ಸೂಕ್ಷ್ಮವಾಗಿ ತಲುಪಿಸುತ್ತಾಳೆ, ಖೆಡ್ಡಾ ಮುಖಾಂತರ. ತಾಯಿಯ ಹಿಡಿತ ಇಡೀ ಸಂಸಾರದ ಮೇಲೆ ಹೇಗಿತ್ತು ಎಂಬುದಕ್ಕೆ ಬಹಳ ಸೂಕ್ಷ್ಮವಾಗಿ ತಂದೆ, ಮಗ ಮತ್ತು ವರಲಕ್ಷ್ಮಿಯ ಮೇಲೆ ಅವಳ ಹಿಡಿತವನ್ನ ಈ ದೃಶ್ಯದಲ್ಲಿ ಸಮೀಕರಿಸಲಾಗಿದೆ.

# ದೃಶ್ಯ–9

*ಹಗಲು–ಶಂಕರನ ಮನೆಯ ಒಳಗೆ*

(ಮನೆಯಲ್ಲಿ ಹಲವಾರು ರೀತಿಯ ಬದಲಾವಣೆಗಳಾಗಿರುವುದನ್ನು ಮತ್ತು ವರ್ಣಚಿತ್ರಗಳಿಂದ ಹೊಸ ರೀತಿಯಲ್ಲಿ ಸಜ್ಜುಮಾಡಿರುವುದನ್ನು ಗಮನಿಸುತ್ತಿರುವ ಶಂಕರನಿಗೆ ತಾಯಿ ಹೇಗಿದೆ ಎಂದು ಕೇಳುತ್ತ ಸಂಭಾಷಣೆಯನ್ನು ಆರಂಭಿಸುತ್ತಾ)

*ಹಸ್ತಪ್ರತಿಯಲ್ಲಿ: (ಚಲನಚಿತ್ರದಲ್ಲಿ ಇಲ್ಲ)*

*ಶಂಕರ : ಪಾಪಾ, ಘರ್ ಕಾ ತೋ ನಕ್ಷಾ ಹೀ ಬದಲ್ ಡಾಲಾ ಆಪ್‌ನೇ*

*ಸುಂದರ್ : ಝಮಾನಾ ಬದಲ್‌ರಹಾ ಹೈ ಭಾಯ್. ವಿ ಶುಡ್ ಕೀಪ್ ಪೇಸ್ ವಿತ್ ದ ಟೈಮ್*

*ಶಂಕರ : ಉಫ್, ಸಬ್ ದಿಖಾವೇ ಕಾ ಸ್ಟೇಟಸ್ ಹೈ ಯೇ*

*ಪ್ರತಿಮಾ : ಪೆಹಲೇ ತುಮ್ಹಾರಾ ಕಮ್‌ರಾ ತೋ ದೇಖೋ. ಕೈಸೆ ಚಮಕ್ ರಹಾ ಹೈ ಅಭೀ*

*ಶಂಕರ : ವೋ ತೋ ಬಾದ್ ಮೆ. ಪೆಹಲೇ ಮೈ ವಿಶೂ ಕಾ ಕಮ್‌ರಾ ದೇಖೂಂಗಾ*

*ಪ್ರತಿಮಾ : ಏ ವಿಶೂ ಕಾ ಕಮ್‌ರಾ ಹೈ*

*ಶಂಕರ : ವಾವ್! ವಿಶೂ ಕಾ ಕಮ್‌ರಾ! ಮೇರಾ ಪ್ಯಾರಾ ನನ್ಹಾ ಭಾಯಿ ಪೈಲೆಟ್ ಹೋಗಯಾ. ಯಕೀನ್ ನಹೀ ಆತಾ. ಕಿತನಾ ಡರ್‌ಪೋಕ್ ಥಾ ನ ಮಾ ಓ ಬಚ್‌ಪನ್ ಮೇಂ? ಟೆಲಿಫೋನ್ ಕಿ ಘಂಟಿ ಸೇ ಭೀ ಡರ್‌ತಾ ಥಾ. ಅಕೇಲಾ ಬಾತ್‌ರೂಂ ಜಾನೇ ಕೋ ಡರ್‌ತಾ ಥಾ ಅಬ್ ಪೈಲೆಟ್ ಬನ್‌ಗಯಾ. ಓ ಭೀ ಏರ್‌ಫೋರ್ಸ್ ಮೇಂ!*

*ಪ್ರತಿಮಾ : ಉಸ್‌ಕೋ ಕಿದರ್ ಇಂಟ್ರೆಸ್ಟ್ ಥಾ? ಮೈನೇ ಬನಾಯಾ ಉಸೇ ಪೈಲೆಟ್. ಸಿಂಘಾಲ್ ಸಾಬ್ ಕೀ ಮೆಹರ್‌ಬಾನಿ ಜೋ ಥೀ. ಅಂಬಾಲಾ ಮೇಂ ಪೋಸ್ಟಿಂಗ್ ಭೀ ಹೋ ಗಯೀ. ಅಬ್ ತೋ ಟ್ರೇನಿಂಗ್ ಚಲ್ ರಹೀ ಹೈ. ಅಬ್ ಕಮಾನೇ ಭೀ ಲಗ್ ಜಾಯೆಗಾ*

*ಶಂಕರ : ಪೈಲೆಟ್ ಕೇ ಯೂನಿಫಾರ್ಮ್ ಮೇಂ ಕಿತ್‌ನಾ*

| | | |
|---|---|---|
| | | *ಸ್ಮಾರ್ಟ್ ಲಗ್ ರಹಾ ಹೋಗಾ ನಾ ವಿಶೂ. ಹ್ಹಾಂ ಉಸೇ ಜಬರ್‌ದಸ್ತಿ ತೋ ನಹೀ ಕೀ ನ ಆಪ್‌ನೇ?* |
| *ಸುಂದರ್* | *:* | *ಚಲೋ ಶಂಕರ್. ತುಮ್ಹಾರಾ ಕಮ್‌ರಾ ದೇಖೋ.* |
| *ಶಂಕರ* | *:* | *ಅರೆ ಮೇರಿ ಸಾರೀ ಕಿತಾಬೇಂ ಕಹಾಂ ಗಯೀಂ?* |
| *ಸುಂದರ್* | *:* | *ಜಗಹ್ ಕಮ್ ಪಡ್‌ರಹೀ ಥೀ ನಾ. ಇಸ್‌ಲಿಯೇ ಸಬ್ ಗರಾಜ್ ಮೇಂ ರಖ್ಖೀ ಹೈಂ* |
| *ಶಂಕರ* | *:* | *ಕಿತಾಬ್ ಗರಾಜ್ ಮೇಂ?* |
| *ಪ್ರತಿಮಾ* | *:* | *ಓ ದೇಖೋ ಪೇಂಟಿಂಗ್. ಕೈಸಿ ಲಗೀ?* |
| | | |
| ತಾಯಿ | : | ಕೈಸೆ ಹೈ? |
| ಶಂಕರ್ | : | ಅಚ್ಛೆ ಹೈ. ಕಿಸ್ ಕೆ ಹೈ? |
| ತಾಯಿ | : | ವನ್‌ಮಾಲಾ ವನ್‌ಮಾಲಾ ಕೀ ಹೈ. (ಆಕೆಯ ವಿಚಾರವನ್ನು ಪ್ರಸ್ತಾಪಮಾಡುವುದೆಂದು ತನ್ನ ಗಂಡನನ್ನು ನೋಡುತ್ತಾಳ) |
| ಶಂಕರ್ | : | (ಫಲಕಗಳನ್ನು ನೋಡುತ್ತ ವನ್‌ಮಾಲಾ ಯಾರು ಎಂದು)<br>ವನ್‌ಮಾಲಾ..?<br>(ವರೂ ಖೆಡ್ಡಾ ಎಂದದ್ದು ಜ್ಞಾಪಕವಾಗುತ್ತದೆ) |
| ತಾಯಿ | : | ಹ್ಹಾ ಹ್ಹಾ ಅಪ್ನೆ ಸಿಂಘಾಲ್ ಸಾಬ್ ಕಾ ಬೇಟಿ. ಬಹುತ್ ಅಚ್ಚೀ ಲಡ್ಕೀ ಹೈ ವೋ (ಎಂದು ತನ್ನ ಗಂಡನ ಹಿರಿಯ ಅಧಿಕಾರಿ ಮತ್ತು ಆಕೆಯ ಮಗಳ ಬಗೆಗೆ ಹೇಳುತ್ತಾಳೆ.) |
| ಶಂಕರ್ | : | ಯೇ ಸಿಂಘಾಲ್ ಸಾಬ್ ಕೌನ್ ಹೈ?<br>(ಸಿಂಘಾಲ್ ಸಾಬ್ ಯಾರೆಂದು ತಿಳಿಯದ ಶಂಕರ ಆತ ಯಾರೆಂದು ಕೇಳುತ್ತಾನೆ. ಆಗ ಪ್ರತಿಮಾ ತನ್ನ ಗಂಡನಿಗೆ ಯಾರೆಂದು ಹೇಳುವಂತೆ ಸೂಚನೆ ನೀಡುತ್ತಾಳೆ. ಸುಂದರ್ ರಾವ್ ಆಕೆ ಹೇಳಿದಂತೆ ಸಿಂಘಾಲ್ ಸಾಹೇಬರ ಬಗೆಗಿನ ವಿವರವನ್ನು ಹೇಳಲು ಆರಂಭಿಸುತ್ತಾನೆ) |
| ತಂದೆ | : | ಮೈ ಬೋಲೂ (ತನ್ನ ಮಾತನ್ನು ಆರಂಭಿಸಲು ಸಮ್ಮತಿಯನ್ನು ಕೇಳುತ್ತಾನೆ) |
| ತಾಯಿ | : | ಬೋಲೋಜಿ.. (ಹೇಳುವಂತೆ ಸೂಚನೆ ನೀಡಿದಾಗ ತಂದೆ ಮಾತನ್ನಾರಂಭಿಸುತ್ತಾನೆ) |
| ತಂದೆ | : | ಸಿಂಘಾಲ್ ಸಾಬ್ ಹಮಾರೆ ಚೀಫ್ ಹೈ. ಉನ್ಹೀ ಕೇ ಮೆಹರ್‌ಬಾನೀಸೆ ಹಮಾರ ವಿಶೂ ಪೈಲೆಟ್ ಬನ್ ಗಯಾ. ತುಮ್ಹೇ ಭೀ ಉನ್ಸೇ ಮಿಲ್ನಾ ಪಡೇಗ |

| | | |
|---|---|---|
| ಶಂಕರ್ | : | ನಹೀ ಮೈ ಕಿಸೀ ಸೇ ನಹೀ ಮಿಲೂಂಗಾ (ತಾನು ಯಾರ ಬಳಿಯೂ ಹೋಗುವುದಿಲ್ಲವೆಂದು ತನ್ನ ಅಸಮ್ಮತಿಯನ್ನು ಸೂಚಿಸುತ್ತಾನೆ)) |
| ತಾಯಿ | : | ಅರೆ ಕ್ಯೂಂ ನಹಿ ಮಿಲ್ನಾ? ಬಡೇ ಲೋಗ್ ಹೈ ವೋ. ಔರ್ ವನ್‌ಮಾಲಾ ಭೀ ಇನ್ಟೀರಿಯರ್ ಡೆಕೋರೇಟರ್ ಹೈ. ಯೇ ಸಬ್ ಉಸೀ ಕಾ ಐಡಿಯಾ ಹೈ. ಕ್ಯೂಂ ಜೀ? (ತಾವು ತಳೆದಿರುವ ನಿರ್ಧಾರದ ಸಮರ್ಥನೆಯನ್ನು ಕೇಳುತ್ತಾಳೆ) |
| ತಂದೆ | : | ಹ್ಞಾ ಹ್ಞಾ ಉಸೀಕಿ ಐಡಿಯಾ ಹೈ ಹಮಾರಿ ನಹೀ. (ತಂದೆ ಇದೆಲ್ಲವು ತಾಯಿಯ ನಿರ್ಧಾರವೆಂದು ತಿಳಿಸುತ್ತಾನೆ) |
| ಶಂಕರ್ | : | ಮಾ, ಜಿತನಾ ಸಿಂಪಲ್ ರಹೋ ಉತ್ನಾ ಅಚ್ಚಾ ಹೋ (ಎಂದು ತನ್ನ ಆದರ್ಶ ಮತ್ತು ಬದುಕಿನ ರೀತಿಯನ್ನು ತಿಳಿಸುವನು) |
| ತಾಯಿ | : | ಅಬ್ ಬಖ್‌ವಾಸ್ ಬಂದ್ ಕರೋ ಔರ್ ಚುಪ್‌ಚಾಪ್ ಚಲೋ ಹಮಾರೆ ಸಾಥ್ (ತಮ್ಮ ನಿರ್ಧಾರದ ದೃಢತೆಯನ್ನು ಪ್ರದರ್ಶಿಸಿ ಗರಮ್ ಆಗಿ ಹೋಗುವರು. ಶಂಕರನಿಗೆ ವರೂ ಹೇಳಿದ ಖೆಡ್ಡಾ ಖೆಡ್ಡಾ ಎಂಬ ಮಾತು ಮತ್ತೆ ನೆನಪಾಗುವುದು, ಶಂಕರ ತನ್ನ ತಂದೆ–ತಾಯಿಯರ ಯೋಜನೆ–ಯೋಚನೆ ಏನು ಎಂದು ಯೋಚಿಸುತ್ತ ನಿಲ್ಲುವನು) |

*ಹಸ್ತಪ್ರತಿಯಲ್ಲಿ: (ಚಲನಚಿತ್ರದಲ್ಲಿ ಇಲ್ಲ)*

| | | |
|---|---|---|
| *ಶಂಕರ* | *:* | *ಮಾ, ಇತ್‌ನಾ ಸಬ್ ಖರ್ಚ್ ಕರ್‌ನೇ ಕೀ ಕ್ಯಾ ಜರೂರತ್ ಥೀ? ಏ ಫರ್ನೀಚರ್, ಏ ಪೇಂಟಿಂಗ್* |
| *ಪ್ರತಿಮಾ* | *:* | *ಶಾನ್‌ದಾರ್ ಘರ್‌ಮೇಂ ರಹನೇ ಸೇ ಶಾನ್‌ದಾರ್ ರಿಶ್ತೇ ಮಿಲ್‌ತೇ ಹೈ ಬೇಟೆ* |
| *ಶಂಕರ* | *:* | *ಮಾ, ರಿಶ್ತೇ ಫರ್ನೀಚರ್ ಸೇ ಯಾ ಶೋಕೇಸ್ ಸೇ ನಹೀ ಬನೇ ಹೈ. ರಿಶ್ತೋಂ ಕೇ ಲಿಯೇ ತೋ ದಿಲ್ ಕೋ ಸಜಾನಾ ಪಡ್‌ತಾ ಹೈ. ಜಿತನೇ ಸಿಂಪಲ್ ರಹೋ ಉತನಾ ಅಚ್ಛಾ ಹೈ* |
| *ಸುಂದರ್* | *:* | *ಮಿಸ್ಟರ್ ಸಿಂಪಲ್, ಅಬ್ ಥೋಡಾ ರೆಸ್ಟ್ ಲೋ. ಶಾಮ್ ಕೋ ಸಿಂಘಾಲ್ ಸಾಬ್ ಕೇ ಯಹಾಂ ಜಾನಾ ಹೈ..* |

ಶಂಕರ : ಐ ಯಾಮ್ ನಾಟ್ ಇಂಟರೆಸ್ಟೆಡ್

ಸುಂದರ್ : ಬಡೇ ಆದ್ಮೀ ಹೈ ಓ, ಇಟ್ಸ್ ಎನ್ ಆನರ್. ದೇ ಹ್ಯಾವ್ ಇನ್‌ವೈಟೆಡ್ ಅಸ್. ತುಮ್ಹೇ ದೇಖ್‌ನಾ ಚಾಹತೇಂ ಹೈ ಓ

ಪ್ರತಿಮಾ : ಚುಪ್‌ಚಾಪ್ ಚಲೋ ಹಮಾರೆ ಸಾಥ್

# ದೃಶ್ಯ–10

*ಹಗಲು–ಸಿಂಘಾಲ್‌ರ ಮನೆಯ ಹೊರಗೆ ಮತ್ತು ಒಳಗೆ*

(ಕಾರಿನಲ್ಲಿ, ಸಂಜೆಯ ಹೊತ್ತಿನಲ್ಲಿ ಸಿಂಘಾಲ್ ಸಾಹೇಬರ ಮನೆಗೆ ಬಂದಿಳಿಯುವ ಶಂಕರ, ಸುಂದರ್ ರಾವ್ ಮತ್ತು ಪ್ರತಿಮಾ. ಸಿಂಘಾಲ್ ಸಾಹೇಬರು ಸುಂದರ್ ರಾವ್ ಬಂದುದಕ್ಕೆ ಹರ್ಷ ವ್ಯಕ್ತಪಡಿಸುತ್ತ ಅವರೊಂದಿಗೆ ಮಾತಿಗಿಳಿಯುತ್ತಾರೆ)

ಸಿಂಘಾಲ್ : ಸೋ ನೈಸ್ ಆಫ್ ಯೂ ಮಿಸ್ಟರ್ ರಾವ್. ಆಪ್ ಇತ್ನೇ ದೂರ್‌ಸೆ ಆಯೇ. ನಾಟ್ ಜಸ್ಟ್ ದಟ್. ಸಾಥ್ ಮೆ ಬಾಬೀಜೆ ಔರ್ ಅಪ್ನೆ ಬೇಟಾ ಕೊ ಭೀ ಲೇಕೆ ಆಯೇ. (ತನ್ನ ಜೊತೆ ತನ್ನ ಪತ್ನಿ ಹಾಗೂ ತನ್ನ ಮಗನನ್ನೂ ಕರೆತಂದುದಕ್ಕೆ ಸಂತಸವನ್ನು ವ್ಯಕ್ತಪಡಿಸುತ್ತಾರೆ)

*ಹಸ್ತಪ್ರತಿಯಲ್ಲಿ: (ಚಲನಚಿತ್ರದಲ್ಲಿ ಇಲ್ಲ)*

*ಸುಂದರ್ : ಸಿಂಘಾಲ್ ಸಾಬ್. ಶಂಕರ್ ಪೀತಾ ನಹೀ*

*ಸಿಂಘಾಲ್ : ಗುಡ್ ಟು ನೋ ದಟ್. ಕ್ಯಾನ್ ಯೂ ಬಿಲೀವ್ ಇಟ್. ಶಂಕರ್ ಪೀತಾ ನಹೀ ಹೈ*

*ಪ್ರತಿಮಾ : ವೈಸೆ ನಹೀ. ಬಡೋಂಕೆ ಸಾಮ್‌ನೆ ನಹೀ ಪೀತಾ ಹೈ*

*ಸಿಂಘಾಲ್ : ಶಂಕರ್, ತುಮ್ಹಾರೀ ಅಚೀವ್‌ಮೆಂಟ್ಸ್ ಸುನ್ಕೇ ಬಹುತ್ ಅಚ್ಛಾ ಲಗಾ. ಡಿಬೇಟರ್, ಸ್ಕಾಲರ್, ಎ ರಿಯಲ್ ಆಲ್‌ರೌಂಡರ್*

*ಶಂಕರ : ನಾಟ್ ಎಗ್‌ಸ್ಯಾಕ್ಟ್‌ಲಿ, ಸಿರ್ಫ್ ದೇಖ್‌ನೇ ಮೇಂ ಆಲ್‌ರೌಂಡರ್ ಹ್ಞೂಂ ಬಸ್*

*ಸಿಂಘಾಲ್ : ಹೆ ಹೆ ಹೆ ಗ್ರೇಟ್ ಸೆನ್ಸ್ ಆಫ್ ಹ್ಯೂಮರ್. ಫಸ್ಟ್ ರ್‍ಯಾಂಕ್ ಹೋಲ್ಡರ್ ಹೋ. ಫಿರ್ ಭೀ ಸೀರಿಯಸ್ ನಹೀ ಹೋ ಗುಡ್*

*ಶಂಕರ : ಸಾರಿ ಸರ್. ಶಾಯದ್ ಆಪ್ ಗಲತ್ ಆದ್‌ಮೀ ಸೇ ಮಿಲ್ ರಹೇಂ ಹೈಂ. ಫಸ್ಟ್ ನಹೀಂ. ಎಯ್ಟ್ತ್ ಹೈ ಮೇರಾ*

*ಮಿಸೆಸ್ ಸಿಂಘಾಲ್ : ಹೀ ಇಸ್ ಸೋ ಮಾಡೆಸ್ಟ್. ಫಸ್ಟ್ ಯಾ ಎಯ್ಟ್.*

| | | |
|---|---|---|
| | | *ರ್‍ಯಾಂಕ್ ಹೋಲ್ಡರ್ ತೋ ಹೈ ನಾ. ಬೋಲೋ ಬೇಟೆ ಅಬ್ ಕೌನ್ ಸೀ ಪೋಸ್ಟಿಂಗ್ ಪಸಂದ್ ಕರೋಗೆ?* |
| *ಸಿಂಘಾಲ್* | *:* | *ಸರ್ಕಾರಿ ಯಾ ಪ್ರೈವೇಟ್? ಹಿ ವಿಲ್ ಟಾಕ್ ಟು ದ ಚೀಫ್ ಸೆಕ್ರೆಟರಿ. ಸರ್ಕಾರೀ ಬಾಬು ಬನ್‌ಕೇ ಹಮಾರೀ ತರಹ್ ಸಫಾರಿ ಸೂಟ್ ಮೇಂ ಘಿಸೋಗೆ ಯಾ, ಪ್ರೈವೇಟ್ ಸೆಕ್ಟರ್ ಮೇಂ ಜಾಕೆ ದುನಿಯಾ ಘೂಮೋಗೆ? ಕ್ಯಾ ಪಸಂದ್ ಕರೋಗೆ? ಡಿಸೈಡ್ ಫಾಸ್ಟ್ ಭಾಯೀ.* |
| *ಶಂಕರ* | *:* | *ಅಬ್ ತಕ್ ತೋ ಸೋಚಾ ಹೀ ನಹೀ* |
| ವನಮಾಲಾ | : | ಬಹುತ್ ತಾರೀಫ್ ಸುನಿ ಹೈ ಆಪ್ಕಿ<br>(ವನಮಾಲಾ ಮತ್ತು ಶಂಕರ್ ಮಾತಾಡುತ್ತಿರುವುದನ್ನು ನೋಡುವ ಶಂಕರ್ ತಾಯಿ ಮತ್ತು ವನಮಾಲಾ ತಾಯಿ) |
| ಪ್ರತಿಮಾ | : | ಮಿಸೆಸ್ ಸಿಂಘಾಲ್. ದೇ ಮೇಕ್ ಅ ಗುಡ್ ಪೇರ್ |
| ಮಿಸೆಸ್ ಸಿಂಘಾಲ್ | : | ಹ್ಞಾಂ ಪ್ರತಿಮಾ ಜೀ.<br>(ಸಂತೋಷವನ್ನು ವ್ಯಕ್ತಪಡಿಸುವರು) |

# ದೃಶ್ಯ-11

***ಹಗಲು-ಸಿಂಘಾಲ್‌ರ ಮನೆಯ ಹೊರಗೆ ಮತ್ತು ಒಳಗೆ***

(ತನ್ನ ತಂದೆಯೊಂದಿಗೆ ಮಾತನಾಡುತ್ತಿದ್ದ ಶಂಕರ್‌ನನ್ನು ವನಮಾಲಾ..)

ವನಮಾಲಾ : ಐ ಬಿಲೀವ್ ಆಪ್ಕೋ ಪೈಂಟಿಂಗ್ಸ್ ಪಸಂದ್ ಹೈ? ಎಸ್ಪೆಷಲಿ ಲ್ಯಾಂಡ್‌ಸ್ಕೇಪ್. ಆಯಿಯೇ ದೇಕ್ತೇ ಹೋ. (ಎಂದು ಅವನ ಕೈ ಹಿಡಿದು ಎಳೆದೊಯ್ಯುವಾಗ ಶಂಕರ್ ಅವಳಿಂದ ಬಿಡಿಸಿಕೊಂಡು)

ಶಂಕರ್ : ಯುವರ್ ಲ್ಯಾಂಡ್‌ಸ್ಕೇಪ್ಸ್ ಆರ್ ಗುಡ್. ಕಲರ್ಸ್ ಅಚ್ಚೇ ಹೈ. ಬಟ್ ಐ ಪ್ರಿಫರ್ ರಿಯಲ್ ಒನ್ಸ್ ಯು ನೋ. ಐ ಮೀನ್ ದ ನಾಚುರಲ್ ಲ್ಯಾಂಡ್‌ಸ್ಕೇಪ್ಸ್.
(ಶಂಕರ ಮತ್ತು ವನಮಾಲಾ ಮಧ್ಯೆ ಶಂಕರನ ತಾಯಿ ಬಂದು)

ತಾಯಿ : ಬೇಟೆ ಇನ್ಕೇ ಫಾರ್ಮ್ ಹೌಸ್ ಭೀ ಹೈ. ಔರ್ ಹಮ್ಕೋ ಭೀ ದೇನೇ ವಾಲೀ ಹೈ.
(ಸಿಂಘಾಲ್‌ರ ಕಡೆ ತಿರುಗಿ)
.. ಹೈನಾ ಸಿಂಘಾಲ್ ಸಾಬ್. ರಿಯಲಿ ವಿ ಆರ್ ಸೋ ಗ್ರೇಟ್‌ಫುಲ್ ಟು ಯೂ.
(ಎಂದು ಕೃತಜ್ಞತಾ ಭಾವವನ್ನು ವ್ಯಕ್ತಪಡಿಸುತ್ತಿರಬೇಕಾದರೆ ಸುಂದರ್ ರಾವ್ ಮತ್ತು ಶಂಕರ ತಲೆ ತಗ್ಗಿಸಿ ನಿಂತಿರುತ್ತಾರೆ)

ಸಿಂಘಾಲ್ : ಕಮಾನ್ ಮಿಸೆಸ್ ರಾವ್. ಇಸೇ ಐಸಾನ್ ಕಿ ಕ್ಯಾ ಬಾತ್ ಹೈ. ಜಬ್ ಬಾತ್ ರಿಶ್ತೇ ಕಿ ಹೋ ರಹೀ ಹೈ

ಶಂಕರ್ : ರಿಶ್ತಾ..?
(ಗೊಂದಲಗೊಳ್ಳುತ್ತಾನೆ. ವನಮಾಲ ನಾಚಿಕೊಂಡು ಒಳಗೆ ಹೋಗುತ್ತಾಳೆ ಇದನ್ನು ಗಮನಿಸುವ ಪ್ರತಿಮಾ)

ಪ್ರತಿಮಾ : ದೇಖೋ ಶರ್‌ಮಾಗಯೀ
(ಎಂದು ನಗುತ್ತಾರೆ ನಂತರ ವನಮಾಲಾ ತಾಯಿ ಅತ್ತ ಹೋದಾಗ ಶಂಕರ ತನ್ನ ತಾಯಿಗೆ)

ಶಂಕರ್ : ಶರಮ್ ತೋ ಆಪ್‌ಕೋ ಆನೀ ಚಾಹಿಯೇ

ಪ್ರತಿಮಾ : ಬಿಹೇವ್ ಯುವರ್ ಸೆಲ್ಫ್ ಶಂಕರ್. ಸಿಂಘಾಲ್ ಸಾಬ್ ಕೋ ಬೂರಾ ಲಗೇಗ
(ಎಂದು ಶಂಕರನನ್ನು ಸುಮ್ಮನಾಗಿಸುವ ಪ್ರಯತ್ನವನ್ನು

| | | |
|---|---|---|
| | | ಮಾಡುತ್ತಾಳೆ) |
| ಸಿಂಘಾಲ್ | : | (ಸುಂದರ್ ರಾವ್‌ಗೆ) ಆಯಿಯೇ ಬೈಟೇನ |
| ತಂದೆ | : | ಥ್ಯಾಂಕ್ಯೂ |
| ಸಿಂಘಾಲ್ | : | ಬೈ ದ ವೇ ಮಿ.ಸುಂದರ್ ರಾವ್ ಆಪ್ಕ ನಾಮ್ ಬಿ ಸುಂದರ್ ರಾವ್ ಹೈ ಸೋ ವಾಟ್ ಈಸ್ ದಿಸ್ ಬಿ ಸ್ಟ್ಯಾಂಡ್ಸ್ ಫಾರ್? |
| ತಂದೆ | : | ಬಿ ಫಾರ್ ಬಂಗಾಡಿ<br>(ಶಂಕರ ಕೇಳಿಸಿಕೊಂಡು ಕುತೂಹಲ ಮತ್ತು ಅತ್ಯಾಶ್ಚರ್ಯದಿಂದ ನೋಡುವನು) |
| ಸಿಂಘಾಲ್ | : | ಬೆಂಗಾಳಿ? |
| ತಂದೆ | : | ನೋ ನೋ ಎ ಬಿ ಸಿ ಡಿ ಬಂಗಾಡಿ |
| ಸಿಂಘಾಲ್ | : | ವೋ ಬಂಗಾಡಿ ಓಕೆ ಓಕೆ |
| ಶಂಕರ | : | ಬಂಗಾಡಿ..<br>(ಎಂದು ತನ್ನಲ್ಲೆ ಹೇಳಿಕೊಳ್ಳುತ್ತ ಅದರ ಬಗೆಗೆ ಚಿಂತಿಸಲು ಆರಂಭಿಸುವನು) |
| ತಾಯಿ | : | ಚುಪ್ ರಹೀ ಹೈ ಜೀ. ಕುಚ್ ಭೀ ಬೋಲ್ ತೆ ರಹತೇ ಹೈ. ಅಜೀ ಬಂಗಾಡಿ ಕಭೀ ದೇಖಾ ಹೈ, ಕಭೀ ಸುನಾ ಹೈ ಬಸ್ ಬಂಗಾಡಿ ಬಂಗಾಡಿ ಲಗಾ ರಖಾ ಹೈ. ಬಿ ಫಾರ್ ಬಾಂಬೆ |
| ಸಿಂಘಾಲ್ | : | ಅರೆ ಕುಛ್ ಭೀ ಹೋ ಯಾರ್ ಹಮೇ ತೋ ಶಂಕರ್ ಕೀ ಜಿಂದಗೀ ಯೇ ದಿಲ್ಲೀ ಮೆ ಬನಾನೀ ಹೈ. |



| | | |
|---|---|---|
| ಶಂಕರ್ | : | ಥ್ಯಾಂಕ್ಸ್ ಫಾರ್ ದ ಕನ್ಸರ್ನ್ ಅಂಡ್ ಎಕ್ಸ್‌ಕ್ಯೂಸ್ ಮಿ.<br>(ತಂದೆ ಮತ್ತು ಸಿಂಘಾಲ್ ಗೊಂದಲಗೊಂಡು ಎದ್ದು ನಿಲ್ಲುವರು)<br>.. ಇಟ್ಸ್ ಮೈ ಲೈಫ್ ಲೆಟ್ ಮಿ ಮಾನೇಜ್ ಇಟ್. |

ಮೇರಿ ಜಿಂದಗಿ ಮೈ ಖುದ್ ಬನಾವೂಂಗ.
(ತಾಯಿ ಮಧ್ಯ ಪ್ರವೇಶಿಸಿ)

ತಾಯಿ : ಬೇಟಾ ಯೇ ಕ್ಯಾ ಕೆಹರಹೇ ಹೋ ತುಮ್

ಶಂಕರ್ : ಮಾಮ್ ಆಪ್ ಚುಪ್ ರಹೋ..
(ಸಿಂಘಾಲ್‌ರಿಗೆ) .. ಎನಿವೇ ಥ್ಯಾಂಕ್ಸ್ ಫಾರ್‌ದ ಈವ್‌ನಿಂಗ್. ಕ್ಯೂಂಕಿ ಆಜ್ ಯಹಾ ಮುಝೆ ಪೆಹಲೀ ಬಾರ್ ಬಂಗಾಡಿಕಾ ಪತಾ ಚಲಾ. ಮೈ ಉಸೀಕಿ ತಲಾಶ್ ಮೆ ಥಾ. ಥ್ಯಾಂಕ್ಯೂ.
(ಎಂದು ತನ್ನ ಮುಂದಿನ ನಡೆ ಏನು ಎಂಬುದರ ಸುಳಿವನ್ನು ಕೊಟ್ಟು ನಂತರ ವನಮಾಲಾ ಹತ್ತಿರ ಬಂದು)
.. ವನಮಾಲಾ ಮೈ ತುಮ್ಹಾರ ಇಜ್ಜತ್ ಕರ್ತಾ ಹ್ಹೂಂ ಐ ಹೋಪ್ ಯುವಿಲ್ ಅಂಡರ್‌ಸ್ಟ್ಯಾಂಡ್ ಮಿ. ಸಾರಿ.

ಸಿಂಘಾಲ್ : (ಸುಂದರ್ ಕಡೆಗೆ ತಿರುಗಿ)
ಅರೆ ಯೇ ಕ್ಯಾ ಹುವಾ?
(ಇತ್ತ ಶಂಕರ, ವನಮಾಲಾಗೆ ದೃಢಚಿತ್ತದಿಂದ)

ಶಂಕರ್ : ಅಂಡ್ ಆಲ್ ದಿ ಬೆಸ್ಟ್
(ಎಂದು ಹೇಳಿ ಹೊರಟುಹೋಗುತ್ತಾನೆ)

**ನಿರ್ದೇಶಕರ ಟಿಪ್ಪಣಿ:**

**ತಂದೆ ತನ್ನದೇ ಆದಂತಹ ಸೀಮಿತ ವಾಸ್ತವ್ಯದಲ್ಲಿದ್ದಾಗ ತಾಯಿ ಮಗನ ಬಗ್ಗೆ ಹಲವಾರು ಕನಸುಗಳನ್ನು ಕಂಡಿರುತ್ತಾಳೆ. ಆಕೆಗೆ ಆತನನ್ನು ದೆಹಲಿಯಲ್ಲಿ ಒಬ್ಬ ದೊಡ್ಡ ಉದ್ದಿಮೆಯ ಅಧಿಕಾರಿಯ ಮಗಳಿಗೆ ಮದುವೆ ಮಾಡಿಕೊಡುವುದು ಅದರ ಮುಖಾಂತರ ತನ್ನ ವರ್ಚಸ್ಸನ್ನು ಹೆಚ್ಚಿಸಿಕೊಳ್ಳುವುದು ಈ ರೀತಿಯ ಹಲವು ಯೋಚನೆಗಳಲ್ಲಿ ಆಕೆ ಮುಳುಗಿರುವಾಗ ಶಂಕರ ಅವೆಲ್ಲಕ್ಕೂ ತಣ್ಣೀರೆರಚುತ್ತಾನೆ. ಪ್ರಥಮಬಾರಿಗೆ ತನ್ನ ತಂದೆಯ ಬಾಯಿಂದ ಬಂಗಾಡಿ ಎಂಬ ಊರಿನ ವಿಷಯ ಆತನಿಗೆ ತಿಳಿಯುತ್ತದೆ. ವನಮಾಲಾಳಿಗೆ ತನ್ನ ಬದುಕಿನ ದಾರಿಯೇ ಬೇರೆ ಎಂಬುದನ್ನು ಹೇಳುತ್ತ ಅವಳಿಗೆ ಶುಭಾಶಯಗಳನ್ನು ಹೇಳುತ್ತಾ ತಾನು ಮೊಟ್ಟಮೊದಲ ಬಾರಿಗೆ ಒಂದು ಹೊಸ ಹೆಸರಿನ ಜೊತೆಗೆ ಹೊಸ ಯೋಚನೆಯತ್ತ ಹೆಜ್ಜೆಹಾಕುತ್ತಾನೆ. ಅದು ಬಂಗಾಡಿಯಾಗಿರುತ್ತದೆ. ದೆಹಲಿಯ ಒಂದು ಮಹಲಿನ ಒಳಾಂಗಣದಲ್ಲಿ ಈ ದೃಶ್ಯವನ್ನು ನಾವು ಚಿತ್ರೀಕರಿಸುತ್ತಿದ್ದಾಗ ದೆಹಲಿಯ ರಂಗಭೂಮಿಯಲ್ಲಿ ಬಹಳಷ್ಟು ಹೆಸರಾಗಿದ್ದಂತಹ ಒಂದಿಬ್ಬರು ಸ್ನೇಹಿತರು ಇದರಲ್ಲಿ ಪಾತ್ರವಹಿಸಿದ್ದರು. ಜೊತೆಗೆ ಮೂರು ಜನ ಬಿ.ವಿ.ಕಾರಂತರ ಜೊತೆ ಅಭಿನಯಿಸಿದ್ದ ರಂಗಕರ್ಮಿಗಳನ್ನ ಈ ದೃಶ್ಯದಲ್ಲಿ ಕಾಣುತ್ತೇವೆ. ಒಟ್ಟಿನಲ್ಲಿ ಬನಾರಸ್ ಅದರ ನಂತರ ದೆಹಲಿ, ದೆಹಲಿಯ ಮುಖಾಂತರ ಕಥೆ ನಿಧಾನವಾಗಿ ತೆರೆದುಕೊಳ್ಳುತ್ತ ಸಾಗುತ್ತದೆ. ಖೆಡ್ಡಾ ಎಂಬ ಪದದ ವೈಶಿಷ್ಟ್ಯವನ್ನ ಬೇರೆ ರೀತಿಯಲ್ಲಿಯೂ ಕೂಡ ಇಲ್ಲಿ ಬಳಸಲಾಗಿದೆ.**

# ದೃಶ್ಯ–12

***ಹಗಲು–ದೆಹಲಿಯ ಹೊರಭಾಗ***

| | | |
|---|---|---|
| | | (ದೆಹಲಿಯ ಸಫ್ತರ್ ಜಂಗ್ ಪಾರ್ಕ್‌ನಲ್ಲಿ ವರೂ ಮತ್ತು ಶಂಕರರ ವಾಗ್ವಾದ) |
| ವರೂ | : | ಹಾಗಾದ್ರೆ ಖುಷಿಯಾಗ್ ಆ ಖೆಡ್ಡದಲ್ ಬಿದ್ಬಿಟ್ಟೆ ಅನ್ನು. ಐ ನೀವ್ ಇಟ್. (ಶಂಕರನನ್ನು ತರಾಟೆಗೆ ತಗೆದುಕೊಳ್ಳುತ್ತಾಳೆ) |
| ಶಂಕರ್ | : | ಆ ಖೆಡ್ಡಾ ಏನೋ ಬಹಳ ಚೆನ್ನಾಗಿತ್ತು ಅನ್ನು. ಕ್ವೈಟ್ ಟೆಮ್ಟಿಂಗ್ ಯುನೋ<br>(ಆಕೆಯನ್ನು ಛೇಡಿಸಲು ಯತ್ನಿಸುತ್ತಾನೆ) |
| ವರೂ | : | ಹೋಗು, ಹೋಗು. ಕನ್ನಡ, ಕನ್ನಡ ಪ್ರೇಮ ಎಲ್ಲ ಬರೀ ಸುಳ್ಳು. ನಿನಗೆ ಆ ಪಂಜಾಬಿ ಪರಾಟಾನೆ ಸರಿ<br>(ಹೊಡೆಯಲು ಹೋಗುತ್ತಾಳೆ. ಅವಳನ್ನ ತಡೆದು ಶಂಕರ್) |
| ಶಂಕರ್ | : | ಏ ಇಡ್ಲಿ ಮಝಾಕ್ ಮಾಡ್ದೆ ಕಣೆ. ಇಲ್ಲಿ ಬಾ ನೋಡು. ಬನಾರಸ್‌ನಿಂದ ನಿಂಗೋಸ್ಕರ ಏನ್ ತಂದಿದಿನ್ ನೋಡು. ಇದು ಸಾದಾ ಉಂಗುರ ಅಲ್ಲ. ಕಮಾಲ್ ಕಿ ಅಂಗುಟಿ |
| ವರೂ | : | ಸೋ ನೈಸ್<br>(ಶಂಕರ್ ಉಂಗುರವನ್ನು ಅವಳಿಗೆ ತೊಡಿಸುತ್ತಾನೆ) |



| | | |
|---|---|---|
| ಶಂಕರ್ | : | ವಿಸ್ಮಯದ ಉಂಗುರ<br>(ಇಬ್ಬರೂ ಆ ಉಂಗುರಕ್ಕೆ ಮುತ್ತನ್ನಿಡುತ್ತಾರೆ) |

# ದೃಶ್ಯ–13

*ಹಾಡು: ಓ ಆಜಾರೆ ಓಹೋ ಆಜಾರೇ*
*ಸಾಹಿತ್ಯ: ಜಯಂತ ಕಾಯ್ಕಿಣಿ*
*ಹಾಡಿದವರು: ಉದಿತ್ ನಾರಾಯಣ್ ಮತ್ತು ಮಹಾಲಕ್ಷ್ಮಿ ಅಯ್ಯರ್*

ಓ ಆಜಾರೆ ಓಹೋ ಆಜಾರೇ
ನಿನ್ನ ಕಂಡ ಕ್ಷಣ ಆಹ ತುಂಬಿ ಮನ
ತನು ಕುಣಿದು ಕುಣಿದು ತನನ ಓಹೊಹೋ

ಹಮ್ ಹೈ ರಾಹೀ ಪ್ಯಾರ್ ಕೆ
ಜೊತೆ ಸಾಗುವ ದೂರಕೆ
ಆವಾರ ಮುಝುಸಾ ನಹೀ
ನಿನ್ನ ತೋಳಲ್ಲಿ ಬಾಳೂ ಸಿಹೀ

ದಿಲ್ ಜೋ ನಹೀ ಕೆಹ್ ಸಖಾ
ನಿನ್ನ ಪಿಸುಮಾತು ಬಲು ಮೋಹಕ
ಛಾಯಾ ಸಾವನ್ ಕಿ ಘಟಾ
ಮನಸಿಂದು ಗಾಳಿಪಟಾ

ನೀಲೇ ಗಗನ್ ಕೇ ತಲೇ
ಶುಭ ಕೋರಿದೆ ಕೋಗಿಲೇ
ಮರ್ ಜಾವೂಂ ತೇರೇ ಸಿವಾ
ಬೇಡಪ್ಪ ಅಯ್ಯೋ ಶಿವಾ

ಇಷ್ಕ್ ಬಿನಾ ಕ್ಯಾ ಜೀನಾ
ಜೋಕಾಲಿ ಈ ಜೀವನಾ
ದಿಲ್ ಕಿ ನಜ್ಹರ್ ಸೇ ದೇಖೇ
ಪ್ರೀತಿಗೂ ಭಾಷೆ ಬೇಕೇ

**[ಸಫ್ದರ್ ಜಂಗ್ ಪಾರ್ಕ್, ಪುರಾನಾ ಖಿಲ್ಲಾ, ಪ್ರಗತಿ ಮೈದಾನ್, ರಾಷ್ಟ್ರೀಯ ಮ್ಯೂಸಿಯಂ, ಗೇಟ್ ವೇ ಆಫ್ ಇಂಡಿಯಾ, ಪಾರ್ಲಿಮೆಂಟ್ ಭವನ ರಸ್ತೆ, ಶಾಂಸಿ ತಲಾಭ್, ದೆಹಲಿಯ ಕೆಂಪು ಕೋಟೆ, ಮಾರ್ಡನ್ ಆರ್ಟ್ ಮ್ಯೂಸಿಯಂ ಈ ಜಾಗಗಳನ್ನು ಶಂಕರ ಮತ್ತು ವರಲಕ್ಷ್ಮಿಯ ಯುಗಳ ಗೀತೆಯನ್ನು ಚಿತ್ರೀಕರಿಸಲಾಗಿದೆ]**

**ನಿರ್ದೇಶಕರ ಟಿಪ್ಪಣಿ:**

**ವರೂ ಮತ್ತು ಶಂಕರರ ಪ್ರೀತಿಯ ದ್ಯೋತಕವಾಗಿ ಪ್ರಾರಂಭವಾಗುವ ಹಾಡಿನ ಸಾಲುಗಳನ್ನು ಬರೆದವರು ಜಯಂತ ಕಾಯ್ಕಿಣಿಯವರು. ಬಹಳ ಹೆಮ್ಮೆಯೆನಿಸುವಂತಹ "ಬಂಧುವೇ ಮತ್ತು ಆಜಾರೆ" ಈ ಎರಡೂ ಕವನಗಳನ್ನು ಜಯಂತ ಕಾಯ್ಕಿಣಿಯವರು ಬರೆದಿದ್ದಾರೆ. ಈ ಚಿತ್ರದ ಮುಖಾಂತರ ಮೊಟ್ಟಮೊದಲ ಬಾರಿಗೆ ಜಯಂತ ಕಾಯ್ಕಿಣಿಯವರನ್ನು ಕನ್ನಡದ ಚಲನಚಿತ್ರರಂಗಕ್ಕೆ ಪರಿಚಯಿಸಿದ ಹೆಗ್ಗಳಿಕೆಗೆ ಪಾತ್ರವಾಗುತ್ತದೆ 'ಚಿಗುರಿದ ಕನಸು' ಚಲನಚಿತ್ರ. ಈ ಚಿತ್ರದ ಚಿತ್ರಕಥೆ ಮತ್ತು ಸಂಭಾಷಣೆಯೂ ಕಾಯ್ಕಿಣಿಯವರದ್ದೇ. ಇಂದು ಕಾಯ್ಕಿಣಿ ಕನ್ನಡ ಚಿತ್ರರಂಗದ ಅವಿಭಾಜ್ಯ ಅಂಗ ಮತ್ತು ಅವರದ್ದೇ ಆದ ಹೆಜ್ಜೆಗುರುತುಗಳನ್ನು ಅವರು ಈಗ ಸಾಧಿಸಿದ್ದಾರೆ. ಅದರ ಓ ನಾಮ ಚಿಗುರಿದ ಕನಸು ಮುಖಾಂತರ, ನನ್ನ ಸಿನಿಮಾದ ಮೂಲಕ ಆಯಿತಲ್ಲ ಎಂಬ ಹೆಮ್ಮೆ ನನಗಿದೆ.**

## ದೃಶ್ಯ–14

***ಹಗಲು–ಶಂಕರನ ಮನೆಯ ಒಳಗೆ***

(ಪೇಪರ್ ಓದುತ್ತಿರುವ ಶಂಕರ್‌ಗೆ ತಾಯಿ ರೇಗಾಡುತ್ತಿರುವುದು ಕೇಳಿಸಿ ಬೇಸರದಿಂದ ಕುಳಿತುಕೊಳ್ಳುತ್ತಾನೆ)

ತಾಯಿ : ದೇವಾರೆ ದೇವ, ಸತ್ಯಾನಾಶ್ ಕರ್‍ಕೇ ರಖ್‌ದಿಯಾ ಇಸ್ ಲಡ್ಕೇನೆ. ಕಿತ್ನಾ ಅಚ್ಚಾ ರಿಶ್ತಾ ಥಾ. ಬೋಲ್ತಾ ಹೈ ಮೈ ಅಪ್ನೀ ಝಿಂದಗೀ ಖುದ್ ಬನಾವೂಂಗ. ಬಡಾ ಆಯಾ ಆಪ್ನಾ ಝಿಂದಗಿ ಬನಾನೆವಾಲಾ. ಅರೇ ತುಝೋ ಪತಾ ಹೈ ಘರ್ ಇನ್ಕೀ ಪ್ರಮೋಷನ್ ವಿರೂಕಿ ಪೋಸ್ಟಿಂಗ್ ಸಬ್ ಸಿಂಘಾಲ್ ಸಾಬ್ ಕಿ ಮೆಹರ್‌ಬಾನಿ ಹೈ. ತೂ ನೆ ವಾಕ್ ಔಟ್ ಕರ್‍ಕೇ ಅಬ್ ಸಬ್ಕೀ ಬೇಝ್ತೀ ಕರ್ವಾದೀ ಹೈ. ಬಹುತ್ ಪಛ್‌ತಾವೋಗೇ ತುಮ್. ಬಹುತ್ ಪಛ್‌ತಾಯೇಗ

(ಎಂದು ಮಗ ಹೀಗೆ ಮಾಡಿದ್ದಕ್ಕೆ ತಮ್ಮ ಬೇಸರವನ್ನು, ಕೋಪವನ್ನು ವ್ಯಕ್ತಪಡಿಸುತ್ತಾರೆ

ಶಂಕರ್ : ಮಾ ವೋ ಮುಝೋ ಖರೀದ್ ರಹೇಥೇ. ಐ ಯಾಮ್ ನಾಟ್ ಫಾರ್ ಸೇಲ್.

ತಾಯಿ : ವಾಹ್ ಬೇಟಾ ವಾಹ್ ಬಹೂತ್ ಖೂಬ್. ತುಝೆ ಇಂಜಿನಿಯರ್ ಬನಾಯ ಹಮ್ನೇ. ಔರ್ ಆಜ್ ಆಂಖೇ ಹಮೇ ದಿಖಾರಾಹಾಹೈ ಹೋ. ದೇಖೋ ಜೀ ದೇಖೋ ಝರಾ ಇಸ್ಕೋ. ಅರೆ ಲಗಾಕೇ ನಹೀ ದೇಖ್‌ಲೇನಾ ಮೈ ಇಸ್ ರಿಶ್ತೇ ಕೋ ಹಾತ್ ಸೇ ಹರ್‌ಗಿಸ್ ಜಾನೇ ನಹೀ ದೂಂಗಿ. ವನಮಾಲಾ ಕೋ ಮೈ ಇಸ್ ಘರ್‌ಕಿ ಬಹೂಹಿ ಬನಾ ಕರ್ ರಹೂಂಗಿ. ವಿರೂ ಕೇಲಿಯೇ.

(ಸುಂದರ್ ವಿರೂಗೆ ಫೋನ್ ಮಾಡುತ್ತಾನೆ ವಿರೂ ಮಾತನಾಡುವುದನ್ನು ಕೇಳಿಸಿಕೊಂಡ ತಾಯಿ ಫೋನ್ ತಗೆದುಕೊಂಡು)

ತಾಯಿ : ಹಲೋ ಬೇಟೆ

ವಿರೂ : ಹಲೋ ಮಮ್ಮೀ

ತಾಯಿ : ಬೇಟ, ವಿರೂ ಕೈಸೆ ಹೋ

ವಿರೂ : ಹ್ಹಾ ಮಮ್ಮೀ. ಬಸ್ ಟೀಕ್ ಫೈನ್ ಫರ್ಸ್ಟ್ ಕ್ಲಾಸ್

ತಾಯಿ : ಅಚ್ಛಾ ಅಚ್ಛಾ. ಔರ್ ಸುನೋ ತುಝೆ ಪತಾ ಹೈ ಕ್ಯಾ

| | | |
|---|---|---|
| | | ಹುವಾ<br>(ಶಂಕರ್ ಓಡಿ ಬಂದು ಫೋನನ್ನು ತಾಯಿಯಿಂದ ಕಸಿದುಕೊಂಡು ಮಾತನಾಡಲು ಶುರುಮಾಡುತ್ತಾನೆ) |
| ಶಂಕರ್ | : | ವಿರೂ, ಪೈಲೆಟ್ ಸಾಬ್ ಕುಛ್ ನಹೀ ಹುವಾ. ಏಕ್ ಬಡಾ ಖೆಡ್ಡಾ ಥಾ. ಮೈ ತೋ ಬಚ್ ಗಯಾ ಅಬ್ ತುಮ್ ಬಚ್ಕೇ ರಹನಾ ರೇ ಬಾಬಾ ಸಮ್ಝೇ<br>(ನಡೆದ ವಿಷಯವನ್ನು ಚುಟುಕಿನ ರೀತಿಯಲ್ಲಿ ಹೇಳಲು ಯತ್ನಿಸುತ್ತಾನೆ) |
| ವಿರೂ | : | ಕ್ಯಾ ಹುವಾ |
| ಶಂಕರ್ | : | ಕುಚ್ ನಹೀ. ಹೌ ಆರ್ ಯೂ ಮೈ ಡಿಯರ್ ಡರ್‌ಪೋಕ್ |
| ವಿರೂ | : | ಐ ಯಾಮ್ ಫೈನ್, ಹೌ ಆರ್ ಯೂ ಮೈ ಬಿಗ್ ಬ್ರದರ್? |
| ಶಂಕರ್ | : | ಫೈನ್ ಬೋಲೋ. ಹವಾ ಮೆ ಉಡ್ನಾ ಕೈಸಾ ಲಗ್‌ತಾ ಹೈ? |
| ವಿರೂ | : | ವೂ ಸೂಪರ್ಬ್, ತುಮ್ ಭೀ ಆಜಾವೋನ |
| ಶಂಕರ್ | : | ಕೌನ್ ಮೆ? ಮುಝೆ ತೋ ಜಮೀನ್ ಪೆ ಚಲ್ನಾ ಪಸಂದ್ ಹೈ |
| ವಿರೂ | : | ಅಚ್ಚಾ |
| ಶಂಕರ್ | : | ವಿರೂ, ಫ್ಲೈಟ್ ಮೆ ಕೋಯಿ ಚಕ್ಕರ್ ಚಲಾಯೆ ಕ್ಯಾ? |
| ವಿರೂ | : | ಅರೆ ನಹೀ ಯಾರ್ |
| ಶಂಕರ್ | : | ಸೋ ಸ್ಯಾಡ್ ಭಾಯ್ |
| ವಿರೂ | : | ಅಚ್ಛಾ ವರಲಕ್ಷ್ಮೀ ಕೈಸಿ ಹೈ? |
| ಶಂಕರ್ | : | ವರಲಕ್ಷ್ಮೀ ಠೀಕ್ ಹೈ. ಔರ್ ಸುನ್ ಮೈನೆ ವರಲಕ್ಷ್ಮೀಕಾ ಭಾಷಾ ಸೀಖ್ಲೀ |



| | | |
|---|---|---|
| ವಿರೂ | : | ಭಾಷಾ ಸೀಖ್‌ಲೀ (ತಾನು ಕನ್ನಡ ಕಲಿತಿದ್ದರ ಬಗೆಗೆ ತನ್ನ ತಮ್ಮನಿಗೆ ಸಂತೋಷದಿಂದ ತಿಳಿಸುತ್ತಾನೆ) |
| ಶಂಕರ್ | : | ಹ್ಹಾಂ ಮಗನೇ ಕನ್ನಡ ಬರುತ್ತೇನೋ ನಿನಗೇ |
| ವಿರೂ | : | (ಅರ್ಥವಾಗದೆ) ಕ್ಯಾ.. ಕ್ಯಾ.. ಕ್ಯಾ.. |
| ಶಂಕರ್ | : | ಕುಛ್ ನಹೀ ಸಮ್ಝೋ |
| ವಿರೂ | : | ನಹೀ |
| ಶಂಕರ್ | : | ನಹೀ, ಎಷ್ಟು ಚೆನ್ನಾಗಿ ಕನ್ನಡ ಮಾತಾಡ್ತಿದಿನಿ ಸುಮ್ನೆ ಕೇಳ್ಸ್ಕೊಳೋ ಅಬೇ ಕತ್ತೇ |
| ವಿರೂ | : | ಕತೇ?! |
| ಶಂಕರ್ | : | ನಹೀ ನಹೀ ಕತ್ತೆ |
| ವಿರೂ | : | ಗುಡ್ ಯಾರ್, ಕಿಸ್ಸೇ ಸಿಖಾ? |
| ಶಂಕರ್ | : | ಹಲೋ.. ಹಲೋ.. (ಧ್ವನಿ ಕೇಳಿಸದೆ ಕರೆ ಅಂತ್ಯಗೊಳ್ಳುತ್ತದೆ. ಕನ್ನಡ ಮಾತನಾಡಿದ್ದನ್ನು ಕೇಳಿಸಿಕೊಂಡ ತಾಯಿಗೆ ಕೋಪ ಬಂದರೆ ತಂದೆಗೆ ಸಂತೋಷವಾಗುತ್ತದೆ)<br>ದೇಖೋ, ಪೈಲೆಟ್ ಕಿ ಭೀ ಲೈನ್ ಕಟ್ ಗಯೀ<br>(ತಾಯಿ ಕೋಪಗೊಂಡು ಅಲ್ಲಿಂದ ನಿರ್ಗಮಿಸುತ್ತಾಳೆ) |

**ನಿರ್ದೇಶಕರ ಟಿಪ್ಪಣಿ:**

**ಚಿತ್ರಕಥೆಯ ಸೂಕ್ಷ್ಮ ಅಂಗಗಳಲ್ಲಿ ಪ್ರಮುಖವಾದದ್ದು ಒಂದೊಂದೇ ಪಾತ್ರಗಳು ನಿಧಾನವಾಗಿ ಬಿಚ್ಚಿಕೊಳ್ಳುತ್ತಾ ಹೋಗೋದು. ಈ ದೃಶ್ಯದ ಮೂಲಕ ಪೈಲೆಟ್ ಆಗಿರುವ ವಿರೂನ ಪಾತ್ರದ ಪರಿಚಯವಾಗುತ್ತದೆ. ಶಂಕರನ ತಮ್ಮ ವಿರೂ ಈಗ ಮದುವೆಯಾಗಲಿರುವ ವನಮಾಲಾಳ ಅಪ್ಪ ಸಿಂಘಾಲ್‌ನ ಸಹಾಯದಿಂದ ಪೈಲೈಟ್ ಆಗಿರುತ್ತಾನೆ. ಹೀಗಾಗಿ ಶಂಕರನ ತಾಯಿಗೆ ವನಮಾಲಾಳನ್ನು ಮನೆಗೆ ಸೊಸೆಯಾಗಿ ತರುವ ಉದ್ದೇಶ ಮತ್ತು ಆಶಯ ಎರಡೂ ಪ್ರಖರವಾಗಿರುತ್ತದೆ. ವಿರೂನನ್ನು ಒಪ್ಪಿಸಲು ತಾಯಿ ಸಿದ್ಧಳಾಗುತ್ತಾಳೆ. ಶಂಕರ ತಮ್ಮನಿಗೆ ಕರೆಮಾಡಿದ ಸಂಧರ್ಭದಲ್ಲಿ ವರೂ ಮತ್ತು ಕನ್ನಡ ಪ್ರೀತಿಯ ಬಗ್ಗೆ ಮಾತನಾಡುತ್ತಾನೆ. ಕನ್ನಡ ಮಾತನಾಡುತ್ತಿರುವುದನ್ನು ಕಂಡ ಶಂಕರನ ತಂದೆ ದಿಗ್ಭ್ರಾಂತನಾಗುತ್ತಾನೆ, ತಾಯಿ ಅರ್ಥವಾಗದೆ ಚಡಪಡಿಸುತ್ತಾಳೆ. ನಿಧಾನವಾಗಿ ಶಂಕರನ ಪಾತ್ರ ತನ್ನ ಹುಡುಕಾಟದ ಒಂದೊಂದೆ ಹೆಜ್ಜೆಯನ್ನು ಮುಂದಿಡುತ್ತಿರುವುದನ್ನು ನಾವಿಲ್ಲಿ ಕಾಣಬಹುದು.**

# ದೃಶ್ಯ–15

***ರಾತ್ರಿ–ಶಂಕರನ ಮನೆಯ ಹೊರಗೆ***

| | | |
|---|---|---|
| | | (ಹೊರಗಡೆ ಏಕಾಂತವಾಗಿ ಏನನ್ನೋ ಯೋಚಿಸುತ್ತ ಕುಳಿತಿರುವ ತಂದೆಯ ಬಳಿ ಬರುವ ಶಂಕರ) |
| ಶಂಕರ್ | : | ಪಾಪಾ ಆರ್ ಯೂ ಅಪ್‌ಸೆಟ್? |
| ತಂದೆ | : | ಶಂಕರ, ಕನ್ನಡದಲ್ ಮಾತಾಡು. ಮಾತಾಡು ಶಂಕರ |
| ಶಂಕರ್ | : | ಪಾಪಾ ಆಪ್ ಭೀ? |
| ತಂದೆ | : | ಹೌದು ನೀನು ಕನ್ನಡದಲ್ ಮಾತಾಡ್ತಾ ಇದ್ರೆ ಎಷ್ಟೋ ವರ್ಷಗಳ ಹಿಂದೆ ಮುಚ್ಚಿಹೋದ ಒಂದು ಪ್ರಪಂಚದ ಬಾಗಿಲು ತೆರೆದ್ಹಾಗ್ ಆಗ್ತದೆ. ಮಾತಾಡು ಶಂಕರ |
| ಶಂಕರ್ | : | ಪಾಪಾ, ನಾವು ಕನ್ನಡಿಗರ? ಯಾಕೆ ಇಷ್ಟು ದಿನ ಮುಚ್ಚಿಟ್ರಿ? ಅಲೆಮಾರಿಗಳಂತೆ ನಮ್ಮನ್ನ ಹಿಂದಿಯಲ್ಲಿ ಯಾಕೆ ಬೆಳೆಸಿದ್ರಿ? (ತಾವು ಕನ್ನಡಿಗರಾಗಿದ್ದೂ ಈ ರೀತಿ ಬೆಳೆದ ರೀತಿಯ ಬಗೆಗೆ ತಂದೆಯಲ್ಲಿ ಪ್ರಶ್ನಿಸುತ್ತಾನೆ) |
| ತಂದೆ | ; | ನಾನು ಹುಟ್ಟಿದ್ದು ಮುಂಬೈನಲ್ಲಿ. ನಮ್ ತಂದೆ ದತ್ತಾತ್ರೇಯರು ಅಂತ ಕನ್ನಡದವರು, ಕನ್ನಡಿಗರು. ಸಣ್ಣ ಪ್ರಾಯದಲ್ಲೇ ಊರು ಬಿಟ್ಟು ಹೋದವರು. |



| | | |
|---|---|---|
| ಶಂಕರ್ | : | ಹಾಗಾದ್ರೆ ಬಂಗಾಡಿ ಕ್ಯಾ ಹೈ ಪಪ್ಪಾ? |
| ತಂದೆ | : | ಬೇಟ, ಬಂಗಾಡಿ ಅನ್ನೋದು ಮನೆತನದ ಹೆಸರೋ ಊರ ಹೆಸರೋ ನನಗೇ ಗೊತ್ತಿಲ್ಲ. ಉಟ್ಟ ಬಟ್ಟೇಲಿ ಮನೆ ಬಿಟ್ಟು ಹೋದ್ರಂತೆ ನಮ್ಮಪ್ಪ. ಅದ್ಹೇಗೋ ಮುಂಬೈ ಸೇರ್ಕೊಂಡ್ರಂತೆ. ಅಲ್ಲಿ ಅವ್ರು ಮಾಡ್ದೇ ಇದ್ದಿದ್ ಕೆಲ್ಸ ಇರ್ಲಿಲ್ಲ. ಟ್ರೈನ್‌ನಲ್ಲಿ ಚಾಕ್ಲೇಟ್ ಮಾರಿದ್ರು, |

ಫ್ಲಾಟ್‌ಫಾರ್ಮ್‌ಗಳಲ್ಲಿ ರಾತ್ರಿ ಕಳುದ್ರು, ಗೇಟ್ ವೇ ಆಫ್ ಇಂಡಿಯಾ ಬಳಿ ಹೋಟೆಲ್ಲೊಂದರಲ್ಲಿ ಲೋಟ ತೊಳುದ್ರು, ರೇಡಿಯೋ ರಿಪೇರಿ ಕಲ್ತು ಹೋರಾಡಿ ಬದುಕನ್ನ ಕಟ್ಟಿದ್ರು ನನ್ನ ಬೆಳೆಸಿದ್ರು.

(ಎಂದು ತನ್ನ ತಂದೆಯ ಹಿನ್ನಲೆಯನ್ನು ತಿಳಿಸುತ್ತಾರೆ)

ಶಂಕರ್ : ತಿರುಗಿ ಅವರಿಗೆ ಊರಗೆ ಹೋಗ್ಬೇಕು ಅನ್ಸಲಿಲ್ವ?

ತಂದೆ : ಅನ್ಸಿತ್ತೋ ಏನೋ, ಆದ್ರೆ ಯಾವೂರ್ ತನ್ನ ಓಡ್ಸಿತ್ತೋ ಆ ಊರಿನ್ ಬಗ್ಗೆ ಅವ್ರಿಗೆ ನಫ್ರತ್ ಇತ್ತು. ಮೆಹನತ್ ಮಾಡೋರಿಗೆ ಮುಂಬೈಯೇ ತಾಯಿ ಅಂತಿದ್ರು. ನಿಮ್ಮಮ್ಮ ಮುಂಬೈ ಅವ್ಳು. ನಾನ್ ಅವ್ಳ ಮದ್ವೆ ಆದ್ಮೇಲಂತು ಕನ್ನಡ ಅನ್ನೋದು ಮನೆಯಿಂದೇನು ಮನಸ್ಸಿಂದ್ಲೇ ಹೊರ್‍ಟ್ಹೋಯ್ತು.

(ಎಂದು ತನ್ನ ತಂದೆಯ ಹಿಂದಿನ ಕಥೆಯನ್ನು ಅವರ ಧೋರಣೆಯನ್ನು ತಿಳಿಸುತ್ತಾನೆ)

ಶಂಕರ್ : ಒಂದ್ಸಲನಾದ್ರು ಊರಿಗೆ ಹೋಗಿ ನೋಡೋಣ ಅಂತ ನಿಂಗು ಅನ್ಸಿಲ್ವ ಪಪ್ಪಾ?

(ಎಂದು ತನ್ನ ಉದ್ವೇಗವನ್ನು ವ್ಯಕ್ತಪಡಿಸುತ್ತಾನೆ)

ತಂದೆ : ಇಲ್ಲ ಅಪ್ಪನಿಗೆ ಬೇಡವಾದ ಊರಿನ್ ಜೊತೆ ನಾನ್ಯಾಕ್ ಸಂಬಂಧ ಕಟ್ಟಕೊಳ್ಳಿ. ನಂಗೇನ್ ಕೊಟ್ಟಿದೆ ಅನ್ಸ್ತು. ಆದ್ರೆ ಇವತ್ತು ಇಷ್ಟು ವರ್ಷಗಳ್ ನಂತ್ರ ನಿನ್ನ ಬಾಯಲ್ಲಿ ನಮ್ ಭಾಷೆ ಕೇಳ್ದಾಗ ಮೈ ಜುಮ್ ಅಂತು. ಲೆಟ್ಸ್ ನಾಟ್ ಗೆಟ್ ಎಮೋಷನಲ್. ಲೈಫ್ ಲೈಕ್ ಶೋ ಮಸ್ಟ್ ಗೋ ಆನ್. ಜ್ಯಾದಾ ಮುಡ್‌ಮುಡ್‌ಕೇ ದೇಖ್‌ನಾ ಭೀ ಅಚ್ಛಾ ನಹೀ ಹೋತಾ ಬೇಟಾ

(ಎಂದು ತನ್ನ ಮನಸ್ಸಿನಲ್ಲಿದ್ದ ಭಾರವನ್ನು ಮತ್ತು ತನ್ನ ಮೂಲದ ಊರಿನ ಬಗೆಗಿನ ಧೋರಣೆಯನ್ನು ವ್ಯಕ್ತಪಡಿಸಿ ಹೋಗುತ್ತಿರುವ ತನ್ನ ಅಪ್ಪನನ್ನು ಶಂಕರ ತಡೆದು)

ಶಂಕರ್ : ಪಪ್ಪಾ, ಜ್ಯಾದ ನಹೀ ಒನ್ ರಿಕ್ವೆಸ್ಟ್. ಇನ್ನು ಮುಂದೆ ನಿನ್ಹತ್ರ ನಾನು ಕನ್ನಡದಲ್ಲೇ ಮಾತಾಡ್ಬಹುದ?

(ತಂದೆ ತನ್ನ ಮಗನನ್ನು ಭಾವುಕನಾಗಿ ಬಲವಾಗಿ ತಬ್ಬಿಕೊಳ್ಳುವನು)

**ನಿರ್ದೇಶಕರ ಟಿಪ್ಪಣಿ:**

ತಂದೆ ಮತ್ತು ಮಗ ಇಬ್ಬರ ಮನಸ್ಥಿತಿಯನ್ನು ಕೇವಲ ಒಂದು ದೃಶ್ಯದಲ್ಲಿ ಹಿಡಿದಿಡುವುದಕ್ಕೆ ಸಾಧ್ಯವಾಗಿದ್ದು ಈ ದೃಶ್ಯದಲ್ಲಿ. ತಂದೆ, ತನ್ನ ತಂದೆಯ ಕಥೆಯನ್ನ ಹೇಳುತ್ತ ದತ್ತಾತ್ರೇಯನ ಕಥೆ ಬಿಚ್ಚಿಕೊಳ್ಳುತ್ತದೆ. ಆತ ಬಾಂಬೆಗೆ ಬಂದಿದ್ದು, ತನ್ನ ಬದುಕನ್ನು ಕಟ್ಟಿಕೊಂಡಿದ್ದು ಮತ್ತು ತನ್ನ ಮದುವೆಯ ನಂತರ ಹೇಗೆ ಕನ್ನಡ ಮತ್ತು ಕನ್ನಡ ಸಂಸ್ಕೃತಿಯಿಂದ ವಿಮುಖ ಆದದ್ದು ಇವುಗಳ ಮುಖಾಂತರ ತನ್ನ ಮಗನ ಮನದಲ್ಲಿ ಮೊಳಕೆಯೊಡೆದಿರುವ ಕನ್ನಡತನವನ್ನು ಮತ್ತೆ ಗರಿಗೆದರಿಸುತ್ತ ತಾನೂ ಕೂಡ ಆ ಸಂತಸವನ್ನು ಹಂಚಿಕೊಳ್ಳುತ್ತಾನೆ. ಈ ಪಾತ್ರಗಳ ಮುಖಾಂತರ ಕನ್ನಡ ಭಾಷೆ ಮತ್ತು ಯಾವುದೇ ಮಾತೃಭಾಷೆಯ ಸಂಪರ್ಕದಲ್ಲಿರುವ ಪ್ರತಿಯೊಬ್ಬ ವ್ಯಕ್ತಿಗೂ ಆ ಮಾತೃಭಾಷೆಯಲ್ಲಿ ಸಿಗುವ ಆನಂದ ಮತ್ತು ಪುಳಕವನ್ನ ಎಚ್ಚರಿಸುವ ಕ್ರಿಯೆಯೂ ಕೂಡ ಇದಾಗುತ್ತದೆ.

## ದೃಶ್ಯ–16

***ಹಗಲು–ಶಂಕರನ ಮನೆಯ ಹೊರಗೆ***

(ಬೆಳಗಿನ ತಿಂಡಿಯ ಸಮಯ, ಮನೆಯ ಮುಂದಿನ ಲಾನ್‌ನಲ್ಲಿ ಸುಂದರ್ ರಾವ್ ಪೇಪರ್ ಓದುತ್ತ ಕುಳಿತಿದ್ದಾನೆ, ಶಂಕರ ತಾನು ಕರ್ನಾಟಕಕ್ಕೆ ಹೋಗಿ ಬರುವುದಾಗಿ ತಿಳಿಸಿದಾಗ ತಾಯಿ ಕೆಲಸವನ್ನು ಹುಡುಕುವ ಸಮಯದಲ್ಲಿ ಪ್ರವಾಸಕ್ಕೆ ಹೋಗುವುದು ಬೇಡ ಎಂದು ತನ್ನ ಅನುಮತಿಯನ್ನು ನಿರಾಕರಿಸುತ್ತ;)

ತಾಯಿ : ಕರ್ನಾಟಕ ಕರ್ನಾಟಕ ಯೇ ಕ್ಯಾ ನಾಟಕ್ ಲಗಾ ರಖಾ ಹೈ? ಲೋಗ್ ಟೈ ಪೆಹನ್ ಕೆ ಇಂಟರ್‌ವ್ಯೂ ತಯ್ಯಾರಿ ಕರ್ ರಹೆ ಹೈ. ಔರ್ ಯೇ ಕರ್ನಾಟಕ ಹಾಲಿಡೇ ಮನಾನೇ ಜಾರಹಾಹೈ. ಕೋಯಿ ಜರೂರತ್ ನಹೀ ಹೈ ಜಾನೇಕೆ

ಶಂಕರ್ : ಮಾ ಸಿರ್ಫ್ ಏಕ್ ಹಫ್ತೇ ಕೇ ಬಾತ್ ಹೈ. ಕೆರಿಯರ್ ಕೆ ಶುರುವಾತ್ ಸೆ ಪೆಹಲೇ ಏಕ್ ಛೋಟಾಸಾ ಬ್ರೇಕ್ ಮೈಂಡ್ ಫ್ರೆಶ್ ಹೋ ಜಾಯೇಗ. ಸೀತಾರಾಮ್‌ಕೊ ಮಿಲ್ಕೇ ಭೀ ಆಯೇಂಗ

(ವೃತ್ತಿಯನ್ನು ಆರಂಭಿಸುವುದಕ್ಕೆ ಮುನ್ನ ಒಂದು ಸಣ್ಣ ವಿರಾಮ ಬೇಕೆಂದು, ಸೀತಾರಾಮನನ್ನು ಭೇಟಿಮಾಡಿಕೊಂಡು ಬರುತ್ತೇನೆಂದು ತನ್ನ ನಿರ್ಧಾರದ ಸಮರ್ಥನೆಯನ್ನು ನೀಡುತ್ತಾನೆ)

ತಂದೆ : ಠೀಕ್ ಹೀ ತೋ ಹೈ. ಇತನೇ ಸಾಲ್ ಕಾಶೀ ಮೆ ರಹಾ. ಪಡಾಯಿ ಪಡಾಯಿ ಕರ್ಕೆ. ಆಗೇ ಭೀ ಹಾರ್ಡ್‌ವರ್ಕ್ ಹೈ. ಘೂಮ್ ನೇದ್ದೋ ಚಾರ್ ದಿನ್.

ತಾಯಿ : ಆಹಹಾ ದೋ ಚಾರ್ ದಿನ್ ಕೇಲಿಯೇ

(ಏನನ್ನೋ ಹೇಳಲು ಬರುವ ಪತಿಯನ್ನ ತಡೆದು ತಾಯಿ)

.. ತುಮ್ ಚುಪ್ ರಹೋ ಜೀ. ದೇಖೋ ಶಂಕರ್ ಜಾನಾ ಹೈ ತೋ ಬಾಂಬೆ ಜಾವ್. ಮಾಮಾಜಿ ಕೆ ಪಾಸ್ ರೆಹರ್‌ನಾ. ತುಮ್ಹಾರಾ ದಿಲ್ ಭೀ ಬೆಹಲ್ ಜಾಯೇಗ ಔರ್ ಕೆರಿಯರ್ ಕೇ ಲಿಯೇ ಆಪ್ಷನ್ಸ್ ಭೀ ದೇಖ್ನಾ. ಚಲೋ ಮೈ ಭೀ ಚಲ್ತೀ ಹೂಂ ತುಮ್ಹಾರಿ

| | | |
|---|---|---|
| | | ಸಾತ್. |
| ತಂದೆ | : | (ಶಂಕರನಿಗೆ) ಅನುಭವ್ನು ಅನುಭವ್ನು..<br>(ತಾಯಿ ಕನ್ನಡದಲ್ಲಿ ಮಾತನಾಡಿಕೊಂಡದ್ದು ಅರ್ಥವಾಗದೆ) |
| ತಾಯಿ | : | ಕ್ಯಾ? |
| ತಂದೆ | : | ನಹೀ ನಹೀ ಅನುಭವ್ ಅನುಭವ್ ಎಕ್ಸ್‌ಪೀರಿಯೆನ್ಸ್ |
| ಶಂಕರ್ | : | ಠೀಕ್ ಹೈ ಮಾ ಠೀಕ್ ಹೈ. ಮೈ ಬಾಂಬೆ ಜಾವೂಂಗ ಲೇಕಿನ್ ಆಪ್ ಮತ್ ಆನ. ಮೈ ಅಖೇಲ ಜಾವೂಂಗ ರಾಜ್‌ಧಾನಿ ಸೇ<br>(ಎಂದು ತಾನೊಬ್ಬನೆ ಬಾಂಬೆ ಹೋಗುವುದಾಗಿ ತಿಳಿಸುತ್ತಾನೆ) |
| ತಾಯಿ | : | ಅಬ್ ಠೀಕ್ ಹೈ |
| ಶಂಕರ್ | : | ಖುಷ್. |
| ತಂದೆ | : | ಬದುಕಿದೆಯಾ ಬಡ ಜೀವವೇ |
| ಶಂಕರ್ | : | ಹೌದು<br>(ತಾಯಿಗೆ ಅರ್ಥವಾಗದೆ ವಾಪಸ್ ಬಂದು) |
| ತಾಯಿ | : | ಆಪ್ ಕ್ಯಾ ಬಡ್ ಬಡ್ ಲಗಾ ರಖೀ ಹೈ? |
| ಶಂಕರ್ | : | ಏ ಬಡಾ ಅಚ್ಚಾ ಹೈ<br>(ಎಂದು ತಿಂಡಿಯ ಬಗ್ಗೆ ಹೇಳಿ ವಿಷಯವನ್ನು ಬದಲಾಯಿಸುತ್ತಾನೆ) |
| ತಾಯಿ | : | ಮಾಲುಮ್ ಹೈ (ತಾಯಿ ನಿರ್ಗಮಿಸುತ್ತಾಳೆ) |
| ಶಂಕರ್ | : | (ತಂದೆಗೆ) ಮಾಲುಮ್ ಹೈ, ಥ್ಯಾಂಕ್ಯೂ ಪಪ್ಪಾ<br>(ಎಂದು ತಂದೆಗೆ ತನಗೆ ಸಹಾಯ ಮಾಡಿದ್ದಕ್ಕಾಗಿ ಮತ್ತು ತನ್ನನ್ನು ಬೆಂಬಲಿಸಿದ್ದಕ್ಕಾಗಿ ಧನ್ಯವಾದ ಹೇಳುತ್ತಾನೆ) |

# ದೃಶ್ಯ-17

***ಹಗಲು-ದೆಹಲಿಯ ರೈಲ್ವೇ ನಿಲ್ದಾಣ***

(ದೆಹಲಿಯ ನಿಜಾಮುದ್ದೀನ್ ರೈಲ್ವೇ ನಿಲ್ದಾಣದಲ್ಲಿ ಶಂಕರ ಮತ್ತು ವರೂ ನಡೆದು ಬರುತ್ತಿದ್ದಾರೆ. ಶಂಕರ ಕರ್ನಾಟಕಕ್ಕೆ ಹೋಗುತ್ತಿರುವುದನ್ನು ತನ್ನ ಗೆಳತಿಗೆ ತಿಳಿಸುತ್ತ ತನ್ನ ಮಾತನ್ನು ಆರಂಭಿಸುತ್ತಾನೆ)

ಶಂಕರ್ : ನಿನಗಷ್ಟೇ ಹೇಳ್ತಾಯಿದಿನಿ ವರೂ, ನಾನು ಬಾಂಬೆಗೆ ಹೋಗ್ತಾ ಇಲ್ಲ. ಯಾಕೋ ಸೀತಾರಾಮ್‌ನ ನೋಡ್ಬೇಕು ಅನ್ಸ್ತಾ ಇದೆ. ಅದಿಕ್ಕೆ ಮಂಗ್ಳೂರಿಗೆ ಹೋಗ್ತಾ ಇದಿನಿ. ಈಗಾಗ್ಲೇ ಅವ್ನಂಗೆ ತಿಳ್ಸಿದಿನಿ. ಒಂದು ವಾರ ಅವ್ನೊಜ್ತೆ ಇದ್ದು ಬರ್‍ತಿನಿ. ನೀನು ಯಾರ್‍ಗು ಹೇಳ್ಬೇಡ.
(ಎಂದು ತನ್ನ ರಹಸ್ಯ ಪ್ರಯಾಣವನ್ನು ತನ್ನ ಗೆಳತಿಯ ಮುಂದೆ ಬಿಚ್ಚಿಡುತ್ತಾನೆ)

ವರೂ : ಶಂಕರ್ ಎಲ್ ಬೇಕಾದ್ರು ಹೋಗು ಲೇಕಿನ್ ಫಟಾಫಟ್ ಬಂದ್ಬಿಡು ಸಾಕು. ನಮ್ ಕೆರಿಯರ್ ಶುರುಮಾಡ್ಕೋ ಬೇಕು. ಇನ್ನೇನ್ ನನ್ ಮೆಡಿಕಲ್ ಇಂಟರ್ನ್‌ಷಿಪ್ ಮುಗಿತಾ ಬಂತು. ನಿನ್ ಪಾಸ್‌ಪೋರ್ಟ್ ಬಂದ್ಬಿಡುತ್ತೆ. ಎನಿವೇ ಎನ್‌ಜಾಯ್ ಯುವರ್ ಟ್ರಿಪ್.
(ಎಂದು ಆತನಿಗೆ ತಮ್ಮ ಮುಂದಿನ ಭವಿಷ್ಯದ ಬಗೆಗಿನ ಯೋಜನೆಗಳನ್ನು ನೆನಪಿಸುತ್ತಾಳೆ. ನಂತರ ಅವನಿಗೆ ಪ್ರೀತಿಯಿಂದ ಮಾಡಿ ತಂದಿರುವ ಇಡ್ಲಿಯನ್ನು ನೀಡುತ್ತಾಳೆ)

ಶಂಕರ್ : ಏನಿದು? ಟ್ರೈನ್‌ನಲ್ಲೆ ಸಿಗುತ್ತೆ ಇದೆಲ್ಲ.

ವರು : ಆದ್ರೆ ನಾನ್ ಮಾಡಿದ್ ಇಡ್ಲಿ ಸಿಗಲ್ವಲ್ಲ

ಶಂಕರ್ : ಓ ಗಾಡ್ ಎವೆರಿಬಡಿ ಇಸ್ ಲುಕಿಂಗ್ ಅಟ್ ಅಸ್. ನಾನೇನ್ ಸ್ಕೂಲ್ ಪಿಕ್ನಿಕ್ ಹೋಗ್ತಿದಿನ ಲಂಚ್ ಬಾಕ್ಸ್ ಕೊಡೋಕೆ?

ವರೂ : ಲಂಚ್ ಅಲ್ಲ ಲಂಚ ಅಂದ್ಕೊ

ಶಂಕರ್ : ಲಂಚ? ಲಂಚ ಕ್ಯೂ?

ವರೂ : ಅರೆ ಬುದ್ದೂ ಇದನ್ ತಿನ್ನೋ ತನ್ಕನಾದ್ರು ನನ್ ನೆನ್ಪಿರ್‍ಲಿ ಅಂತ

ಶಂಕರ್ : ಅರೆ ಪಗ್ಲೀ. ನನ್ ಮನ್ಸಲ್ಲಿ ನೀನ್ ಯಾವಾಗ್ಲೂ ಇರ್ತೀಯ

| | | |
|---|---|---|
| ವರೂ | : | ಅಂಗೂಠಿ ಕಾ ಕಮಾಲ್. |
| ಶಂಕರ್ | : | ವರೂ, ಟೇಕ್ ಕೇರ್ ಆಫ್ ದಿಸ್ ಅಂಗೂಟಿ. (ಎಂದು ಇಬ್ಬರೂ ಉಂಗುರಕ್ಕೆ ಮುತ್ತನ್ನಿಡುವರು, ಅಷ್ಟರಲ್ಲಿ ರೈಲ್ವೆ ಸಿಗ್ನಲ್ ಸದ್ದು ಕೇಳಿಸಿ) |
| ವರೂ | : | ಶಂಕರ್ ಟೈಮ್ ಆಯ್ತು. ಬೇಗ ಹತ್ತು. |
| ಶಂಕರ್ | : | ಓಕೆ ಲವ್ ಯೂ. |
| ವರೂ | : | ಕಮ್ ಸೂನ್, ಬಾಯ್ ಟೇಕ್ ಕೇರ್. (ಟ್ರೈನ್ ಹೊರಡುವುದು. ಶಂಕರ್ ಮತ್ತು ವರೂ ಪರಸ್ಪರ ಪ್ರೀತಿಯಿಂದ ಬೀಳ್ಕೊಡುವರು. ವರೂವಿನ ಚಿತ್ರಿಕೆಯ ಮೇಲೆ ದೃಶ್ಯ ಕೊನೆಗೊಳ್ಳುವುದು) |

**ನಿರ್ದೇಶಕರ ಟಿಪ್ಪಣಿ:**

**ಶಂಕರನನ್ನು ತನ್ನ ಅಣ್ಣನ ಮನೆಗೆ ಕಳುಹಿಸುವ ತಾಯಿಯ ಇಚ್ಛೆಯನ್ನು ಆ ಕ್ಷಣಕ್ಕೆ ಒಪ್ಪದಂತೆ ಮಾಡಿದರೂ ಬಾಂಬೆಗೆ ಹೋಗುತ್ತೇನೆಂದು ಸುಳ್ಳುಹೇಳಿ ಮಂಗಳೂರಿಗೆ ಹೋಗುತ್ತಾನೆ ಈ ವಿಷಯವನ್ನು ಶಂಕರ ಕೇವಲ ವರೂಗೆ ಮಾತ್ರ ಹೇಳುತ್ತಾನೆ. ಶಂಕರನ ಮೊತ್ತಮೊದಲ ನಡೆ ಕರ್ನಾಟಕದೆಡೆಗೆ ಪ್ರಾರಂಭವಾಗುತ್ತದೆ.**

# ದೃಶ್ಯ–18

***ಹಗಲು–ಮುದ್ರಾಡಿಯ ಹೊರಭಾಗ***

(ಶಂಕರ ದೆಹಲಿಯಿಂದ ಬರುವ ಪಯಣಿಸಿದ ರೈಲು ಹಾಗೂ ಮಲೆನಾಡಿನಲ್ಲಿ ಸಂಚರಿಸುವ ಬಸ್ಸು ಶಂಕರನನ್ನು ಸೀತಾರಾಮನ ಊರಾದ ಮುದ್ರಾಡಿಗೆ ತಂದು ಬಿಡುತ್ತದೆ. ಅಲ್ಲಿ ಒಂದು ಸಂತೆಯ ವಾತಾವರಣ ಅದನ್ನು ಗಮನಿಸುತ್ತ ಶಂಕರ ಸೀತಾರಾಮನಿಗಾಗಿ ಹುಡುಕಾಡುತ್ತಾನೆ.)



*ಹಸ್ತಪ್ರತಿಯಲ್ಲಿ: (ಚಲನಚಿತ್ರದಲ್ಲಿ ಇಲ್ಲ)*

| | | |
|---|---|---|
| *ಶಂಕರ* | : | *ತಿನ್ನು*<br>*(ಎಂದು ಸೀತಾರಾಮನ ತಂಗಿಗೆ ಕೊಡುತ್ತಾನೆ ನಂತರ ಸೀತಾರಾಮ)* |
| *ಸೀತಾರಾಮ* | : | *ಅದೇ ನೋಡು ಮುದ್ರಾಡಿ* |
| *ಶಂಕರ* | : | *ಬ್ಯೂಟಿಫುಲ್! ವಾವ್! ಕ್ಯಾ ಜಗಹ್ ಹೈ! ಈ ಸ್ವರ್ಗಾನ ಬಿಟ್ಟು ಯಾಕ್ರೋ ನೀವೆಲ್ಲ ನಗರ ಅನ್ನೋ ನರಕಕ್ಕೆ ಬರ್ತೀರಿ?* |
| *ಸೀತಾರಾಮ* | : | *ಇರು ಇರು ಗೊತ್ತಾಗುತ್ತೆ*<br>*(ನಂತರ) ..ಅದ್ ನೋಡು ನನ್ ತಮ್ಮ ಕೃಷ್ಣ. ಎಲೆಕ್ಟ್ರಿಕಲ್ ಡಿಪ್ಲೋಮಾ ಮಾಡಿದಾನೆ. ಮೂರು ಗದ್ದೆ ಆಚೆ ನಮ್ಮ ಮನೆ. ಕಾರ್ಕಳದ ಕಡೆಯಿಂದ ಬಸ್ಸಲ್ಲೂ ಬರಬಹುದು. ಇದು ಶಾರ್ಟ್‌ಕಟ್.* |

| | | |
|---|---|---|
| ಸೀತಾರಾಮ್ | : | ಶಂಕ್ರ, ಏಯ್ ಶಂಕ್ರ<br>(ಸೀತಾರಾಮ್‌ನನ್ನು ಗಮನಿಸುವ ಶಂಕರ ಓಡಿಬಂದು ತಬ್ಬಿಕೊಳ್ಳುತ್ತಾನೆ) |
| ಶಂಕರ್ | : | ಹಾಯ್ ಸೀತು |
| ಸೀತಾರಾಮ್ | : | ವೆಲ್‌ಕಮ್ ಟು ಕರ್ನಾಟಕ ವೆಲ್‌ಕಮ್ ಟು ಮುದ್ರಾಡಿ |
| ಶಂಕರ್ | : | ಥ್ಯಾಂಕ್ಯೂ<br>(ನಂತರ ಅಲ್ಲಿನ ಜನಜಂಗುಳಿಯನ್ನು ನೋಡಿ)<br>ಕ್ಯಾ ಹೇ ಯೇ ಸಬ್? |
| ಸೀತಾರಾಮ್ | : | ಓ ಕನ್ನಡ ಕಲ್ತಿದ್ದು ಬರಿ ವರಲಕ್ಷ್ಮೀ ಹತ್ರ ಮಾತಾಡ್ಲಿಕ್ಕ? ನಮ್ ಜೊತೆ ಮಾತಾಡ್ಲಿಕ್ಕಲ್ವ?<br>(ಎಂದು ಶಂಕರ ಕನ್ನಡವನ್ನು ಮಾತಾಡದೆ ಹಿಂದಿಯಲ್ಲಿ ಮಾತನಾಡಿದ್ದನ್ನು ನೋಡಿ ಸೀತು ಛೇಡಿಸುತ್ತಾನೆ) |
| ಶಂಕರ್ | : | ಓಕೆ ಏನಿದೆಲ್ಲ? |
| ಸೀತಾರಾಮ್ | : | ಸಂತೆ ಇದೋ |
| ಶಂಕರ್ | : | ಸಂತೆ? ಹಾಗಂದ್ರೆ? |
| ಸೀತಾರಾಮ್ | : | ಬಜಾರ್. ವಾರಕ್ಕೊಂದ್ಸಲ ಈ ಸಂತೆ ನಡಿಯುತ್ತೆ.<br>(ಸಂತೆಯ ಆಗು ಹೋಗುಗಳನ್ನು ಗಮನಿಸುವ ಶಂಕರನಿಗೆ ಹೊಸದೊಂದು ಲೋಕ ತೆರೆದುಕೊಳ್ಳುತ್ತದೆ. ಪ್ರಥಮಬಾರಿಗೆ ಮಲೆನಾಡಿನ ಹಳ್ಳಿಯೊಂದರ ಪುಟ್ಟ ಬಜಾರ್ ಅವನನ್ನು ಆಕರ್ಷಿಸುತ್ತದೆ.) |

## ದೃಶ್ಯ–19

*ಹಸ್ತಪ್ರತಿಯಲ್ಲಿ: (ಚಲನಚಿತ್ರದಲ್ಲಿ ಇಲ್ಲ)*
*ಹಗಲು–ಹೊರಾಂಗಣ–ಮುದ್ರಾಡಿ ಹಾದಿ*

| | | |
|---|---|---|
| *ಕೃಷ್ಣ* | : | *ಅಯ್ಯೋ ರಾಮ! ಬೂಟ್ ತೆಗೆದಿಡ್ ಬೇಕಿತ್ತು. ಕೊಚ್ಚೆ ಆಗಿ ಹೋಯ್ತು* |
| *ಶಂಕರ* | : | *ಆಗ್ಲಿ, ಆಗ್ಲಿ. ಅದ್ರ ಪುಣ್ಯ ಇಲ್ದಿದ್ರೆ ಇಷ್ಟ್ ದಿನ ಬರೇ ಪೆಟ್ರೋಲು, ಮಸಿ, ಟಾರು ರುಚಿ ಮಾತ್ರ ಗೊತ್ತಿತ್ತು ಅದಕ್ಕೆ ಕೈಸೇ ಹೋ ಕೃಷ್ಣ?* |
| *ಕೃಷ್ಣ* | : | *ಚೆನ್ನಾಗಿದ್ದಿನಿ. ನೀವು ಕಳಿಸಿದ್ದ ಜೇನ್ಸೂ ಚೆನ್ನಾಗಿದೆ.* |
| *ಸೀತಾರಾಮ* | : | *ಚಲೋ ಚಲೋ ಯಾರ್. ಅಮ್ಮ ಕಾಯ್ತಿದಾರೆ. ಮನೇಲಿ ಬಿಸಿ ಬಿಸಿ ಕುಚ್ಚಲಕ್ಕಿ ಗಂಜಿ ಕಾಯ್ತಾ ಇದೆ.* |
| *ಕೃಷ್ಣ* | : | *ಕಾಯ್ತಾ ಇಲ್ಲ. ಕುದೀತಾ ಇದೆ.* |

**ನಿರ್ದೇಶಕರ ಟಿಪ್ಪಣಿ:**
**ಕಾದಂಬರಿಯಲ್ಲಿ ಸೀತಾರಾಮನ ತಮ್ಮ ತಂಗಿ, ಅಪ್ಪ–ಅಮ್ಮ ಹಲವು ಪಾತ್ರಗಳು ಇದ್ದರೂ ಚಿತ್ರಕಥೆಯಲ್ಲಿ ಬಳಕೆಯಾಗುವ ಕೆಲವೇ ಪಾತ್ರಗಳಿಗೆ ಸೀಮಿತ ಮಾಡಿಕೊಳ್ಳಲಾಯಿತು. ಈ ನಿಟ್ಟಿನಲ್ಲಿ ಕೆಲವು ಪಾತ್ರ ಹಾಗೂ ಸಂಭಾಷಣೆಗಳು ಚಿತ್ರದಲ್ಲಿ ಇಲ್ಲ.**

## ದೃಶ್ಯ–20

***ಹಗಲು–ಸೀತಾರಾಮನ ಮನೆಯ ಒಳಗೆ***

(ದಕ್ಷಿಣ ಕನ್ನಡದ ಮಂಗಳೂರು ಹೆಂಚಿನ ಮುದ್ರಾಡಿಯ ಮನೆ ಮತ್ತು ಅದರ ವಾತಾವರಣ ಶಂಕರನನ್ನು ಆತ್ಮೀಯವಾಗಿ ಸ್ವಾಗತಿಸುತ್ತದೆ. ಸ್ನೇಹಿತನ ಮನೆಯವರೆಲ್ಲರಿಂದ ಶಂಕರನಿಗೆ ಆದರೋಪಚಾರಗಳು ನಡೆಯುತ್ತವೆ. ಸೀತಾರಾಮ ಊಟದ ಬಗೆಗೆ ವಿವರವನ್ನು ನೀಡುತ್ತ ತನ್ನ ಸ್ನೇಹಿತನಿಗೆ ಚೆನ್ನಾಗಿ ಊಟಮಾಡುವಂತೆ ಹೇಳುತ್ತ ಅವನನ್ನು ಛೇಡಿಸುತ್ತಿರುತ್ತಾನೆ)

ಸೀತಾರಾಮ್ : ನೋಡಪ್ಪ ಇದೆಲ್ಲ ಡೆಲ್ಲಿಲ್ ಸಿಗಲ್ಲ ಚೆನ್ನಾಗ್ ಹಾಕ್ಕೊಂಡು ತಿಂದ್ಬಿಡು. ಪ್ರವಾಸದ್ ಆಯಾಸ ಎಲ್ಲ ಇಳ್ದೋಗತ್ತೆ. ಅನ್ನದ್ ಜೊತೆ ಬಸಳೆ ಸೊಪ್ಪಿನ್ ಸಾಂಬಾರು ರುಚಿ ರುಚಿಯಾಗಿರುತ್ತೆ.

ಸೀತಾರಾಮ್ ತಾಯಿ : ಪಾಪ ಯಾಕೋ ಒತ್ತಾಯ ಮಾಡ್ತೀಯ? ಅವನ್ಗೇನಿಷ್ಟವೂ ಅದನ್ ತಿನ್ಲಿ.

ಶಂಕರ್ : ಛೆ ಛೆ ಇಟ್ಸ್ ವಂಡರ್‌ಫುಲ್. ನಾನು ಸೀತಾರಾಮ್ ರೂಮ್‌ಮೇಟ್ ಆಗಿದ್ದಾಗ್ಲೇ ನಿಮ್ಮ ಕೈ ರುಚಿ ಗೊತ್ತು. ಅವನ್ಜೊತೆ ಕಳ್ಸ್ತಾಯಿದ್ದ ಕುರುಕ್‌ತಿಂಡಿ ಆದಿರಸ, ಜೋನಿ ಬೆಲ್ಲ, ವೋ ಪಾನ್ಸೆ ಬನಾಯೆ ವೋ ಕ್ಯಾ ಹೇ?

ಸೀತಾರಾಮ್ : ಪತ್ರೊಡೆ

ಶಂಕರ್ : ಹ್ಞಾಂ ಪತ್ರೋಡೆ

ಸೀತಾರಾಮ್ ತಾಯಿ : ಓ ಪತ್ರೊಡೆಯ

ಶಂಕರ್ : ಇದನ್ನೆಲ್ಲ ನಾನೆ ಮುಗ್ಸ್ತಾ ಇದ್ದೆ.

(ಇದನ್ನ ನೋಡುತ್ತಿದ್ದ ಸೀತಾರಾಮ್ ತಂದೆ ಮಧ್ಯ ಪ್ರವೇಶಿಸಿ)

ಸೀತಾರಾಮ್ ತಂದೆ : ಹ್ಞಾಂ ಗಡದ್ದಾಗ್ ಊಟ ಮಾಡಿ. ಹೊಟ್ಟೇಗೇನಾದ್ರು ಆದ್ರೆ ಔಷಧಿ ನಾನ್ ಕೊಡ್ತೀನಿ. ಇದು ಆಯುರ್ವೇದ ಪಂಡಿತರ ಮನೆ.

ಸೀತಾರಾಮ್ ತಾಯಿ : ಹ್ಞಾಂ ನಮ್ ಮಾವ ಔಷಧಿ ಬೇರುಗಳನ್ನು ಹುಡುಕ್ಕೊಂಡು ಕಾಲ್ನಡಿಗೆಯಲ್ಲೇ ಬೆಟ್ಟ ಕಾಡುಗಳ್ನ ಸುತ್ತುತಾ ಇದ್ರಂತೆ ಆಗುಂಬೆ, ಬಂಗಾಡಿ, ಚಾರ್ಮಾಡಿ (ಬಂಗಾಡಿ ಹೆಸರು ಕೇಳುತ್ತಲೆ ಶಂಕರನಿಗೆ ತಿನ್ನುತ್ತಿದ್ದ

ಊಟ ನೆತ್ತಿಗೇರುತ್ತದೆ. ಕೆಮ್ಮಲು ಪ್ರಾರಂಭಿಸುತ್ತಾನೆ)

ಸೀತಾರಾಮ್ ತಂದೆ : ಹೇ ನೀರ್ ಕುಡ್ಸೋ
(ಎಂದು ತಮ್ಮ ಮಗನಿಗೆ ಸಲಹೆ ನೀಡುತ್ತಾರೆ

ಸೀತಾರಾಮ್ : ಮೇಲ್ನೋಡೋ

ಶಂಕರ್ : ಅದು ಏನೋ ಬಂಗಾಡಿ

ಸೀತಾರಾಮ್ ತಾಯಿ : ಹ್ಞಾಂ ಬಂಗಾಡಿ

ಶಂಕರ್ : ಬಂಗಾಡಿ ಅದು ಜಾಗಾನ?
(ಅದು ಒಂದು ಜಾಗವೇ ಎಂದು ಆಶ್ಚರ್ಯವಾಗಿ ಅವರನ್ನು ಕೇಳುತ್ತಾನೆ)

ಸೀತಾರಾಮ್ ತಾಯಿ : ಹ್ಞಾಂ ಅಲ್ಲಿ ನಮ್ ಸಂಬಂಧಿಕರ್‍ರು ಇದ್ರಂತೆ ನಾನ್ ಚಿಕ್ಕವಳಿದ್ದಾಗ ಓಡಾಡಿದ ನೆನಪು.
(ಸೀತಾರಾಮ್ ತಂದೆಗೆ) ಇಗೋಳಿ ಆ ಬಂಗಾಡಿ ಎಲ್ಲಿ ಬಂತು?
(ಶಂಕರ ತನ್ನ ತಂದೆಯ ಮೂಲಕ ತನ್ನ ಮೂಲವನ್ನು ಅಸ್ಪಷ್ಟವಾಗಿ ತಿಳಿದಿದ್ದರಿಂದ ಮತ್ತು ಇಲ್ಲಿ ಅದರ ಬಗೆಗೆ ಸ್ಪಷ್ಟ ವಿವರವೊಂದು ಸಿಕ್ಕಾಗ ಅದರ ಆತ್ಮಸಂತೋಷದಲ್ಲಿ ಬಂಗಾಡಿಯ ಬಗ್ಗೆ ಯೋಚಿಸತೊಡಗುತ್ತಾನೆ. ಒಂದು ಹೊಸ ಸಂಶೋಧನೆಯ ಅಲೆ ಅವನಲ್ಲಿ ಮೂಡತೊಡಗುವ ಭಾವದೊಂದಿಗೆ ದೃಶ್ಯ ಇಲ್ಲಿ ಮುಕ್ತಾಯವಾಗುತ್ತದೆ.)



*ಹಸ್ತಪ್ರತಿಯಲ್ಲಿ: (ಚಲನಚಿತ್ರದಲ್ಲಿ ಇಲ್ಲ)*

*ಸೀತಾರಾಮ್ ತಾಯಿ : ನಮ್ಮ ಎಳಚಿತ್ತಾಯಣ್ಣ ಬಂಗಾಡೀಲೇ ಇರೋದಲ್ವಾ?*

*ಶಂಕರ : ಬಂಗಾಡಿ ನಿಜಕ್ಕೂ ಇದೆಯಾ? ಅಮ್ಮ ಅದು ನಮ್ಮಜ್ಜನ*

| | | |
|---|---|---|
| | | *ಹುಟ್ಟೂರು, ನಾನದನ್ನ ನೋಡ್ಬೇಕು. ನಂಗೆ ದಾರಿ ತೋರ್ಸಿ* |
| *ಸೀತಾರಾಮ್ ತಂದೆ* | : | *ಕೂತ್ಕೋ ಮಗಾ ಊಟಾ ಮುಗ್ಸು. ನಮ್ಮ ಭಂಗ ಮಾಷ್ಟ್ರು ಇದಾರಲ್ಲ ಅವರಿಗೆ ಭೂಪಟಾನು ಗೊತ್ತು, ಇತಿಹಾಸಾನು ಗೊತ್ತು. ಸಂಜೆ ಹೋಗಿ ಕೇಳಿಕೊಂಡು ಬನ್ನಿ* |
| *ಶಂಕರ* | : | *ಸಂಜೆ ಬೇಡ. ಅಭೀ ಜಾಯೆಂಗೆ. ಸೀತಾರಾಮ್ ಪ್ಲೀಸ್* |

# ದೃಶ್ಯ–21

*ಹಸ್ತಪ್ರತಿಯಲ್ಲಿ: (ಚಲನಚಿತ್ರದಲ್ಲಿ ಇಲ್ಲ)*
*ಹಗಲು–ಮುದ್ರಾಡಿಯ ಶಾಲೆ*

*(ಊರಿನ ಶಾಲೆಯಲ್ಲಿ ಪಾಠ ಮಾಡುತ್ತಿರುವ ಭಂಗ ಮಾಸ್ತರರು ಸೀತಾರಾಮ ಮತ್ತು ಶಂಕರ ಬರುತ್ತಿರುವುದನ್ನು ನೋಡಿ ಪರಿಶೀಲನಾ ಪೋಲೀಸರು ಬಂದರೆಂದು ಗಾಬರಿಗೊಂಡು)*

*ಭಂಗ : ಹೋಯ್ ಇನ್ಸ್‌ಪೆಕ್ಟ್ರು*
*(ಗಾಬರಿಗೊಂಡು. ನಂತರ ಮಕ್ಕಳತ್ತ ತಿರುಗಿ)*
*.. ಮಕ್ಕಳೇ ಇತ್ತ ಕಡೆ ನೋಡಿ. ಅತ್ತಕಡೆಯಿಂದ ಇನ್ಸ್‌ಪೆಕ್ಟ್ರು ಬರ್‍ತಿದಾರೆ. ಶಾಂತವಾಗಿ ಉತ್ತರಿಸಿ. ನಮ್ಮ ರಾಜ್ಯದಲ್ಲಿ ಎಷ್ಟೊಂದು ರಾಜ್ಯಗಳಿದಾವೆ? ಅಲ್ಲಲ್ಲ ಎಷ್ಟೊಂದು ನದಿಗಳು ಇದ್ದಾವೆ?*

*ಸೀತಾರಾಮ : ಭಂಗ ಮಾಷ್ಟ್ರೆ, ಸಾರಿ. ಡಿಸ್ಟರ್ಬ್ ಮಾಡ್ತಿದಿನಿ. ನಾನು ಸೀತಾರಾಮ ಪಂಡಿತರ ಮಗ. ಬನಾರಸ್‌ನಲ್ಲಿ ಓದ್‌ತಿದ್ದೆ. ನನ್ನ ಗೆಳೆಯ ದಿಲ್ಲಿಯಿಂದ ಬಂದಿದಾನೆ. ನಿಮ್ಮಿಂದ ಒಂದು ಸಹಾಯ ಆಗ್ಬೇಕಿತ್ತು.*

*ಭಂಗ : ಹ್ವಾಯ್, ನೀವು ಇನ್ಸ್‌ಪೆಕ್ಟರ್ ಅಲ್ಲವೋ? ಹಾಗೆ ಹೇಳಿ ಮತ್ತೆ. ಮಕ್ಕಳೇ ಇವರು ಇನ್ಸ್‌ಪೆಕ್ಟ್ರು ಅಲ್ಲ ಇವರು ಒಳ್ಳೆಯ ಜನ. ನಮ್ಮ ಅತಿಥಿಗಳು. ಇವರಿಗೆ ನಮಸ್ಕಾರ ಮಾಡಿ.*

*ಮಕ್ಕಳು : ನಮಸ್ಕಾರ*

*ಭಂಗ : ಈಗ ಎಲ್ಲ ಆಟಕ್ಕೆ ಓಡಿ*
*(ಮಕ್ಕಳು ಹೋ ಎಂದು ಓಡಿಹೋಗುವರು)*

# ದೃಶ್ಯ–22

*ಹಸ್ತಪ್ರತಿಯಲ್ಲಿ: (ಚಲನಚಿತ್ರದಲ್ಲಿ ಇಲ್ಲ)*
*ಹಗಲು–ಹೊರಾಂಗಣ–ಶಾಲೆ*

*(ಭಂಗ ಮಾಸ್ತರರು ಹರಕು ನಕಾಶೆಯನ್ನು ಹರಡಿಕೊಂಡು ಬಂಗಾಡಿಯನ್ನು ಹುಡುಕುತ್ತಿದ್ದಾರೆ.)*

*ಭಂಗ : ಬೆಳ್ತಂಗಡಿ, ಬೆಳ್ತಂಗಡಿ. ಅರೆ ಮೊನ್ನೆ ಬೆಳ್ತಂಗಡಿ ಇಲ್ಲೇ ಇತ್ತಲ್ಲ ಮಾರಾಯ.. ಈಗೆಲ್ಲಿ? ನಾಪತ್ತೆ!*

*ಸೀತಾರಾಮ : ಬೆಳ್ತಂಗಡೀನಾ ಗೆದ್ದಲು ತಿಂದು ಬಿಟ್ಟಿದೆ ಮಾಷ್ಟ್ರೆ. ಈ ಕಡೆ ಬನ್ನಿ*

*ಭಂಗ : ಹ್ಹಾಂ ಇದು ಸೀತಾ ನದಿ. ಇದನ್ನು ಹಿಡಿದೇ ಹೊರಡುವ. ನಾವು ಇರೋ ಜಾಗ ಮುದ್ರಾಡಿ ಅಲ್ಲವೋ? ಅದನ್ನು ಮೊದಲು ಹಿಡಿಯುವಾ. ಅರೆ ಫಟ್ಟ! ಮುದ್ರಾಡಿಯೇ ಇಲ್ಲವಲ್ಲ ಮಾರಾಯ್ರೆ. ನಾವಿದ್ದದ್ದು ಎಲ್ಲಿ ಹಾಗಾದರೆ?*

*ಶಂಕರ : ಡೋಂಟ್ ವರಿ ಸರ್ ನೋಡಿ. ಇದು ಮುದ್ರಾಡಿ ತಾನೆ? ಇದೆ.*

*ಭಂಗ : ಇಲ್ಲಿ ಯಾಕಿಲ್ಲ?*

*ಶಂಕರ : ಬಂಗಾಡಿ, ಬಂಗಾಡಿ ಎಲ್ಲಿದೆ?*

*ಭಂಗ : ಹ್ಹೂಂ ಅಜೆಕಾರು ಇಲ್ಲುಂಟು. ಇದು ಕಾಂತಾವರ. ಈ ಕಡೆ ಸೋಮೇಶ್ವರ. ಹ್ಹಾಂ ಆಗುಂಬೆ ಮಾತ್ರ ಒಂಚೂರೂ ಹಾಳಾಗಿಲ್ಲ ನೋಡಿ*

*ಸೀತಾರಾಮ : ಅದು ಘಟ್ಟ ಅಲ್ವ? ಹತ್ತೋದ್ ಕಷ್ಟ ಅಂತ ಗೆದ್ಲು ಹಾಗೆ ಬಿಟ್ಟಿರ್ಬೇಕು*

*ಭಂಗ : ನೀವು ಒಳ್ಳೆ ಕುಶಾಲು*

*ಶಂಕರ : ಸರ್ ಬಂಗಾಡಿ*

*ಭಂಗ : ಬಂಗಾಡಿ. ಹಾಗೆ ಹೇಳಿ ಮತ್ತೆ! ಅದು ನಮಗೆ ಬೇಕಾದ ಊರಪ್ಪ. ನನ್ನ ಹೆಸರು ನೇಮಿರಾಜ ಭಂಗ. ಜೈನರು ನಾವು. ಭಂಗವಾಡಿ ಅದು. ನಮ್ಮದೊಂದು ಬಸದಿಯೂ ಅಲ್ಲಿದೆ. ಈ ಭಂಗವಾಡಿ ಕ್ರಮೇಣ ಜನರ ನಾಲಗೆಯಲ್ಲಿ ಬಂಗಾಡಿ ಆಯ್ತಂತೆ. ಒಂದು ಕಾಲದಲ್ಲಿ ದಟ್ಟ ಕಾಡು. ಈಗೇನಾಗಿದೆಯೋ ಗೊತ್ತಿಲ್ಲ. ಹೋಗೋದು ಭಾಳ ಕಷ್ಟ. ಅಬ್ಬ ಅಂದ್ರೆ ಒಂದ್ ನಾಲ್ಕೈದು ಮನೆ ಇರ್ಬಹುದು ಅಷ್ಟೆ. ಸೀತಾನದಿಯ ಸೆರಗಲ್ಲೇ ಇದೆ ಅದು. ಇಕೋ ನೋಡಿ ಇದು ಆ ನದಿಯ ದೊಡ್ಡ ತಿರುವು. ಇಲ್ಲಿ ಅದರ*

*ಆಳ ಕಮ್ಮಿ. ಇಲ್ಲಿ ದಾಟಿ ಆಚೆ ಹೋದರೆ ಎಡಕ್ಕೆ ಒನಕೆ ಅಬ್ಬಿ ಜಲಪಾತ. ಅಲ್ಲಿ ನಿಂತು ಬಲಕ್ಕೆ ತಿರುಗಿದರೆ ಇಗೋ ನಿಮ್ಮ ಬಂಗಾಡಿ.*

**ನಿರ್ದೇಶಕರ ಟಿಪ್ಪಣಿ:**
**ದೃಶ್ಯ 21 ಮತ್ತು 22ರಲ್ಲಿ ಬರುವ ಭಂಗ ಮಾಸ್ತರರ ಪ್ರಸಂಗ ಅನವಶ್ಯಕವಾಗಿ ಮತ್ತೊಂದು ಪಾತ್ರದ ಸೃಷ್ಟಿ ಮತ್ತು ಬೆಳವಣಿಗೆಗೆ ಕಾರಣವಾಗಿದ್ದರಿಂದ ಈ ಪಾತ್ರವನ್ನು ತಗೆದುಹಾಕಿ, ಆ ಪಾತ್ರದ ಆಶಯಗಳನ್ನು ಸೀತಾರಾಮನ ತಂದೆಯ ಪಾತ್ರವಾದ ಪಂಡಿತರ ಪಾತ್ರಕ್ಕೆ ಪೋಷಿಸಲಾಯಿತು**

# ದೃಶ್ಯ–23

***ಹಗಲು–ಸೀತಾರಾಮನ ಮನೆಯ ಒಳಗೆ***

| | | |
|---|---|---|
| | | (ಹರಿದ ನಕಾಶೆಯನ್ನು ತಗೆದುಕೊಂಡು ಬಂಗಾಡಿಗಾಗಿ ಪರಿಶೀಲಿಸುತ್ತಿರುವ ಸೀತಾರಾಮ್, ಅವನ ತಂದೆ ಮತ್ತು ಅವರನ್ನು ಸುತ್ತುವರೆದಿರುವ ಎಲ್ಲರು) |
| ಅಪ್ಪ | : | ಅರೆ ಪಡ್ಚ್ಯಾ, ಮುದ್ರಾಡಿನೆ ಇಲ್ವಲ್ಲೋ. ಹ್ವಾಂ ನಾವಿರೋದ್ ಎಲ್ಲಿ ಹಾಗಾದ್ರೆ? (ಎಂದು ಗೊಂದಲಮಯವಾಗಿ ಹೇಳುತ್ತಾರೆ) |
| ಶಂಕರ್ | : | ಅಂಕಲ್ ನಾವು ಇರೋದು ಮುದ್ರಾಡಿ. ಇದೆ ತಾನೆ. |
| ಸೀತಾರಾಮ್ ತಂದೆ | : | ಇಲ್ಲಿ ಯಾಕಿಲ್ಲ? |
| ಸೀತಾರಾಮ್ | : | ಗೆದ್ಲು, ಗೆದ್ಲು ಗುಳುಮ್ ಮಾಡ್ಬಿಟ್ಟಿವೆ. (ಎಲ್ಲರೂ ನಗುತ್ತಾರೆ ನಂತರ ಶಂಕರ ಅವನನ್ನು ಎಚ್ಚರಿಸಿದಾಗ) .. ಬಂಗಾಡಿ ತೋರ್ಸ್ಲೀಪ |
| ಸೀತಾರಾಮ್ ತಂದೆ | : | ಆಗುಂಬೆ ಇದೆ ನೋಡಿ ಒಂಚೂರು ಹಾಳಾಗಿಲ್ಲ. |
| ಸೀತಾರಾಮ್ | : | ಬೆಟ್ಟ ಘಾಟ್ ಅಲ್ವ ಹತ್ತೋದ್ ಕಷ್ಟ ಅಂತ ಗೆದ್ಲು ಹಾಗೆ ಬಿಟ್ಟಿರ್ಬೇಕು (ಎಲ್ಲರೂ ಮತ್ತೆ ನಗುತ್ತಾರೆ) .. ಹುಡ್ಕಿ ಬೇಗ |
| ಶಂಕರ್ | : | ಅಂಕಲ್ ಬಂಗಾಡಿ ಪ್ಲೀಸ್ (ಹಿನ್ನಲೆಯಲ್ಲಿ ಪಂಡಿತರು ಬಂಗಾಡಿಯ ಬಗೆಗೆ ಮಾಹಿತಿಯನ್ನು ನೀಡುತ್ತಿರುವಂತೆಯೇ ಬಂಗಾಡಿಯ ಪ್ರಾಕೃತಿಕ ಸೌಂದರ್ಯವನ್ನು ಹಲವಾರು ಚಿತ್ರಿಕೆಗಳ ಮೂಲಕ ಸೆರೆಹಿಡಿದು ಅದರ ಸೊಬಗನ್ನು ವಿವರಿಸುವ ಪ್ರಯತ್ನ ಮಾಡಲಾಗಿದೆ.) |

***ಹಸ್ತಪ್ರತಿಯಲ್ಲಿ: (ಚಲನಚಿತ್ರದಲ್ಲಿ ಇಲ್ಲ)***

| | | |
|---|---|---|
| *ಭಂಗ* | *:* | ***ಬಂಗಾಡಿ. ಹಾಗೆ ಹೇಳಿ ಮತ್ತೆ! ಅದು ನಮಗೆ ಬೇಕಾದ ಊರಪ್ಪ. ನನ್ನ ಹೆಸರು ನೇಮಿರಾಜ ಭಂಗ. ಜೈನರು ನಾವು. ಭಂಗವಾಡಿ ಅದು. ನಮ್ಮದೊಂದು ಬಸದಿಯೂ ಅಲ್ಲಿದೆ. ಈ ಭಂಗವಾಡಿ ಕ್ರಮೇಣ ಜನರ ನಾಲಗೆಯಲ್ಲಿ ಬಂಗಾಡಿ ಆಯ್ತುಂತೆ. ಒಂದು ಕಾಲದಲ್ಲಿ ದಟ್ಟ ಕಾಡು.*** |

*ಈಗೇನಾಗಿದೆಯೋ ಗೊತ್ತಿಲ್ಲ. ಹೋಗೋದು ಭಾಳ ಕಷ್ಟ. ಅಬ್ಬ ಅಂದ್ರೆ ಒಂದ್ ನಾಲ್ಕೈದು ಮನೆ ಇರ್ಬಹುದು ಅಷ್ಟೆ. ಸೀತಾನದಿಯ ಸೆರಗಲ್ಲೇ ಇದೆ ಅದು. ಇಕೋ ನೋಡಿ ಇದು ಆ ನದಿಯ ದೊಡ್ಡ ತಿರುವು. ಇಲ್ಲಿ ಅದರ ಆಳ ಕಮ್ಮಿ. ಇಲ್ಲಿ ದಾಟಿ ಆಚೆ ಹೋದರೆ ಎಡಕ್ಕೆ ಒನಕೆ ಅಬ್ಬಿ ಜಲಪಾತ. ಅಲ್ಲಿ ನಿಂತು ಬಲಕ್ಕೆ ತಿರುಗಿದರೆ ಇಗೋ ನಿಮ್ಮ ಬಂಗಾಡಿ*

# ದೃಶ್ಯ–24

***ಹಗಲು–ಬಂಗಾಡಿಯ ದಾರಿ***

(ಹಿನ್ನಲೆಯಲ್ಲಿ ಸೀತಾರಾಮ್ ತಂದೆ ಬಂಗಾಡಿಯ ಬಗ್ಗೆ ಹೇಳುತ್ತಿರುವ ಮಾತುಗಳು ಬರುತ್ತಿದೆ. ಶಂಕರ ಮತ್ತು ಸೀತಾರಾಮ ನದಿಯನ್ನು ದೋಣಿಯಲ್ಲಿ ದಾಟುತ್ತ, ನಂತರ ಕಾಡಿನ ಹಳ್ಳ ದಿಣ್ಣೆಗಳಲ್ಲಿ ಸೈಕಲ್ ಹೊಡೆಯುತ್ತ ಬಂಗಾಡಿಗೆ ಸಾಗುತ್ತಿದ್ದಾರೆ)

ಸೀತಾರಾಮ್ ತಂದೆ : ದಟ್ಟ ಕಾಡು, ದೊಡ್ಡ ದೊಡ್ಡ ಜಲಪಾತಗಳು ಇಲ್ಲೇ ಇಲ್ಲೇ ನೇತ್ರಾವತಿ ಸೆರಗಿನಲ್ಲೇ ಬಂಗಾಡಿ
(ಶಂಕರ ಮತ್ತು ಸೀತಾರಾಮ ದೋಣಿಯಲ್ಲಿ ಮತ್ತು ಬೈಸಿಕಲ್‌ಗಳಲ್ಲಿ ಬಂಗಾಡಿಗೆ ತೆರಳುತ್ತಿದ್ದಾರೆ)



ಶಂಕರ : ಸೀತಾರಾಮ್, ಈ ನೆಲದಲ್ಲೆ ಎನರ್ಜಿಯಿದೆ. ಈ ಹವೆಯಲ್ಲೆ ಏನೋ ಇದೆ. ಫರ್ಸ್ಟ್ ಟೈಮ್ ನನ್ ಲೈಫ್‌ನಲ್ಲಿ ಉಸಿರು ಆಡ್ತಿದಿನಿ ಅನ್ನಿಸ್ತಾ ಇದೆ.
(ಎಂದು ತನ್ನ ಮನಸಿನ ಮಾತುಗಳನ್ನು ಹೇಳಿಕೊಳ್ಳುತ್ತಾನೆ)

ಸೀತಾರಾಮ : ಶಂಕ್ರ, ಸಿಟಿಯಿಂದ ಬಂದೋರ್ಗೆ ಹೂವು, ಹಸಿರು, ಗಾಳಿ, ಪರ್ವತ ಎಲ್ಲ ಎರೆಡ್ ದಿವ್ಸ ಚೆಂದ ಒಂಥರಾ ಟೂರಿಸ್ಟ್ ಅಟ್ರಾಕ್ಷನ್ ಇದ್ದಾಗೆ. ಒಂದ್‌ವಾರ ಆದ್ಮೇಲೆ ಎಲ್ಲ ಟುಸ್ ಆಗುತ್ತೆ. ಸ್ಲೋಮೋಷನ್‌ನಲ್ ಇದೆ ಅನ್ಸುತ್ತೆ. ಬೋರ್ ಅನ್ಸುತ್ತೆ.
(ಎಂದು ನಗರ ಪ್ರದೇಶದವರ ಮನಸ್ಥಿತಿಯನ್ನು

ವಿವರಿಸುತ್ತ ಅವನ ಉತ್ಸಾಹದ ಬಗ್ಗೆ ಸಂಶಯವನ್ನು ವ್ಯಕ್ತಪಡಿಸುತ್ತಾನೆ)

ಸೀತಾರಾಮ : ಅಬ್ಬ ಸುಸ್ತಾಯ್ತಪ್ಪ. ಬಂಗಾಡಿ ಇದೆ ಅಂತ ಗೊತ್ತಾಯ್ತಲ್ಲ ಮತ್ತ್ ಎಂತ ಬೇಕ್ ನಿಂಗೆ? ಸಾಕು ಬಾರೋ ವಾಪಸ್ ಹೋಗಣ

ಶಂಕರ : ಹೇಯ್ ಇಷ್ಟು ಸಮೀಪ ಬಂದು ನೋಡ್ದೆ ಇದ್ರೆ ಹೆಂಗೆ?

ಸೀತಾರಾಮ : ಓ ಆಯ್ತಪ್ಪ
(ವಾಪಾಸು ಹೋಗುವ ಮಾತನ್ನಾಡುವ ಸೀತಾರಾಮ ಶಂಕರನ ಪಟ್ಟುಬಿಡದ ಉತ್ಸಾಹವನ್ನು ನೋಡಿ ಮುಂದುವರೆಯಲು ಒಪ್ಪಿಕೊಳ್ಳುತ್ತಾನೆ)

*ಹಸ್ತಪ್ರತಿಯಲ್ಲಿ: (ಚಲನಚಿತ್ರದಲ್ಲಿ ಇಲ್ಲ)*

*ಶಂಕರ : ಇಷ್ಟು ಸಮೀಪ ಬಂದು ನೋಡದೇ ಹೋಗು ಅಂತೀಯಾ? ನನ್ನಜ್ಜ, ದತ್ತಣ್ಣ ಅಂತ ಕರೀತಿದ್ರಂತೆ ಅವರನ್ನ.. ನನ್ನ ಅಜ್ಜ ಇದ್ದು ಹೋದ ಜಾಗ ಇದು. ಇಲ್ಲೀ ತನ್ಕ ಬಂದಿದಿನಿ. ಅದನ್ನು ನೋಡೇ ಹೋಗ್ತಿನಿ. ಚಲೋ ಬಂಗಾಡಿ.*

*ಸೀತಾರಾಮ : ಆಯ್ತಪ್ಪ*

*ಶಂಕರ : ಶ್ ಲೆಟ್ ಮಿ ಲಿಸನ್ ಟು ದಿ ಸೈಲೆನ್ಸ್ ಆಫ್ ದಿಸ್ ಪ್ಲೇಸ್. ಈ ಮೌನ ಎಷ್ಟು ಇಂಪಾಗಿದೆ ಅಲ್ವಾ? ಕೇಳಿಸ್ತಾ?*

*ಸೀತಾರಾಮ : (ಎದುರಿಗೆ ಸುರಿಯುತ್ತಿರುವ ಜಲಪಾತವನ್ನು ತೋರಿಸಿ) ಇದೇ ಒನಕೆ ಅಬ್ಬೀ ಮತ್ತೆ ಅಲ್ಲಿ ಅಕೋ ನಿನ್ನ ಬಂಗಾಡಿ*

*ಶಂಕರ : ಬಂಗಾಡಿ... ನನ್ನ ಪೂರ್ವಿಕರು ಇದ್ದು ಹೋದ ಜಾಗವೆ ನೀನು. ಬಹಳ ದೂರದಿಂದ ಬಂದಿದ್ದೇನೆ ಬಂಗಾಡೀ. ನನ್ನನ್ನು ಬರಿಗೈಲಿ ಕಳಿಸಬೇಡ.*

# ದೃಶ್ಯ–25

*ರಾತ್ರಿ–ಬಂಗಾಡಿ–ಎಳಚಿತ್ತಾಯರ ಮನೆಯ ಹೊರಗೆ*

| | | |
|---|---|---|
| | | (ಎಳಚಿತ್ತಾಯರು ಯಾವುದೋ ಹಾಡನ್ನು ಏರುಧ್ವನಿಯಲ್ಲಿ ಹಾಡುತ್ತಾ ಶಂಕರನ ಕಾಲಿಗೆ ಹತ್ತಿರುವ ಜಿಗಣೆಯನ್ನು ತೆಗೆಯುತ್ತಿದ್ದಾರೆ.) |
| ಎಳಚಿತ್ತಾಯರು | : | ..ಮದನೆ ಕೇಳ್ಕೆ ನಿನ್ನ ಸದನಕ್ಕೆ ಬಂದಿಹೆನು ..ನಿನ್ನ ಮನದ ಸದನದಿ ನಿಂತು.. (ಜಿಗಣೆಯನ್ನು ಕಿತ್ತೊಗೆಯುತ್ತಾರೆ) |
| ಶಂಕರ | : | ಹ್ಹಾಂ |
| ಸೀತಾರಾಮ | : | ಏಯ್ ಏನೊ ಇದಕ್ಕೆಲ್ಲ |
| ಎಳಚಿತ್ತಾಯರು | : | ಅಲ್ಲ, ದಿಲ್ಲಿನೆ ಎಲ್ಲಾರ್ ರಕ್ತಾನು ಹೀರುತ್ತಂತೆ ಅಂಥದ್ರಲ್ಲಿ ದಿಲ್ಲಿಯವರಾದ ನಿಮ್ಮ ರಕ್ತಾನೆ ಹೀರ್ತದಲ್ಲ ಈ ದರಿದ್ರ ಜಿಗಣೆ. ಇದಕ್ಕೆಷ್ಟು ಧೈರ್ಯ ಅಂತ. (ಅತ್ತ ಹೋದ ಎಳಚಿತ್ತಾಯರನ್ನು ಗಮನಿಸಿದ ಶಂಕರ ಸೀತಾರಾಮನಿಗೆ) |
| ಶಂಕರ | : | ಸೀತು, ಇದು ಬಂಗಾಡಿನ ಅಂತ ಇನ್ನೊಂದ್ಸಲ ಕೇಳೋ (ಎಂದು ತನ್ನ ಅನುಮಾನವನ್ನು ಬಗೆಹರಿಸಿಕೊಳ್ಳುವ ಪ್ರಯತ್ನ ಮಾಡುತ್ತಾನೆ) |
| ಸೀತಾರಾಮ | : | ಎಳಚಿತ್ತಾಯರೆ, ಇನ್ನೊಂದ್ಸಾರ್ತಿ ಹೇಳ್ಬಿಡಿ ಇದು ಬಂಗಾಡಿ ಅಂತಾನೆ ಇವನ್ಗೆ. ನಮ್ ಪುಣ್ಯ ನಿಮ್ ಮನೆ ಸಿಕ್ಕಿದ್ದು. ಇಲ್ಲಾಂದ್ರೆ ಈ ನಡು ರಾತ್ರೀಲ್ ಎಲ್ಲೆಲ್ ಅಲಿಬೇಕಾಗಿತ್ತೋ ಬಂಗಾಡಿ ಹುಡುಕ್ಕೊಂಡು. (ಎಂದು ಅವನ ಸಂಶಯವನ್ನು ನಿವಾರಿಸುವಂತೆ ಮತ್ತು ಅವರಿಗೆ ಕೃತಜ್ಞತೆ ತಿಳಿಸುವಂತೆ ಹೇಳುತ್ತಾನೆ) |
| ಎಳಚಿತ್ತರಾಯ | : | ಹೌದು ಮಾರಾಯ. ಇದು ಬಂಗಾಡಿನೆ ಹ್ಹಾಂ. ಆದ್ರೆ ನನಿಗೆ ಬುದ್ಧಿ ಬಂದಾಗಿಂದ ಇಲ್ಲಿಂದ ಯಾರೂ ಬೊಂಬಾಯಿಗೆ ಹೋದ ಹಾಗೆ ಇಲ್ವಲ್ಲ. ನಿಮ್ಮ ಅಜ್ಜನ ಹೆಸ್ರು ದತ್ತಾತ್ರೇಯ ಅಂದ್ರಿ ಅಲ್ಲಾ. |
| ಶಂಕರ | : | ದತ್ತಣ್ಣ ಅಂತ ಕರೀತಾ ಇದ್ರಂತೆ |
| ಎಳಚಿತ್ತರಾಯ | : | ಆದ್ರೆ ಆ ಕಾಲಕ್ ಸಂದೋರು ಈಗ್ ಯಾರು ಇಲ್ವಲ್ಲ. (ಶಂಕರ ಮತ್ತು ಸೀತಾರಾಮ ನಿರಾಸೆಗೊಳ್ಳುತ್ತಾರೆ) .. ಮದನೆ ಕೇಳೆಲೆ ನೀರೆ.. ಹ್ಹಾಂ ನಮ್ಮ ಶಾನುಭೋಗರ |

ಮನೆಯಲ್ಲಿ ಅಜ್ಜಿಯುಂಟು
(ಎಂದು ಹಾಡನ್ನ ಆರಂಭಿಸಿ ಏನೋ ಹೊಳೆದು ಹಾಡನ್ನು ನಿಲ್ಲಿಸಿ ಮಾತನ್ನಾಡುತ್ತಾರೆ)

ಶಂಕರ : ಅವ್ರನ್ನ ಕೇಳಿದ್ರೆ ಗೊತ್ತಾಗುತ್ತ?

ಎಳಚಿತ್ತರಾಯ : ಏ ಖಂಡಿತ ಮಾರಾಯ್ರೆ.

ಶಂಕರ : ನಡೀರಿ ಈಗ್ಲೇ ಹೋಗಣ
(ಶಂಕರ ಉತ್ಸಾಹದಿಂದ ಎಳಚಿತ್ತಾಯರ ಕೈ ಹಿಡಿದು ಅವರು ಹೇಳೀದ ಜಾಗಕ್ಕೆ ಕರೆದೊಯ್ಯುವಷ್ಟರಲ್ಲಿ ಎಳಚಿತ್ತಾಯರು ತಡೆದು)

ಎಳಚಿತ್ತರಾಯ : ಏನ್ ಅಂತ ಗಡಿಬಿಡಿ, ಅವಸರ ಯಾಕೆ? ದಣಿದು ಬಂದಿದಿರಿ ಇವತ್ತು ಆರಾಮಾಗ್ ಇರಿ. ನಾಳೆ ಮುಂಜಾನೆ ಹೋದ್ರಾಯ್ತು. ನೋಡಿ ನಮ್ಮ ಮನೆಯಲ್ಲಿ ಫ್ಯಾನು ಗೀನು ಒಂದು ಇಲ್ಲ ನಿಮಗೆ ಸ್ವಲ್ಪ ತೊಂದ್ರೆ ಆಗ್ಬಹುದು. (ಎಂದು ಅಲ್ಲಿನ ಪರಿಸ್ಥಿತಿಯನ್ನು ಅವರಿಗೆ ವಿವರಿಸುತ್ತಾನೆ)
(ತನ್ನ ಹೆಂಡತಿಗೆ) .. ಏನೆ ಎಲೆ ಹಾಕಿದ್ಯ?

ಹೆಂಡತಿ : ಹಾಕಿ ಆಯ್ತು. ಊಟಕ್ಕೆ ಬನ್ನಿ. ನೋಡಿ ನೀವು ಈ ಊರಿಗೆ ಹೊಸಬ್ರು ಕಾಯಿಸಿ ಆರಿಸಿದ ನೀರೆ ಕುಡಿರಿ.

ಸೀತಾರಾಮ : ಹೊಸಬ್ರು ಸರಿ ಆದ್ರೆ ಹಳಬ್ರ ಹುಚ್ಚು. ಯಾವಾಗ್ಲೂ ಮೂಲಾನೆ ಹುಡುಕ್ತಾ ಇರ್ತಾನೆ. ಒಂಥರಾ ಮೂಲವ್ಯಾಧಿ
(ಗಲಿಬಿಲಿಗೊಳ್ಳುವ ಎಳಚಿತ್ತರಾಯರಿಗೆ ಶಂಕರ)

ಶಂಕರ : ಮಝಾಕ್ ಕರ್ ರಹಾ ಹೈ, ಜೋಕ್ ಮಾಡ್ತಿದಾನೆ.

ಎಳಚಿತ್ತಾಯರು : ಬೇಗ ಬನ್ನಿ ಬೇಗ ಬನ್ನಿ
(ಮೂಲವ್ಯಾಧಿ ಎಂದೊಡನೆ ಎಳಚಿತ್ತಾಯರು ಅವಾಕ್ಕಾಗುತ್ತಾರೆ. ಥೇಡನೆಗೊಳಗಾಗುವ ಶಂಕರನೇ ಅವರಿಗೆ ಸೀತಾರಾಮ ಮಾಡಿದ್ದು ತಮಾಷೆ ಎಂದು ವಿವರಿಸುತ್ತಾನೆ. ಆಗ ಎಳಚಿತ್ತಾಯರು ಅವರನ್ನು ಊಟಕ್ಕೆ ಆಹ್ವಾನಿಸಿ ಒಳಹೋಗುತ್ತಾರೆ)

# ದೃಶ್ಯ–26

*ರಾತ್ರಿ–ಒಳಾಂಗಣ–ಎಳಚಿತ್ತರಾಯರ ಮನೆ*

*ಹಸ್ತಪ್ರತಿಯಲ್ಲಿ: (ಚಲನಚಿತ್ರದಲ್ಲಿ ಇಲ್ಲ)*

*(ಚಾಪೆಯ ಮೇಲೆ ಮಲಗಿರುವ ಶಂಕರ, ಸೀತಾರಾಮನಿಗೆ)*

*ಶಂಕರ : ಐ ಜಸ್ಟ್ ಕಾಂಟ್ ಬಿಲೀವ್ ಸೀತಾರಾಮ್. ಬಂಗಾಡೀಲಿ ಮಲ್ಗಿದಿನಿ. ಕುಛ್ ಭೀ ಕಹೋ ಸೀತಾರಾಮ್. ಇಲ್ಲಿಯ ಜನರ ಮುಖದಲ್ಲಿ ಅದೆಂಥಾ ಸಮಾಧಾನ. ಈಗಷ್ಟೆ ದೋಣೀಲಿ ಸಿಕ್ಕ ಪುಟ್ಟಿ, ಆ ಭಂಗ ಮಾಸ್ತ್ರು, ನಿನ್ನ ತಂದೆತಾಯಿ, ಎಳಚಿತ್ತಾಯರು. ಕಿತನೇ ಸಿಂಪಲ್. ಕಿತನೇ ಅಚ್ಛೇ!! ಔರ್ ತುಮ್ ಭೀ*

(ಮಲಗಿರುವ ಶಂಕರನಿಗೆ ಏನೋ ಒಂದು ರೀತಿಯ ಸಮಾಧಾನ ಮತ್ತು ಸಂತೃಪ್ತಿ ಮನೋಭಾವವಿರುತ್ತದೆ. ತಾನು ಮಲಗಿರುವ ಜಾಗವನ್ನು ಮುಟ್ಟುತ್ತ ತೃಪ್ತಿಯನ್ನು ಪಡುತ್ತ, ತನ್ನ ಮೂಲದ ನೆಲೆಯನ್ನು ತಲುಪಿದ, ಸ್ಪರ್ಶಿಸಿದ ಆನಂದವನ್ನು ಪಡುತ್ತ ನಿದ್ರೆಗೆ ಜಾರುತ್ತಾನೆ)

# ದೃಶ್ಯ–27

***ಹಗಲು–ಎಳಚಿತ್ತರಾಯರ ಮನೆ ಒಳಗೆ ಮತ್ತು ಹೊರಗೆ***

(ಬೆಳಗಿನ ಜಾವ ಕೋಳಿ ಕೂಗಿಗೆ ಎದ್ದ ಸೀತಾರಾಮ ಪಕ್ಕದಲ್ಲಿ ಶಂಕರನಿಲ್ಲದಿರುವುದನ್ನು ಗಮನಿಸುತ್ತಾನೆ. ಇತ್ತ ಶಂಕರ ಕಾಡಿನ ಮಧ್ಯ ಬಂದು ಅಲ್ಲಿ ನಡೆಯುತ್ತಿರುವ ಪ್ರಕೃತಿಯ ಪ್ರತಿಯೊಂದು ಸೌಂದರ್ಯದ ಚಲನವಲನಗಳನ್ನು ನೋಡುತ್ತ ಆತ್ಮಾನಂದದಲ್ಲಿದ್ದಾನೆ. ಸೂರ್ಯೋದಯ, ಬೆಟ್ಟದ ಸಿರಿ, ದೂರದ ಜಲಪಾತದ ಸಿರಿ, ಹಸಿರು ಬೆಟ್ಟಗಳ ಶ್ರೇಣಿಗಳು, ಹಸಿರ ನೆಲ ಇವೆಲ್ಲವನ್ನು ಒಟ್ಟಿಗೆ ನೋಡುತ್ತ ಸವಿಯುತ್ತ ಅಲ್ಲಿನ ಪ್ರಾಕೃತಿಕ ದನಿಗಳ ಜೊತೆಗೆ ತನ್ನ ದನಿಯನ್ನು ಸೇರಿಸುತ್ತಾನೆ)



# ದೃಶ್ಯ–28

***ಹಗಲು–ಬಂಗಾಡಿಯ ಕಾಡು***
***ಹಾಡು: ಅಹ ಏನೇದೇನಿದೇನು***
***ಸಾಹಿತ್ಯ: ವಿ. ಮನೋಹರ್***
***ಹಾಡಿದವರು: ಉದಿತ್ ನಾರಾಯಣ್***

ಅಹ ಏನೇದೇನಿದೇನು
ಚಿತ್ತಾರ ಭೂಮಿ ಭಾನು
ಅಪರೂಪ ಈ ಪ್ರತಿರೂಪ
ಪ್ರತಿ ಜೀವದಲು ಆಲಾಪ
ಒಹೋಹೋ ಏನಂದ ಆನಂದವೋ

**(ಎಲೆಗಳ ಮೇಲೆ ಇಬ್ಬನಿ ಬಿದ್ದು ಸೂರ್ಯನ ಬೆಳಕಿಗೆ ಹೊಳೆಯುತ್ತಿರುವುದು, ಹಕ್ಕಿಗಳು ಮುಂಜಾನೆಯ ತಮ್ಮ ಪ್ರಯಾಣವನ್ನು ಆರಂಭಿಸಿರುವುದು ಮತ್ತು ಪುಟ್ಟ ಮಕ್ಕಳು ನೀರಿನಲ್ಲಿ ಆಟವಾಡುತ್ತಿರುವುದನ್ನು ತೋರುತ್ತ)**

ಎಲೆಗಳ ಮೇಲೆ ರವಿಕಿರಣದ ನರ್ತನ
ಹಕ್ಕಿಗಳ ಗಾಯನ
ಎಲ್ಲವೂ ವಿನೂತನ

**(ಮಣ್ಣಿನ ಹಿಡಿಯನ್ನು ತೋರುತ್ತ, ಕನ್ನಡ ಧ್ವಜದ ಬಣ್ಣದಲ್ಲಿ ನೀರು ಹರಿಯುವುದನ್ನು ಎತ್ತಿ ಹಿಡಿಯುತ್ತ ಪುಷ್ಪವನ್ನು ತೋರಿಸುತ್ತಾ)**

ಇಂಥ ಪುಣ್ಯ ಮಣ್ಣಿನಲ್ಲಿ ಹುಟ್ಟುವುದೇ ಪಾವನ
ಪತ್ರಪುಷ್ಪ ಸಿಂಚನ
ಚಿತ್ತ ಚಂದ ಚೇತನ

ಕಿವಿ ಹಂಗಮ, ನೋಟ ಸಂಭ್ರಮ
ಮಿಕ್ಕೆಲ್ಲ ಶೂನ್ಯ ಶೂನ್ಯ ಶೂನ್ಯ ಹೋ
ನನ್ನ ದೇವರು ಈ ನನ್ನ ತವರು
ನಾನೆಂಥ ಧನ್ಯ ಧನ್ಯ ಧನ್ಯ ಹೋ
ಭೂಮಿಯೇ ನೀನೆಂಥ ಮಮತಾಮಯಿ

**(ಗದ್ದೆಯ ಕೆಲಸಕ್ಕೆಂದು ಹೋಗುವ ಮಹಿಳೆಯರನ್ನು ಮತ್ತು ಹೊಲವನ್ನು ಉಳಲು**

**ಹೋಗುತ್ತಿರುವ ರೈತನನ್ನು ನೋಡುತ್ತಾನೆ. ಇವರಿಬ್ಬರನ್ನು ನೋಡಿ ಉತ್ಸಾಹಗೊಂಡು ಅವರ ಮುಂದೆ ನೃತ್ಯಮಾಡಲು ಆರಂಭಿಸುತ್ತಾನೆ. ಜಲಪಾತದಲ್ಲಿ ನಿಂತು ಅದರಲ್ಲಿನ ಸವಿಯನ್ನು ಸವಿಯುತ್ತ, ಹಸುವಿನ ಕರು ತನ್ನ ತಾಯಿಯಲ್ಲಿಗೆ ಹಾಲು ಕುಡಿಯಲು ಧಾವಿಸುವುದನ್ನು ನೋಡಿ ಆನಂದ ಪಡುತ್ತಾನೆ)**

ಈ ಸುಂದರ ವಸುಂಧರ ನಾನೆಲ್ಲು ಕಾಣಲೆ ಇಲ್ಲ
ಉಲ್ಲಾಸವೇ ಉಕ್ಕೇರುತ ಎಲ್ಲೆಲ್ಲು ಚಿಗುರಿದೆಯಲ್ಲ
ಎಳೆಗರು ಅಂಬಾ ಎಂದು ಓಡೋಡಿ ಬರುತಿರೋ ಹಾಗೆ
ಸಿಂಗಾರದ ಈ ಮಡಿಲಿಗೆ ನಾನೋಡಿ ಬಂದೆನು ಹೀಗೆ
ದಡ ಸೇರಿಸಿತು ಈ ಸೆಳೆತ
ಅದಕ್ಕಾಗಿ ಸಡಗರ ತುಡಿತ
ಹಸಿರೇ ಉಸಿರಾದೆ ಈ ಜೀವಕೆ...

**(ಹಾಡಿನ ಸಂತಸದಲ್ಲಿ ಮುಳುಗಿರುವ ಶಂಕರನನ್ನು ಒಬ್ಬ ವ್ಯಕ್ತಿಯು ದೂರದಿಂದ ಸೂಕ್ಷ್ಮವಾಗಿ ಗಮನಿಸುತ್ತಿರುತ್ತಾನೆ. ಶಂಕರ ಮತ್ತು ಆ ವ್ಯಕ್ತಿ ಮುಖಾಮುಖಿಯಾದಾಗ ಹಾಡು ಥಟ್ಟನೆ ನಿಲ್ಲುತ್ತದೆ.)**

**ನಿರ್ದೇಶಕರ ಟಿಪ್ಪಣಿ:**

**ಮನೋಹರ್‌ರವರು ಬರೆದಿರುವ ಕವನದ ಸಾಲುಗಳು ನಮಗೆ ಅಣ್ಣಾವ್ರ ಹಲವು ಸಿನಿಮಾಗಳು ಕನ್ನಡದ ಮತ್ತು ಪ್ರಕೃತಿಯ ಬಗ್ಗೆ ಬೇರೆ ಬೇರೆ ರೀತಿಯ ಸ್ವರೂಪಗಳನ್ನು ತಿಳಿಸಿರುವ ಹಲವು ಕವನಗಳ ಸಾಲಿನಲ್ಲಿ ನಿಲ್ಲುವಂತಹ ಅದ್ಭುತವಾದ ಕವನ. ಮಂಗಳೂರಿನ ಜಾನಪದೀಯವಾದಂತಹ ಅಂಶಗಳನ್ನು ಇಲ್ಲಿ ಸಾಕಷ್ಟು ಬಳಸಿಕೊಳ್ಳಲಾಗಿದೆ ಮತ್ತು ಚಿತ್ರಿಕೆಗಳನ್ನೂ ಸಹ ಅದೇ ರೀತಿಯಲ್ಲಿ ಚಿತ್ರಿಸಲಾಗಿದೆ. ಈ ಹಾಡು ಪ್ರಾಕೃತಿಕ ಸಂಪತ್ತನ್ನು ಅಲ್ಲಿನ ಜಾನಪದೀಯ ಅಂಶಗಳ ಮುಖಾಂತರ ಮತ್ತು ಅಲ್ಲಿನ ನುಡಿಗಟ್ಟುಗಳನ್ನು ಬಳಸಿಕೊಂಡು ಒಂದು ಉತ್ತಮ ಕವನ ಹೇಗೆ ತನ್ನ ಸಾಂಸ್ಕೃತಿಕ ಪರಿಸರವನ್ನು ಕಟ್ಟಿಕೊಡುತ್ತದೆ ಅನ್ನುವುದನ್ನು ತೋರಿಸುವ ಉದಾಹರಣೆಯಾಗಿದೆ. ಇದರಲ್ಲಿ ಗೌರಿಶಂಕರ್‌ರವರ ಛಾಯಾಗ್ರಹಣ ಅದ್ಭುತ, ರಮಣೀಯ.**

# ದೃಶ್ಯ–29

*ಹಗಲು–ಬಂಗಾಡಿ ಕಾಡು*

(ಹಾಡಿನ ಮುಕ್ತಾಯದ ನಂತರ ಒಬ್ಬ ವ್ಯಕ್ತಿ ಶಂಕರನ ಮುಂದೆ ನಿಂತು ಆತನನ್ನೇ ದಿಟ್ಟಿಸಿ ನೋಡುತ್ತಿರುತ್ತಾನೆ. ಶಂಕರನು ಅವನನ್ನು ನೋಡಿ ಮಾತನಾಡಿಸಲು ಬಂದಾಗ ಆ ವ್ಯಕ್ತಿ ತನ್ನ ಸೊಂಟದಲ್ಲಿ ಸಿಕ್ಕಿಸಿಕೊಂಡಿದ್ದ ಕುಡುಗೋಲನ್ನು ತಗೆದುಕೊಳ್ಳಲು ಹೋಗುತ್ತಾನೆ ಶಂಕರನು ಹೊಡೆದಾಟಕ್ಕೆ ಸಿದ್ಧವಾದವನಂತೆ ಮಾಡಿದಾಗ ಬೇಡವೆಂದು ತನ್ನ ಕೈಯನ್ನು ತಗೆದು ಆ ವ್ಯಕ್ತಿ ಶಂಕರನನ್ನು ಮುಟ್ಟಿ ಸಂತೋಷ ಪಡುತ್ತಾನೆ. ಅದೇ ಸಮಯಕ್ಕೆ ಸೀತಾರಾಮ ಕೂಗಿದಂತಾಗಿ ಅವನಿಗೆ ಶಂಕರ ಪ್ರತಿಕ್ರಿಯಿಸುವುದರಲ್ಲಿ ಈ ವ್ಯಕ್ತಿ ಮಾಯವಾಗಿರುತ್ತಾನೆ. ಇದನ್ನು ಕಂಡು ಶಂಕರನಿಗೆ ಆಶ್ಚರ್ಯವಾಗುತ್ತದೆ.)

*ಹಸ್ತಪ್ರತಿಯಲ್ಲಿ: (ಚಲನಚಿತ್ರದಲ್ಲಿ ಇಲ್ಲ)*

*ಸೀತಾರಾಮ* : ***ಕೂಹೂಯ್ ಶಂಕರ್***

*ಶಂಕರ* : ***ಕೂಹೂಯ್ ಸೀತಾರಾಮ್, ಗುಡ್ ಮಾರ್ನಿಂಗ್ ಸೀತಾರಾಮ್***

*ಸೀತಾರಾಮ* : ***ಗುಡ್ ಮಾರ್ನಿಂಗ್ ಅಂತೆ ಗುಡ್ ಮಾರ್ನಿಂಗ್ ಬೆಳಗಾಗೆದ್ದು ಹುಡುಕಿ ಹುಡುಕಿ ಸಾಕಾಯ್ತು ನಿನ್ನ. ಏಯ್ ಅಲ್ಲೇ ನಿಲ್ಲು. ದಾರಿ ತಪ್ಪಿದೀಯ.***

*ಶಂಕರ* : ***ದಾರೀನೆ ಇಲ್ಲ. ತಪ್ಪೋದೇನೂ***

*ಸೀತಾರಾಮ* : ***ತಲೆ ನಿಂದು, ಬಾಜೂ ಆನಾ ಬಾಜೂ***

*ಶಂಕರ* : ***ಕ್ಯಾ?***

*ಸೀತಾರಾಮ* : ***ತುಮ್ಹಾರಾ ತಲೆ***

ಸೀತಾರಾಮ್ : ಶಂಕರ್ ಎಲ್ಲಿದಿಯಾ?

ಶಂಕರ್ : ನಾನಿಲ್ಲಿ
(ಅಲ್ಲಿದ್ದ ವ್ಯಕ್ತಿ ಕಾಣೆಯಾಗಿರುವುದನ್ನು ಕಂಡು ಆಶ್ಚರ್ಯ ಪಡುತ್ತಾನೆ)

ಸೀತಾರಾಮ್ : ಶಂಕರ್, ನೀನು ದಾರಿ ತಪ್ಪಿದ್ಯ

| | | |
|---|---|---|
| ಶಂಕರ್ | : | ದಾರೀನೆ ಇಲ್ಲ ತಪ್ಪೋದ್ ಏನ್ ಬಂತು<br>(ಎಳಚಿತ್ತಾಯರು ಸೀತಾರಾಮನ ಜೊತೆಗೆ ಶಂಕರನಿದ್ದಲ್ಲಿಗೇ ಬರುವರು) |
| ಎಳಚಿತ್ತಾಯರು | : | ಹೋಯ್ ಎಲ್ಲಿ ಅಂತ ಹುಡುಕೋದು ಮಾರಾಯ್ರೆ ನಿಮ್ಮನ್ನ |
| ಸೀತಾರಾಮ | : | ಹೌದಲ್ಲೋ ಶಂಕ್ರು<br>(ಏನೋ ಹೇಳಲು ಬಂದ ಶಂಕರನನ್ನು ತಡೆದು) |
| ಎಳಚಿತ್ತಾಯರು | : | ಅಜ್ಜಿನ್ ನೋಡ್ಬೇಕು ಅಂದೋರು ಬೆಳೆಗ್ಗೆ ಬೆಳೆಗ್ಗನೆ ನಾಪತ್ತೆಯಾಗಿದಿರಿ. ಶ್ಯಾನುಭೊಗರ ಮನೆಗ್ ಹೋಗೋದ್ ಬೇಡ್ವ. ಬನ್ನಿ ಬನ್ನಿ ಬೇಗ<br>(ಎಳಚಿತ್ತಾಯರು ಬೆಳಗ್ಗೆಯೇ ಎದ್ದು ಶಂಕರನನ್ನು ಅಜ್ಜಿಯ ಬಳಿ ಕರೆದೊಯ್ಯಲು ಸನ್ನದ್ಧರಾಗಿ ಬಂದಿದ್ದಾರೆ) |
| ಸೀತಾರಾಮ | : | ಬಾರಯ್ಯ ಇನ್ನೂ ಎರೆಡೂವರೆ ಮೈಲಿ ಇದ್ಯಂತೆ<br>(ಹೋಗಬೇಕಿರುವ ಜಾಗ ಇನ್ನೂ ತುಂಬ ದೂರ ಇರುವುದನ್ನು ತಿಳಿಸಿ ಬೇಗನೆ ಹೊರಡುವಂತೆ ಸೂಚನೆ ನೀಡುತ್ತ ಒಲ್ಲದ ಮನಸ್ಸಿನಿಂದ ಸೀತಾರಾಮ ತೆರಳುತ್ತಾನೆ.) |

# ದೃಶ್ಯ–30

*ಹಸ್ತಪ್ರತಿಯಲ್ಲಿ: (ಚಲನಚಿತ್ರದಲ್ಲಿ ಇಲ್ಲ)*
*ಹಗಲು–ನದಿ*

*(ಹರಿಯುತ್ತಿರುವ ನದಿಯಲ್ಲಿ ಜಲಕ್ರೀಡೆ ಆಡುತ್ತಿರುವ ಶಂಕರ ಮತ್ತು ಸೀತಾರಾಮ)*

*ಸೀತಾರಾಮ : ಚಲೋ ಯಾರ್.. ಏಕ್ ಮಿನಿಟ್ ಔರ್*

*ಶಂಕರ : ಪ್ಲೀಸ್ ಏಕ್ ಮಿನಿಟ್ ಔರ್*

*ಎಳಚಿತ್ತಾಯರು : (ಯಕ್ಷಗಾನದ ಹಾಡನ್ನು ಹಾಡುತ್ತಿದ್ದಾರೆ)*
*ಬಿಡು ಬಿಡು ನಿನ್ನಯ ಪಾಶುಪತಾಸ್ತ್ರವ*
*ಬಿಡು ಎಲೆ ಕುಂತೀ ನಂದನಾ*
*ಬಿಡು ಎಲೆ ಮಧ್ಯಮ ಪಾಂಡವಾ*
*ಬಿಡು ಎಲೆ ಸುಭದ್ರಾ ಹೃದಯಪ್ರಿಯಾ*
*.. ಹ್ವಾಯ್.. ಸಾಕು ಬನ್ನಿ, ಅಭ್ಯಾಸ ಇಲ್ಲ ನಿಮಗೆ. ಥಂಡಿ ಜ್ವರ ಬಂದೀತು. ಶಾನುಭೋಗರ ಮನೆ ಇಲ್ಲಿಂದ ತುಂಬಾ ಹತ್ರ. ಬರೇ ಎರಡೂವರೆ ಮೈಲು. ಅಜ್ಜೀನ ನೋಡೋದು ಬೇಡವಾ?*

*ಶಂಕರ : ಆಂ..*
*(ಹೌದು ಎಂಬ ಸೂಚನೆಯನ್ನು ನೀಡುತ್ತಾನೆ)*

# ದೃಶ್ಯ–31

*ಹಗಲು–ಶಾನುಭೋಗರ ಮನೆ ಸಮೀಪ*

| | | |
|---|---|---|
| ಎಳಚಿತ್ತಾಯರು | : | ಹೇಳಿದ್ನಲ್ಲ ಭಾರೀ ಚುರ್ಕು. ಈ ಶ್ಯಾನ್ಭೋಗಂಗು ಅವ್ಳ್ಗ ಏನ್ ಸಂಬಂಧಾನೋ ಏನೋ. ಅವಳೇಂತೆ ಅವನನ್ನ ಬೆಳೆಸಿದ್ದು. ಅದಿಕ್ಕೆ ಅವಳನ್ನ ಮನೆಯಲ್ಲಿ ಇಟ್ಕೊಂಡಿದಾನೆ. ಗಟ್ಟಿ ಜೀವ. ಈ ಇಳಿ ವಯಸ್ಸಲ್ಲು ತನ್ ಕೆಲ್ಸ ತಾನೇ ಮಾಡ್ಕೊಳುತ್ತಂತೆ<br>(ಮಾತನಾಡುತ್ತ ಮರದ ಸೇತುವೆಯನ್ನು ಎಳಚಿತ್ತಾಯರು ಮತ್ತು ಸೀತಾರಾಮ ದಾಟುತ್ತಾರೆ ಆದರೆ ಶಂಕರನಿಗೆ ದಾಟಲು ಒಂದೆರೆಡು ಸಲ ಪ್ರಯತ್ನಿಸಿ ಆಗದೆ ಯೋಚಿಸುತ್ತ ನಿಲ್ಲುತ್ತಾನೆ)<br>.. ಶಾಂತಮ್ಮ ಶಾನುಭೋಗರು ನೆನ್ನೆ ಬೆಳ್ತಂಗಡಿಗೆ ಹೋದವರು ಇನ್ನೂ ಬರ್ಲಿಲ್ವ? ಯಾವಾಗ್ ಬರ್ತಾರೆ? |
| ಶಾಂತಮ್ಮ | : | ಗೊತ್ತಿಲ್ಲ ಎಳ್ಚಿತ್ತಣ್ಣ. ಒಂದೆರೆಡ್ ದಿವ್ಸ್ದ ಕೆಲ್ಸ ಅಂತ ಹೇಳಿದ್ರು ಬರ್ಬಹುದು. ನೀವ್ ಕೂತ್ಕೊಳಿ<br>(ಸೀತಾರಾಮನಿಗೆ..)<br>.. ಬನ್ನಿ ಕೂತ್ಕೊಳಿ<br>(ಇತ್ತ ಇನ್ನೂ ಸೇತುವೆ ದಾಟಲು ಶಂಕರ ಒದ್ದಾಡುತ್ತಿರುತ್ತಾನೆ) |
| ಎಳಚಿತ್ತಾಯರು | : | ಶಾನುಭೋಗರು ಬಿಡಿ ಯಾರೋ ಹೇಳಿರ್ತಾರೆ ಅಡಿಕೆ ಧಾರಣೆ ನಾಳೆ ಹೆಚ್ಚಾಗುತ್ತೇಂತ ಇವ್ರಲ್ಲೇ ಇದ್ದು |

*ಹಸ್ತಪ್ರತಿಯಲ್ಲಿ: (ಚಲನಚಿತ್ರದಲ್ಲಿ ಇಲ್ಲ)*

| | | |
|---|---|---|
| *ಶಾಂತ* | : | *ಬರೇ ವ್ಯವಹಾರ ಮಾಡಿದ್ರೆ ಆಯ್ತಾ? ಮನೆ ಕಡೆ ಲಕ್ಷ್ಯ ಬೇಡವಾ? ಪಿ.ಯೂ.ಸಿ ಮುಗಸಿ ಮನೇಲಿ ಕೂತಿರೋ ಮಗಳ ಬಗ್ಗೆ ಯೋಚಿಸಬೇಡ್ವಾ? ನಾಲ್ಕು ಹೊತ್ತೂ ಬರೇ ಕೋರ್ಟು, ದಾವೆ ಕಟ್ಟೆ, ಧಾರಣೆ ಅಂತ ಅಲೆಯೋದು. ನೀವಾದರೂ ಅವರಿಗೆ ಹೇಳಿ ಎಳಚಿತ್ತರಾಯರೆ.* |
| *ಎಳಚಿತ್ತಾಯರು* | : | *ಅಯ್ಯೋ ನಾನು? ರಂಗರಾಯರು ಶಾನುಭೋಗನಿಗೆ ಹೇಳೋದು..!? ನನ್ ಮೇಲೇ ಒಂದ್ ಕೇಸ್ ಜಡಿದು ಬಿಟ್ಟಾನು! ನನ್ನ ತೋಟದ ನೀರೇ* |

| | | |
|---|---|---|
| | | *ನಿಲ್ಲಿಸಿಬಿಟ್ಟಾನು. ಮಹಾ ಕುಳ ಅದು. ಅಜ್ಜಿ, ಚೆನ್ನಾಗಿದಾರಾ?* |
| *ಶಾಂತ* | *:* | *ನೀವೆ ಕೇಳಿ, ಖುಷಿ ಆಗ್ತಾಳೆ. ಅಜ್ಜೀ.. (ಕೂಗುತ್ತಾಳೆ)* |
| | | (ಸಂಕ ದಾಟಲಾರದೆ ಒದ್ದಾಡುತ್ತಿರುವ ಶಂಕರನನ್ನು ಕಂಡು ಹುಡುಗಿಯೊಬ್ಬಳು ಬಂದು) |
| ಶ್ರೀಮತಿ | : | ಹೆದ್ರುಕೋ ಬೇಡಿ ಝುಮ್ ಅಂತ ಜೋರಾಗ್ ಬಂದ್ಬಿಡಿ. |
| ಶಂಕರ | : | ಹ್ಞಾಂ ಝುಮ್.. (ಎಂದು ಜೋರಾಗಿ ಕೂಗುತ್ತ ಸೇತುವೆಯನ್ನು ದಾಟುತ್ತಾನೆ. ನಂತರ ಶ್ರೀಮತಿಗೆ) .. ಹಲೋ ಹಲೋ ಥ್ಯಾಂಕ್ಯೂ (ಒರ್ವ ವಯಸ್ಸಾದ ಅಜ್ಜಿ ಒಳಗಿನಿಂದ) |
| ಅಜ್ಜಿ | : | ಏನ್ರೇ ಅದು? (ಎಲ್ಲರೂ ಅವರೆಡೆಗೆ ನೋಡುತ್ತಾರೆ) .. ಯಾರೋ ಬಂದ್ಹಾಗಿದೆ. ಹೊರಗೆ ಯಾಕ್ ನಿಂತಿದಿರೋ? ಬನ್ರೋ ಒಳಗೆ. ಶಾಂತ ಇವ್ರಗೇನಾದ್ರು ಕುಡಿಯೋಕ್.. (ಎಂದು ಹೇಳುತ್ತಿರುವಾಗ ಶಂಕರನನ್ನು ನೋಡಿ ತಮ್ಮ ಮಾತು ನಿಲ್ಲಿಸಿ ಅವನನ್ನೇ ದಿಟ್ಟಿಸಿ ನೋಡುತ್ತಾರೆ. ಅವರಿಗೆ ತನ್ನ ಅಣ್ಣ ದತ್ತಾತ್ರೇಯರೇ ಎದುರಿಗೆ ಬಂದ ಹಾಗೆ ಆಗಿ ಅವನ್ನೆಲ್ಲ ಮೆಲುಕು ಹಾಕುತ್ತಾರೆ. ಅವನ ಹತ್ತಿರ ಹತ್ತಿರ ಬರುವಾಗ ಕಾಡಿನಲ್ಲಿ ನಾಪತ್ತೆಯಾಗಿದ್ದ ವ್ಯಕ್ತಿ ಅಜ್ಜಿಯ ಬಳಿ ಬಂದು) |
| ಮುತ್ಯಾ | : | ದತ್ತಪ್ಪ, ದತ್ತಣ್ಣ |
| ಅಜ್ಜಿ | : | ಶ್.. (ಎಂದು ಸುಮ್ಮನಿರುವಂತೆ ಹೇಳಿ ಮುಂದೆ ಮುಂದೆ ಹೋಗಿ ಶಂಕರನನ್ನು ಮುಟ್ಟಿ ಆತನನ್ನು ಮುದ್ದಿಸುತ್ತಾರೆ. ಶಂಕರನಿಗೆ ತನ್ನ ಬಂಧುವನ್ನು ಭೇಟಿಮಾಡಿದ ಪುಳಕ ಸಿಗುತ್ತದೆ. ಎಲ್ಲರೂ ಇದನ್ನು ಕುತೂಹಲದಿಂದ ನೋಡತೊಡಗುತ್ತಾರೆ. ಶಂಕರ ಅಜ್ಜಿಯ ಕಾಲಿಗೆ ಬೀಳುತ್ತಾನೆ ನಂತರ ಅಜ್ಜಿ) .. ಅದೇ ಕಣ್ಣು, ಅದೇ ಮೂಗು, ಅದೇ ಮುಖ. ಹೌದು ನೀನೆ ನನ್ನ ದತ್ತಣ್ಣ. ಎಲ್ಲಿದ್ಯೋ ಇಷ್ಟು ದಿನ? |

*ಹಸ್ತಪ್ರತಿಯಲ್ಲಿ: (ಚಲನಚಿತ್ರದಲ್ಲಿ ಇಲ್ಲ)*

| | | |
|---|---|---|
| *ಮುತ್ಯ* | : | *ದತ್ತಪ್ಪಾ, ಧಣೀ* |
| *ಶಂಕರ* | : | *ಇಲ್ಲ ತಾತಾ ಇಲ್ಲ, ಅಜ್ಜೀ* |
| *ಅಜ್ಜಿ* | : | *ನನ್ನ ದತ್ತಣ್ಣನ ಮೊಮ್ಮಗ ನೀನು. ಎಲ್ಲಿದ್ಯೋ ಕಂದಾ ಇಷ್ಟು ದಿನಾ. ಎಲ್ಲಿಂದ ಬಂದ್ಯೋ? ಹ್ಯಾಗ್ ಬಂದ್ಯೋ? ಬಾ ಬಾ ಇಲ್ಲಿ ಬಾ ನನ್ ಪಕ್ಕ ಬಾ. ಕಂದಾ ಸರೀ ಸಮಯಕ್ಕೇ ಬಂದೆ.* |



(ಅಜ್ಜಿಗೆ ತನ್ನ ಬಾಲ್ಯದ ನೆನಪಲ್ಲಿ ಅಣ್ಣ ದತ್ತಣ್ಣನ ಚಿತ್ರಿಕೆ ಕಣ್ಣ ಮುಂದೆ ಸುಳಿಯ ತೊಡಗುತ್ತದೆ. ಶಂಕರನ ಮತ್ತು ದತ್ತಣ್ಣನ ನಡುವೆ ಇರುವ ಸಾಮ್ಯವನ್ನು ಗುರುತಿಸಿದ ಅಜ್ಜಿಯ ಮನಸ್ಸು ನಿಧಾನವಾಗಿ ತನ್ನ ನೆನಪಿನಂಗಳಕ್ಕೆ ಧಾವಿಸುತ್ತದೆ. ಅಜ್ಜಿಯ ಸುಕ್ಕುಗಟ್ಟಿದ ಮುಖ ಯುವ ಮೂಕಾಂಬಿಕೆಯ ಮುಖಭಾವವಾಗುತ್ತದೆ. ಹಿನ್ನಲೆಯಲ್ಲಿ ಹಾಡೊಂದು ನೆನಪಿನ ಬುತ್ತಿಯನ್ನು ಬಿಚ್ಚಿಡುತ್ತದೆ. ಈ ದೃಶ್ಯದಲ್ಲಿ ಹಿನ್ನಲೆ ಚಿತ್ರಣವನ್ನು ಪರಿಣಾಮಕಾರಿಯಾಗಿ ಆರಂಭಿಸುವುದಕ್ಕೆ ಅಜ್ಜಿಯ ಮುಖದಿಂದ ಯುವ ಮುಕಾಂಬಿಕೆಗೆ ಮಾರ್ಫಿಂಗ್ ಮಾಡಲಾಗಿದೆ)

**ನಿರ್ದೇಶಕರ ಟಿಪ್ಪಣಿ:**

**ಎಳಚಿತ್ತರಾಯರ ಆತಿಥ್ಯದಲ್ಲಿ ಬಂಗಾಡಿಗೆ ಬಂದ ಶಂಕರ ಅರಿವಿಲ್ಲದೆಯೇ ಆ ಪ್ರಕೃತಿಯಲ್ಲಿ ಬಂಧಿಯಾಗ್ತಾನೆ. ಬೆಳಗಿನ ಆ ಉತ್ಸಾಹ, ಪ್ರಕೃತಿಯ ಜೊತೆ ಜೊತೆಯಲ್ಲಿ ಆತ ಕೊಂಡೊಯ್ಯುವ ಸ್ಫೂರ್ತಿ ಅವನನ್ನು ಒಟ್ಟಾರೆಯಾಗಿ ಆವರಿಸಿಕೊಂಡುಬಿಡುತ್ತದೆ.**

ಅವನನ್ನು ಹುಡುಕಿ ಸೀತಾರಾಮ ಬರುವಷ್ಟರಲ್ಲಿ ಆಳುಮಗ ಮುದುಕನ ಪರಿಚಯವಾಗುತ್ತದೆ. ಆದರೆ ಆತನನ್ನು ಮಾತನಾಡಿಸುವಷ್ಟರಲ್ಲಿ ಆತ ಮಾಯವಾಗಿರುತ್ತಾನೆ. ಶಾನುಭೋಗರ ಮನೆಗೆ ಬಂದಾಗ ಶಾನುಭೋಗರ ಮಗಳ, ಹೆಂಡತಿಯ ಮತ್ತು ಅಜ್ಜಿಯ ಭೇಟಿಯಾಗುತ್ತದೆ. ಮೊಟ್ಟಮೊದಲ ಬಾರಿಗೆ ಅಜ್ಜಿ ಮತ್ತು ಶಂಕರನ ಭೇಟಿ ಒಂದು ಅವಿನಾಭಾವ ಸಂಬಂಧವನ್ನು ಸೃಷ್ಟಿಸುತ್ತದೆ. ಅಜ್ಜಿ ಅವನಲ್ಲಿ ದತ್ತಣ್ಣನ ಮುಖವನ್ನು ಕಾಣುತ್ತಾರೆ. ಕಾದಂಬರಿಯ ಅತಿ ಸೂಕ್ಷ್ಮವಾದ ಈ ಘಟ್ಟದಲ್ಲಿ ಅದನ್ನು ಚಿತ್ರಕಥೆಯ ರೂಪದಲ್ಲಿ ತಂದಿರಿಸುವಾಗ ಹಲವು ಮಾರ್ಪಾಡುಗಳನ್ನು ಮಾಡಲಾಗಿದೆ. ಕಾದಂಬರಿ ಓದಿದ್ದವರಿಗೆ ಅದು ಸ್ಪಷ್ಟವಾಗಿ ಗೋಚರಿಸುತ್ತದೆ. ವಿಷ್ಯುಯಲ್ ಜಸ್ಟಿಫಿಕೇಶನ್ ಅಥವಾ ಪೊಯಟಿಕ್ ಜಸ್ಟಿಫಿಕೇಶನ್ ಅಂತ ಏನ್ ಕರೆಯುತ್ತೇವೆಯೋ ಅವುಗಳನ್ನು ಇಲ್ಲಿ ಸಾಧಿಸಲಾಗಿದೆ. ಶಂಕರ ತನ್ನ ಹುಡುಕಾಟದ ಒಂದೊಂದೇ ಹೆಜ್ಜೆಯನ್ನು ಇಡುತ್ತ ಆತ ಬಂದು ಸೇರಿರುವ ಜಾಗ ಆ ಹುಡುಕಾಟದ ಮೂಲ ಎಂಬುದರ ಅರಿವು ಆತನಿಗಾಗುತ್ತಿರುವಂತೆಯೇ ಪ್ರೇಕ್ಷಕನಲ್ಲಿಯೂ ಕೂಡ ಒಂದು ಹೊಸ ಅಧ್ಯಾಯ ಪ್ರಾರಂಭವಾಗುತ್ತದೆ. ಅದು ಅಜ್ಜಿಯ ದತ್ತಣ್ಣನ ನೆನಪಿನೊಂದಿಗೆ.

# ದೃಶ್ಯ–32

***ಫ್ಲ್ಯಾಷ್ ಬಾಕ್***
***ಹಾಡು: ಸಿಂಗಾರ ತೆನೆತೆನೆಯೆಲ್ಲ ಬಂಗಾರ ಕಣಕಣವೂ***
***ಸಾಹಿತ್ಯ: ವಿ. ಮನೋಹರ್***
***ಹಾಡಿದವರು: ಶಂಕರ್ ಮಹಾದೇವನ್ ಮತ್ತು ಸಂಗಡಿಗರು***

**(ಬಂಗಾಡಿಯ ಅಂದರೆ ದಕ್ಷಿಣ ಕನ್ನಡದ ಸೀಮೆಯಲ್ಲಿ ನಡೆಯುವ ಸುಗ್ಗಿ ಹಬ್ಬದ ಆಚರಣೆಯನ್ನು ಯಥಾವತ್ತಾಗಿ ಈ ಹಾಡಿನಲ್ಲಿ ನೈಜವಾಗಿ ಚಿತ್ರೀಕರಿಸಲಾಗಿದೆ. ಹಾಡಿನಲ್ಲಿ ಯುವ ಮುತ್ಯ, ಮೂಕಾಂಬಿಕೆ, ಹಾಗೂ ದತ್ತಾತ್ರೇಯರು ಭಾಗವಹಿಸುತ್ತ ಸುಗ್ಗಿಯ ಸಮಯದಲ್ಲಿ ನಡೆಯುವ ಎಲ್ಲ ಸಾಂಪ್ರದಾಯಿಕ ಹಾಗೂ ಸಾಮಾಜಿಕ ಕಾರ್ಯಗಳನ್ನು ನೆರವೇರಿಸುತ್ತಿರುತ್ತಾರೆ. ಹಬ್ಬದ ಸಮಯದಲ್ಲಿ ಮನೆಯ ಮುಂದಿನ ಕಣದಲ್ಲಿ ಮನೆಮನೆಯಿಂದ ಬಂದಂತಹ ಭತ್ತದ ಮುಡಿಯನ್ನು ತಂದಿಟ್ಟು, ದೈವದ ಕೋಲಕ್ಕೆ ಹರಕೆ ಹೊರುತ್ತಾರೆ. ದತ್ತಣ್ಣ, ಮೂಕಾಂಬಿಕೆ, ಮೂಕಾಂಬಿಕೆಯ ಗಂಡ, ಸರೋಜ ಎಲ್ಲರೂ ಈ ಸಂಭ್ರಮದಲ್ಲಿ ಭಾಗಿಯಾಗಿದ್ದಾರೆ. ಹಿನ್ನಲೆಯಲ್ಲಿ ಆಗ ಇದ್ದ ಪೂರ್ವಿಕರ ಮನೆಯ ಮುಂದೆ ಈ ಸಾಂಪ್ರದಾಯಿಕ ಪೂಜೆಯ ವಿಧಿಗಳನ್ನು ಮಾಡುತ್ತಾರೆ)**

ಸಿಂಗಾರ ತೆನೆತೆನೆಯೆಲ್ಲ ಬಂಗಾರ ಕಣಕಣವೂ
ಭಂಡಾರ ತುಳುಕಲಿ ತುಂಬಿ ಭೂದೇವಿ ಸಿರಿವರವೂ
ಸುಗ್ಗಿ ಹಿಗ್ಗಿ ಅರಳಿತು ಮನೆ ಮನೆ
ನಗುವಿನ ತೆನೆ ತೆನೆ ಗೊನೆ ಗೊನೆ ಹೋ
ಬಾಗೀ ನಮಿಸುವೆ ಮಂದಾರ ಲಕುಮಿಯ ಪಾದಕೇ.. ಆರತಿ..
ಭೂಮಿಗೇ.. ಕೀರುತಿ..

ಮುದ್ದಿನ ತಂಗಿ ಮುಗುಳ್ನಗೆ ಚಂದೋ
ತೆಂಗಿನ ಸಿರಿ ಚಂದೋ
ಕೆಚ್ಚಲ ಗುದ್ದೋ ಎಳೆಗರು ಚಂದೋ
ಅವ್ವನ ಖುಷಿ ಚಂದೋ
ಸಜ್ಜನ ಸಂಗ ಹೊಂಗೆಯ ನೆರಳು ರಂಗವಲಿ ಚಂದೋ
ಮನಸಿನ ಸೂತ್ರವು ಕೈಯೊಳಗಿದ್ದರೆ
ಜೀವನ ಬಲು ಚಂದೋ

ಗೇಯ್ದು ಉಣುವುದು ಚಂದೋ
ಸ್ವಂತ ನೆಲ ಚಂದೋ
ಎಲ್ಲರೊಳು ಬೆರೆವಾಸೆ ಚಂದವೋ

ನಾಡಿಗೇ.. ಆರತಿ..
ಭೂಮಿಗೇ.. ಕೀರುತಿ..
**(ಸರೋಜಾಳ ಅಪ್ಪ, ದತ್ತಣ್ಣನ ಮಾವ ರಂಗಪ್ಪನೂ ಈ ಪೂಜೆಯ ಕಾರ್ಯದಲ್ಲಿ ಭಾಗವಹಿಸಿದ್ದಾನೆ.)**

ಸಿಂಗಾರ ತೆನೆತೆನೆಯೆಲ್ಲ ಬಂಗಾರ ಕಣಕಣವೂ
ಭಂಡಾರ ತುಳುಕಲಿ ತುಂಬಿ ಭೂದೇವಿ ಸಿರಿವರವೂ
ಸುಗ್ಗಿ ಹಿಗ್ಗಿ ಅರಳಿತು ಮನೆ ಮನೆ
ನಗುವಿನ ತೆನೆ ತೆನೆ ಗೊನೆ ಗೊನೆ ಹೋ

## ದೃಶ್ಯ–33

*ಹಸ್ತಪ್ರತಿಯಲ್ಲಿ: (ಚಲನಚಿತ್ರದಲ್ಲಿ ಇಲ್ಲ)*
*ಹಗಲು–ರಂಗಪ್ಪನ ಮನೆಯ ಹೊರಗೆ*

*ರಂಗಪ್ಪ : ಕಣ್ಣಂತೂ ಇಲ್ಲ. ತಲೇನೂ ಇಲ್ವಾ ಸರೋಜಾ ನಿಂಗೆ? ಒಂದ್ಗೂರ್ ಹೆಚ್ಚು ಕಡ್ಮೆ ಆಗಿದ್ರೆ? ಓಡಿ ಬಂದ್ಬಿಟ್ಲು ಒಳ್ಳೆ ಕಣ್ಣಿದ್ದವಳ ಹಾಗೆ*

*ದತ್ತಣ್ಣನ ತಾಯಿ : ರಂಗಣ್ಣ, ಇರ್ಲಿ ಬಿಡು. ಪಾಪ ಅವಳಿಗೇನು ಕಾಣುತ್ತೆ*

*ರಂಗಪ್ಪ : ನೀನೇ ಮುದ್ದ್ ಮಾಡಿ ಹಾಳ್ ಮಾಡಿದ್ದೀ ಅವಳನ್ನ. ನಿನ್ ಮಗ ದತ್ತಣ್ಣ ಇಲ್ದಿದ್ರೆ ಅದೇನ್ ನೋಡಬೇಕಾಗಿತ್ತೋ ನಾವು. ಅವನೇ ಬಚಾವ್ ಮಾಡ್ದ ಇವತ್ತು ಅವಳ್ನ.*

*ದತ್ತಣ್ಣನ ತಾಯಿ : ಅಣ್ಣಾ, ಮಾಂಗಲ್ಯ ಕಳಕೊಂಡಿರೋ ನನಗೆ ಧೈರ್ಯ ಕೊಟ್ಟು, ಇಲ್ಲೇ ಇದ್ದು ಮನೆ ವ್ಯವಹಾರ ನೋಡ್ಕೋತಿರೋನು ನೀನು. ಅಪ್ಪ ಇಲ್ದೇ ಇರೋ ದತ್ತನ್ನ, ಮೂಕಾಂಬಿಕೇನ ನಿನ್ನ ಸರೂನಷ್ಟೇ ಪ್ರೀತಿಯಿಂದ ಬೆಳೆಸಿದ್ದೀಯ. ಮೂಕಾಂಬಿಕೆ ಮದುವೇನ ನೀನೆ ನಿಂತು ಮಾಡಿಸ್ದೆ. ನಿನ್ ಋಣ ದೊಡ್ದು.*

*ರಂಗಪ್ಪ : ಋಣ ತೀರಿಸ್ಬೇಕು ಅಂತೀಯಾ? ತೀರಿಸಬಹದು. ಅಲ್ನೋಡು (ದತ್ತಣ್ಣ ಮತ್ತು ಸರೋಜನನ್ನು ತೋರಿಸುತ್ತ) .. ಎಷ್ಟು ಪ್ರೀತಿಯಿಂದ ಇದ್ದಾರೆ ನೋಡು. ಮದ್ವೆ ಮಾಡ್ಸಿಬಿಡೋಣಾ?*

*ದತ್ತಣ್ಣನ ತಾಯಿ : ಅಣ್ಣಾ..*

*ರಂಗಪ್ಪ : ಹ್ದೂಂ, ಏನ್ ತಪ್ಪು? ನನ್ ಮಗ್ಳನ್ನ ಸೊಸೆ ಮಾಡ್ಕೊಂಡ್ ಬಿಡು. ಕಣ್ಣಿಲ್ಲದ ನನ್ ಮಗಳ ಬಾಳೀಗೆ ನಿನ್ ಮಗ ಬೆಳಕಾದ್ಹಂಗಾಯ್ತು. ನಿನ್ ಋಣಾನು ತೀರ್ದಹಂಗಾಯ್ತು. ಏನಂತೀಯಾ?*

*ದತ್ತಣ್ಣನ ತಾಯಿ : ಇದು ತಪ್ಪು ಅಣ್ಣಾ ಸರೂ ನನ್ ಮಗ್ಳಿದ್ದಂಗೆ*

*ರಂಗಪ್ಪ : ಅದಕ್ಕೇ ಹೇಳ್ತಿರೋದು ಸೊಸೆ ಮಾಡ್ಕೊಂಡ್ಬಿಡು ಅಂತ*

*ದತ್ತಣ್ಣನ ತಾಯಿ : ದತ್ತನ ಬಾಳು? ಅವನೇನಂತಾನೆ ಅಂತ ಕೇಳೋದ್ ಬೇಡ್ವಾ? ಅವನ ಇಚ್ಛೆ ಹೇಗಿದೆಯೋ?*

*ರಂಗಪ್ಪ : ಇದು ನಿನ್‌ದೇ ಮನೆ ಗೊತ್ತೂ. ಆದ್ರೆ ಇಲ್ಲಿ ನಡಿಯೋದು ನನ್ ಇಚ್ಛೆ ಅನ್ನೋದನ್ನ ಮರಿಬೇಡ. ನಿನ್ನ ಮಗನ್ನ ಮದುವೇಗೆ ಒಪ್ಸು. ಒಪ್ಪಿಲ್ಲ ಅಂದ್ರೆ ನನ್ನಷ್ಟು ದುಷ್ಟ ಇನ್ನಾರು ಇಲ್ಲ ಅಂತ ಅವನಿಗ್ ಹೇಳ್ಬಿಡು.*

# ದೃಶ್ಯ–34

*ಹಸ್ತಪ್ರತಿಯಲ್ಲಿ: (ಚಲನಚಿತ್ರದಲ್ಲಿ ಇಲ್ಲ)*
*ರಾತ್ರಿ–ರಂಗಪ್ಪನ ಮನೆಯ ಹೊರಗೆ*

*ದತ್ತಣ್ಣ* : *ಇದು ತಪ್ಪಮ್ಮಾ, ಸರೂ ನನ್ ತಂಗಿ ಇದ್ದಾಗೆ. ಪುಟ್ಟ ಕೂಸಿದ್ದಾಗಿನಿಂದ ಅವಳನ್ನ ಈ ಕೈಲೆ ಆಡ್ಸಿ ಬೆಳ್ಸಿದ್ದೀನಿ. ಕಣ್ಣಿಲ್ಲದ ಅವಳಿಗೆ ಇಡೀ ಬಂಗಾಡಿಯ ಗಿಡಮರ ಬಳ್ಳಿಗಳನ್ನ ಮುಟ್ಟಿಸಿ, ಮುಟ್ಟಿಸಿ ತೋರ್ಸಿದಿನಿ. ನನ್ ತಂಗೀಮ್ಮ ಅವಳು. ಕೊನೆ ಉಸಿರಿರೋ ತನ್ಕ ನೋಡ್ಕೋತೀನಿ ಅವಳನ್ನ. ಆದ್ರೆ ಆದ್ರೆ ಅಪ್ಪನ್ ಮದ್ವೆ ಮಾಡ್ಕೋ ಅಂತ ಒತ್ತಾಯಿಸಿದ್ರೆ ತಪ್ಪಮ್ಮ ಅದು ತಪ್ಪು.*

*ದತ್ತಣ್ಣನ ತಾಯಿ* : *ಗೊತ್ತಪ್ಪಾ ಗೊತ್ತು. ಆದ್ರೆ ಏನ್ ಮಾಡ್ಲಿ ಹೇಳೋ? ನಿನ್ನಪ್ಪ ತೀರ್ಕೊಂಡಾಗಿಂದ ರಂಗಣ್ಣನೇ ಅಲ್ವೇನೋ ನಮ್ಮನ್ನೆಲ್ಲ ನೋಡಿಕೊಂಡಿದ್ದು ನಮಗೆ ಆಸರೆ ಕೊಟ್ಟದ್ದು.*

*ದತ್ತಣ್ಣ* : *ಆಸರೆ ಅಲ್ಲ ಅದು ಆಸೆ ದುರಾಸೆ. ಈ ನಮ್ಮ ಆಸ್ತಿಗಾಗಿ ಹಾಕಿರೋ ಸಂಚು. ಈಗ ಅದನ್ನ ಅಧಿಕೃತವಾಗಿ ಲಪಟಾಯಿಸೋ ಹುನ್ನಾರ ಈ ಮದುವೆ. ಇದು ಬಾಲ್ಯ ವಿವಾಹ ಆಗುತ್ತೆ ಅಮ್ಮ. ಅಕ್ಷಮ್ಯ ಅಪರಾಧ ಅದು. ಕಣ್ಣಿಲ್ದೆ ಇರೋದು ಪಾಪ ಆ ಸರೂಗಲ್ಲ, ನಮ್ಮಿಬ್ರನ್ನೂ ಒಟ್ಟಿಗೇ ಬಲಿಕೊಡೋಕೆ ಹೊರಟಿರೋ ನಿಮ್ಗೆ. ಈವತ್ತು ಹಿಂಗಂತಾನೆ. ನಾಳೆ ಆಸ್ತಿ ಆಸೆಗೆ, ಈ ಮೂಕಾಂಬಿಕೆಗೆ ನಿನ್ನ ಗಂಡಂಗೆ ವಿಷಹಾಕು ಅಂತಾನೆ ಆಗೇನ್ಮಾಡ್ತೀಯ?*

*ಮೂಕಾಂಬಿಕಾ* : *ದತ್ತಣ್ಣಾ..*

*ದತ್ತಣ್ಣ* : *ನಾವ್ಯಾರ್ಗೂ ಹೆದ್ರಬೇಕಾಗಿಲ್ಲ ಮೂಕಾಂಬಿಕಾ. ಈ ಮುತ್ತಯ್ಯನ್ನ ಜನ್ಮದಿಂದಲೇ ಒತ್ತೆಯಾಳಾಗಿ ಮಾಡಿದಾನೆ. ನಮ್ಮನ್ನೆಲ್ಲ ಹುಸಿ ಋಣದಲ್ಲಿ ಒತ್ತೆ ಇಡ್ತಾ ಇದಾನೆ.*

*ದತ್ತಣ್ಣನ ತಾಯಿ* : *ನಾನ್ ಏನ್ ಹೇಳ್ಲೋ ರಂಗಣ್ಣನಿಗೆ? ಅವನು ಸಿಟ್ಟು ಬಂದ್ರೆ ಯಾವ್ದಕ್ಕೂ ಹೇಸೋನಲ್ಲೋ. ನಿನ್ನನ್ನ ಬಿಟ್ರೆ ಮತ್ಯಾರೂ ಇಲ್ವೋ ನಂಗೆ ದತ್ತೂ. ಈ ವಿಧವೆ ತಾಯಿಗಾಗಿ ಒಪ್ಕೋಪಾ. ಈ ನಿನ್ನ ತಂಗಿಗಾಗಿ ಒಪ್ಕೊಳೋ*

*ದತ್ತಣ್ಣ* : *ಇಷ್ಟು ದೀನರಾಗ್ಬಾರ್ದಮ್ಮ ನಾವು. ಆತ್ಮಗೌರವ ಇಲ್ದೆ ಯಾವುದಕ್ಕು ಅರ್ಥ ಇಲ್ಲ. ಇಲ್ಲಮ್ಮಾ. ಈ ಮದುವೆಗೆ ನಾನ್ ಒಪ್ಪೋಲ್ಲ.*

## ದೃಶ್ಯ–35

*ಹಸ್ತಪ್ರತಿಯಲ್ಲಿ: (ಚಲನಚಿತ್ರದಲ್ಲಿ ಇಲ್ಲ)*
*ರಾತ್ರಿ–ಒಳಾಂಗಣ–ದತ್ತಣ್ಣನ ಮನೆ*

*(ಎಲ್ಲರೂ ಮಲಗಿ ನಿದ್ರಿಸುತ್ತಿರುವ ಸಮಯದಲ್ಲಿ ದತ್ತಣ್ಣ ಸದ್ದಾಗದಂತೆ ಎದ್ದು ತಾಯಿಗೆ ನಮಸ್ಕರಿಸಿ, ಹೊರಬಂದು ತಂಗಿ ಮೂಕಾಂಬಿಕೆ ಮತ್ತು ಸರೋಜಾರ ಅಸ್ತವ್ಯಸ್ತಗೊಂಡ ಹೊದಿಕೆಗಳನ್ನು ಸರಿಪಡಿಸುತ್ತಿರುವಾಗ ಮುತ್ತಯ್ಯ ಪಿಸು ಧ್ವನಿಯಲ್ಲಿ)*

*ಮುತ್ಯ* : *ಶ್.. ಶ್ಯೂ... ದತ್ತಪ್ಪಾ ಬೇಗಾ, ನೀರು ಏರೋದ್ರೋಳಗೆ ನದಿ ದಾಟ್ಬೇಕು ನೀವು.*

# ದೃಶ್ಯ–36

***ಹಗಲು–ಬಂಗಾಡಿ ಕಣ***

| | | |
|---|---|---|
| | | (ಹಾಡಿನ ಮಧ್ಯದಲ್ಲಿ ದತ್ತಣ್ಣ, ಸರೋಜಾಳ ಕೈ ಹಿಡಿದು ಹಾಡಿನಲ್ಲಿ ನಲಿಯುತ್ತಿರುವುದನ್ನು ಗಮನಿಸುವ ಮಾವಯ್ಯ ರಂಗಪ್ಪ ಅವರನ್ನು ನೋಡಿ ಮನಸ್ಸಿನಲ್ಲಿ ಏನನ್ನೋ ಯೋಚನೆ ಮಾಡುತ್ತಾನೆ ನಂತರ ಎಲ್ಲರನ್ನುದ್ದೇಶಿಸಿ) |
| ಮಾವಯ್ಯ | : | ಎಲ್ಲ ಸ್ವಲ್ಪ ಕೇಳಿ ಇಲ್ಲಿ. ಈ ಸುಗ್ಗಿ ದಿವ್ಸ ನಿಮಗೆಲ್ಲ ಒಂದು ಸಂತೋಷದ ಸುದ್ದಿ. ನನ್ನ ತಂಗಿ ಮಗ ದತ್ತಾತ್ರೇಯ ಹಾಗೂ ನನ್ನ ಮುದ್ದಿನ ಮಗಳು ಸರೋಜ ಇವರಿಬ್ಬರ ವಿವಾಹ ಮಾಡ್ಬೇಕೂಂತ ಇದ್ದೇನೆ. ಮದುವೆ ಸಿದ್ಧತೆ ಮುಂದಿನ ವಾರದಿಂದ.<br>(ಎತ್ತಿಕೊಂಡ ಹುಡುಗಿಯನ್ನು ಇಳಿಸಿದ್ದನ್ನ ನೋಡಿ ನಗುತ್ತ)<br>.. ಯಾಕೋ ಇಳಿಸಿಬಿಟ್ಟೆ? ಭಾವಿ ಹೆಂಡತಿ ಎಂದ ತಕ್ಷಣ ಭಾರವಾಗ್ಬಿಟ್ಳೋ |



| | | |
|---|---|---|
| ದತ್ತಣ್ಣ | : | ಮಾವಯ್ಯ, ಇದೆಂತ ಮಾತಾಡ್ತಿದಿರ?<br>(ಎಂದು ಅವರು ತಗೆದುಕೊಂಡ ನಿರ್ಧಾರದ ಬಗೆಗೆ ಅಸಮಾಧಾನ ವ್ಯಕ್ತಪಡಿಸಲು ಮುಂದೆ ಹೋಗುತ್ತಿದ್ದ ಅಣ್ಣನನ್ನು ತಂಗಿ ಮೂಕಾಂಬಿಕೆ ತಡೆದು) |
| ತಂಗಿ | : | ಅಣ್ಣಾ.. (ದತ್ತಣ್ಣನನ್ನು ತನ್ನ ತಂಗಿ ತಡೆದುದರಿಂದ ಆತ ಅಲ್ಲಿಂದ ತೆರಳುತ್ತಾನೆ) |

# ದೃಶ್ಯ–36ಅ

***ಹಗಲು – ಬಂಗಾಡಿ – ಮಾವನ ಮನೆ***

| | | |
|---|---|---|
| | | (ತನ್ನ ಮತ್ತು ಸರೋಜಾಳ ಮದುವೆ ನಿಶ್ಚಯದ ನಿರ್ಧಾರಕ್ಕೆ ಅಭಿಪ್ರಾಯ ತಿಳಿಸಲು ದತ್ತಣ್ಣ ತನ್ನ ಮಾವನಾದ ರಂಗಪ್ಪನ ಬಳಿ ಬಂದಿದ್ದಾನೆ. ಜೊತೆಗೆ ಅಲ್ಲಿ ಮೂಕಾಂಬಿಕೆ, ಯುವ ಮುತ್ಯ ಎಲ್ಲರೂ ನೆರೆದಿದ್ದಾರೆ ದತ್ತಣ್ಣ ತನ್ನ ಮಾತನ್ನು ಆರಂಭಿಸುತ್ತಾನೆ) |
| ದತ್ತಣ್ಣ | : | ತಪ್ಪು ಇದು. ಸರೂ ನನ್ ತಂಗಿ ಇದ್ ಹಾಗೆ. ಈ ಕೈಗಳಿಂದ ಅವಳನ್ನ ಎತ್ತಿ ಬೆಳೆಸಿದ್ದೇನೆ. ತುತ್ತು ಉಣ್ಸಿದ್ದೀನಿ. ಈಗವ್ಳನ್ನ ಮದುವೆ ಆಗು ಅಂದ್ರೆ ಅಕ್ಷಮ್ಯ ಮಾವಯ್ಯ. ಅಪರಾಧ |
| ಮಾವಯ್ಯ | : | ನನಗೆ ತಪ್ಪು ಸರಿ ಹೇಳುವಷ್ಟು ದೊಡ್ಡ ಜನ ಆಗ್ಬಿಟ್ಯ ನೀನು? |
| ಮೂಕಾಂಬಿಕೆ | : | ಖಂಡಿತ ಇಲ್ಲ ಮಾವಯ್ಯ. ಖಂಡಿತ ಇಲ್ಲ. ಚಿಕ್ಕ ವಯಸ್ಸಲ್ಲೇ ತಂದೆ ತಾಯಿ ಕಳ್ದಕೊಂಡೋರ್ ನಾವು. ಪ್ಲೇಗ್‌ಗೆ ಅವರಿಬ್ಬರೂ ಬಲಿಯಾದಾಗ ಈ ದೊಡ್ಡ ಮನೇಲಿ ನಮ್ಮ ಅಳು ಕೇಳೋಕ್ ಯಾರು ಇರ್ಲಿಲ್ಲ. ಆಗ್ಬಂದು ನಮ್ ಸಾಕ್ದೋರ್ ನೀವು. ನನ್ ಮದುವೇನು ನೀವೆ ಮಾಡ್ಸಿದ್ರಿ. ಈ ಋಣ ದೊಡ್ಡು ಮಾವಯ್ಯ. ಈ ಋಣ ದೊಡ್ಡು. |
| ಮಾವಯ್ಯ | : | ಇಷ್ಟುದ್ದ ಬೆಳೆದ್ ಕೂಡ್ಲೇ ಎಲ್ಲ ಮರ್ತ್‌ಬಿಟ್ನ ಅವ್ನು. ಹೋಗಿ ಹೇಳು ಅವ್ನಿಗೆ (ದತ್ತಣ್ಣನೆಡೆಗೆ ದೂಡುತ್ತಾನೆ) |
| ದತ್ತಣ್ಣ | : | ಇಲ್ಲ, ಏನನ್ನೂ ಮರ್ತಿಲ್ಲ. ಆದ್ರೆ ಇದನ್ನೇ ನೆಪ ಮಾಡ್ಕೊಂಡು ಆ ಚಿಕ್ಕೋಳ್ನ ನನ್ ಕೊರಳ್ಗೆ ಕಟ್ಟೋಕ್ ನೋಡ್ತಿದಿರಲ್ಲ ಅದು ಸರಿಯಲ್ಲ ಅಂದೆ |
| ಮಾವಯ್ಯ | : | ಆ ಋಣ ತೀರ್‍ಸೋ ಜವಾಬ್ದಾರಿ ನಿನಗಿದ್ರೆ ನಾನ್ಹೇಳಿದ್ ಹಾಗೆ ಕೇಳ್ಕೊಂಡು ಹಸೆಮಣೆ ಏರು ಬಾ. ನಾನ್ಹೇಳಿದ್ ಮೇಲೆ ಮುಗೀತು. |
| | | (ಎಂದು ತಾನು ತಗೆದುಕೊಂಡ ನಿರ್ಧಾರ ಆಗಿಯೇ ತೀರಬೇಕೆಂದು ಮತ್ತು ತಾನು ಅವರಿಗೆ ಮಾಡಿದ ಸಹಾಯವನ್ನು ಅವರಿಗೆ ನೆನಪಿಸಿ ಅಲ್ಲಿಂದ ಉಗ್ರವಾಗಿ ಹೊರಡುವನು. ಚಿಂತಿಸುತ್ತ ನಿಲ್ಲುವ ದತ್ತಣ್ಣ ಮತ್ತು ಅವನ್ನೇ ತೀವ್ರವಾಗಿ ನೋಡುತ್ತಿರುವ ಮುತ್ಯಾನ ಮೇಲೆ ದೃಶ್ಯ ಅಂತ್ಯಗೊಳ್ಳುತ್ತದೆ) |

# ದೃಶ್ಯ–37

*ರಾತ್ರಿ–ದತ್ತಣ್ಣನ ಮನೆಯ ಹೊರಗೆ*

(ಹಿಂದಿನ ದೃಶ್ಯದ ದತ್ತಣನ ಭಾವನೆ ಮುಂದುವರೆದಂತೆ ತಾನೇ ಒಂದು ನಿರ್ಧಾರಕ್ಕೆ ಬರುತ್ತಾನೆ. ಇದ್ದು ಸಾಧಿಸುವುದಕ್ಕಿಂತ ಮನೆ ಬಿಟ್ಟು ಹೋಗುವುದೇ ಸರಿಯೆಂದು ರಾತ್ರಿಯ ಕತ್ತಲಲ್ಲಿ ತೀರ್ಮಾನಿಸಿ ಮನೆಯ ಮುಂದಿನ ಅಂಗಳದ ಮಣ್ಣಿಗೆ ನಮಸ್ಕರಿಸಿ ಹೊರಟುಹೋಗುತ್ತಾನೆ.)

## ದೃಶ್ಯ–38

*ಮುಂಜಾನೆ–ದತ್ತಣ್ಣನ ಮನೆಯ ಹೊರಗೆ*

(ಅಣ್ಣ ಮನೆಯಲ್ಲಿಲ್ಲದಿರುವುದನ್ನ ಮನಗಂಡ ತಂಗಿ ಹೊರಗೆ ಹುಡುಕಾಡುತ್ತ ಎಲ್ಲೂ ಸಿಗದೆ ಜೋರಾಗಿ ಕೂಗುತ್ತಾಳೆ. ಇಂಟರ್ ಕಟ್ಸ್‌ಗಳಲ್ಲಿ ಮುತ್ತ್ಯಾ ಕೂಡ ದತ್ತಣ್ಣನಿಗಾಗಿ ಹುಡುಕುತ್ತಾನೆ)

ಮೂಕಾಂಬಿಕೆ : ದತ್ತಣ್ಣ, ದತ್ತಣ್ಣಾ

*(ಇಂಟರ್‌ಕಟ್ಸ್)*

ಮುತ್ಯ : ದತ್ತಣ್ಣಾ..

**ನಿರ್ದೇಶಕರ ಟಿಪ್ಪಣಿ:**

**ಶಂಕರನು ಬಂಗಾಡಿಯ ಅಜ್ಜಿಯನ್ನು ಭೇಟಿಮಾಡಿದ ನಂತರ ಅಜ್ಜಿಯು ಅವನಲ್ಲಿ ತನ್ನ ದತ್ತಣ್ಣನನ್ನು ಗುರುತಿಸುತ್ತಾಳೆ. ಅದೇ ಕಣ್ಣು, ಅದೇ ಮುಖ, ಅದೇ ವ್ಯಕ್ತಿ ಅನ್ನುವ ಹಾಗೆ ತನ್ನ ತಾತನನ್ನೇ ಹೋಲುವ ಮುಖಚರ್ಯೆ ಶಂಕರನದ್ದಾಗಿರುತ್ತದೆ. ಇದನ್ನು ಗುರುತಿಸುವ ಅಜ್ಜಿ ತನ್ನ ದತ್ತಣ್ಣನ ಕಥೆಗೆ ಮುನ್ನುಡಿ ಇಡುತ್ತಾಳೆ. ದಕ್ಷಿಣ ಕನ್ನಡದ ಮಲೆನಾಡು ಪ್ರದೇಶಗಳಲ್ಲಿ ಒಂದು ಬಂಗಾಡಿ, ಆ ಪ್ರದೇಶದ ಕುಡಿಗಳು ದತ್ತಣ್ಣ ಮತ್ತು ಅವನ ತಂಗಿ, ಅಕಾಲ ಮರಣದಿಂದಾಗಿ ತಂದೆತಾಯಂದಿರನ್ನು ಕಳೆದುಕೊಂಡಿರುವ ಇವರನ್ನು ತಾಯಿಯ ಅಣ್ಣ ಸಾಕಿಸಲಹಿರುತ್ತಾನೆ. ಅವನ ಹಂಗಿನಲ್ಲಿ ಅಣ್ಣ–ತಂಗಿಯರಿಬ್ಬರೂ ಬೆಳೆದಿರುತ್ತಾರೆ. ಊರಿನ ಸಾಂಪ್ರದಾಯಿಕ ಹಬ್ಬದ ದಿನದಂದು ಹೊರಡುವ ಸೋದರ ಮಾವನ ನಿರ್ಧಾರ ದತ್ತಣ್ಣನನ್ನು ವಿಚಲಿತಗೊಳಿಸುತ್ತದೆ. ಸೋದರಮಾವನ ಪುಟ್ಟಮಗಳು ಸರೋಜಾಳನ್ನು ದತ್ತಣ್ಣನಿಗೆ ಕೊಟ್ಟು ಮದುವೆ ಮಾಡುವ ವಿಚಾರ ಆತನನ್ನು ವಿಮುಖನನ್ನಾಗಿಸುತ್ತದೆ. ಆ ಸಾಂಪ್ರದಾಯಿಕ ಹಾಡನ್ನು ಮನೋಹರ್‌ರವರು ಅದ್ಭುತವಾಗಿ ದಕ್ಷಿಣ ಕನ್ನಡದ ಹಲವು ಪಾರಂಪರಿಕ ಪದಗಳನ್ನು ಬಳಸಿ ಅವುಗಳ ಮುಖಾಂತರ ಸಾಂಪ್ರದಾಯಕವಾದಂತಹ ರಾಗವನ್ನು ಹಾಕಿ ಅಲ್ಲಿನ ಕರ್ಮಾಚರಣೆಯನ್ನು ಸೂಚಿಸುವಂತಹ ಹಾಡನ್ನು ಬಳಸಲಾಯಿತು ಮತ್ತು ಅದಕ್ಕೆ ನೃತ್ಯ ನಿರ್ದೇಶನ ಮಾಡಿದ "ತಾರಾ"ರವರೂ ಕೂಡ ಬಹಳ ಚೆನ್ನಾಗಿ ಅಲ್ಲಿಯ ಪರಿಕರಗಳನ್ನ ದಕ್ಷಿಣ ಕನ್ನಡದ ಒಟ್ಟಾರೆ ಸಂಪ್ರದಾಯ ಕಣ್ಣಿಗೆ ಕಟ್ಟುವಂತೆ ಬಳಸಿಕೊಂಡಿದ್ದಾರೆ. ಹಾಡು ಮತ್ತು ಹಾಡಿನ ನಂತರ ಆ ನಿರ್ಧಾರವನ್ನು ಕೇಳಿದ ದತ್ತಣ್ಣನ ಮನಃಸ್ಥಿತಿಯನ್ನು ದೃಶ್ಯಗಳಲ್ಲಿ ಗೌರಿಶಂಕರ್ ಬಹಳ ಕಲಾತ್ಮಕವಾಗಿ ಚಿತ್ರೀಕರಿಸಿದ್ದಾರೆ. ಚಿತ್ರಕಥೆಯ ತಿರುವುಗಳನ್ನು ಮತ್ತು ಅದು ತಗೆದುಕೊಳ್ಳುವ ಸ್ವರೂಪಗಳನ್ನು ಗಮನಿಸಿದಾಗ**

ಅಜ್ಜಿಯ ಭೇಟಿಯ ನಂತರದ ಬರುವ ಮೊಟ್ಟಮೊದಲ ಹಿನ್ನೋಟ (ಫ್ಲ್ಯಾಷ್‌ಬ್ಯಾಕ್) ಇದಾಗುತ್ತದೆ. ಆ ದೃಷ್ಟಿಯಲ್ಲಿ ಇಲ್ಲಿಂದಾಚೆಗೆ ಕಥೆಯ ಇನ್ನೊಂದು ಆಯಾಮವೂ ಕೂಡ ಗುರುತಿಸಿಕೊಳ್ಳುತ್ತಾ ಹೋಗುತ್ತದೆ. ಹಿನ್ನೋಟದ (ಫ್ಲ್ಯಾಷ್‌ಬ್ಯಾಕ್) ತಂತ್ರದಲ್ಲಿ ಪ್ರಾರಂಭವಾಗುವ ಈ ಕಥೆಯ ಚಿತ್ರಕಥೆಯಲ್ಲಿರುವ ಹಿನ್ನೋಟಗಳನ್ನು ಸಂಕ್ಷಿಪ್ತಗೊಳಿಸಿ ಹುಡುಕಾಟಗಳನ್ನು ಬಳಸಿಕೊಳ್ಳುತ್ತ ಮತ್ತು ಅಲ್ಲಿದ್ದಂತಹ ಪಾತ್ರಗಳನ್ನು ಮತ್ತು ಪಾತ್ರಪೋಷಣೆಗಳನ್ನು ಬೇರೆ ರೀತಿಯಾಗಿ ಯೋಚನೆಮಾಡಿ ಚಿತ್ರಕಥೆಯಲ್ಲಿ ಬಿರುಸಿನ ವೇಗ ಬರುವ ಹಾಗೆ ತಾಯಿಯ ಪಾತ್ರವನ್ನು ಮತ್ತು ಮುಖ್ಯವಾಗಿ ಸರೋಜಾಳ ಪಾತ್ರದಲ್ಲಿ ಆಕೆ ಕುರುಡಿ ಎನ್ನುವಂತಹ ಪಾತ್ರಪೋಷಣೆಯನ್ನು ತಗೆದುಹಾಕಿ ಆಕೆಯನ್ನು ಚಿಕ್ಕಹುಡುಗಿಯನ್ನಾಗಿಸಿ, ಇನ್ನೂ ಚಿಕ್ಕಹುಡುಗಿಯಾಗಿರುವ ಮತ್ತು ಮದುವೆಯ ವಯಸ್ಸಿಗೆ ಬಾರದಿರುವಂತಹ ಹುಡುಗಿಗೆ ಮದುವೆಯೇ ಎಂಬ ಪ್ರಶ್ನೆಯನ್ನು ದತ್ತಣ್ಣ ಮುಂದಿಡುತ್ತಾನೆ. ಹೀಗಾಗಿ ಸೋದರಮಾವನ ಆಟ ಫಲಿಸದು ಎಂಬ ಮಾತನ್ನು ಇಡೀ ಕಥೆಯನ್ನು ಕೇವಲ ಎರಡು ದೃಶ್ಯಗಳ ಮುಖಾಂತರ ಕಟ್ಟಿಕೊಡುವ ಪ್ರಯತ್ನವನ್ನು ಇಲ್ಲಿ ಮಾಡಲಾಯಿತು. ಬಹಳ ಮುಖ್ಯವಾಗಿ ಹಿನ್ನೋಟ ಪ್ರಾರಂಭವಾಗುವುದೂ ಕೂಡ ಅಜ್ಜಿಯ ಅರವತ್ತು ವರ್ಷಗಳ ಹಿಂದಿನ ನೆನಪಿನೊಂದಿಗೆ. ಹಾಗೆಯೇ ಹಿನ್ನೋಟ ಮುಗಿದನಂತರ ಅರವತ್ತು ವರ್ಷದ ನಂತರದ ಅಜ್ಜಿಯ ಮುಖದ ಮೇಲೆಯೇ "ಮಾರ್ಫಿಂಗ್" ತಂತ್ರಜ್ಞಾನವನ್ನು ಬಳಸಿಕೊಂಡು ಮುಕ್ತಾಯಗೊಳಿಸಲಾಯಿತು.

## ದೃಶ್ಯ–39

*ಹಗಲು–ಶಾನುಭೋಗರ ಮನೆಯ ಹೊರಗೆ*

(ಯುವ ಮೂಕಾಂಬಿಕೆಯ ಮುಖಭಾವದಿಂದ ಮಾರ್ಫಿಂಗ್ ಆಗಿ ಅಜ್ಜಿಯ ಸುಕ್ಕುಗಟ್ಟಿದ ಮುಖ ಮೂಡುತ್ತದೆ. ಹಿನ್ನಲೆಯಲ್ಲಿ ದತ್ತಣ್ಣ ಎನ್ನುವ ಆಕೆಯ ದನಿ ಮಾರ್ದನಿಯಾಗುತ್ತಿರುತ್ತದೆ. ಇಡೀ ಹಿಂದಣ ಕಥೆಯನ್ನು ಕೇಳಿದ ನೆರೆದಿದ್ದವರೆಲ್ಲರು ಮೂಕವಿಸ್ಮಿತರಾಗಿ ಅಜ್ಜಿಯನ್ನೇ ನೋಡುತ್ತಿರುತ್ತಾರೆ. ಶಂಕರ ಅಜ್ಜಿಯ ತೊಡೆಯ ಮೇಲೆ ಮಲಗಿದ್ದಾನೆ.)

ಅಜ್ಜಿ : ದತ್ತಣ್ಣ.. ದತ್ತಣ್ಣ.. (ಎಂದು ಕನವರಿಸುತ್ತಿರುವಾಗ)

ಶಂಕರ : ಅಜ್ಜಿ ಯಾಕ್ ಅಳ್ತಾ ಇದಿಯ?
(ಕಣ್ಣೀರೊರೆಸುತ್ತ)
.. ಅಳ್ಬೇಡ

ಅಜ್ಜಿ : ಅಳ್ತಾ ಇಲ್ಲ ಮಗು. ಮನ್ಸಲ್ ಬತ್ ಹೋಗಿದ್ದ ಆ ಕಾಲದ್ ನದಿ ನೀರಪ್ಪ ಇದು. ಹರೀಲಿ ಬಿಡು ಹರೀಲಿ ಬಿಡು. ನೋಡು ಬಾಯಿಲ್ಲಿ..
(ಬೆಟ್ಟವನ್ನು ತೋರಿಸುತ್ತ)

*ಹಸ್ತಪ್ರತಿಯಲ್ಲಿ: (ಚಲನಚಿತ್ರದಲ್ಲಿ ಇಲ್ಲ)*

*ಮುತ್ಯ : ಅಮ್ಮಾ, ಬೆಳಿಗ್ಗೆ ಬೆಟ್ಟದಲ್ಲಿ ಇವರನ್ನ ಕಂಡೆ. ದತ್ತಣ್ಣನೇ ಕನಸಲ್ಲಿ ಬಂದು ಭೇಟಿ ಕೊಟ್ಟಂಗ್ಹಾಯ್ತು.*

*ಅಜ್ಜಿ : ಹೌದು ಮುತ್ತಯ್ಯ, ಅರವತ್ತು ವರ್ಷದ ಹಿಂದೆ ಹೋಗಿದ್ದ ನಮ್ಮ ಚೆಂದದ ದತ್ತಣ್ಣ, ಹಾಗೇ ಇದ್ದಕಿದ್ದ ಹಾಗೇನೆ ಬಂದ್ಬಿಟ್ಟ ನೋಡು. ದೇವ್ರು ನನ್ನನ್ನ ತೇದು ತೇದು ಇನ್ನೂ ಯಾಕೆ ಇಟ್ಟಿದ್ದಾನೆ ಅಂತಿದ್ದೆ. ಈಗ ಗೊತ್ತಾಯ್ತು ನಿನ್ನನ್ನ ನೋಡೋಕೆ ಅಂತ. ಇನ್ನು ಪರವಾಗಿಲ್ಲ, ಇನ್ನೊಂದು ಕ್ಷಣಕ್ಕೆ ನನ್ನ ಜೀವಹೋದರೂ ನನಗೇನೂ ಕೊರಗಿಲ್ಲ.*

*ಶಂಕರ : ಅಜ್ಜಿ ಇಲ್ಲಾ ಅಜ್ಜಿ. ವಿಠೂ ನನ್ ತಮ್ಮ. ಪೈಲಟ್ ಅವ್ನು. ಅವ್ನೂ ನಿನ್ನ ನೋಡ್ಬೇಕು. ಬರೇ ನೋಡೋದಷ್ಟೇ ಅಲ್ಲ ನಿನ್ನನ್ನ ಕರ್ಕೊಂಡ್ ಹೋಗ್ಬೇಕು ನಾವು. ನಿನ್ನ ಆಶೀರ್ವಾದ ಬೇಕು ನಂಗೆ.*

| | | |
|---|---|---|
| *ಅಜ್ಜಿ* | *:* | *ಇನ್ನೆಲ್ಲಿ ಕರ್ಕೊಂಡ್ ಹೋಗ್ತೀಯಾ ಕಂದಾ, ನೋಡು ಅದೇ ನಮ್ ಬಂಗಾಡಿ ಬೆಟ್ಟ. ಅಲ್ಲೇ ಇತ್ತು ನಮ್ ಮನೆ. ದೊಡ್ಡ ಮನೆ. ದತ್ತಣ್ಣ ಹೋದ್ಮೇಲೆ ಅಮ್ಮ ಹುಚ್ಚೀನೇ ಆಗ್ಬಿಟ್ಲು. ಒಂದು ದಿನ ನಮ್ಮನ್ನೆಲ್ಲಾ ಬಿಟ್ಟು ಸೀತಾನದಿಗೆ ಹಾರೇಬಿಟ್ಲು. ರಂಗಣ್ಣನಿಗೆ ಲಕ್ವಾ ಹೊಡೀತು. ಆಳುಕಾಳು ಎಲ್ಲಾ ಹೋಗಿ ಮನೆ ದೆಸೆಗೆಟ್ಟುಹೋಯ್ತು. ಆ ರಂಗಣ್ಣನ ಮೊಮ್ಮಗನೇ ಈ ಶಾನುಭೋಗ. ಸಣ್ಣವ್ನಿದ್ದ ಒದ್ದಾಡಿ ಒದ್ದಾಡಿ ಬೆಳ್ಸಿದ್ದೀನಿ ಅವನನ್ನ.* |
| | | .. ಅದೇ ನಮ್ಮ ಬಂಗಾಡಿ ಬೆಟ್ಟ. ಅಲ್ಲೇ ಇತ್ತು ನಮ್ಮನೆ. ದೊಡ್ಡ ಮನೆ. ಈ ಜೀವಕ್ಕಿರೋದು ಒಂದೇ ಹಂಬಲ ಮಗೂ. ಮತ್ತೆ ಆ ಬಂಗಾಡಿ ಮನೆ ಮೊದ್ಲಿನ್ ಹಾಗೆ ಆಗ್ಬೇಕು. ಅಲ್ ಒಲೆ ಉರೀಬೇಕು. ತುಂಬ ಜನ ಇರ್ಬೇಕು. ಮತ್ತೆ ನಾನ್ ಅಲ್ಲೀಗ್ ಹೋಗ್ಬೇಕು. ಈಗ್ ನೀನ್ ಬಂದೀದಿಯಲ್ಲ.. ಮನೆ ಕಟ್ಸೋ ಮಗು. |
| ಸೀತಾರಾಮ್ | : | ಅಜ್ಜೀ, ಇಲ್ಲೇ ಇರಕ್ ಬಂದಿಲ್ಲ ಅವ್ನು. ಸುಮ್ನೆ ತಿರ್‍ಗಾಡ್ಕೊಂಡ್ಹೋಗೋಕ್ ಬಂದಿದಾನೆ. ದಿಲ್ಲಿಲಿ ಎಷ್ಟ್ ದೊಡ್ಡ ಇಂಜಿನಿಯರ್ ಅವ್ನು. ಇವತ್ತೆ ಹೊರ್‍ಟ ಊರಿಗೆ ತಿರುಗಿ ವಾಪಸ್ಸು.. ಅಲ್ವಾ. |
| ಎಳಚಿ | : | ಹ್ಯಾಗೂ ಬಂದಿದಾರಲ್ಲ. ನೋಡ್ಕೊಂಡ್ ಹೋಗ್ತಾರೆ ಬಿಡಿ. ಪಾಪ ಅಜ್ಜೀಗು ತುಂಬ ಆಸೆ.<br>(ಎಂದು ಎಳಚಿತ್ತಾಯರು ದಾರಿ ತೋಚದೆ ಅಡ್ಡಗೋಡೆಯ ರೀತಿ ಮಾತನಾಡುತ್ತಾರೆ) |
| ಮುತ್ಯ | : | ಬನ್ನಿ ದತ್ತಪ್ಪಣ್ಣ, ಬನ್ನಿ, ಜಾಗ ತೋರ್‍ಸ್ತೀನಿ ಬನ್ನಿ. |
| ಅಜ್ಜಿ | : | ಹೋಗೋ.<br>(ಅಜ್ಜಿ ನಮ್ಮ ಜಾಗವನ್ನಾದರೂ ನೋಡಲಿ ಎಂದು ಅವನನ್ನು ಹೋಗಲು ಹೇಳುತ್ತಾರೆ. ಶಂಕರನಿಗೆ ಅಜ್ಜಿಯ ಕಣ್ಣುಗಳಲ್ಲಿ ಕಾಣುತ್ತಿರುವ ಮಹದಾಸೆಗಳನ್ನು, ಆಶಾಗೋಪುರಗಳನ್ನು ನೋಡಿ ಅವರ ನಿರಾಸೆಯನ್ನೂ ಗಮನಿಸಿ ಏನೂ ಮಾಡಲಾಗದ ಸ್ಥಿತಿಯಲ್ಲಿ ಅವರನ್ನು ನೋಡುತ್ತಾನೆ) |

**ನಿರ್ದೇಶಕರ ಟಿಪ್ಪಣಿ:**

**ದೃಶ್ಯ 39 ಒಟ್ಟಾರೆಯಾಗಿ ಪುನರ್‌ಸೃಷ್ಟಿಯಾಗಿದೆ (ರೀ–ವರ್ಕ್). ಕಾರಣ ಅಜ್ಜಿ ಮತ್ತು ಮೊಮ್ಮಗನ ಸಂಬಂಧ ಗಾಢವಾಗಬೇಕಾದದ್ದು ಹಾಗೂ ಅಲ್ಲಿರುವವರಲ್ಲಿ ಮತ್ತು ಬಂದವರಲ್ಲಿ ಇರುವ ದ್ವಂದ್ವ ಮನಸ್ಥಿತಿಗಳನ್ನು ಹೇಳುವಂತೆ ಇಡೀ ದೃಶ್ಯವನ್ನು ಪುನರ್‌ಸೃಷ್ಟಿಮಾಡಿ ಚಿತ್ರೀಕರಿಸಲಾಗಿದೆ. ಅದಕ್ಕೆ ತಕ್ಕಂತೆ ಸಂಭಾಷಣೆಯನ್ನು ಬೇರೆಯಾಗಿಯೇ ಬರೆಯಲಾಯಿತು.**

# ದೃಶ್ಯ-40

*ಹಗಲು-ಬಂಗಾಡಿಯ ಕಾಡು*
*ಹಸ್ತಪ್ರತಿಯಲ್ಲಿ: (ಚಲನಚಿತ್ರದಲ್ಲಿ ಇಲ್ಲ)*

| | | |
|---|---|---|
| *ಮುತ್ಯ* | : | *ಅಗೋ ನೋಡಿ ಅದೇ ನದಿ. ಅದನ್ನು ದಾಟಿಕೊಂಡೇ ಬಂದದ್ದು ನಿನ್ನೆ ನೀವು. ಆಚೆಗೆ ಮುದ್ರಾಡಿ, ಬೆಳ್ತಂಗಡಿ ಎಲ್ಲಾ* |
| *ಶಂಕರ* | : | *ಓಹೋ, ಅಂದ್ರೆ ಹೊಳೆ ದಾಟಿದ್ರೇನೇ ದೂರ ಜಗತ್ತಿನ ಸಂಪರ್ಕ ಅನ್ನು.* |
| *ಮುತ್ಯ* | : | *ಹ್ದೂಂ. ಮಳೆಗಾಲದಲ್ಲಂತೂ ದಾಟೋದಿರಲಿ, ಆ ಹೊಳೆ ಮುಟ್ಟೋ ಹಾಗೇ ಇಲ್ಲ. ಅಷ್ಟು ರಭಸ* |
| *ಶಂಕರ* | : | *ಆಗ ಏನ್ಮಾಡ್ತೀರಾ ಚಾಚಾ?* |
| *ಮುತ್ಯ* | : | *ಮಾಡೋದೇನು. ಸುಮ್ಮನಿರೋದು ಇಲ್ಲೇ. ಒಂದು ಲೆಕ್ಕಕ್ಕೆ ಒಳ್ಳೇದೇ ಬಿಡಿ. ಆಗ ಯಾವ ಮಕ್ಕಳೂ ಊರು ಬಿಟ್ಟು ಹೋಗೋದಿಲ್ಲ. ಅಯ್ಯಾ ಬೇಸರ ಮಾಡಬೇಡಿ. ನೀವಿರೋದೇ ಒಂದಿನ ನಿಮ್ಮನ್ನ ದತ್ತಣ್ಣ ಅಂತ ಕರೀಲಾ?* |
| *ಶಂಕರ* | : | *ಆಂ.. ಹ್ದಾಂ..ಹ್ದಾಂ.. (ಒಪ್ಪಿಗೆ ಸೂಚಿಸುತ್ತಾನೆ)* |
| *ಮುತ್ಯ* | : | *ನೋಡಿ, ಇದೆಲ್ಲ ನಿಮ್ಮ ಪೂರ್ವಿಕರ ಕಾಲದಲ್ಲಿ ಸಾಗುವಳಿ ಆಗಿದ್ದ ಭೂಮಿ. ನನ್ನ ಕಣ್ಣಾರೆ ಪಾಳು ಬಿದ್ದು ಹೋಯ್ತು.* |
| *ಶಂಕರ* | : | *ಚಾಚಾ, ನನಗೆ ದತ್ತಣ್ಣಂದೇ ವಯಸ್ಸು. ಯಾರ್‍ಯಾರಿದಾರೆ ಮನೇಲಿ?* |
| *ಮುತ್ಯ* | : | *ಯಾವ ದೈವದ ಕಣ್ಣು ಬಿತ್ತೋ ಏನೋ. ಕೈಗೆ ಬಂದ ಮಕ್ಕಳೆಲ್ಲ ತೀರಿಹೋದ್ರು, ಮರಿಮಕ್ಳು ಪಟ್ಟಣ ಅಂತ ಹೋದ್ರು. ಊರಿಗೊಂದು ಬಂಡೆ ಹಾಗೆ ಗತಿ ಇಲ್ಲದೆ ಇದ್ದೇನೆ. ಸಾಕಿ ಬೆಳೆಸಿದ ಕೂಸುಗಳೆಲ್ಲ ಕಣ್ಣಮುಂದೆ ಸತ್ತು ಹೋದಮೇಲೆ ನಾನೊಬ್ಬ ಯಾಕೆ ಇದ್ದೇನೆ ಅನ್ನೋದು ತಿಳಿದೇ ಇಲ್ಲ. ಆ ರಾತ್ರಿ ದತ್ತಣನನ್ನ ನದಿ ದಾಟಿಸಿ ಕಳಿಸಿದ್ದೆನಲ್ಲಾ ಅದೇ ಮನಸ್ಸಿನಲ್ಲಿದೆ ಇನ್ನೂ. ಆವತ್ತಿಂದ್ಲೂ ಒಂದೇ ಕೊರಗು. ನಾನೇ ಕಳಿಸಿಬಿಟ್ನಲ್ಲಾ ಅಂತ. ಇಲ್ದಿದ್ರೆ ಆಸ್ತಿ ಆಸೆಗೆ ಮುಗಿಸೇಬಿಟ್ಟಿರೋರು. ದತ್ತಣ್ಣ ಅದೋ ನೋಡಿ ನಿಮ್ಮ ಅಜ್ಜಿ ನೆಟ್ಟಿದ್ದ ಹೆಬ್ಬಲಸಿನ ಮರ! ಶಂಕರ- ಪಾಪ, ಅಜ್ಜೀ* |

***ಜಗಲೀಲಿ ಕೂತ್ಕೊಂಡು ಯಾವಾಗ್ಲೂ ಈ ಬೆಟ್ಟಾನೇ ನೋಡ್ತಾ ಇರುತ್ತೇನೋ ಅಲ್ವಾ?***
***(ನಂತರ ಅಲ್ಲಿ ಒಂದು ಒಲೆಯನ್ನ ನೋಡಿ)***
***.. ಯಾವ್ ಕಾಲ್ದಲ್ಲಿ ಅದೆಷ್ಟು ಜನರಿಗೆ ಊಟ ಬೇಯಿಸಿತೋ ಈ ಒಲೆ?!***

# ದೃಶ್ಯ–41

*ಹಗಲು–ಶಾನುಭೋಗರ ಮನೆಯ ಒಳಗೆ*
*ಹಸ್ತಪ್ರತಿಯಲ್ಲಿ: (ಚಲನಚಿತ್ರದಲ್ಲಿ ಇಲ್ಲ)*

*ಶಾನುಭೋಗ* : *ಶಕ್ಯವೇ ಇಲ್ಲ. ಕಣ್ಣು ಮೂಗು ಹೋಲ್ಕೆ ಇದ್ರೆ ಆಗ್ಹೋಯ್ತು? ಹೋಗೋ ಕಾಲ ಬಂದಿದೆ ನಿನಗೆ*

*ಅಜ್ಜಿ* : *ಕಣ್ಣಾರೆ ನೋಡ್ದೆ. ಕಣ್ಣು ಸುಳ್ಳಾಗ್ಬಹುದು. ಆದ್ರೆ ಅಂತಃಕರಣ ಸುಳ್ಳಾಗೋದಿಲ್ಲ ರಂಗ.*

*ಶಾನುಭೋಗ* : *ಅಂತಃಕರಣ ಅಲ್ಲ, ಅರಳು ಮರಳು ನಿನಗೆ. ಯಾರೇ ಹೊಸಬರು ಬರಲಿ ದತ್ತಣ್ಣನ ಮೊಮ್ಮಗನ ಥರಾ ಕಾಣ್ತಾರೆ ನಿನಗೆ. ಆಸ್ತಿ ಆಸೆಗೆ ಯಾರಾದ್ರು ಬಂದು.. ನಾನು ಬಂಗಾಡಿ ದತ್ತಾತ್ರೇಯನ ಮಗ ಅಂದುಬಿಟ್ರೆ ಆಗ್ಹೋಯ್ತಾ? ಪಾಳು ಬಿದ್ದಿದೆಯಲ್ಲ ಜಮೀನು ಕಣ್ಣು ಕುಕ್ಕುತ್ತೆ. ಗುಳುಂ ಮಾಡೋದಕ್ಕೆ ಯಾರೂ ಹೇಳಬಹುದಲ್ಲ ಹಾಗೆ. ಶಾನುಭೋಗ ನಾನು. ಹಾಗೆಲ್ಲ ಫಟೀ ಬೀಳೂವನಲ್ಲ.*

*ಶ್ರೀಮತಿ* : *ಸುಮ್ಮನೆ ಊರು ನೋಡೋಕೆ ಬಂದವರಂತೆ ಅಪ್ಪಾ. ಎಳಚಿತ್ತಾಯರು ಕರ್ಕೊಂಡ್ರು ಬಂದಿದ್ರು. ಒಳ್ಳೇ ಜನಾ. ಇವ್ತೇ ತಿರುಗಿ ದಿಲ್ಲಿಗೆ ಹೊರ್ಟಿದ್ದಾರೆ.*

*ಶಾನುಭೋಗ* : *ಸುಮ್ಮನಿರೇ ನೀನು. ಶಿಶುವಿಹಾರದಲ್ಲಿ ಹೋಗಿ ಪಾಠಮಾಡು ಸಾಕು. ಇಲ್ಲಿ ಬಾಯ್ ಬಿಡಬೇಡ. ಮತ್ತೆ ಸತ್ಕಾರ ಆಯ್ತಾ ಅವರದು? ರಸ್ತೇಲಿ ಹೋಗುವರನ್ನೆಲ್ಲ ಮನೆಗೆ ತಂದು ಅವಲಕ್ಕಿ ತಿನ್ನಿಸಿ ಮುಳುಗಿಸಿ ಬಿಡ್ತೀರಿ ನನ್ನ. ಈ ಬಂಗಾಡಿ ಜಮೀನೆಲ್ಲಾ ನನ್ನ ದೇಖರೇಖೇಲಿ ಇದೆ, ಭಲೇ ನನ್ಮಗನೆ. ನಾನಿಲ್ದೆ ಇರೋ ಸಮಯ ಸಾಧಿಸಿ, ಎಳಚಿತ್ತರಾಯನ ಬುರುಡೆಗೂ ಎಣ್ಣೆ ಸವರಿ ನಿನ್ನ ಅಂತಃಕರಣನೂ ಅಲ್ಲಾಡಿಸಿ ದತ್ತಣ್ಣನ ಮೊಮ್ಮಗ ಅಂತ ಝಂಡಾ ಹಾರಿಸಿ ಹೋಗಿಬಿಟ್ನಲ್ಲಾ. ದತ್ತಣ್ಣನ ಈ ಮರಿ ಅವತಾರಾನ ನಾನು ನೋಡೋದು ಬೇಡ್ವಾ? ಯಾವ ಕಡೆ ಹೋದ ಅವ್ನು?*

ನಿರ್ದೇಶಕರ ಟಿಪ್ಪಣಿ:
ಚಿತ್ರೀಕರಣದ ಸಮಯದಲ್ಲಿ ದೃಶ್ಯ 40 ಮತ್ತು 41ನ್ನು ಕೈಬಿಡಲಾಗಿದೆ.

# ದೃಶ್ಯ–42

*ಹಗಲು–ಬಂಗಾಡಿ ಬೆಟ್ಟ*
*ಹಸ್ತಪ್ರತಿಯಲ್ಲಿ: (ಚಲನಚಿತ್ರದಲ್ಲಿ ಇಲ್ಲ)*

| | | |
|---|---|---|
| | | *(ಪಾಳುಬಿದ್ದ ಮನೆಯೊಳಗೆ ಶಂಕರ ಮತ್ತು ಮುತ್ಯ ಬರುತ್ತಾರೆ)* |
| *ಮುತ್ಯ* | : | *ಇದೆಲ್ಲ ನಿಮ್ಮದೇ, ಮನೇವ್ರೆನ್ನೆಲ್ಲ ಕರ್ಕೊಂಡ್ ಬಂದ್ಬಿಡಿ ಇಲ್ಲೇ.* |
| *ಶಂಕರ* | : | *ಹ್ಹು ಹ್ಹು ಹ್ಹು ತುಮ್ ಭೀ ಚಾಚಾ* |
| *ಮುತ್ಯ* | : | *ಅಯ್ಯಾ, ಈ ಚಾಚಾ.. ಊಹ್ಞೂಂ ಮುತ್ತಯ್ಯ ಅನ್ನಿ ಸಾಕು.* |
| *ಶಂಕರ* | : | *ಓಕೆ* |
| *ಮುತ್ಯ* | : | *ಓಕೇನೂ ಬೇಡ. ಮುತ್ತಯ್ಯ ಅನ್ನಿ, ಮುತ್ತಯ್ಯ ಸಾಕು.* |
| *ಶಂಕರ* | : | *ಮುತ್ತಯ್ಯ, ನಮ್ಮ ಮನೆಯವರು ಇಲ್ಲೆಲ್ಲ ಬರೋಹಾಗೇ ಇಲ್ಲ.* |
| *ಮುತ್ಯ* | : | *ಯಾಕೆ?* |
| *ಶಂಕರ* | : | *ಅವರೂ ಉಪ್ಪಿನಕಾಯೀನೂ ಚಮಚದಲ್ಲಿ ತಿನ್ನೋ ಜನ* |
| *ಮುತ್ಯ* | : | *ಚಮಚ ಅಂದ್ರೆ?* |
| *ಶಂಕರ* | : | *ಸೌಟು, ಇರುತ್ತಲ್ಲ. ಸೌಟು ಅದರ ಮರಿ. ಪುಟ್ಟದು.* |
| *ಮುತ್ಯ* | : | *ಸೌಟೂ ಮರಿ ಹಾಕುತ್ತಾ ಅಲ್ಲಿ?* |
| *ಶಂಕರ* | : | *ಸೌಟೇನು ಮುತ್ತಯ್ಯಾ.. ದುಡ್ಡೇ ಮರಿ ಹಾಕುತ್ತೆ ಅಲ್ಲಿ* |
| | | *(ಮೇಲೆ ಹೋಗುತ್ತಿರುವ ವಿಮಾನವನ್ನು ನೋಡಿ)* |
| | | *.. ಗ್ರೇಟ್ ಮುತ್ತಯ್ಯ ನಿಮ್ಮೂರಿನ ಆಕಾಶದಲ್ಲಿ ವಿಮಾನಾನೂ ಹೋಗುತ್ತೇ.* |
| *ಮುತ್ಯ* | : | *ಹೌದು ವಾರಕ್ಕೆರೆಡು ಸಲ ಹೋಗ್ತದೆ.* |
| *ಶಂಕರ* | : | *ನನ್ ತಮ್ಮ ವಿಶೂ, ವಿಮಾನದಲ್ಲಿ ಪೈಲೆಟ್ ಪೈಲೆಟ್. ಡ್ರೈವರ್ ವಿಮಾನದ ಡ್ರೈವರ್.* |
| | | (ಮೊದಲಬಾರಿಗೆ ಬಂಗಾಡಿಗೆ ಬಂದಿರುವ ಶಂಕರನಿಗೆ ಆ ಪ್ರದೇಶದ ಮತ್ತು ಅವರ ಜಾಗಗಳ ಬಗೆಗೆ ಮಾಹಿತಿಯನ್ನು ನೀಡುತ್ತ ಮುತ್ಯ ಅವರನ್ನು ಅಲ್ಲಿಗೆ |

ಕರೆದೊಯ್ಯುತ್ತಿದ್ದಾನೆ)

ಮುತ್ಯ : ಇದೇ ಬಂಗಾಡಿ ಬೆಟ್ಟ. ಇದ್ರ ತಪ್ಪಲಲ್ಲೇ ನೇತ್ರಾವತಿ ನದಿ ಇರೋದು. ಅದನ್ನೇ ನೀವು ನೆನ್ನೆ ದಾಟಿಕೊಂಡು ಬಂದದ್ದು. ಅದ್ರಾಚೆ ಮುದ್ರಾಡಿ, ಬೆಳ್ತಂಗಡಿ ಎಲ್ಲ.

ಶಂಕರ : ಓ ಈ ನದಿ ದಾಟಿದ್ರೇನೆ ನಿಮ್ಗೆ ಬೇರೆ ಜಾಗಕ್ಕೆ ಸಂಪರ್ಕ ಅನ್ನಿ

ಮುತ್ಯ : ಹ್ಹೂಂ, ಮಳೆಗಾಲದಲ್ಲಿ ನದಿಯನ್ನು ದಾಟುವುದಂತು ಇರಲಿ ಹೊಳೆಯ ನೀರನ್ನು ಮುಟ್ಟಲೂ ಆಗುವುದಿಲ್ಲ. ಅಷ್ಟೊಂದು ರಭಸ. ದತ್ತಣ್ಣ ನಿಮ್ಮ ತಮ್ಮನನ್ನು ಯಾಕೆ ಕರೆದುಕೊಂಡು ಬರಲಿಲ್ಲ.

ಶಂಕರ : ವಿಠೂನ, ಅವನ್ಗೆಲ್ಲಿ ಪುರುಸೊತ್ತಿದೆ. ಅವ್ನು ಪೈಲೆಟು.

ಮುತ್ಯ : ಹಾಗಂದ್ರೆ?

ಶಂಕರ : ವಿಮಾನ ಇದ್ಯಲ್ಲ ಅದನ್ನ ಹಾರ್ಸ್ತಾನೆ



ಮುತ್ಯ : ದತ್ತಪ್ಪಣ್ಣ, ಈಗ್ ನಾವ್ ಹೋಗ್ತಾ ಇದೀವಲ್ಲ ಆ ನೆಲಯೆಲ್ಲ ನಿಮ್ಮದೇ. ಇದೇ ಇದೇ ಜಾಗ ನಿಮ್ಮ ಪೂರ್ವಿಕರೆಲ್ಲ ವಾಸಮಾಡ್ತಿದ್ದ ನೆಲ. ನಾನು ನೋಡ್ತ ನೋಡ್ತಾ ಇದ್ದಾಗ್ಲೇ ಎಲ್ಲ ಎಲ್ಲ ಪಾಳ್ ಬಿದ್ದಹೋಯ್ತು. (ದುಃಖಿಸುವನು)

ಸೀತಾರಾಮ : ಅಯ್ಯೋ ಶಂಕ್ರ ಇದನ್ನೆಲ್ಲ ನೋಡ್ತಾ ಕೂತ್ಕೊಂಡ್ರೆ ಹೊತ್ತಾಗುತ್ತೋ. ಅದೇನೋ ಬೇಗ ನೋಡ್ಕೊಂಡ್ ಬಾ. ನಾ ಮುಂದ್ ಹೋಗಿ ಹೊರ್ಡೋ ವ್ಯವಸ್ಥೆ ಮಾಡಿರ್ತೀನಿ.

ಮುತ್ಯ : ಬನ್ನಿ ದತ್ತಣ್ಣ ಬನ್ನಿ (ಸೀತಾರಾಮ ಹೋದರೂ ಮುತ್ಯಾನ ಉತ್ಸಾಹ ಕುಂದದೆ ಶಂಕರನನ್ನು ಅವರ ಜಾಗಗಳನ್ನು ತೋರಿಸಲು ಕರೆದೊಯ್ಯುತ್ತಾನೆ)

| | | |
|---|---|---|
| ಮುತ್ಯ | : | ಮನಸ್ ಮಾಡಿ ದತ್ತಣ್ಣ. ಮನೆ ಕಟ್ಟಿ, ಮತ್ತ್ ಒಲೆ ಉರ್ಸೀ.<br>(ಪಾಳುಮನೆಯ ವೀಕ್ಷಣೆಯಲ್ಲಿದ್ದ ಶಂಕರನಿಗೆ ಬಾಗಿಲೊಂದನ್ನು ತೆರೆದಾಗ ಒರ್ವ ವ್ಯಕ್ತಿಯೊಬ್ಬನನ್ನು ಕಂಡು ಅವಾಕ್ಕಾಗುತ್ತಾನೆ. ಅವರು ಯಾರೆಂದು ಕುತೂಹಲದಿಂದ ನೋಡುವ ಶಂಕರನಿಗೆ ಮುತ್ಯ..) |
| ಮುತ್ಯ | : | ಶ್ಯಾನ್‌ಭೋಗ್ರು. ರಂಗರಾಯ್ರು. |
| ಶಂಕರ | : | ನಮಸ್ಕಾರ<br>(ಕೈ ಮುಗಿಯುವನು, ಪ್ರತಿಯಾಗಿ ಶಾನುಭೋಗನೂ ಬಲವಂತದಲ್ಲಿ ಕೈ ಮುಗಿಯುತ್ತಾನೆ) |
| ಶಾನುಭೋಗ | : | ತಾವೇನೋ ದತ್ತಣ್ಣನ ಅಪರಾವತಾರ. ನಾನಿಲ್ಲದಿದ್ದಾಗ ಮನೆಗ್ ಬಂದಿದ್ದರಂತೆ ಸಂತೋಷ. ನೀವು ಒಮ್ಮೆ ಡೆಲ್ಲಿಗೆ ಹೋದರೆ ಮತ್ತೆ ಬರುವ ಜನ ಅಲ್ಲ. ಅದಕ್ಕೆ ನೋಡೇ ಬಿಡುವ ಅಂತ ಬಂದೆ. ಇಗೊಳ್ಳಿ ನಮ್ಮ ತೋಟದ ಅಡಿಕೆ. ಡೆಲ್ಲಿಗೆ ಹೋದಾಗ ಇಲ್ಲಿಯ ನೆನಪಿಗೆ ಅಲ್ಲಿ ಹಾಕೋಳಿ ಆಯ್ತ?<br>(ಅಷ್ಟರಲ್ಲಿ ವಿಮಾನವೊಂದು ಹಾರುವ ಸದ್ದಾದಾಗ ಮುತ್ಯ ಶಂಕರನಿಗೆ ಆತನ ತಮ್ಮನ ನೆನಪನ್ನು ಮಾಡುತ್ತಾನೆ. ಎಲ್ಲರೂ ಆಕಾಶವನ್ನೇ ದಿಟ್ಟಿಸಿ ನೋಡುವರು) |

**ನಿರ್ದೇಶಕರ ಟಿಪ್ಪಣಿ:**

**ದೃಶ್ಯ 40, 41 ಮತ್ತು 42 ಈ ಮೂರೂ ದೃಶ್ಯಗಳನ್ನು ಸಮೀಕರಿಸಿ ಒಂದು ದೃಶ್ಯವಾಗಿ ಯೋಚನೆಮಾಡಿ ಆ ದೃಶ್ಯದಲ್ಲಿ ಶಾನುಭೋಗರನ್ನು ಮನೆಯಲ್ಲಿ ಮೊಟ್ಟಮೊದಲು ತೋರಿಸುವುದರ ಬದಲು ಎರಡು ವಿರುದ್ಧ ದೃಷ್ಟಿಕೋನಗಳಿರುವ ಪಾತ್ರಗಳು ಏಕಾಏಕಿ ಮುಖಾಮುಖಿಯಾಗುವ ಹಾಗೆ ಶಾನುಭೋಗನ ಪಾತ್ರಪೋಷಣೆಯಲ್ಲೂ ಅದರ ಪರಿಚಯವನ್ನು ಬಹಳ ನಾಟಕೀಯವಾಗಿ ಬರಬೇಕೆನ್ನುವ ಉದ್ದೇಶದಿಂದ ಶಾನುಭೋಗರ ಮನೆಯ ದೃಶ್ಯವನ್ನು ತಗೆದುಹಾಕಿ ಶಂಕರ ಹಾಗೂ ಶಾನುಭೋಗರ ಮುಖಾಮುಖಿಯನ್ನು ಹಳೆಯ ಮನೆಯ ಜಾಗದಲ್ಲಿ ನಡೆಯುವ ಹಾಗೆ ಮತ್ತು ಅಲ್ಲಿಂದ ನೇರವಾಗಿ ದೆಹಲಿಯ ವಿಮಾನ ನಿಲ್ದಾಣಕ್ಕೆ ಶಂಕರ ಮತ್ತು ವಿಠೂನ ಭೇಟಿಗೆ ಮುನ್ನುಡಿ ಬರೆಯುವ ಹಾಗೆ ದೃಶ್ಯವನ್ನು ಪುನರ್‌ಸೃಷ್ಟಿಮಾಡಲಾಯಿತು.**

# ದೃಶ್ಯ–43

***ಹಗಲು–ವಿಮಾನ ನಿಲ್ದಾಣದ ಆವರಣ***

| | | |
|---|---|---|
| | | (ಹಾರಾಡುವ ವಿಮಾನಗಳನ್ನು ವೀಕ್ಷಿಸುತ್ತಿರುವ ಶಂಕರ್ ತಮ್ಮ ವಿಠೂಗಾಗಿ ಕಾಯುತ್ತಿದ್ದಾನೆ. ಪೈಲೆಟ್ ವಿಠೂ ವಿಮಾನವನ್ನು ನಿಲ್ಲಿಸಿ ಅಣ್ಣನಿಗೆ ಸಂಜ್ಞೆಮಾಡಿ ನಂತರ ಬಂದು ಸೇರಿಕೊಳ್ಳುತ್ತಾನೆ) |
| ಶಂಕರ | : | ಹಾಯ್ |
| ವಿಠೂ | : | ಹಾಯ್ ಬಿಗ್ ಬ್ರದರ್. ಗ್ರೇಟ್ ಟು ಸೀಯೂ ಬಿಗ್ ಬ್ರದರ್ |
| ಶಂಕರ | : | ಬಿಗ್ ಬ್ರದರ್ ಕೇ ಬಚ್ಚೇ. ಬಿಗ್ ಬ್ರದರ್ ಬಿಗ್ ಬ್ರದರ್ ಕೆಹಕೇ ಮುಝೋ ಹೀ ಓವರ್‌ಟೇಕ್ ಕರ್ದಿಯಾ |
| ವಿಠೂ | : | ಕೈಸೇ? |
| ಶಂಕರ | : | ಕೈಸೇ, ಮುಝ್ ಸೇ ಪೆಹಲೇ ಕಾಮ್ ಪೇ ಲಗೇ. ಪೈಲೆಟ್ ಬನ್‌ಗಯೇ ಔರ್ ಅಬ್ ಮುಝುಸೇ ಪೆಹ್ಲೇ ಶಾದಿ ಕರ್‌ನೇ ಚಲಾ ಹೈ. ಬಡೇ ಭಾಯೀ ಕೋ ಓವರ್‌ಟೇಕ್ ಕರ್‌ತೇ ಹುಯೆ ಶರಮ್ ನಹೀ ಆಯೀ? |
| ವಿಠೂ | : | ಹೇ ಬಿಗ್ ಬ್ರದರ್. ಏ ಸಬ್ ಮಮ್ಮೀ ಪಾಪಾಕಾ ಡಿಸಿಷನ್ ಥಾ. ಯು ನೋ ಮಿ. ಮೈ ಜಾದಾ ಸೋಚ್ತಾ ನಹೀಂ ಹೂಂ. ಐ ಜಸ್ಟ್ ಫಾಲೋವ್ ದಿ ಆರ್ಡರ್ಸ್. |



| | | |
|---|---|---|
| ಶಂಕರ | : | ಠೀಕ್ ಹೈ. ಸುನೋ. ಮಮ್ಮೀ ಸೆ ಆರ್ಡರ್ಸ್ ಸುನ್‌ನೇ ಸೇ ಬೆಹತರ್ ಹೈ ಆಬ್ ಅಪ್ನೀ ಬೀವೀ ಕೇ ಆರ್ಡರ್ಸ್ ಸುನ್‌ಲೋ |

ವಿಠೂ : ಮಝೂಕ್ ಬಂದ್ ಕರೋ ಯಾರ್. ಆಪ್ಕಿ ವಜಹ್ ಸೇ ಮೈ ಫಸ್ ಗಯಾ

ಶಂಕರ : ಆಗು ಮಗನೆ ಮದ್ವೇನ. ಆದ್ಮೇಲ್ ಗೊತ್ತಾಗುತ್ತೆ. ವಿಮಾನ ಅಲ್ಲ ಸೈಕಲ್, ಸೈಕಲ್ ಹೊಡಿಬೇಕಾಗುತ್ತೆ. (ಎಂದು ಕನ್ನಡದಲ್ಲಿ ತನ್ನ ತಮ್ಮನನ್ನು ಛೇಡಿಸುತ್ತಾನೆ. ಆಗ ಕನ್ನಡ ಅರ್ಥವಾಗದ ವಿಠೂ ತನ್ನ ಅಣ್ಣನಿಗೆ)

ವಿಠೂ : ಹಲೋ ಎಕ್ಸ್‌ಕ್ಯೂಸ್‌ಮಿ. ತುಮ್ಹಾರ ಏ ಕೋಡ್ ಲಾಂಗ್ವೇಜ್. ತುಮ್ಹಾರ ಏ ಲವ್ ಸೀಕ್ರೇಟ್ ಕನ್ನಡ ಲಾಂಗ್ವೇಜ್ ವರಲಕ್ಷ್ಮೀ ಸಾಮ್ನೆ ಚಲೇಗ. ಮೇರೆ ಸಾಮ್ನೆ ನಹೀ ಅಂಡರ್‌ಸ್ಟ್ಯಾಂಡ್ (ಎಂದು ಕನ್ನಡ ಮಾತನಾಡಬಾರದೆಂದಾಗ ಶಂಕರ ತಮ್ಮನಿಗೆ)

ಶಂಕರ : ಅರೆ ವಿಠೂ, ಏ ಕನ್ನಡ ಸಿರ್ಫ್ ಮೇರ ಕೋಡ್ ಲಾಂಗ್ವೇಜ್ ನಹೀ ಯಾರ್. ಹಮ್ ಸಬ್ ಕಾ ಲವ್ ಲಾಂಗ್ವೇಜ್ ಹೈ. ನಾವು ಕನ್ನಡದವ್ರು ವಿಠೂ. ವಿ ಆರ್ ಫ್ರಮ್ ಬಂಗಾಡಿ ಹಮ್ ಕರ್ನಾಟಕ ಸೇ ಹೈ.

ವಿಠೂ : ಕ್ಯಾ? (ಅಣ್ಣ ಏನು ಹೇಳುತ್ತಿದ್ದಾನೆಂದು ತಿಳಿಯದೆ ಅಚ್ಚರಿಯಿಂದ ಕೇಳುತ್ತಾನೆ)

# ದೃಶ್ಯ–44

***ಹಗಲು–ದೆಹಲಿಯ ರಸ್ತೆಗಳು***

| | | |
|---|---|---|
| ಶಂಕರ | : | ಸಚ್ ಹೈ ವಿಠೂ. ಸೀತಾರಾಮ್ ಕೇ ಸಾಥ್ ಬಂಗಾಡಿ ಗೂಂವ್ ಕೇ ಆರರಹಾಹೂ. |
| ವಿಠೂ | : | ಬಂಗಾಡಿ |
| ಶಂಕರ | : | ಬಂಗಾಡಿ ಹಮಾರ ಗಾಂವ್ ಹೈ |
| ವಿಠೂ | : | ಅವರ್ ವಿಲೇಜ್? |
| ಶಂಕರ | : | ವಹಾ ಹಮಾರ ಜಮೀನ್ ಹೈ, ಪುರಾನ ಘರ್ ಹೈ. ಔರ್ ಹಮಾರ ಪ್ಯಾರೀ ಅಜ್ಜೀ ಹೈ |
| ವಿಠೂ | : | ಅಜ್ಜೀ? |
| ಶಂಕರ | : | ಅಜ್ಜೀ, ದಾದೀಮಾ |
| ವಿಠೂ | : | ಏ ಅಜ್ಜೀ, ಹಮಾರೆ ಅಜ್ಜೀ ಹೈ ದಾದೀಮಾ (ಅಜ್ಜಿ ಮತ್ತು ಹಳ್ಳಿಯ ಬಗೆಗೆ ತಿಳಿದುಕೊಂಡ ವಿಠೂ ಟ್ರಾಫಿಕ್ ಸಿಗ್ನಲ್ ಬಳಿಯೇ ಸಂತೋಷಗೊಂಡು ಸಂಭ್ರಮಿಸಲು ಆರಂಭಿಸುತ್ತಾನೆ. ಅದನ್ನು ಕಂಡು ಅಕ್ಕಪಕ್ಕದ ಸವಾರರು ಅಚ್ಚರಿಗೊಳ್ಳುತ್ತಾರೆ) |

# ದೃಶ್ಯ–45

***ಹಗಲು–ಸಿಂಘಾಲ್ ಸಾಹೇಬ್‌ರ ಮನೆಯ ಒಳಗೆ***

(ವಧು ವನಮಾಲಾಳಿಗೆ ಮೆಹೆಂದಿ ಸಾಂಪ್ರದಾಯಿಕ ಗೀತೆಯೊಂದಿಗೆ ನಡೆಯುತ್ತಿದೆ. ಅಲ್ಲಿ ಕುಟುಂಬದವೆಲ್ಲ ಸಂಭ್ರಮಿಸುತ್ತಿದ್ದಾರೆ.)

# ದೃಶ್ಯ–45ಅ

***ಹಗಲು–ಶಂಕರನ ಮನೆಯ ಹೊರಗೆ***

(ವರ ವಿಠೂನ ಮತ್ತು ಅವನ ಸಂಬಂಧಿಕರು ಮದುವೆಗೆ ಮುಂಚಿನ ಸಂಪ್ರದಾಯಗಳಲ್ಲಿ ಪಾಲ್ಗೊಂಡಿದ್ದಾರೆ. ಮನೆ ತುಂಬ ಜನ ಈ ನಡುವೆ ಶಂಕರ ಸಮಯ ಸಾಧಿಸಿ ತಂದೆ ಸುಂದರ್ ರಾಯರ ಗಮನ ಸೆಳೆಯುತ್ತಾನೆ)

ವಿಠೂ : ಭಯ್ಯಾ ಅರೆ ಕಹಾಹೋ ಯಾರ್?

ಶಂಕರ : ಐ ಯಾಮ್ ಇದರ್

ವಿಠೂ : ಕೈಸಾ ಲಗ್ ರಹಾಹೂ?

ಶಂಕರ : ಫಸ್ಟ್ ಕ್ಲಾಸ್

ವಿಠೂ : ಏಕ್ ದೂಸ್ರಾ ಸೂಟ್ ಭೀ ಹೈ. ವೋ ದಿಖಾತಾ ಹೂಂ

(ವಿಠೂ ಜೊತೆಯಲ್ಲಿ ಹೋಗಲನುವಾಗುವ ತಂದೆಯನ್ನು ತಡೆದು ಶಂಕರ..)

ಶಂಕರ : .. ಪಪ್ಪಾ, ಅಜ್ಜಿ ನಿಮ್ ತಂದೆ ಖಾಸಾ ತಂಗಿ ಎಷ್ಟೋ ವರ್ಷಗಳಿಂದ ನಮ್ ಹಾದಿ ಕಾಯ್ತಿದಾಳೆ. ನೋಡ್ಬೇಕೂಂತ ಆಸೆ ಪಡ್ತಿದಾಳೆ ಅಜ್ಜಿ.

ತಾಯಿ : ಅಜ್ಜೀ ವಜ್ಜೀ ಕುಚ್ ನಹೀ ಸುನೋ ಗಾಂವ್ ಸೆ ಕೋಯಿ ನಹೀ ಆಯೇಗ ಸಮ್ಜೋ. ಶಾದಿ ಮೇ ಬಡೇ ಬಡೇ ಲೋಗ್ ಶಾಮೀಲ್ ಹೋ ರಹೇ ಹೈ. ಔರ್ ಯಹಾ ಪೇ ಬಂಗಾಡಿ ಬಂಗಾಡಿ ಕಾ ನಾಮ್ ನಹೀ ಲೇಗ ಕೋಯಿ. ತುಮ್ ದೋನೋಕೊ ಸಮ್ಝಾರಹಾಹ್ಞೂ. ಸಮ್ಜೇ.

(ತಾಯಿಯನ್ನು ನೋಡುವ ವಿಠೂ ತನ್ನ ಸೂಟ್‌ನ್ನು ತಾಯಿಗೆ ತೋರಿಸಲು ಕರೆಯುತ್ತಾನೆ ಇತ್ತ ಶಂಕರ ತನ್ನ ತಂದೆಗೆ..)

ಶಂಕರ : ಪಪ್ಪಾ ಪ್ಲೀಸ್ ಲಿಸನ್ ಟು ಮಿ.

ತಂದೆ : ಶಂಕರ ಹಿಂಗ್ ಹೇಳೋದನ್ನೆಲ್ಲ ನಾನ್ ಯಾವತ್ತೋ ಕಳ್ಕೊಂಬಿಟ್ಟಿದೀನಿ. ನಾನು ಹಿಂತಿರುಗಿ ನೋಡಲಾರದಷ್ಟು ಮುಂದೆ ಬಂದಿದ್ದೀನಿ. ಯಾರಿಗ್ ಗೊತ್ತು, ನಾನ್ ಹಿಂತಿರುಗಿ ನೋಡಿದ್ರೂ ನಂಗೇನು ಕಾಣಿಸ್ದೇ ಹೋಗ್ಬಹುದು.

ಶಂಕರ : ಎಲ್ಲ ನಿಮ್ಮೊಳಗೇ ಇದೆ ಪಪ್ಪಾ. ಹೇಗಾದ್ರು ಮನಸ್

| | | |
|---|---|---|
| | | ಮಾಡಿ. ಅಜ್ಜೀನ್ ಕರ್ಕೊಂಬರಣ. ಎಲ್ಲ ಹೊಸ್ದಾಗುತ್ತೆ. |
| ತಂದೆ | : | ತುಂಬ ದಣಿದಿದ್ದೀನಿ ನಾನು ಶಂಕರ. ಈಗ ಎಲ್ಲವನ್ನು ಮತ್ತೆ ಹೊಸದಾಗಿ ಎದುರಿಸೋ ಶಕ್ತಿ ನನ್ನಲ್ಲಿಲ್ಲ. ಏನಿದ್ರೂ ನೀವು ಅಣ್ಣ ತಮ್ಮಂದ್ರು ಮಾಡಿ. |
| ಶಂಕರ | : | ಓಕೆ ಪಪ್ಪಾ. ಮದುವೆ ಆದ್ಮೇಲೆ ಎಲ್ರೂ ಅಲ್ಲೇ ಹೋಗಣ್ವಾ? ಅಜ್ಜಿ ಆಶೀರ್ವಾದ ಪಡಿಯೋಣ್ವ? |
| ತಂದೆ | : | ಇಲ್ಲಿಯ ಪರಿಸ್ಥಿತಿ ನಿಂಗೊತ್ತೇ ಇದೆ ಶಂಕರ ಪ್ಲೀಸ್ ಹಟ ಮಾಡ್ಬೇಡ ರಗಳೆ ಇಲ್ದೆ ವಿಶೂ ಮದ್ವೆ ಆಗ್ಹೋಗ್ಲಿ. ಪ್ಲೀಸ್ ಡೋಂಟ್ ಸ್ಪಾಯಿಲ್ ದ ಶೋ<br>(ತಂದೆ ಅಲ್ಲಿಂದ ಹೊರಡುವನು) |

## ದೃಶ್ಯ–45ಆ

***ಹಗಲು–ಸಿಂಘಾಲ್ ಸಾಹೇಬರ ಮನೆಯ ಹೊರಗೆ***

(ಉತ್ತರ ಭಾರತದ ಶೈಲಿಯಲ್ಲಿ ನಡೆಯುತ್ತಿರುವ ಸಾಂಪ್ರದಾಯಿಕ ದೃಶ್ಯಗಳು. ವಧು ವನಮಾಲ ಮತ್ತು ವರ ವಿಠೂ ದಂಪತಿಗಳಾಗುತ್ತಾರೆ. ಆ ಸಂಭ್ರಮದ ನಡುವೆಯೂ ಏಕಾಂಗಿಯಾಗಿ ಕುಳಿತಿರುವ ಶಂಕರನನ್ನು ನೋಡಿ ವರೂ ಅವನಿದ್ದೆಡೆಗೆ ಬರುತ್ತಾಳೆ)

ವರೂ : ಶಂಕರ್ ಬಾ ನಾವು ಡ್ಯಾನ್ಸ್ ಮಾಡಣ

ಶಂಕರ : ಪ್ಲೀಸ್ ವರೂ ಬೇಡ

ವರೂ : (ಬೇಸರದಿಂದ) ಓಕೆ..

(ಎಂದು ಅಲ್ಲೇ ಶಂಕರನ ಜೊತೆ ಕುಳಿತುಕೊಳ್ಳುತ್ತಾಳೆ. ಶಂಕರನ ಮತ್ತು ವರಲಕ್ಷ್ಮಿಯ ಭಾವನೆಗಳ ತಾಕಲಾಟ ಒಂದೆಡೆಗಿದ್ದರೆ ಅತ್ತ ವಿಠೂ ಮತ್ತ ವನಮಾಲಾರ ಮದುವೆ ಸಂಭ್ರಮದಿಂದ ನಡೆಯುತ್ತದೆ.)

**ನಿರ್ದೇಶಕರ ಟಿಪ್ಪಣಿ:**

**ಶಂಕರ ಹಾಗೂ ವಿಠೂ ಭೇಟಿ ಪ್ರಥಮ ಬಾರಿಗೆ ಪ್ರೇಕ್ಷಕರಿಗೆ ಅವರಿಬ್ಬರ ವಿರುದ್ಧ ದಿಕ್ಕಿನ ಮನೋಸ್ಥಿತಿಗಳನ್ನು ತಿಳಿಸಿಕೊಡುತ್ತದೆ. ವಿಠೂ, ತಂದೆ ತಾಯಿಯರ ವಿಧೇಯ ಮಗನಂತೆ, ಅವರು ಹೇಳಿದ್ದನ್ನು ಚಾಚೂ ತಪ್ಪದೆ ಪಾಲಿಸುವವನು. ಆದರೆ ಶಂಕರ ತನ್ನ ಹುಡುಕಾಟದಲ್ಲಿ ತಾನು ಎದುರಿಸಲಿರುವ ಪ್ರಶ್ನೆಗಳಿಗೆ ಉತ್ತರವನ್ನು ಹುಡುಕುತ್ತಿರುವವನಾಗಿರುತ್ತಾನೆ. ಈ ಮನಸ್ಥಿತಿಯಲ್ಲಿದ್ದಾಗಲೇ ಶಂಕರನ ತಾಯಿ, ವಿಠೂಗೆ ತಾನು ನೋಡಿದ ಹುಡುಗಿಯನ್ನು ಮದುವೆ ಮಾಡಿಸುವ ಸಿದ್ಧತೆಗಳನ್ನು ಮಾಡುತ್ತಿರುತ್ತಾಳೆ. ಆ ಸಿದ್ಧತೆಯ ಭರದಲ್ಲಿ ವಿಠೂ ಅದಕ್ಕಾಗಿಯೇ ಬಂದಿದ್ದಾನೆ. ಮದುವೆಯ ಸಿದ್ಧತೆಗಳು ನಡೆಯುತ್ತಿದ್ದಾಗ ಶಂಕರ ತನ್ನ ತಂದೆಗೆ ಅಜ್ಜಿಯ ಇರುವನ್ನು ಮತ್ತು ಬಂಗಾಡಿಯ ತಮ್ಮ ಮೂಲದ ಬಗ್ಗೆ ವಿವರಿಸಿ ಆಕೆಯನ್ನು ಇಲ್ಲಿಗೆ ಕರೆತರುವ ಮತ್ತು ತನ್ನ ಹಳೆಯ ಮೂಲವನ್ನು ಮತ್ತೆ ಸ್ಥಾಪಿಸಿಕೊಳ್ಳುವ ಮಾತುಗಳನ್ನಾಡುತ್ತಾನೆ. ಆದರೆ ಶಂಕರನ ತಂದೆ ಬಹುದೂರ ಸಾಗಿಬಂದಿದ್ದರ ಉದಾಹರಣೆಯನ್ನು ಹೇಳುತ್ತ ತಾನು ಸಾಕಷ್ಟು ದಣಿದಿದ್ದೇನೆ ಎಂಬ ಮಾತಿನ ಮೂಲಕ ಪೂರ್ಣವಿರಾಮವನ್ನು ಹಾಕುತ್ತಾನೆ. ಶಂಕರ ಯೋಚಿಸತೊಡಗುತ್ತಾನೆ. ಶಂಕರ ಹಾಗು ವಿಠೂನ, ಮನಸ್ಥಿತಿಗಳನ್ನು ಹೇಳುವಂಥ ಒಂದು ದೃಶ್ಯವನ್ನು ಚಿತ್ರೀಕರಣಕ್ಕೆ ಮುಂಚೆಯೇ ತೆಗೆದುಹಾಕಲಾಯಿತು. ಕಾರಣ ಎಲ್ಲವನ್ನು ವಾಚ್ಯ ಮಾಡುವುದರ ಬದಲು ಕೇವಲ ದೃಶ್ಯಗಳ ಮುಖಾಂತರವೇ ಆ ಆಶಯಗಳನ್ನು ಹೇಳಬಹುದೇ ಎಂಬಂತೆ ಯೋಚಿಸಿ ನೇರವಾಗಿ 43ನೇ ದೃಶ್ಯವನ್ನು ಮೊಟಕುಗೊಳಿಸಿ ಚಿತ್ರೀಕರಿಸಲಾಯಿತು**

# ದೃಶ್ಯ-46

*ಹಗಲು-ಹೋಟೆಲ್ ಒಂದರ ಒಳಗೆ*
*ಹಸ್ತಪ್ರತಿಯಲ್ಲಿ: (ಚಲನಚಿತ್ರದಲ್ಲಿ ಇಲ್ಲ)*

| | | |
|---|---|---|
| *ವಿಶೂ* | : | *ನೈಸ್ ಪ್ಲೇಸ್ ಆಪ್ ಕಾ ರೋಜ್ಞ್‌ಕಾ ಅಡ್ಡಾ ಹೈ ಕ್ಯಾ?* |
| *ವರೂ* | : | *ರೋಜ್ಞ್‌ಕಾ? ಆಜ್ ಮಿಲಾ ಹೈ ತೋ ನಸಿಬ್ ಸಮ್‌ಝೋ ಮೇರಾ. ಜಬ್ ಸೇ ಆಯಾ ಹೈ, ಮಿಲ್‌ತಾ ಹೀ ನಹೀ. ಬಂದು ಇಷ್ಟ್ ದಿನಾ ಆಯ್ತು. ಒಂದ್‌ಸಲನಾದ್ರೂ ನನಗೆ ಸಿಕ್ಕಿದೀಯಾ? ಕಭೀ ಭೀ ದೇಖೋ ಸೋಚ್‌ತಾ ರೆಹತಾ ಹೈ.* |
| *ವನಮಾಲಾ* | : | *ತುಮ್ಹಾರೇ ಬಾರೇ ಮೇ ಹೀ ತೋ ಸೋಚ್‌ತಾ ಹೋಗಾ* |
| *ಶಂಕರ* | : | *ಸೋಚ್‌ನಾ ಕ್ಯಾ? ಮೈನೇ ತೋ ಡಿಸಿಷನ್ ಭೀ ಲೇ ಲಿಯಾ ಹೈ* |
| *ವರೂ* | : | *ರಿಯಲೀ* |
| *ವಿಶೂ* | : | *ಶಾದೀ ಮೇ ಚೂಡಿದಾರ್, ಶೇರ್‌ವಾನಿ ಪೆಹನೇಗಾ ಯಾ ಸೂಟ್?* |
| *ಶಂಕರ* | : | *ಶಾದಿ ಕೀ ನಹೀಂ ಮೈ ತೋ ಹಮ್ ದೋನೋಂ ಕಿ ಜಿಂದಗೀ ಕೆ ಬಾರೇ ಮೇಂ ಬೋಲ್ ರಹಾ ಹೂ* |
| *ವಿಶೂ* | : | *ಓಕೆ ಬಾಬಾ, ಶಾದಿ ನಹೀಂ ಜಿಂದಗೀ. ಕಾ ಸೋಚಾ ಹೈ ಜಿಂದಗೀ ಕೇ ಬಾರೇ ಮೇಂ* |
| *ಶಂಕರ* | : | *ಹಮ್ ಆಪ್ನೀ ಜಿಂದಗೀ. ಬಂಗಾಡೀ ಮೇಂ ಬನಾಯೇಂಗೆ. ಯೆಸ್ ವರಲಕ್ಷ್ಮೀ ಇಟ್ ಇಸ್ ವೆರಿ ಕ್ಲಿಯರ್ ಟು ಮಿ. ಬಂಗಾಡಿನೇ ನಮ್ಮ ನಿಜವಾದ ಸ್ಥಾನ. ಅದೇ ನಮ್ಮಿಬ್ಬರ ಖಾಯಂ ವಿಳಾಸ. ನಮ್ ಜಿಂದಗೀನ ಅಲ್ಲೇ ರೂಪಿಸೋಣ* |
| *ವರೂ* | : | *ಕ್ಯಾ? ಜಿಂದಗೀ ಬಂಗಾಡೀ ಮೇ..? ಅರೆ ನಾನು ಇಲ್ಲಿ. ಹೌ ಕುಡ್ ಯು ಡಿಸೈಡ್ ದಿಸ್?* |
| *ಶಂಕರ* | : | *ಏಯ್ ವರೂ ಪ್ಲೀಸ್* |
| *ವಿಶೂ* | : | *ಭಯ್ಯಾ, ವಾಟ್ ಆರ್ ಯೂ ಟಾಕಿಂಗ್? ಪಾಗಲ್ ತೋ ನಹೀ ಹೋಗಯೆ?* |
| *ಶಂಕರ* | : | *ನಹೀ* |
| *ವಿಶೂ* | : | *ಸೋಚ್ ಲೋ ಭಾಯ್* |
| *ಶಂಕರ* | : | *ಸೋಚ್ ಕೇ ತೋ ಹೋಗಯಾ ವಿಶೂ. ಅಬ್ ವಖ್ತ್* |

ಹೈ ಆಕ್ಷನ್ ಕಾ. ಅಜ್ಜೀ ಕೇ ಆಂಖೋಮೇ ಮುಝೀ ಗಂಗಾ ಕಿ ಪುಕಾರ್ ಸುನ್‌ಪಡೀ ವಿಠೂ. ಸಿರ್ಫ್ ವಹೀ ಏಕ್ ಸಚ್ಚಾ ಪಲ್ ಥಾ. ಉಸ್ಕೇ ಸಾಮ್‌ನೇ ಬಾಕಿ ಸಬ್ ಝೂಟ್ ಥಾ.

ವಿಠೂ : ಭಯ್ಯಾ, ಮೈ ತುಮ್‌ಸೇ ಛೋಟಾ ಹ್ಹೂಂ. ಲೇಕಿನ್ ತುಮ್‌ಸೇ ಛೋಟಾ ಹ್ಹೂ. ಲೇಕಿನ್ ತುಮ್‌ನೆ ಹಮೇಶಾ ಮುಝೀ ಅಪ್‌ನೇ ಬರಾಬರ್‌ಕಾ ಮಾನಾ ಹೈ. ಬಿಗ್ ಬ್ರದರ್ ಐ ಡೂ ಅಡೋರ್ ಯೂ. ತುಮ್ಹೇ ಜೋ ಭೀ ಠೀಖ್ ಲಗೇ ವಹೀ ಕರೋ. ಹಮೇಶಾ ಮೈ ತುಮ್ಹೇ ಖುಷ್ ದೇಖನಾ ಚಾಹತಾ ಹ್ಹೂಂ ಅಂಡ್ ಐ ಯಾಮ್ ವಿತ್ ಯೂ.

# ದೃಶ್ಯ–47

***ಹಗಲು–ಶಂಕರನ ಮನೆಯ ಒಳಗೆ***

| | | |
|---|---|---|
| | | (ಶಂಕರ ಬಂಗಾಡಿಗೆ ಹೋಗಲು ಸಿದ್ಧನಾಗುತ್ತಿರುತ್ತಾನೆ. ಇದನ್ನು ಕಂಡ ಅವನ ತಂದೆ..) |
| ತಂದೆ | : | ನಿಂಗೆ ತಲೆ ಕೆಟ್ಟಿದೆ. ಏನೋ ಛೇಂಜ್ ಅಂತ ಒಂದ್ ವಾರದ್ ಮಾತಿಗ್ ಹೋದೆ. ಬಂಗಾಡಿ ನೋಡ್ದೆ. ಬೆಟ್ಟ ಗುಡ್ಡ ನದಿ ನೋಡಿ ಖುಷಿಪಟ್ಟು ಬಂದೆ. ಸರಿ. ಈಗ ಅಲ್ಲೇ ಹೋಗಿರ್ತೀನಿ ಅಂದ್ರೆ ಇಟೀಸ್ ಜಸ್ಟ್ ನಾನ್ಸೆನ್ಸ್ ಯು ನೋ.. |
| ಶಂಕರ | : | ಬೆಟ್ಟ ಗುಡ್ಡ ನೋಡೋಕಲ್ಲ ಪಪ್ಪಾ. ನಮ್ ಭೂಮಿ ಪಾಳ್ ಬಿದ್ದಿದೆ. ಅಲ್ಲಿ ನಮಗಾಗ್ ಕಾಯ್ತಾ ಇದೆ. ಅದನ್ ನೋಡ್ಕೋಳೋಕ್ ಹೋಗ್ತಾಯಿದಿನಿ |
| ತಂದೆ | : | ಬೇಟೆ ಇಟ್ಸೆ ಡಿಫರೆಂಟ್ ವರ್ಲ್ಡ್. ನಿಂಗದ್ರ ಕಲ್ಪನೇನು ಇಲ್ಲ. |
| ಶಂಕರ | : | ನಾನ್ ಹಗಲ್ ಕನಸ್ ಕಾಣ್ತಾ ಇಲ್ಲ. ಪೂರ್ತಿ ವಿಚಾರ ಮಾಡಿ ಈ ನಿರ್ಧಾರ ತಗೊಂಡಿದಿನಿ. |
| ತಂದೆ | : | ಮೂಲದ ತುಡಿತ, ಎಲ್ಲ ನಾನ್ ತಿಳ್ಕೊಳ್ಬಲ್ಲೆ ಶಂಕರ್ ಆದ್ರೆ ಹಾಗಂತ ನದಿ ತನ್ನ ದಿಕ್ಕನ್ನೇ ಉಲ್ಟಾ ಮಾಡಿ ಮೂಲದ್ ಕಡೆ ಹೋಗೋದಿಲ್ಲ.<br>(ತಾಯಿ ಅಲ್ಲಿಗೆ ಬರುವಳು)<br>.. ನಾವು ಹಾಗೆ ಮೂಲದ್ ಜೊತೆ ನಂಟಿಟ್ಕೊಂಡೆ ಮುಂದೆ ಮುಂದಕ್ ಹರೀಬೇಕು. |
| ಶಂಕರ | : | ನಂಟು? ಎಲ್ಲಿಟ್ಕೊಂಡಿದೀವಿ ಅದನ್ನ ನಾವು? ಅದೆಷ್ಟೋ ವರ್ಷಗಳಿಂದ ನಮ್ದೊಂದ್ ಸುಳಿವುಗಾಗ್ ಕಾದು ಕುಳ್ತಿರೋ ಆ ಅಜ್ಜೀನ ನೋಡ್ಬೇಕಂತಾನು ಅನ್ಸಾಟ್ಟ ಇಲ್ಲ ನಿಮ್ಗೆ. |
| ತಾಯಿ | : | ಹಜಾರೋ ಕಿಲೋ ಮೀಟರ್ ಕೇ ದೂರ್ ಅಜ್ಜೀ ತುಮ್ಹೇ ಚಾಹಿಯೇ. ಹಮ್ ನಹೀ? |
| ಶಂಕರ | : | ಮೊಹಬತ್ಕೋ ಕಿಲೋಮೀಟರ್ ಸೇ ಮಾಪಾ ನಹೀ ಜ್ಯಾತಾ ಮಾ |
| ತಾಯಿ | : | ಓಕೆ ಲೆಟ್ಸ್ ಅಸ್ಯೂಮ್ ಯು ಗೋ ದೇರ್ |
| ಶಂಕರ | : | ಅಸ್ಯೂಮ್ ನಹೀ, ಐ ಯಾಮ್ ಗೋಯಿಂಗ್ ದೇರ್ (ಎಂದು ನಿರ್ಗಮಿಸುತ್ತಾನೆ) |

ತಾಯಿ : ಜಾವ್ ಅಜ್ಜೀಕೆ ಪಾಸ್ ಹೀ ಜಾವ್
(ತಂದೆ–ತಾಯಿಯರಿಬ್ಬರು ಆತಂಕದಿಂದ ಅವನು ಹೋದಕಡೆಗೇ ನೋಡುತ್ತ ನಿಲ್ಲುತ್ತಾರೆ)

*ಹಸ್ತಪ್ರತಿಯಲ್ಲಿ: (ಚಲನಚಿತ್ರದಲ್ಲಿ ಇಲ್ಲ)*

*ಪ್ರತಿಮಾ : ಓಕೇ, ಗಯಾ ಫಿರ್. ಕ್ಯಾ ಕರೇಗಾ ಉದರ್? ಖೇತಿ ಕರ್ನಾ, ನ್ಯೂಡಲ್ಸ್ ಬನಾನೇ ಜೈಸಾ ನಹೀ ಹೈ. ಬಿಠಾಕೇ ನಹೀ ಖಿಲಾಯೇಂಗಾ ತುಝೆ ಕೋಯಿ ಉದರ್. ಮಚ್ಛರ್, ಮಲೇರಿಯಾ, ಗಂದಗೀ–ಭಾಗ್ ಆಯೇಗಾ ದೋ ದಿನ್ ಮೇಂ. ಇಟ್ ಈಸ್ ಎ ಹಾರ್ಡ್ ಲೈಫ್.*

*ಶಂಕರ : ಇಸೀ ಲಿಯೇ ತೋ ಜಾ ರಹಾ ಹೂಂ*

*ಪ್ರತಿಮಾ : ಇದರ್ ಸಿಂಘಾಲ್ ಸಾಬ್ ನೇ ಗುರಗಾಂವ್ ಮೇಂ ಜಗಹ್ ಭೀ ದೇಖ್‌ಲೀ ಹೈ ಫ್ಯಾಕ್ಟರಿ ಕೇ ಲಿಯೇ. ಔರ್ ತುಮ್*

*ಸುಂದರ್ : ನಿನ್ನನ್ನ ಯುಎಸ್‌ಗೆ ಕಳಿಸೋಕೂ ಎಷ್ಟೊಂದು ಪಾರ್ಟಿಗಳು ತಯಾರಿವೆ ಇಲ್ಲಿ. ನಿನ್ನ ಟೇಕ್ ಆಫ್‌ಗೆ ಎಲ್ಲಾ ಇಲ್ಲಿ ಸಜ್ಜಾಗ್ತಾ ಇರೋವಾಗ ನೀನು ಅಚಾನಕ್ ಹೀಗೆ ಅಪವೇಳೆಯಲ್ಲಿ ಜ್ಞಾನೋದಯ ಆದವನಂತೆ ಹೊರಟುಬಿಟ್ರೆ?*

*ಶಂಕರ : ಜ್ಞಾನೋದಯ ಅನ್ನೋದು ಗೌರ್ನಮೆಂಟ್ ಸರ್ಕ್ಯುಲರ್‌ಗೆ ಕಾಯ್ತಿರೋದಲ್ಲ ಪಪ್ಪಾ. ನಿಮ್ಮ ಕನಸ್ನಲ್ಲಿ ನಾನು ಚಾಕ್ರಿ ಮಾಡೋಲ್ಲ. ನನಗೆ ನನ್ನದೇ ಕನಸಿದೆ.*

*ಪ್ರತಿಮಾ : ಜಾವ್ ಜಾವ್, ಹಮ್ ಸೇ ಕೋಯಿ ಸಪೋರ್ಟ್ ಕಿ ಉಮ್ಮೀದ್ ಮತ್ ರಖೋ, ಏಕ್ ಪೈಸಾ ಭೀ ನಹೀ ಮಿಲೇಗಾ. ಏಕ್ ಪೈಸಾ ಭೀ ನಹೀ ಮಿಲೇಗಾ*

*ಶಂಕರ : ನಿಮ್ಮಿಂದ ಏನೂ ಬೇಕಾಗಿಲ್ಲ ಮಾ. ಅಟ್‌ಲೀಸ್ಟ್. ಶಾಪ ಹಾಕದೆ ನನ್ನನ್ನ ಕಳಿಸಿಕೊಡಿ ಅಷ್ಟು ಸಾಕು.*

# ದೃಶ್ಯ–48

***ಹಗಲು–ಸಫ್ದರ್ ಜಂಗ್ ಉದ್ಯಾನವನ***

(ಹಿಂದಿನ ದೃಶ್ಯದ ತಾಯಿಯ *ಜಾವ್ ಅಜ್ಞೀಕೆ ಪಾಸ್ ಹೀ ಜಾವ್* ಎಂಬ ಸಂಭಾಷಣೆಯ ಕೊಂಡಿಯನ್ನು ಬಳಸಿಕೊಂಡು ಈ ದೃಶ್ಯದಲ್ಲಿ ವರಲಕ್ಷ್ಮಿಯ ಸಂಭಾಷಣೆ ಪ್ರಾರಂಭವಾಗುತ್ತದೆ.)

ವರೂ : ಹೋಗು, ಡಿಸೈಡ್ ಮಾಡ್ಬಿಟಿದಿಯಾ ಅಲ್ವಾ? ನೀನೆ ಹೋಗು

ಶಂಕರ : ವರೂ, ಬಂಗಾಡಿ ಬೆಟ್ಟ ನಂಗೇನೇನ್ ಹೇಳ್ತು ಗೊತ್ತ? ಅಲ್ ನಿಂತು ನಿನ್ನನ್ನೇ ನೆನ್ಸ್ಕೊಂಡೆ. ನೋಡು ನೋಡು
(ಒಂದು ಬಾಕ್ಸ್ ತೋರಿಸುತ್ತ)
.. ಅಲ್ಲಿಂದ ನಿಂಗೋಸ್ಕರ ಏನ್ ತಂದೆ

ವರೂ : ಇದು ನಾನೆ ಕೊಟ್ಟಿದ್ ಲಂಚ್ ಬಾಕ್ಸ್. ಹೊಸ್ದೇನ್ ಬಂತು?

ಶಂಕರ : ಅರೆ ದೇಖೋತೊ ಸಹೀ. ಒಳಗೇನಿದೇಂತ ನೋಡು
(ಬಾಕ್ಸ್ ತಗೆದು ನೋಡುವಳು. ಅದರಲ್ಲಿ ಮಣ್ಣಿರುವುದನ್ನು ಕಂಡು)

ವರೂ : ಮಣ್ಣು

ಶಂಕರ : ಬಂಗಾಡಿ ಮಣ್ಣು. ಪಾಳು ಬಿದ್ದ ನಮ್ಮ ಮನೆ ಒಲೆಯ ಮಣ್ಣು. ವರೂ ನಾವ್ ಮತ್ತೆ ಆ ಮನೆ ಕಟ್ಟೋಣ. ಆ ಒಲೇನ ಮತ್ತೆ ಉರ್ಸೋಣ. ಆ ಭೂಮಿಯ ಕನಸನ್ನ ಮತ್ತೆ ಚಿಗುರಿಸೋಣ

ವರೂ : ಹಾಗಾದ್ರೆ ನಾನ್ ಕಂಡ ಕನಸು? ನಮ್ಮಿಬ್ಬರ ಬಾಳಿನ ಕನ್ಸು? ಅದಿಕ್ಕೆ ಅರ್ಥನೇ ಇಲ್ವ?

ಶಂಕರ : ವರೂ ಪ್ಲೀಸ್

ವರೂ : ನನ್ನನ್ನ ಒಂದು ಒಂದ್ ಮಾತು ಕೇಳ್ಬೇಕು ಅಂತ ಅನ್ನಿಸ್ಲೇ ಇಲ್ವ ನಿಂಗೆ?

ಶಂಕರ : ವರೂ ವರೂ ಆ ಅಜ್ಜಿ ಕಣ್ಗಳ್ ನೋಡ್ಬೇಕಾಗಿತ್ತು ನೀನು ಅದ್ರಲ್ಲೇನೋ ಒಂದ್ ಮಿಂಚಿತ್ತು. ಯಾಚನೆ ಇತ್ತು. ನನಗಾಗ್ ಒಂದ್ ಹೊಸ ಗುರಿಯಿತ್ತು. ಆ ಗುರಿಗಳು ನನ್ನನ್ನ ಒಯ್ಯೋ ದಾರೀನ ನಿನ್ನ ಕಣ್ಣಲ್ಲಿ

ನೋಡೋಕ್ ಬಯಸ್ತೀನ್ ನಾನು

ವರೂ : ಐ ನೋ ಶಂಕರ್. ಅದಿಕ್ಕೆ ಅಲ್ಲಿಂದ ಈ ಮಣ್ಣಿನ ಸಿಂಧೂರ ತಂದಿದ್ಯ. ಐ ಟ್ರೆಸರ್ ದಿಸ್. ಆದ್ರೆ ಶಂಕರ್ ಈ ಮಣ್ಣು ಹಣೆಯಿಂದ ನನ್ನ ಕಣ್ಣಿಗೆ ಬೀಳ್ತಾಬರ್ದಲ್ವ? ನಿನ್ನ ಗುರಿ ನನ್ನ ದಾರೀನ ತಪ್ಪಿಸ್ಬಾರ್ದಲ್ವ?

ಶಂಕರ : ಮಾತ್ ಸಾಕು ವರೂ, ನಿನ್ ಮನಸ್ಸನ್ನೇ ಕೇಳು, ಇನ್ನೂ ವೇಳೆ ಇದೆ. ಮಂಗಳವಾರ ಸಂಜೆ ಐದೂವರೆಗ್ ಟ್ರೈನು. ನಾನ್ ಹೋಗ್ತಾಯಿದಿನಿ.

ವರೂ : ನೋ ನೀನ್ ಹೋಗ್ತಾಯಿಲ್ಲ. ನೀನ್ ಬಂಗಾಡಿಗ್ ಹೋಗ್ತಾಯಿಲ್ಲ. ನೀನ್ ಹೋದೆ ಅಂದ್ರೆ ನನ್ ಬದುಕಿನಿಂದಲೇ ಹೊರ್ಟೋದ್ಹಾಗೆ



ಶಂಕರ : ಐ ಯಾಮ್ ವೆರಿ ಕ್ಲಿಯರ್ ಅಬೌಟ್ ದಿಸ್. ನಾನ್ ಬಂಗಾಡಿಗ್ ಹೋಗ್ತಿದಿನಿ. ನಿನ್ ಬೆಸ್ಟ್ ವಿಶಸ್ ತಗೊಂಡು ನನ್ನೀ ಯಾತ್ರೆನ ಆರಂಭಿಸ್ತೀನಿ. ಸೆಂಡ್ ಆಫ್ ಕೊಡೋಕೆ ನೀನ್ ಖಂಡಿತ ಸ್ಟೇಶನ್‌ಗೆ ಬಂದೆ ಬರ್ತೀಯ

ವರೂ : ಇಟ್ಸ್ ಟೂ ಹಾರ್ಶ್. ಇದು ನಮ್ಮ ಇಡೀ ಬದುಕಿನ ಪ್ರಶ್ನೆ ಶಂಕರ್. ಟ್ರಸ್ಟ್ ಮಿ ಅದು ನಮ್ ದಾರಿ ಅಲ್ಲ. ವಿ ಶುಡ್ ಗೋ ಅಬ್ರಾಡ್. ಮನಸ್ ಬದ್ಲಾಯ್ಸು ಪ್ಲೀಸ್

ಶಂಕರ : ವರೂ, ನೀನ್ ಖಂಡಿತ ಬಂದೇ ಬರ್ತೀಯ. ನನ್ ಕೈ ಹಿಡಿದು ಸೆಂಡ್ ಆಫ್ ಕೊಟ್ಟು ಮುಂದೆ ನಡ್ಸೇ ನಡ್ಸ್ತೀಯ ಸೋ ಮಂಗಳವಾರ 5.30 ಶಾರ್ಪ್. ಸೀ ಯೂ ವಿತ್ ಫ್ರೆಶ್ ಇಡ್ಲೀಸ್ ಇನ್ ದ ಸೇಮ್ ಬಾಕ್ಸ್.

(ದುಃಖಿಸುತ್ತಿರುವ ವರೂ ಹಣೆಗೆ ಮುತ್ತನ್ನಿಟ್ಟು ಅಲ್ಲಿಂದ ಹೊರಡುತ್ತಾನೆ)

ವರೂ : ಶಂಕರ್ ನಾನ್ ಬರಲ್ಲ. ಐ ವೋಂಟ್ ಸೀಯೂ (ಎಂದು ತನ್ನ ಮನಸ್ಸಿನ ಭಾರವನ್ನು ವ್ಯಕ್ತಪಡಿಸುತ್ತಾಳೆ)

ಶಂಕರ : ನೋ ಯು ವಿಲ್.. (ಅವಳು ಬಂದೇ ಬರುತ್ತಾಳೆಂಬ ವಿಶ್ವಾಸದಿಂದ ತನ್ನ ಮೋಟಾರ್ ಬೈಕ್ ಹತ್ತಿ ಹೊರಡುತ್ತಾನೆ)

# ದೃಶ್ಯ–49

*ಹಗಲು–ದೆಹಲಿಯ ರೈಲುನಿಲ್ದಾಣ*
*ಹಸ್ತಪ್ರತಿಯಲ್ಲಿ: (ಚಲನಚಿತ್ರದಲ್ಲಿ ಇಲ್ಲ)*

| | | |
|---|---|---|
| *ಶಂಕರ* | : | *ವಿಶೂ ಬಸ್. ತುಮ್ ಲೋಗ್ ಜಾವ್. ತುಮ್ಹೆ ಟ್ರೇನಿಂಗ್ ಕೋ ದೇರ್ ಹೋ ಜಾಯೆಗೀ. ವನಮಾಲಾ ಕಾ ಖಯಾಲ್ ರಖ್‌ನಾ. ಅಚ್ಚೀ ಪೇಂಟರ್ ಹೈ ಓ. ಕಿಚನ್ ಮೇಂ ಕೈದ್ ಮತ್ ಕರ್‌ನಾ ಉಸೇ. ವನಮಾಲಾ ಎನೀ ಮಿಸ್‌ಬಿಹೇವಿಯರ್ ಫ್ರಮ್ ಹಿಸ್ ಸೈಡ್, ಕಂಪ್ಲೇಂಟ್ ಮುಝೆ ಭೇಜ್ ದೋ. ಅರೇ ಏ ಕ್ಯಾ ಕರ್ ರಹೇ ಹೋ* |
| *ವಿಶೂ* | : | *ಕುಛ್ ನಹೀ. ತುಮ್ಹಾರೀ ಷೋಲೇಸ್ ಠೀಕ್ ಸೇ ಬಾಂದ್ ರಹಾ ಹ್ಹೂಂ. ಬಿಗ್ ಬ್ರದರ್ ಮೈ ಹೀರೋ! ತುಮ್ ಝೋಭೀ ಕರ್‌ನಾ ಚಾಹೋ, ಮೈ ತುಮ್ಹಾರೇ ಸಾಥ್ ಹ್ಹೂಂ. ಮಮ್ಮೀ ಕೋ ಮತ್ ಬೋಲ್ನ. ತುಮ್ಹಾರೇ ಸೇ ಛೋಟಾ ಹ್ಹೂಂ ನಾ. ಇಸ್ ಲಿಯೇ ಏಕ್ ಛೋಟಾ ಸಾ ತೊಹಫಾ. ಏಕ್ ಡ್ರ್ಯಾಫ್ಟ್ ಹೈ. ರಖ್ ಲೇನಾ, ಔರ್ ಭೀ ಭೇಜ್‌ತಾ ರಹೋಂಗಾ. ಪಾಪಾನೇ ಕರ್ನಾಟಕಾ ಆಫೀಸರ್‌ಕ ಥ್ರೂ ಬಂಗಾಡಿ ಲ್ಯಾಂಡ್ ಪೇಪರ್ಸ್ ಸಬ್ ತುಮ್ಹಾರೇ ನಾಮ್ ಪರ್ ರೆಗ್ಯುಲರೈಸ್ ಕರ್ನೇಕಾ ಇಂತೆಜ್ಹಾ ಕಿಯಾ ಹೈ.* |
| *ಶಂಕರ* | : | *ಅಜ್ಜೀ ಕಾ ಆಶೀರ್ವಾದ್ ಲೇನೇ ಏಕ್ ಬಾರ್ ತೋ ಆಕೇ ಜಾನಾ ಯಾರ್* |
| *ವಿಶೂ* | : | *ಕ್ಯೂ ಯಾರ್. ವರಲಕ್ಷ್ಮೀ ನಹೀ ಆಯೀ? ಅಭೀ ಬೀ ಕಚ್ಚೀ ಹೈ ಕ್ಯಾ?* |
| *ಶಂಕರ* | : | *ಜರೂರ್ ಆಯೇಗಿ. ಆಜ್ ತೋ ಆನಾ ಹೀ ಪಡೇಗಾ ಉಸೆ.* |
| *ವಿಶೂ* | : | *ತೋ ಹಮ್ ಕ್ಯೂಂ ಬನೇ ಬೀಚ್ ಮೇಂ ವಿಲನ್? ಚಲೋ ಬಿಗ್ ಬ್ರದರ್, ಭಾಯ್ ಟೇಕ್ ಕೇರ್* |

# ದೃಶ್ಯ–50

***ಹಗಲು–ದೆಹಲಿಯ ನಿಜಾಮುದ್ದೀನ್ ರೈಲು ನಿಲ್ದಾಣ***

(ರೈಲು ನಿಲ್ದಾಣದಲ್ಲಿ ಕಿಕ್ಕಿರಿದ ಪ್ರಯಾಣಿಕರ ಮಧ್ಯೆ ಶಂಕರ ವರೂಗಾಗಿ ಹುಡುಕುತ್ತ ತನ್ನ ಭೋಗಿಗೆ ಬಂದು ಕೂರುತ್ತಾನೆ. ಕೂರಲಾರದೆ ಮತ್ತೆ ಹೊರಗೆ ಬಂದು ಆಕೆಗಾಗಿ ಹುಡುಕಾಡುತ್ತಾನೆ. ವರೂ ಆಗಲೇ ಬಂದು ಮರೆಯಲ್ಲಿ ನಿಂತು ಅವನ ಚಲವಲನಗಳನ್ನು ಗಮನಿಸುತ್ತ ಅವನು ವಾಪಾಸ್ ಬಂದುಬಿಡಲಿ ಎಂಬ ಆಶಯದಿಂದ ಕಾಯುತ್ತಿರುತ್ತಾಳೆ)

ವರೂ : ಬಂದ್ಬಿಡು ಬಂದ್ಬಿಡು.

(ಶಂಕರ್ ರೈಲು ಹೊರಡುವ ಸಮಯವಾದ್ದರಿಂದ ರೈಲಿನ ಒಳಹೋಗುವನು, ವರೂ ಇತ್ತ ದುಃಖಿಸುವಳು)

ವರೂ : ನೋ.. ನೋ..

(ಒಳಗೆ ಬಂದ ಶಂಕರನಿಗೆ ವರೂ ಹೋಗಬೇಡ ಎಂದಿದ್ದ ಮಾತುಗಳು ಪುನರಾವರ್ತಿಸಿದಂತಾಗುತ್ತದೆ. ಹೊರಟು ಹೋಗೋಣವೆಂದು ಎದ್ದ ಕೂಡಲೆ ಅವನಿಗೆ ಅಜ್ಜಿಯ ಮಾತುಗಳು ನೆನಪಾಗುತ್ತವೆ. ಬೇಡವೆಂದು ಯೋಚಿಸಿ ಮತ್ತೆ ರೈಲು ಬಾಗಿಲಿನ ಬಳಿ ವರೂಗಾಗಿ ಹುಡುಕುತ್ತ ನಿಲ್ಲುತ್ತಾನೆ)

.. ಬಂದ್ಬಿಡು, ಬಂದ್ಬಿಡು, ಪ್ಲೀಸ್ ಹೋಗ್ಬೇಡ.

(ರೈಲು ಹೊರಡುವುದನ್ನು ಗಮನಿಸುವ ವರೂಗೆ ದುಃಖ ಹೆಚ್ಚಾಗಿ ರೈಲಿನ ಹಿಂದೆ ಓಡಿ ಬರುತ್ತಾಳೆ ಆದರೆ ರೈಲು ಹೊರಟುಹೋಗುತ್ತದೆ. ಅತ್ತ ಶಂಕರ್ ರೈಲಿನಲ್ಲಿ ದುಃಖದಿಂದ ನಿಂತಿದ್ದಾನೆ)

.. ಶಂಕರ್ ಯಾಕ್ ಹೀಗ್ ಮಾಡ್ದೆ. ವಯ್?

(ವರಲಕ್ಷ್ಮಿಯ ದುಃಖತಪ್ತ ಮನೋಭಾವದೊಂದಿಗೆ ದೃಶ್ಯ ಕೊನೆಗೊಳ್ಳುತ್ತದೆ)

**ನಿರ್ದೇಶಕರ ಟಿಪ್ಪಣಿ:**

**ಅಪ್ಪ ಅಮ್ಮನ ಜೊತೆ ತಾನು ಬಂಗಾಡಿಗೆ ಹೊರಡುವ ಬಗ್ಗೆ ನಿರ್ಧಾರವನ್ನು ತಗೆದುಕೊಳ್ಳುತ್ತ ಹಾಗೆಯೇ ಅದನ್ನು ವರಲಕ್ಷ್ಮಿಗೂ ತಿಳಿಸಿ ಅವಳ ಅಮೇರಿಕಾಗೆ ಹೊಗಿ ನೆಲಸುವ ಕನಸುಗಳಿಗೆ ತಣ್ಣೀರೆರಚುತ್ತ ತನ್ನ ಕನಸನ್ನು ಬಿಚ್ಚಿಡುವ ಶಂಕರ ನಿಧಾನವಾಗಿ ವರಲಕ್ಷ್ಮಿಯ ಹಾಗು ದೆಹಲಿಯ ಬದುಕಿನಿಂದ ಬೇರೆಯಾಗುವತ್ತ**

ಹೊರಡುತ್ತಾನೆ. ಈ ದೃಶ್ಯಗಳಲ್ಲಿ ಸಂಭಾಷಣೆಗೆ ಕತ್ತರಿ ಅಂತ ಏನು ಹೇಳುತ್ತೇವೆಯೋ ಸಂಕಲನದಲ್ಲಿ ಅದನ್ನು ಬಳಸಲಾಗಿದೆ. ಅಲ್ಲಿ ತಾಯಿ ಹೇಳುವ ಜಾವ್ ಜಾವ್ ಎಂಬ ಮಾತಿನಿಂದ ಅಂತ್ಯವಾಗುವ ಅವಳ ಮಾತನ್ನು ಸಂಕಲನದ ಸಹಾಯದಿಂದ ನೇರವಾಗಿ ವರಲಕ್ಷ್ಮಿ ಹೇಳುವ "ಡಿಸೈಡ್ ಮಾಡ್ಬಿಟ್ಟಿದ್ದೀಯಲ್ಲ ಹೋಗು" ಎನ್ನುವ ಮಾತಿಗೆ ದೃಶ್ಯದಲ್ಲಿ ಸಂಬಂಧ ಕಲ್ಪಿಸಲಾಗಿದೆ. ದೃಶ್ಯ 42 ಮತ್ತು 43ಗಳನ್ನು ತಗೆದುಹಾಕಲಾಗಿದೆ. ಆ ಎರಡೂ ದೃಶ್ಯಗಳು ಶಂಕರ, ತಂದೆ, ವಿಠೂ ಮತ್ತು ವರಲಕ್ಷ್ಮಿಯ ಬಗ್ಗೆ ಇದ್ದಂತಹ ಪಾತ್ರಪೋಷಣೆಯನ್ನು ನೇರ ಕಥೆಗೆ ಅನುಗುಣವಾಗುವಂತೆ ಬದಲಿಸಿಕೊಳ್ಳಲಾಗಿದೆ. ಆಕೆಯನ್ನು ಬರಲು ಹೇಳಿದ್ದ ಶಂಕರ ರೈಲಿನಲ್ಲಿ ಅವಳಿಗಾಗಿ ಕಾಯುತ್ತಿರುವ ಮತ್ತು ಇತ್ತ ರೈಲ್ವೇ ನಿಲ್ದಾಣಕ್ಕೆ ಬಂದರೂ ನಾನು ಅವನಿಗೆ ಮುಖತೋರಿಸದೇ ಇದ್ದರೆ ಅವನು ಇಳಿದುಬಿಡುತ್ತಾನೆ/ತಿರುಗಿ ಬಂದುಬಿಡುತ್ತಾನೆ ಎಂಬ ಆಸೆಯಿಂದ ಕಾಯುತ್ತಿರುವ ವರಲಕ್ಷ್ಮಿಯ ತುಮುಲಗಳನ್ನು, ಅತ್ತ ಅಜ್ಜಿ ಇತ್ತ ವರಲಕ್ಷ್ಮಿ ಹಾಗೂ ಮನೆಯವರ ಸೆಳೆತಕ್ಕೆ ಇವೆಲ್ಲದರ ನಡುವೆ ಹೊಯ್ದಾಡುವ ಶಂಕರನ ಮನಸ್ಥಿತಿಯನ್ನು ಕೊನೆಗೂ ಹೊರಡುವ ನಿರ್ಧಾರಕ್ಕೆ ಬಂದಾಗ ಅತಂತ್ರಳಾಗುವ ವರಲಕ್ಷ್ಮಿಯ ಕೂಗಿನೊಡನೆ ದೃಶ್ಯ ಅಂತ್ಯವಾಗುತ್ತದೆ. ಶಂಕರನ ಆ ತುಮುಲವನ್ನು ಅತಿ ಸೂಕ್ಷ್ಮವಾಗಿ ಆ ರೈಲುಭೋಗಿಯ ಕೆಲವೇ ಚಿತ್ರಿಕೆಗಳ ಮುಖಾಂತರ ಬೇರೆ ಬೇರೆ ಪರಿಸರದ ಮಾತುಗಳನ್ನು ಬೆರೆಸಿ ಬಹಳ ಪರಿಣಾಮಕಾರಿಯಾಗಿ ಬಳಸಲಾಗಿದೆ.

# ಮಧ್ಯಂತರ

# ದೃಶ್ಯ–51

*ಹಗಲು–ಬೆಳ್ತಂಗಡಿ–ತಹಶೀಲ್ದಾರ್ ಕಛೇರಿಯ ಒಳಗೆ*
*ಹಸ್ತಪ್ರತಿಯಲ್ಲಿ: (ಚಲನಚಿತ್ರದಲ್ಲಿ ಇಲ್ಲ)*

*ಭಂಗ : ಹೋಯ್ ನೀವು ಬಂಗಾಡಿ ಶಾನುಭೋಗರಲ್ಲವೋ? ಈಚೆಗೆಲ್ಲೋ ನೋಡಿದಹಾಗಿತ್ತಲ್ಲ.. ಎಲ್ಲಿ?*

*ಶಾನುಭೋಗ : ಎಲ್ಲೂ ಇಲ್ಲ. ಇಲ್ಲೇ. ಸ್ವಲ್ಪ ಹೊತ್ತಿನಿಂದ ನೋಡ್ತಾನೆ ಇದೀರಿ.*

*ಭಂಗ : ಸಾಹೇಬರನ್ ಕಾಣಲಿಕ್ಕೆ ಬಂದದ್ದೋ?*

*ಶಾನುಭೋಗ : ನಾನು ಬಂದದ್ದಲ್ಲ, ಅವರೇ ಕರೆಸಿದ್ದಾರೆ ನನ್ನನ್ನ. ನಂಗೆ ಊರಲ್ಲೇ ಸಾಕಷ್ಟು ಕೆಲಸ ಉಂಟು, ಅದನ್ನೆಲ್ಲ ಬಿಟ್ಟು ಇಲ್ಲಿ ತಾಸುಗಟ್ಟಲೆ ಕೂತು ನಿಮಗೆ ಮುಖ ತೋರಿಸಲಿಕ್ಕೆ ಬಂದದ್ದಲ್ಲ.*

*ಭಂಗ : ಓಹೋ, ಸ್ವಕಾರ್ಯ ಅಲ್ಲ. ಸ್ವಾಮಿ ಕಾರ್ಯ.*

(ಬೆಳ್ತಂಗಡಿಯ ತಹಶೀಲ್ದಾರರು ಶಾನುಭೊಗ ರಂಗರಾಯರನ್ನು ಕರೆಸಿ ಬಂಗಾಡಿಯ ಸರಹದ್ದಿನ ದಾಖಲೆಗಳನ್ನು ಹಾಗೂ ಶಂಕರನಿಗೆ ಸಂಬಂಧಪಟ್ಟ ದಸ್ತಾವೇಜುಗಳನ್ನು ಪರೀಕ್ಷಿಸಿ ವಿಲೇವಾರಿ ಮಾಡಲು ಸಿದ್ಧತೆಮಾಡಿಕೊಳ್ಳುತ್ತಿದ್ದಾರೆ)

ಸಾಹೇಬ : ಬಂಗಾಡಿ ದತ್ತಾತ್ರೇಯರ ಜಮೀನನ್ನು ಅದರ ಉತ್ತಾರಾಧಿಕಾರಿ ಹೆಸರಿಗೆ ವರ್ಗಾಯಿಸೋದಿದೆ ಅದಿಕ್ಕೆ ನಿಮ್ಮಿಂದ ಒಂದು ಕ್ಲಿಯರೆನ್ಸ್ ಸರ್ಟಿಫಿಕೇಟು ಹಾಗೂ ಒಂದು ಉತಾರು ಪತ್ರಕೇಳಿ ಒಂದು ವಾರ ಆಯ್ತು. ಸುಮ್ನೇನೆ ಇದೀರಲ್ಲ

ಶಾನುಭೋಗ : ಸಾಹೇಬ್ರೆ ಅದೂ...

ಸಾಹೇಬ : (ಅವನನ್ನು ತಡೆದು)

.. ಹ್ಹಾ ಹ್ಹಾ ಅದರ ಉತ್ತರಾಧಿಕಾರಿ ಅದನ್ನ ನೋಡ್ಕೊಳೋಕೆ ಬರ್ತಿದಾನೆ. ಮೊದ್ಲು ಉತಾರು ಪತ್ರ ಕಳ್ಸಿ.

ಶಾನುಭೋಗ : ಯಾವನು ಅವ್ನು ಉತ್ತರಾಧಿಕಾರಿ ಬಂದು ನೋಡ್ಕೊಳ್ಳೋನು, ಅಲ್ಲಿಯ ಶಾನುಭೋಗ ನಾನು. ನನ್ನಲ್ಲಿ ಹೇಳದೆ ಕೇಳದೆ ನಿಮ್ಮಲ್ಲಿ ಹ್ಯಾಗೆ ಬಂದ ಅವನು? ನಾನಂದ್ರೆ ಅಷ್ಟು ಸಲೀಸಾ? ಭೂಮಿಗೆ ಸಂಬಂಧಪಟ್ಟ

| | | |
|---|---|---|
| | | ಅಜ್ಜಿ ನಮ್ಮನೇಲೆ ಇರೋದು. ನನ್ನ ಉಸ್ತುವಾರೀಲೆ ಎಲ್ಲ ಉಂಟು ಹ್ವಾ.. |
| ಸಾಹೇಬ | : | ಶ್ಯಾನುಭೋಗ್ರೆ ನನಿಗೇ ರೈಲ್ ಬಿಡ್ತಿದೀರಲ್ರಿ ಅದು ಕೊಂಕಣ ರೈಲು. ನೋಡ್ಕೊಳೋರ್ ಯಾರು ಇಲ್ದೆ, ಪಾಳ್ ಬಿದ್ದಿದೆ ಆ ಜಮೀನು. ಆ ಅಜ್ಜಿ ನಿಮ್ಮನೇಲ್ ಇದಾಳೆ ಅಂದ್ ಮಾತ್ರಕ್ಕೆ ಅದು ನಿಮ್ದಾಗ್ಬಿಡುತ್ತ? |
| ಶಾನುಭೋಗ | : | ಸಾಹೇಬ್ರೆ ಸ್ವಲ್ಪ ಮಾತಾಡ್ಬೋದಲ್ಲ ಇಲ್ಲಿ<br>(ತನ್ನ ಜೇಬನ್ನು ತೋರಿಸುತ್ತ) |
| ಸಾಹೇಬ | : | ಇಲ್ಲೀ? ಇಲ್ಲೇನ್ರಿ ಬಂತು ಇಲ್ಲಿ<br>(ಶಾನುಭೋಗ ಮಂಕಾಗುತ್ತಾನೆ)<br>.. ದಿಲ್ಲಿ ದಿಲ್ಲಿ.. ನಮ್ಮನ್ನ ಒಳಗ್ ಕಳ್ಸ್‌ಬಿಡ್ತೀರ ಅಷ್ಟೇ. ಅದನ್ನ ಮನೇಗ್ ಕಳ್ಸಿ. ಮೊದ್ಲು ಉತಾರ ಪತ್ರ ಕಳ್ಸಿ ಹೋಗಿ.<br>(ಎಂದು ನಿರ್ದಾಕ್ಷಿಣ್ಯವಾಗಿ ರಂಗರಾಯರಿಗೆ ಎಚ್ಚರಿಕೆಯನ್ನು ನೀಡಿ ಆದೇಶಿಸುತ್ತಾರೆ.) |

***ಹಸ್ತಪ್ರತಿಯಲ್ಲಿ: (ಚಲನಚಿತ್ರದಲ್ಲಿ ಇಲ್ಲ)***

| | | |
|---|---|---|
| | | *(ಹೊರಬಂದ ಶಾನುಭೋಗರಿಗೆ ಭಂಗ ಮಾಸ್ತರರು)* |
| *ಭಂಗ* | *:* | *ಹ್ಹಾಂ.. ಈಗ ಜ್ಞಾಪಕಕ್ಕೆ ಬಂತು ನೋಡಿ. ಒಂದು ಬಾರಿ ಇಬ್ಬರು ಯುವಕರಿಗೆ ನಿಮ್ಮ ಬಂಗಾಡಿಯ ದಾರಿ ತೋರಿಸಿದ್ದೆ ನಾನು. ಸರಿಯಾಗಿ ಬಂದು ಮುಟ್ಟಿದರಾ ಅವರು ಅಲ್ಲಿ?* |
| *ಶಾನುಭೋಗ* | *:* | *ಹೋ..*<br>*(ಎಂದು ಇದೆಲ್ಲ ಇವನ ಕುಮ್ಮಕ್ಕೇ ಇರಬೇಕೆಂದು ತಪ್ಪುತಿಳಿದು ಭಂಗ ಮಾಸ್ತರರಿಗೆ ಹೊಡೆಯುವುದು)* |

# ದೃಶ್ಯ–52

*ಹಸ್ತಪ್ರತಿಯಲ್ಲಿ: (ಚಲನಚಿತ್ರದಲ್ಲಿ ಇಲ್ಲ)*

| | | |
|---|---|---|
| | | *(ಶಾನುಭೋಗನಿಂದ ಶಂಕರ ಮತ್ತೆ ಊರಿಗೆ ಬರುತ್ತಿದ್ದಾನೆಂಬ ವಿಷಯತಿಳಿದು ಅಜ್ಜಿ ಸಂತೋಷದಿಂದ..)* |
| *ಅಜ್ಜಿ* | : | *ಶಂಕ್ರ ಬರ್ತಿದಾನಾ? ಇಲ್ಲಿಗೇ? ನನಿಗ್ ಗೊತ್ತಿತ್ತು. ಅವನ್ ಕಣ್ಗಳ್ನ ನೋಡ್ದಾಗ್ಲೆ ನನ್‌ಗನ್ಸಿತ್ತು. ಅವ್ನು ಬಂದದ್ದು ಸುಮ್ನೆ ಅಲ್ಲ ಅಂತ. ಬಂಗಾಡೀ ಮತ್ತೆ ನಿನಗೆ ದೆಸೆ ಬಂತು, ನಿನಗೆ ಮತ್ತೆ ದೆಸೆ ಬಂತು, ನನ್ ಪುಣ್ಯ* |
| *ಶಾನುಭೋಗ* | : | *ದಿಗ್‌ಣಾ ಕುಣೀಬೇಡಿ! ದಿಲ್ಲಿ ಹುಡ್ಗಾ ಅವ್ನು. ಬೂಟು ಹಾಕಿಕೊಂಡೇ ಭೂಮಿಗ್ ಬಂದವನು. ತೀರ್ಥ ಕುಡಿದ್ರೆ ಶೀತ, ಪ್ರಸಾದ ತಿಂದ್ರೆ ಅಜೀರ್ಣ. ಎರೆಡ್ ವಾರ. ಎರಡೇ ವಾರ ಇಲ್ಲಿದ್ದು ತೋರಿಸ್ಲಿ. ನನ್ ಕೇಳ್ದೇ ಬರ್‍ತಾನೋ?* |
| *ಅಜ್ಜಿ* | : | *ನಿನ್ನನ್ ಯಾಕೋ ಕೇಳ್ಬೇಕು ಅವ್ನು. ಅವನ್ ಜಾಗಕ್ ಅವನ್ ಬರ್ತಿದಾನೆ.* |
| *ಶಾನುಭೋಗ* | : | *ಆ ದತ್ತಣ್ಣನೋ ಹೆದರುಪುಕ್ಕ. ಮುಖ ಮರೆಸಿಕೊಂಡ್ ಓಡಿಹೋದ. ಅವನ ಮಗನಂತೂ ಮಹಾಪುಕ್ಕ. ಈ ಕಡೆ ಮುಖಾನೇ ಹಾಕಿಲ್ಲ. ಈಗ ಈ ಮೊಮ್ಮಗ.. ಪ್ರತ್ಯಕ್ಷನಾಗ್‌ತಿದಾನೋ? ಅದ್ ಹ್ಯಾಗ್ ಬರ್ತಾನೆ* |
| *ಶ್ರೀಮತಿ* | : | *ಹ್ಹುಹ್.. ಹ್ಯಾಗೆ ಅಂದ್ರೆ ಸೈಕಲ್ ಮೇಲೆ ಝುಮ್ ಅಂತ* |
| *ಶಾನುಭೋಗ* | : | *ಹೋ..* |

# ದೃಶ್ಯ–53

*ಹಗಲು–ಬಂಗಾಡಿಯ ದಾರಿ*

*ಹಸ್ತಪ್ರತಿಯಲ್ಲಿ: (ಚಲನಚಿತ್ರದಲ್ಲಿ ಇಲ್ಲ)*

| | | |
|---|---|---|
| | | *(ಸೈಕಲ್ಲಿನ ಮೇಲೆ ಸೀತಾರಾಮ ಮತ್ತು ಶಂಕರ ಬಂಗಾಡಿಯ ಹೊಳೆಯನ್ನು ದಾಟುತ್ತಿರುವ ಸಂಭ್ರಮದಲ್ಲಿದ್ದಾಗ ಶಾನುಭೋಗರಿಗೆ ಎದುರಾಗುತ್ತಾರೆ)* |
| *ಶಂಕರ* | : | *ಸೀತಾರಾಮ್ ನೀರಿನ ಸೆಳವು ಜಾಸ್ತಿಯಾಗಿದೆ ಅಲ್ಲ* |
| *ಸೀತಾರಾಮ* | : | *ಘಟ್ಟದ ಮೇಲೆ ಅಡ್ಡ ಮಳೆ ಹೊಡ್ದಿರ್ಬೇಕು* |
| *ಶಂಕರ* | : | *ಮಳೆ ಉದ್ದುದ್ದಕ್ ಬೀಳುತ್ ಅಲ್ವಾ?. ಈ ಅಡ್ಡ ಮಳೆ ಎಂಥಾದ್ದಪ್ಪಾ?* |
| *ಸೀತಾರಾಮ* | : | *ಅಕಾಲದಲ್ಲಿ, ಸೀಸನ್ ತಪ್ಪಿ ಬರೋ ಮಳೆ ಅಡ್ಡಮಳೆ* |
| *ಶಾನುಭೋಗ* | : | *ಹೋಯ್ ಬನ್ನಿ ಬನ್ನಿ ಈ ನೀರು ಏನೂ ಅಲ್ಲ. ಇನ್ನೂ ಏರೋದು ಬಾಕಿ ಇದೆ. (ಕತ್ತಿನ ಮಟ್ಟ ತೋರಿಸಿ) .. ಇಲ್ಲೀ ತನ್ಕ ಬರುತ್ತೆ ಒಂದಿನಾ. ಆಗ ಹ್ಯಾಗ್‌ದಾಟ್ತೀರಾ?* |
| *ಶಂಕರ* | : | *ಆಗ್ಲೂ ಹೀಗೇನೇ* |
| *ಶಾನುಭೋಗ* | : | *ಆಗ ಯಾವ್ದೂ ಹೀಗ್ ಇರೋಲ್ಲ* |
| *ಶಂಕರ* | : | *ಆಗ ನಾವೂ ಹೀಗ್ ಇರೋಲ್ಲ* |
| ಶಂಕರ | : | ಚಲೋ ಬಂಗಾಡಿ, ಕಮಾನ್ ಸೀತಾರಾಮ್ ಕಮಾನ್ ಬೇಗ ಬೇಗ ಕಮಾನ್ ಮಾನ್ (ಅವರಿಬ್ಬರಿಗೆ ಶಾನುಭೋಗರು ಎದುರಾಗುತ್ತಾರೆ) |



| | | |
|---|---|---|
| ಸೀತಾರಾಮ | : | ನಮಸ್ಕಾರ ಶ್ಯಾನುಭೋಗ್ರೆ |
| ಶಾನುಭೋಗ | : | ಪರವಾಗಿಲ್ಲ ನಾನು ಇಲ್ಲಿಯ ಶಾನುಭೋಗ ಅಂತ ಗೊತ್ತು ನಿನಗೆ. ನೀನು ಮುದ್ರಾಡಿ ಪಂಡಿತರ ಮಗ ತಾನೆ? |
| ಸೀತಾರಾಮ | : | ಹೌದು |
| ಶಾನುಭೋಗ | : | (ಶಂಕರನನ್ನು ನೋಡುತ್ತ)<br>ಇವನಿಗೆ ಬಿಡು ಗ್ರಹಚಾರ ಸರಿಯಾಗಿಲ್ಲ ಎಂದುಕೊಳ್ಳುವ, ನಿನಗೆ ಬೇರೆ ಕೆಲಸ ಇಲ್ಲವೋ |
| ಸೀತಾರಾಮ | : | (ನಗುತ್ತ) ಸದ್ಯಕ್ಕಂತು ಬೇರೆ ಕೆಲ್ಸ ಇಲ್ಲ ಶ್ಯಾನುಭೋಗ್ರೆ |
| ಶಾನುಭೋಗ | : | (ಶಂಕರನನ್ನು ತೋರಿಸಿ) ಇವನ ಅಪ್ಪನ ಹೆಸರೇನಂತೆ? |
| ಶಂಕರ | : | ಅವನ್ನೇನ್ ಕೇಳ್ತಿರ? ನನ್ನನ್ನ್ ಕೇಳಿ, ಬಂಗಾಡಿ ಸುಂದರ್ ರಾವ್ |
| ಶಾನುಭೋಗ | : | ವಾರೆ ವಾ. ಜಬರ್‌ದಸ್ತಾಗಿದೆ. ಬಂಗಾಡಿನ ಹೆಸ್ರಲ್ಲಿಟ್ಕೊಳೋದ್ ಸುಲಭ ಆದ್ರೆ ಬಂಗಾಡಿಲೆ ಬಂದ್ ಇರೋದು ಅಷ್ಟು ಸುಲಭ ಅಲ್ಲ. ಎಷ್ಟ್ ದಿನ ಈ ಟ್ರಿಪ್ಪು? ಹುಷಾರು ಮಲೇರಿಯಾ ಗಿಲೇರಿಯಾ ಆದೀತು. ಡಾಕ್ಟ್ರು ಗೀಕ್ಟ್ರು ಇಲ್ಲ ಇಲ್ಲಿ ನಡ್ಕ ಶುರುವಾಯ್ತೋ ಹಮ್ ಪಡ್ಚ್ಯಾ.. (ಕೇಕೆ ಹಾಕುವನು)<br>.. ಅಲ್ಲಾ ಏನ್ ಕಡೀಲಿಕ್ ಬಂದಿದೀರ ಇಲ್ಲಿ? |
| ಶಂಕರ | : | ಏನೇನ್ ಕಡಿಯಾಕಾಗುತ್ತೋ ಎಲ್ಲ ಕಡ್ದೇಬಿಡಣಾಂತ |
| ಶಾನುಭೋಗ | : | ನಾಲಿಗೆ ಚುರುಕಾಗಿದೆ. ಹೇಳಿ ಕೇಳೀ ದಿಲ್ಲಿ ನಾಲಗೆಯಲ್ವ ನಿನ್ನ ದಿಲ್ಲಿ ದರ್ಬಾರ್ ಇಲ್ಲಿ ನಡಿಯೋದಿಲ್ಲ. ಎರೆಡು ದಿನ ಇದ್ದು ನಿಮ್ಮಪ್ಪನ ಸಂಪಾದನೆ ಹಾಳು ಮಾಡಿ ಹೋಗ್ತೀಯ ಅಷ್ಟೇ. ಬಂದ ಏನೋ ಕಡೀತಾನಂತೆ!?<br>(ಚಪ್ಪಲಿಯನ್ನು ಕೈಯಲ್ಲಿ ಹಿಡಿದು ನದಿ ದಾಟಲು ಹೋಗುತ್ತಾನೆ ಅತ್ತ ಸೀತಾರಾಮ ಮತ್ತು ಶಂಕರ ಬಂಗಾಡಿಯತ್ತ ಚಲಿಸುತ್ತಾರೆ) |

**ನಿರ್ದೇಶಕರ ಟಿಪ್ಪಣಿ:**

**ದೃಶ್ಯ–51ರಲ್ಲಿ ಭಂಗ ಮಾಸ್ತರರ ಒಟ್ಟಾರೆ ಪಾತ್ರವನ್ನು ತಗೆದುಹಾಕಿ ನೇರವಾಗಿ ಶಾನುಭೋಗರು ಹಾಗೂ ತಹಶೀಲ್ದಾರರ ಸಂಭಾಷಣೆಗೆ ಒತ್ತುಕೊಡಲಾಗಿದೆ. ಕಾರಣ ಚಿತ್ರದ ಒಟ್ಟಾರೆ ಉದ್ದ ಸಾಕಷ್ಟಿದ್ದುದರಿಂದ ಮತ್ತು ಅದನ್ನು ಚಿತ್ರೀಕರಿಸದೆ ಹಾಗೆಯೇ ಬಿಟ್ಟಿದ್ದರಿಂದ ಶಾನುಭೋಗರು ಮತ್ತು ತಹಶೀಲ್ದಾರರ ಸಂಭಾಷಣೆಯಷ್ಟನ್ನೆ ಬಳಸಿಕೊಳ್ಳಲಾಗಿದೆ. ಅದರ ನಂತರ ಇರುವ ದೃಶ್ಯ 52ನ್ನೂ ಕೂಡ ಅದೇ ರೀತಿಯ ಯೋಚನೆಯಲ್ಲಿಯೇ ಕೈಬಿಡಲಾಗಿದೆ. ದೃಶ್ಯ 53ರಲ್ಲಿ ನೇರವಾಗಿ ಎರೆಡು ಸೈಕಲ್‌ಗಳು ನದಿಯನ್ನು ದಾಟುತ್ತಿರುವ ದೃಶ್ಯದೊಂದಿಗೆ ಪ್ರಾರಂಭವಾಗುತ್ತದೆ.**

# ದೃಶ್ಯ–54

*ಹಗಲು–ಎಳಚಿತ್ತರಾಯರ ಮನೆಯ ಹೊರಗೆ*

*ಹಸ್ತಪ್ರತಿಯಲ್ಲಿ: (ಚಲನಚಿತ್ರದಲ್ಲಿ ಇಲ್ಲ)*

*ಎಳಚಿ : ರಾತ್ರಿ ಕಂಡ ಬಾವೀಲಿ ಹಗಲು ಬಿದ್ರಂತೆ. ಹಾಗಾಯ್ತಪ್ಪ ಇದು. ಅಲ್ಲಾ, ನೀವು ಕಲ್ತಿದ್ದು ಏನು? ಮಾಡಬೇಕಾಗಿರೋದು ಏನು? ಎಲ್ಲಿ? ಅದೆಲ್ಲ ಬಿಟ್ಟು ಇಲ್ಲಿ ಇದ್ದು ಕೃಷಿ ಮಾಡೋದು ಅಂದ್ರೆ. ಅದೆಲ್ಲಾ ನಿಮ್ಮ ಸಿನಿಮಾಗಳಲ್ಲಿ ಅಥವಾ ನಮ್ಮ ಕಾರಂತರ ಕಾದಂಬರಿಗಳಲ್ಲಷ್ಟೆ ಚೆಂದ. ಅನುಭವಾ ಇಲ್ಲ ನಿಮಗೆ. ಕಷ್ಟ. ಬಹಳ ಕಷ್ಟ*

*ಸೀತಾರಾಮ : ಬಂದ್ ದಿವ್ಸ್‌ದಿಂದ ಅದನ್ನೇ ಹೇಳ್ತಿದ್ದೀನಿ ಅವ್ನಿಗೆ ಇದೆಲ್ಲ ಕಷ್ಟ ಅಂತಾ*

*ಶಂಕರ : ಕಷ್ಟ ಹೌದು ಆದ್ರೆ ಅಸಾಧ್ಯ ಅಲ್ಲ ತಾನೆ? ನಾನ್ ಎಲ್ಲಾದಕ್ಕೂ ಸಿದ್ಧ.*

(ದೈನಂದಿನ ಕೆಲಸಗಳಲ್ಲಿ ತೊಡಗಿರುವ ಎಳಚಿತ್ತಾಯರ ನಡುವೆ ಶಂಕರ ಮತ್ತು ಸೀತಾರಾಮ ಸಂಭಾಷಣೆ ನಡೆಸುತ್ತಿದ್ದಾರೆ)

ಎಳಚಿ : ನೋಡಿ ಸಾರ ಕಾಣ್ದೇ ಬಿದ್ದ ಬಂಜರು ಭೂಮಿ ಅದು. ಅಲ್ಲಿ ಪ್ರತಿಫಲ ಸಿಗ್ಲಿಕ್ಕೆ ತುಂಬ ಕಾಯ್ಬೇಕು. ಹ್ಹಾ ತಾಳ್ಮೆ ಬೇಕು ತಾಳ್ಮೆ

ಶಂಕರ : ಹ್ಹಾ ಆ ನೆಲದ್ ತಾಳ್ಮೆ ಎದ್ರು, ಅಜ್ಜಿ ತಾಳ್ಮೆ ಎದ್ರು ನಂದ್ ಯಾವ್ ಲೆಕ್ಕ ಹೇಳಿ ಎಳಚಿತ್ತಾಯ್ರೆ. ಕಣ್ಮುಚ್ ದುಡಿತಿನಿ. ಕಣ್ತೆರೆದ್ ಕಾಯ್ತಿನಿ. (ತನ್ನ ನಿರ್ಧಾರದ ದಿಟ್ಟತನವನ್ನು ತೋರುತ್ತಾನೆ)

ಎಳಚಿ : ನೀನೇನೋ ಕಾಯ್ತೀಯಪ್ಪ. ಆದ್ರೆ ಆ ಶಾನುಭೋಗ ಸುಮ್ನೆ ಕಾಯ್ತಾ ಕೂತಿರ್ತಾನ? ನೀನ್ ಅವರ್ ವಿರೋಧ ಕಟ್ಕೊಂಡು ಇಲ್ಲಿರೋದು ಅಂದ್ರೆ

ಶಂಕರ : ಚಿಂತೆ ಬೇಡ ಎಳಚಿತ್ತಾಯ್ರೆ. ನಾನ್ ಖಂಡಿತ ನಿಮ್ಮನೇಲ್ ಇರೋದಿಲ್ಲ

ಶ್ರೀಮತಿ ಎಳಚಿ : ಅದು ಹಾಗಲ್ಲ ಮಗ

ಶಂಕರ : ಭಯಾ ಬಿಡೀಮ, ನಿಮಗ್ಯಾವ್ ಇಕ್ಕಟ್ಟು ತರೋದಿಲ್ಲ

ನಾನು. ನಿಮ್ಮ ಆಶಿರ್ವಾದ ಒಂದಿದ್ರೆ ಸಾಕು ಮಿಕ್ಕಿದ್ದೆಲ್ಲ ನಾನ್ ನೋಡ್ಕೋತೀನಿ. ಇನ್ ಸೀತುದಂತು ಗ್ಯಾರಂಟಿ ಇಲ್ಲ. ನಾಳೆ ಮಂಗ್ಳೂರ್ನಲ್ಲೋ ಮಣಿಪಾಲದಲ್ಲೋ ನೌಕ್ರಿ ಸಿಕ್ಕುದ್ರೆ ಹೊರ್ಟೋಗ್ತಾನೆ. ನಾನ್ ಮಾತ್ರ ಎಲ್ಲದಕ್ಕೂ ಸಿದ್ಧವಾಗ್ ಬಂದಿದ್ದಿನಿ.

ಸೀತಾರಾಮ : ನೀನ್ ಸಿದ್ಧವಾಗಿದ್ರೆ ಆಗ್ಲಿಲ್ಲ ಮಾರಾಯ ಬರೀ ವಿಲ್ ಪವರ್‌ನಿಂದ ಏನು ನಡಿಯಲ್ಲ. ಅದಕ್ಕೊಂದ್ ಸಪೋರ್ಟ್ ಸಿಸ್ಟಮ್ ಬೇಕು. ಆಳ್ಗಳ್ನ ಎಲ್ಲಿಂದ ತರ್ತೀಯ?
(ಎಂದು ಕೇಳುತ್ತಿದ್ದಂತೆ ಮುತ್ಯ ಹಲವಾರು ಆಳುಗಳನ್ನು ಕರೆದುಕೊಂಡು ಬರುತ್ತ ಶಂಕರನನ್ನು ಕೂಗುತ್ತಾನೆ)

ಮುತ್ಯಾ : ದತ್ತಣ್ಣ, ಇಲ್ನೋಡಿ (ಆಳುಗಳನ್ನ ತೋರಿಸುತ್ತ) ಜೀವ ಇರೋತನ್ಕ ದುಡೀತೀವಿ ದತ್ತಣ್ಣ



ಸೀತಾರಾಮ : ಮುತ್ತಣ್ಣ ಶಾನುಭೋಗ್ರನ್ ಎದ್ರಾಕೋತೀಯನೆಪ್ಪ?

ಮುತ್ಯ : ಸಾವನ್ನೇ ಎದ್ರಾಕೊಂಡು ಎಂಭತ್ತ್ ವರ್ಷ ಬದ್ಕಿದ್ದೀನಿ, ಇದ್ಯಾವ್ ಲೆಕ್ಕ.
(ಕೆಲಸಗಾರರ ಕಡೆ ತಿರುಗಿ)
.. ನಡೀರೋ ಇವತ್ತಿಂದಾನೆ ಕೆಲ್ಸ ಶುರುಮಾಡಣ

ಶಂಕರ : ಮುತ್ತಯ್ಯ, ಇವತ್ತಿಂದಾನ?

ಮುತ್ಯ : ಈಗ್ಲೆ ಈ ಕ್ಷಣಾನೆ. ಮೊದ್ಲೋಲೆ ಆಮೇಲ್ ಮನೆ. ಹೇ ನಡೀರ್ರೋ
(ಆ ಕ್ಷಣದ ಕಾಮಗಾರಿಗೆ ಹೊರಟ ಮುತ್ಯ ಮತ್ತು ಅವನ ಸಂಗಡಿಗರನ್ನು ಕಂಡು ಶಂಕರ ದಿಗ್ಮೂಢನಾಗುತ್ತಾನೆ.)

# ದೃಶ್ಯ–56

***ಹಗಲು–ಬಂಗಾಡಿ***

(ಮನೆ ಕಟ್ಟುವ ಯೋಜನೆಯ ಗುದ್ದಲಿ ಪೂಜೆ, ಎಳಚಿತ್ತಾಯ ದಂಪತಿಗಳು ಗುದ್ದಲಿ ಪೂಜೆಯನ್ನು ಮಾಡುವುದು. ಶಂಕರ ಬಂಗಾಡಿಯ ಹೊಳೆಗೆ ಕಟ್ಟಲಿರುವ ಸೇತುವೆಯ ಮಾದರಿಯನ್ನು ಸಿದ್ಧಪಡಿಸುತ್ತಿದ್ದಾನೆ. ಶಂಕರ ಟಿಲ್ಲರಿನಲ್ಲಿ ಜಮೀನಿನ ಉಳುಮೆಯ ಕೆಲಸವನ್ನು ಮಾಡುತ್ತಿರುವುದು. ಇವೆಲ್ಲ ಚಿತ್ರಿಕೆಗಳ ಮುಖಾಂತರ ಶಂಕರ ಕಾರ್ಯೋನ್ಮುಖನಾದದ್ದನ್ನು ಮಾಂಟೆಜ್‌ಗಳಲ್ಲಿ ಹೇಳಲಾಗಿದೆ)

# ದೃಶ್ಯ–57

*ಹಗಲು–ಶಾನುಭೋಗರ ಮನೆಯ ಹೊರಗೆ*

*ಹಸ್ತಪ್ರತಿಯಲ್ಲಿ: (ಚಲನಚಿತ್ರದಲ್ಲಿ ಇಲ್ಲ)*

*ಆಳು : ಧಣೀ ಬಂಗಾಡೀಲಿ ಒಲೆ ಹೊತ್ತಿ ಉರೀತಿದೆ*

*ಶಾನುಭೋಗ : ಉರೀಲಿ, ಉರೀಲಿ, ಎಷ್ಟ್ ದಿನ ಉರಿದೀತು!*

*ಆಳು : ಶಾನುಭೋಗ್ರೆ ಮನೆ ಮಾಡೆತ್ತರಕ್ಕೆ ಏರಿದೆ*

*ಶಾನುಭೋಗ : ಏರಿದೆಯೋ? ಏರಿದ್ ಇಳಿಲೇಬೇಕು. ಇಳಿದೇ ಇಳಿಯುತ್ತೆ.*

(ಪಡಸಾಲೆಯಲ್ಲಿ ಶಾನುಭೋಗರು ತಮ್ಮ ಲೆಕ್ಕಪತ್ರ ಪರಿಶೀಲನೆಯಲ್ಲಿದ್ದಾರೆ. ಆತನ ಹೆಂಡತಿ ಮತ್ತು ಅಜ್ಜಿ ಬಾವಿಯ ಬಳಿ ನಿಂತು ಕೆಲಸ ಮಾಡುತ್ತಿದ್ದಾರೆ. ಆ ಸಮಯದಲ್ಲಿ ಶಾನುಭೋಗರ ಮನೆಯ ಆಳೊಬ್ಬ ಡಿ.. ಡಿ.. ಡಿ.. ಎಂದು ಶಬ್ಧ ಮಾಡುತ್ತ ಅಲ್ಲಿಗೆ ಬರುತ್ತಾನೆ ಅವನಿಗೆ ಶಾನುಭೋಗರು)

ಶಾನುಭೋಗ : ಎಂತ ಮಾರಾಯ ಅದು ಡಿ.. ಡಿ.. ಡಿ..

ಆಳು : ಅದೇ ಬಂತು ಡಿ ಡಿ ಡಿ ಗದ್ದೆ ಉಳೋದು. ಒಂದೇ ದಿನಕ್ಕೆ ಮೂರ್ ಎಕ್ರೆಯಷ್ಟು ಉತ್ತಾಯ್ತು.

ಶಾನುಭೋಗ : ಓಹೋ ಟಿಲ್ಲರಾ?

ಆಳು1 : ಇಷ್ಟೇ ಅಲ್ಲ ಶ್ಯಾನುಭೋಗ್ರೆ ಹೊಳೆಗೆ ಸೇತ್ವೆ ಕಟ್ತಾ ಇದಾರೆ

ಶಾನುಭೋಗ : ಸೇತ್ವೆ ಕಟ್ತಾನ ಇವನಪ್ಪನ ಹೊಳೆ

ಅಜ್ಜಿ : ಮತ್ತ್ ಇವ್ರಪ್ಪಂದಾ?
(ಶಾನುಭೋಗನ ಹೆಂಡತಿಗೆ ಕೇಳುತ್ತಾಳೆ)

ಶಾನುಭೋಗ : ಅದ್ಹ್ಯಾಗ್ ಕಟ್ತಾನೆ? ನಾನೀಗ್ಲೆ ಬೆಳ್ತಂಗಡಿ ಆಫೀಸಿಗೆ ಹೋಗಿ ಕೇಳ್ತೇನೆ. ನಮ್ಮೂರ ಹೊಳೆಗೆ ಸೇತುವೆ ಕಟ್ಲಿಕ್ಕೆ ಇವನ್ಯಾರು? ಮಣ್ಣು ಮುಕ್ಕುಸ್ತೇನೆ ಹ್ಹಾ
(ಕುಪಿತನಾಗಿ ತನ್ನ ಕೋಟನ್ನು ಹಾಕಿಕೊಂಡು ಹೊರಡುತ್ತಾನೆ. ಅಜ್ಜಿ ಅವನನ್ನೇ ನೋಡುತ್ತ ವಿಷಾದ ವ್ಯಕ್ತ ಪಡಿಸುತ್ತಾರೆ)

ಅಜ್ಜಿ : ಛೇ...
(ದೃಶ್ಯದಲ್ಲಿ ಶಾನುಭೋಗನ ಸಿನಿಕತನವನ್ನು ಕಂಡು

ವಿಷಾದ ವ್ಯಕ್ತಪಡಿಸುವ ಅಜ್ಜಿಯ ಚಿತ್ರಿಕೆಯ ಮೇಲೆ ದೃಶ್ಯ ಕೊನೆಗೊಳ್ಳುತ್ತದೆ)

**ನಿರ್ದೇಶಕರ ಟಿಪ್ಪಣಿ:**

**ದೃಶ್ಯ 54ರಲ್ಲಿ ಎಳಚಿತ್ತಾಯರ ಮನೆಗೆ ಹೊರಟಿದ್ದ ಶಂಕರ ಮತ್ತು ಸೀತಾರಾಮು, ಶಾನುಭೋಗರನ್ನು ಭೇಟಿ ಮಾಡುತ್ತಾರೆ. ಶಾನುಭೋಗರ ಖಡಕ್ ನುಡಿಗಳನ್ನು ಕೇಳಿಯೂ ಕೂಡ ಮನಸ್ಸಿಗೆ ಹಚ್ಚಿಕೊಳ್ಳದೆ ಶಂಕರ ಮತ್ತು ಸೀತಾರಾಮು ಮುಂದುವರೆಯುತ್ತಾರೆ. ಎಳಚಿತ್ತಾಯರು ಶಾನುಭೋಗರ ಬಲದ ಬಗ್ಗೆ ಮಾತನಾಡಿದಾಗ ಅದನ್ನು ಅಷ್ಟಾಗಿ ಮನಸ್ಸಿಗೆ ಹಚ್ಚಿಕೊಳ್ಳುವುದಿಲ್ಲವೆಂದು ಶಂಕರ ಧೈರ್ಯ ತಂದುಕೊಳ್ಳುತ್ತಾನೆ. ಎಳಚಿತ್ತಾಯರು, ಕೆಲಸಗಾರರಿಲ್ಲದೆ ಹೇಗೆ ನೀನು ಕೆಲಸವನ್ನು ಮುಂದುವರೆಸುತ್ತೀಯ ಎಂದು ಕೇಳುವ ಪ್ರಶ್ನೆಗೆ ಮುತ್ಯ ಮತ್ತು ಅವನ ಸಂಗಡಿಗರು ಅಲ್ಲಿಗೆ ಬರುವುದು ಶಂಕರನ ಮನೋಸ್ಥೈರ್ಯ ಜಾಸ್ತಿಯಾಗಲು ಕಾರಣವಾಗುತ್ತದೆ. ಸ್ಲೋ ಮೋಷನ್ ಚಿತ್ರಿಕೆಗಳ ಬಳಕೆಯನ್ನು ಇಲ್ಲಿ ನಾವು ಕಾಣಬಹುದು. ಈ ದೃಶ್ಯದ ನಂತರ ಶಂಕರ ಅಲ್ಲಿ ಕೆಲಸ ಪ್ರಾರಂಭಿಸುವುದು, ಬೇಸಾಯಮಾಡುವುದು ಇವೆಲ್ಲವನ್ನು ಮಾಂಟಾಜ್‌ಗಳ ಮುಖಾಂತರವಾಗಿ ತೋರಿಸಲಾಗಿದೆ. ಬೇಸಾಯಕ್ಕೆ ಬೇಕಾದಂತಹ ಪರಿಸರವನ್ನು ಪರಿಕರಗಳನ್ನು ಶಂಕರ ಸೃಷ್ಟಿಸಿಕೊಳ್ಳುತ್ತಿರುವಾಗಲೇ ಶಾನುಭೋಗರಿಗೆ ಉಂಟಾಗುವ ಈರ್ಷೆ, ಅಸೂಯೆ ಇವುಗಳನ್ನೂ ಸಹ ಇಲ್ಲಿ ವ್ಯಕ್ತಪಡಿಸಲಾಗಿದೆ.**

# ದೃಶ್ಯ–58

***ಹಗಲು–ಶಾಲೆಯ ಹೊರಭಾಗ***

| | | |
|---|---|---|
| | | (ಶಾಲೆ ನಡೆಯುತ್ತಿರುವುದು ಒಂದು ಮರದ ಕೆಳಗೆ. ಅಧ್ಯಾಪಕಿ ಶ್ರೀಮತಿ ತನ್ನ ವಿದ್ಯಾರ್ಥಿಗಳೊಂದಿಗೆ ಪ್ರಾರ್ಥನೆ ಮಾಡುತ್ತಿದ್ದಾಳೆ) |
| ಮಕ್ಕಳು | : | ದೇವಿ ಶಾರದೆ, ಲೋಕ ಪೂಜಿತೆ, ಜ್ಞಾನದಾತೆ ನಮೋಸ್ತುತೇ.. ಕೂತ್ಕೋಳಿ.. |
| | | (ಪ್ರಾರ್ಥನೆ ಮುಗಿಯುತ್ತದೆ. ನಂತರ ಶ್ರೀಮತಿ ತರಗತಿಯ ಒಬ್ಬ ಹುಡುಗಿಯ ಗೈರು ಹಾಜರಿಯ ಬಗ್ಗೆ ವಿಚಾರಿಸುತ್ತಾಳೆ) |
| ಶ್ರೀಮತಿ | : | ನೆನ್ನೆ ಯಾಕ್ ಬರ್ಲಿಲ್ಲ ಸರಸ್ವತಿ? |
| ಸರಸ್ವತಿ | : | ನಮ್ ಕಾಳಿ ಕರು ಹಾಕ್ತಿತ್ತು |
| ಶ್ರೀಮತಿ | : | ನಿನಗೆಂತದೆ ಕೆಲ್ಸ ಅಲ್ಲಿ? ಕೂತ್ಕೋ. |
| | | (ಮತ್ತೊಬ್ಬನಿಗೆ) .. ಗಣೇಶ ಒಂದ್ ವಾರದಿಂದ ನಾಪತ್ತೆ ಏನ್ ಕಥೆ? |
| ಗಣೇಶ | : | ನಮ್ಮಪ್ಪನ್ ಮದ್ವೆ ಇತ್ತು (ಎಲ್ಲ ಮಕ್ಕಳು ನಗುವರು) |
| ಶ್ರೀಮತಿ | : | ಹಮ್ ಕೂತ್ಕೊ. ಪುಣ್ಯ ಅಪ್ಪ ಕರು ಹಾಕ್ದ ಅಂತ ಹೇಳ್ಲಿಲ್ವಲ್ಲ. ಸುಳ್ ಹೇಳೋದನ್ನ ನಿಮ್ಮಹತ್ರ ಕಲೀಬೇಕು, ನನಿಗೆಲ್ಲ ಗೊತ್ತು ನದೀಗೆ ಸಂಕ ಕಟ್ತಿದಾರಲ್ಲ ಅದನ್ನ ನೋಡೋಕ್ ಹೋಗ್ತಿದೀರಿ ಎಲ್ರು. ಹೇಗಿದೆ ಸೇತುವೆ? |
| ಮಕ್ಕಳೆಲ್ಲರು | : | ಚೆನ್ನಾಗಿದೆ |
| ಶ್ರೀಮತಿ | : | ಎಷ್ಟಾಗಿದೆ? |
| ಮಗು | : | ಇಷ್ಟಾಗಿದೆ |
| ಶ್ರೀಮತಿ | : | ಸಂಕ ಕಟ್ತಿರೋರ್ ಯಾರ್ ಹೇಳು? |
| ಮಗು | : | ಸಂಕರಣ್ಣ |
| ಶ್ರೀಮತಿ | : | (ತಪ್ಪು ಹೇಳಿದ್ದನ್ನು ತಿದ್ದವಂತೆ) ..ಶಂಕ್ರಣ್ಣ, ಹೇಳೂ |
| ಮಗು | : | (ಮತ್ತೆ) ..ಸಂಕ್ರಣ್ಣ |
| ಶ್ರೀಮತಿ | : | (ತಪ್ಪನ್ನು ತಿದ್ದುವಂತೆ) .. ತಾಳು |
| | | (ಬೋರ್ಡಿನ ಮೇಲೆ ಬಳಪದಲ್ಲಿ ಶಂಕರ ಮತ್ತು ಸಂಕರದ ವ್ಯತ್ಯಾಸ ಬರೆದು ಮಕ್ಕಳಿಗೆ ವಿವರಿಸುತ್ತಾಳೆ. ನಂತರ) |
| | | .. ನನ್ನೂ ಕರ್ಕೊಂಡ್ ಹೋಗ್ತಿರೇನ್ರೋ ಸಂಕದ್ ಹತ್ರ (ಮಕ್ಕಳ ಗುಂಪಿನಲ್ಲಿದ್ದ ಶಂಕರ ಎದ್ದು) |

| | | |
|---|---|---|
| ಶಂಕರ | : | ಅಫ್ ಕೋರ್ಸ್ ಶ್ರೀಮತಿ<br>(ಶ್ರೀಮತಿ ಆಶ್ಚರ್ಯದಿಂದ ನೋಡುತ್ತಿರುವಾಗ ಗುಂಪಿನಲ್ಲಿದ್ದ ಮಗುವೊಂದು) |
| ಮಗು | : | ಶ್ ಹಾಗೆಲ್ಲ ಹೆಸರಿಟ್ ಕರೀಬಾರ್ದು. ಮೇಡಂ ಅನ್ನಿ ಮೇಡಂ |
| ಶಂಕರ | : | (ಶ್ರೀಮತಿಗೆ) ಓ ಓಕೆ ಓಕೆ. ಕನ್ನಡ ಅಕ್ಷರ ಬರೆಯೋದನ್ನ ಕಲ್ಸ್ತೀರ ಮೇಡಂ.<br>(ಶ್ರೀಮತಿ ನಾಚಿಕೆಯಿಂದ ಓಡಿ ಹೋಗುತ್ತಾಳೆ ಆದರೆ ಮಕ್ಕಳು ಅವಳನ್ನು ಹಿಂಬಾಲಿಸುತ್ತಾರೆ. ಶಂಕರ ಪುಸ್ತಕವನ್ನು ತೋರಿಸಿ ಕಲಿಸಿರೆಂದು ಕೇಳುತ್ತಾನೆ. ಇಲ್ಲಿಂದ ಹಾಡು ಶುರುವಾಗುತ್ತದೆ) |

# ದೃಶ್ಯ–59

***ಹಗಲು–ಶಾಲೆಯ ಹೊರಭಾಗ***
***ಹಾಡು: ಅಆಇಈಉಊ ಕಲಿಯೋಣ***
***ಸಾಹಿತ್ಯ: ವಿ. ಮನೋಹರ್***
***ಹಾಡಿದವರು: ಶಿವರಾಜ್‌ಕುಮಾರ್ ಮತ್ತು ನಂದಿತಾ***

ಅಆಇಈಉಊ ಕಲಿಯೋಣ
ಕನ್ನಡವೇ ಧೀಶಕ್ತಿ
ಕನ್ನಡವೇ ಚೈತನ್ಯ



ಹೃದಯ ಎಂಬ ಹೂವಿಂದ
ಬಂದಾ ಮಾತೇ ಮಕರಂದ
ನುಡಿಗೂ ನಡೆಗೂ ಸಂಬಂಧ
ರೀತೀ ನೀತೀ ನಿತ್ಯ ಶ್ರೀಗಂಧ

**(ಹಾಡಿನ ಮುಖಾಂತರವೇ ಶ್ರೀಮತಿ ಮಕ್ಕಳೊಡನೆ ಸೇರಿ ಶಂಕರನಿಗೆ ಕನ್ನಡವನ್ನು ಕಲಿಸುತ್ತಾಳೆ. ಶಾನುಭೋಗರು ಹೊರಗೆ ಹೋಗಿರುವ ಸೂಚನೆ ಶ್ರೀಮತಿಯ ತಮ್ಮನಿಂದ ಬಂದ ತಕ್ಷಣ ಶಂಕರ ಶಾನುಭೋಗರ ಮನೆಗೆ ಬರುತ್ತಾನೆ. ಅಲ್ಲಿ ಶ್ರೀಮತಿಯ ತಮ್ಮ ಬಿದ್ದು ಪೆಟ್ಟುಮಾಡಿಕೊಂಡಿರುವುದಕ್ಕೆ ಅಜ್ಜಿ ಔಷಧಿಯನ್ನು ಹಚ್ಚುತಿರುತ್ತಾಳೆ. ಶಂಕರ ಆ ಸಮಯದಲ್ಲಿ, ಸನ್ನಿವೇಶದಲ್ಲಿ ವರಲಕ್ಷ್ಮಿ ಇರುವಂತೆ, ಶ್ರೀಮತಿ ತಮ್ಮನಿಗೆ ಚಿಕಿತ್ಸೆ ನೀಡುತ್ತಿರುವಂತೆ ಕನಸುಕಾಣುತ್ತಾನೆ. ಕನಸು ಕಾಣುತ್ತಲೇ ಶಂಕರ ಪ್ರಜ್ಞೆಯಿಲ್ಲದೆ ಶ್ರೀಮತಿಯ ಹೆಗಲಿನ ಮೇಲೆ ಕೈ ಇಟ್ಟಿರುತ್ತಾನೆ. ಶ್ರೀಮತಿ ಅವನಲ್ಲಿ ಅನುರಕ್ತಳಾಗುತ್ತಾಳೆ. ಇದರಿಂದಾಗಿ ಉತ್ತೇಜಿತಳಾದ ಶ್ರೀಮತಿ ತನ್ನ ಕಣ್ಣುಗಳಲ್ಲಿ ಅವನೊಡನೆ ಇರುವ ಕನಸು ಕಾಣುತ್ತಾಳೆ.)**

| | | |
|---|---|---|
| ಶ್ರೀಮತಿ | : | (ಸೇತುವೆ ದಾಟಲು ಭಯ ಪಡುವ ಶಂಕರನಿಗೆ)<br>.. ಅಯ್ಯಯ್ಯೋ ಹಿಂದೆ ತಿರುಗ್ ನೋಡ್ಬೇಡಿ ಸರಾ ಸರಾಂತ ಹೋಗ್ಬಿಡಿ. ಬೇಗ |
| ಶಂಕರ | : | ಸರ ಸರಾ...<br>(ಎಂದು ಜೋರಾಗಿ ಕಿರುಚುತ್ತ ಸಂಕ ದಾಟುವ ಶಂಕರ ಹಿಂದೆ ತಿರುಗಿ ಶ್ರೀಮತಿಗೆ)<br>.. ಥ್ಯಾಂಕ್ಯೂ |

**(ಹಾಡಿನ ಮಧ್ಯದಲ್ಲಿ ಮಳೆಗಾಲ ಆರಂಭವಾದ್ದರಿಂದ ಮಳೆಗಾಲದ ಕೃಷಿಕಾರ್ಯಗಳನ್ನು ಶಂಕರ ಮುತ್ಯನ ಸಲಹೆ ಸೂಚನೆಯಂತೆ ಮಾಡುತ್ತಿರುತ್ತಾನೆ. ಹೊಲವನ್ನು ಉಳುಮೆ ಮಾಡಿಸುತ್ತಿರುವುದು, ಗೊಬ್ಬರ ಹಾಕುವುದು, ಪೈರು ನೆಡುವುದು, ಕಳೆ ಕೀಳುವುದು ಹೀಗೆ ಅದರಲ್ಲಿ ಕೆಲಸ ಮಾಡುತ್ತಿರುವುದು ಇತ್ಯಾದಿಗಳನ್ನು ಸೆರೆಹಿಡಿಯಲಾಗಿದೆ. ಜೊತೆಗೆ ಶಾನುಭೋಗರು ಮನೆಯಲ್ಲಿಲ್ಲದೆ ಸಮಯದಲ್ಲಿ ಅಜ್ಜಿಯೊಡನೆ ಕಳೆಯುವ ಆನಂದದ ಕ್ಷಣಗಳಲ್ಲಿ ಶ್ರೀಮತಿಯೂ ಭಾಗಿಯಾಗಿದ್ದಾಳೆ. ಒಂದೆಡೆ ಕೃಷಿ ಕಾರ್ಯ ಮುಂದುವರೆಯುತ್ತಿದ್ದರೆ ಇನ್ನೊಂದೆಡೆ ಮನೆ ಕಟ್ಟುವ ಕೆಲಸ ಭರದಿಂದ ಸಾಗಿದೆ. ದತ್ತಣ್ಣನ ಮೊದಲ ಮನೆ ಇದ್ದ ಜಾಗದಲ್ಲೇ ಈಗ ಶಂಕರನ ಹೊಸಮನೆಯೊಂದು ಹಂತಹಂತವಾಗಿ ನಿರ್ಮಾಣವಾಗುತ್ತದೆ)**



ಜಿಗಿದು ಜಿಗಿದು ಕುಣಿದು ಕುಣಿದು ಬನ್ನಿ ದುಡಿಯೋಣ
ಕಡಲ ತೆರೆಯ ತರಹ ಮೊರೆದು ಬನ್ನಿ ಸೇರೋಣ
ಮಣ್ಣನ್ನು ಹೊನ್ನು ಮಾಡೋಣ ಇನ್ನು
ಹಸಿರಾಗಿಸೋಣ ಈ ತಾಯಿಯನ್ನು
ಸುಂದರ ಸ್ವರ್ಗಾನ ಇಳೆಗೆ
ಇಳಿಸೇ ಬಿಡುವ ಬೆರೆತು
ಒಲವಿರೆ ಛಲವು.. ಛಲವಿರೆ ಬಲವು.. ಬಲವಿರೆ ಗೆಲುವು..

**(ಬಂಗಾಡಿಯ ಹೊಳೆಗೆ ಸೇತುವೆ ಯೋಜನೆಯನ್ನು ಸಿದ್ಧಪಡಿಸಿದ್ದ ಶಂಕರ ಅದನ್ನು ಕಾರ್ಯಗತಗೊಳಿಸುತ್ತಿದ್ದಾನೆ. ತನ್ನ ಇಂಜಿನಿಯರಿಂಗ್ ಕಲಿಕೆಯನ್ನು ಉಪಯೋಗಿಸಿಕೊಂಡು ಬಲವಾದ ಸೇತುವೆಯೊಂದರ ನಿರ್ಮಾಣ ಕೈಗೊಳ್ಳುತ್ತಾನೆ. *"ಬಂಗಾರದ ಮನುಷ್ಯ"* ಚಿತ್ರದ ಪೋಸ್ಟರ್‌ನ್ನು ಹೊತ್ತೊಯ್ಯುತ್ತಿರುವ ಸೈಕಲ್ಲಿನ ಹಿಂದೆ ಓಡುತ್ತಿರುವ ಮಕ್ಕಳ ಸಂತೋಷದಲ್ಲಿ ತಾನೂ ಭಾಗಿಯಾಗಿ ಅಜ್ಜಿಯ ಆತಿಥ್ಯಕ್ಕಾಗಿ ಶಾನುಭೋಗರ ಮನೆಗೆ ಶಂಕರ ವಿಠೂನೊಡನೆ ಬರುತ್ತಾನೆ)**

| | | |
|---|---|---|
| ಶಂಕರ | : | ಹೇಯ್ ವಿಠೂ ಹುಷಾರ್ ಕಣೋ, ದಾದಿಮಾ ಗಿರ್‌ಜಾಯೇಗಿ<br>(ನಂತರ ಅಜ್ಜಿಗೆ).. ಇಲ್ಲಾಗಿರೋ ಕೆಲ್ಸಕ್ಕೆ ಇವನ್ ಸಹಾಯಾನು ಇದೆ |
| ವಿಠೂ | : | ಅರೆ.. ನಹೀ ಅಜ್ಜೀ |
| ಅಜ್ಜಿ | : | ಚೆನ್ನಾಗಿರ್‍ರಪ್ಪ |
| ವಿಠೂ | : | (ಸೇತುವೆಯನ್ನು ನೋಡಿ)<br>..ಗ್ರೇಟ್ ಜಾಬ್ ಬಿಗ್ ಬ್ರದರ್<br>(ಎಂದು ಅಣ್ಣನ ಕೆಲಸದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸುತ್ತಾನೆ) |
| ಶಂಕರ | : | ಡ್ಯಾಡಿ ಮಮ್ಮೀಕೋ ಪ್ಯಾರ್ ದೇನ ಆಗ್ಲೇ ಬಾರ್ ವನಮಾಲಾಕೋ ಭೀ ಸಾತ್ ಲೇ ಆನ |
| ವಿಠೂ | : | ಜರೂರ್. ಲೇಕಿನ್ ಬಾಪ್ ಬನ್ಕೆ ಆವೂಂಗ. ಅಖೇಲೆ ಹೋ.. ಅಪ್ನ ಖಯಾಲ್ ರಖ್ನ. ಬಾಯ್ ಸೀಯೂ ಬಾಯ್..<br>(ಪೀಪಿಯ ಸದ್ದಿನಿಂದಾಗಿ ಮುತ್ಯನಿಗೆ ಶಾನುಭೋಗ ಇಲ್ಲದಿರುವುದು ತಿಳಿದು ಶಂಕರನಿಗೆ ಅಜ್ಜಿಯನ್ನು ಕಾಣಲು ಕಳಿಹಿಸುತ್ತಾನೆ) |

**ನಿರ್ದೇಶಕರ ಟಿಪ್ಪಣಿ:**

**ದೃಶ್ಯ 59ರಲ್ಲಿ ವರಲಕ್ಷ್ಮಿ ಪಾಠಮಾಡುವಲ್ಲಿಗೆ ಬರುವ ಶಂಕರ ನನಗೂ ಕನ್ನಡ ಬರೆಯುವುದು ಮತ್ತು ಓದುವುದನ್ನು ಕಲಿಸಿಕೊಡು ಎಂದು ಕೇಳುತ್ತ ಅದರ ಮುಖಾಂತರ ಒಂದು ಹಾಡು ಇಲ್ಲಿ ಸ್ವರೂಪವನ್ನು ಪಡೆದುಕೊಳ್ಳುತ್ತದೆ. ಈ ಹಾಡನ್ನು ಹೇಳಬೇಕಾಗಿರುವ ದೃಶ್ಯಕ್ಕೆ ಬಳಸಿಕೊಳ್ಳುತ್ತ ಶಂಕರನ ಕಾರ್ಯಸ್ವರೂಪ ಮತ್ತು ಆತನ ಭಾವನಾ ಲೋಕದಲ್ಲಿರುವಂತಹ ವಿದ್ಯಮಾನಗಳು ಹಾಗೂ ಅದರ ಜೊತೆಯಲ್ಲಿ ಶ್ರೀಮತಿ ನಿಧಾನವಾಗಿ ಶಂಕರನನ್ನು ತನ್ನ ಪರಿಧಿಗೆ ಎಳೆದುಕೊಳ್ಳುವ ರೀತಿ ಮತ್ತು ಶಂಕರ, ತನ್ನ ಅಜ್ಜಿಯ ಪ್ರೀತಿಗೆ ತನ್ನನ್ನು ತಾನು ತೊಡಗಿಸಿಕೊಳ್ಳುವುದು ಇವೆಲ್ಲಕ್ಕೂ ಬೇಕಾದಂತಹ ಪರಿಸರವನ್ನು ಮತ್ತು ಅನುಕೂಲಗಳನ್ನು ಮಾಡಿಕೊಡುವಲ್ಲಿ**

ಮುತ್ಯ ಹಾಗೂ ಉಳಿದವರು ಸಹಕರಿಸುವುದು. ಅತ್ತ ಕಡೆ ಬೇಸಾಯದಲ್ಲಿ ಮಜಲನ್ನು ಸಾಧಿಸಿಕೊಂಡು ಹೋಗುತ್ತಿರುವಂತೆ ಇತ್ತ ಕಡೆ ದತ್ತಣ್ಣನ ಮನೆಯು ಯಾವ ಜಾಗದಲ್ಲಿ ಇತ್ತೋ ಆ ಮನೆಯ ಮರುನಿರ್ಮಾಣದ ಕೆಲಸವೂ ಕೂಡ ಮುಂದುವರೆಯುತ್ತಾ ಹೋಗುತ್ತದೆ. ಶಂಕರ, ಅಜ್ಜಿ ಮತ್ತು ಶ್ರೀಮತಿ ಇವರ ನಡುವಿನ ಭಾವಬಾಂಧವ್ಯ ಶಾನುಭೋಗನ ಕಣ್ಣಿನ ಕೆಸರಾಗುತ್ತದೆ. ಇಲ್ಲಿ ಚಿತ್ರಕಥೆಯಲ್ಲಿರುವ ಹಲವು ಕಲ್ಪನೆಗಳು ಹಾಗೂ ಹಲವಾರು ಸಂಭಾಷಣೆಗಳನ್ನು ಏರುಪೇರು ಮಾಡಿದ್ದೇವೆ. ಮತ್ತು ಅದರ ಜೊತೆಯಲ್ಲಿಯೇ ಚಿತ್ರಿಕೆಗಳ ಮುಖಾಂತರ ಹೇಳುವ ಸಾಹಸವನ್ನು ಮಾಡುವ ಮುಖಾಂತರ ಎಷ್ಟು ಸಾಧ್ಯವೋ ಅಷ್ಟು ಸಂಭಾಷಣೆಗಳನ್ನು ಕಡಿತಗೊಳಿಸಿದ್ದೇವೆ. ಈ ದೃಷ್ಟಿಯಲ್ಲಿ ಹಲವು ಸಂಭಾಷಣೆಗಳನ್ನು ತಗೆದುಹಾಕಿ ನೇರವಾಗಿ ಕಥೆಗೆ ಮತ್ತು ನಾಟಕೀಯತೆಗೆ ಬೇಕಾದಂತಹ ಸಂಭಾಷಣೆಯಷ್ಟನ್ನೆ ಬಳಸಿಕೊಳ್ಳಲಾಗಿದೆ.

## ದೃಶ್ಯ–60

*ಹಗಲು–ಶಾನುಭೋಗರ ಮನೆಯ ಹೊರಗೆ ಮತ್ತು ಒಳಗೆ*
*ಹಸ್ತಪ್ರತಿಯಲ್ಲಿ: (ಚಲನಚಿತ್ರದಲ್ಲಿ ಇಲ್ಲ)*

| | | |
|---|---|---|
| *ಶಂಕರ* | : | *ನಮ್ಮ ಒಲೆ ಉರೀತಿದೆ ಅಜ್ಜಿ. ಅದ್ರಲ್ಲಿ ಬೇಯಿಸಿರೋ ಮೊದಲ ಗಂಜಿ ಇದು. ಆಶೀರ್ವಾದ ಮಾಡು* |
| *ಅಜ್ಜಿ* | : | *ದಿಲ್ಲಿ ಬಿಟ್ಟು ಇಲ್ಲಿಗೇ ಬಂದ್ಬಿಟ್ಯಾ? ನಿನ್ನನ್ನ ಇಷ್ಟ್ ಸಲೀಸಾಗ್ ಕಳಿಸಿಕೊಟ್ರಾ ಮನೆಯವರೆಲ್ಲಾ?!* |
| *ಶಂಕರ* | : | *ಇಲ್ಲಾ ಅಜ್ಜೀ. ಯಾರಿಗೂ ಮನಸ್ ಇರ್ಲಿಲ್ಲ. ನನ್ಗೆ ಟಾಟಾ ಮಾಡೋಕೆ ಸ್ಟೇಷನ್ನೂಗ್ಗ ಯಾರು ಬರ್ಲಿಲ್ಲ* |
| *ಅಜ್ಜಿ* | : | *ಬೇಜಾರ್ ಮಾಡ್ಕೋಬೇಡ. ನಾವೆಲ್ಲ ಇದೀವಲ್ಲ ಇಲ್ಲಿ (ಶ್ರೀಮತಿಗೆ).. ಶ್ರೀಮತಿ ಇವನಿಗೆ ಅಪ್ಪೆ ಮಿಡಿ ಉಪ್ಪಿನಕಾಯಿ ಕೊಡೇ ಗಂಜಿ ಜೊತೆ ನಂಚ್ಕೊಳೋಕೆ.*<br>*(ಶಂಕರನ ಮೈ ಸವರುತ್ತಾ)*<br>*.. ಇದೇನೋ ಮೈಗೆಲ್ಲಾ ಮುಳ್ಳಿನ್ ಚುಂಗೂ, ಅಭ್ಯಾಸ ಇಲ್ಲಾ ನಿಂಗೆ. ಸುಸ್ತ್ ಮಾಡ್ಕೋಬೇಡ. ಏನ್ ಬೇಕಾದ್ರು ಈ ಪೀಪಿಗಳ ಹತ್ರ ಹೇಳ್ಕಳ್ಸು* |
| *ಶ್ರೀಮತಿ* | : | *ನೀವ್ ಬಂದ್ಮೇಲೆ ಅಜ್ಜಿ ಇನ್ನೂ ಚುರುಕಾಗ್ಬಿಟಿದಾಳೆ. ಬ್ಯಾಡಗಿ ಮೆಣಸಿನ್ ಥರಾ! ಹಗ್ಲೂ ರಾತ್ರಿ ನಿಮ್ದೇ ಧ್ಯಾನ* |
| *ಅಜ್ಜಿ* | : | *ಏ ಹಸಿಮೆಣಸೇ, ಚುರುಕಾಗಿದ್ದು ಯಾರೇ*<br>*(ಶಾನುಭೋಗರು ಬರುತ್ತಿರುವ ಸೂಚನೆಯನ್ನು ಕೊಟ್ಟಾಗ)* |
| *ಶಂಕರ* | : | *ಬರ್ತೀನಜ್ಜಿ ಮತ್ತೊಮ್ಮೆ ಸಿಗ್ನಲ್ ಸಿಕ್ಕಾಗ ಬರ್ತೀನಿ* |
| *ಅಜ್ಜಿ* | : | *ಶ್ರೀಮತಿನೇ ಹಾಕಿದ್ದು* |
| *ಶ್ರೀಮತಿ* | : | *ಉಪ್ಪಿನಕಾಯಿ ಹಾಕಿದ್ದು ಅಮ್ಮ. ಜಾಡೀಗ್ ಹಾಕಿದ್ದು ನಾನು. ಬೇಗ ಬೇಗ ಸರ ಸರಾಂತ ಹೋಗ್ಬಿಡಿ* |
| *ಶಂಕರ* | : | *(ಸೇತುವೆಯ ಮೇಲೆ) ಸರ ಸರಾ...* |

# ದೃಶ್ಯ–61

*ಹಗಲು–ಶಾನುಭೋಗರ ಮನೆಯ ಹೊರಗೆ ಮತ್ತು ಒಳಗೆ*

*ಹಸ್ತಪ್ರತಿಯಲ್ಲಿ: (ಚಲನಚಿತ್ರದಲ್ಲಿ ಇಲ್ಲ)*

*ಅಜ್ಜಿ* : *ಒಳ್ಳೆ ಕಥೆಯಾಯ್ತು ನಿಂದು. ಕಾಶೀಲೇ ಕಲೀತಿದ್ದೆ ಅಂತಿ. ದೇವಸ್ಥಾನಕ್ಕೆ ಒಂದೇ ಒಂದ್ಸಲ ಹೋಗಿದ್ದಿ ಅಂತಿ? ಗಂಗೇನೆ ತಂದಿಲ್ಲ ಅಂತಿ, ಹೋಗ್ಲಿ ಕಡೇಪಕ್ಷ ಗಂಗೇನ್ ನೋಡಿದಿಯಾ?*

*ಶಂಕರ* : *ನೋಡೋದೇನ್ ಅಜ್ಜಿ. ಆಗಂಗೇನ್ ಕೈ ಹಿಡಿದ್ ಕರ್ಕೊಂಡ್ ಬಂತು ನನ್ನ ಇಲ್ಲೀ ತನ್ಕ. ನನ್ ನೆಲೆ ತಲುಪ್ಬೇಕು ಅನ್ನೋ ಸೆಳೆತ ಶುರು ಆಗಿದ್ದೇ ಅಲ್ಲಿ. ಆ ಸೆಳೆತದ ಪೂರ್ಣ ಅನುಭವ ಆದದ್ದು ಇಲ್ಲಿ. ನಿನ್ನನ್ನ ಕಣ್ಣಾರೆ ಕಂಡ್ಮೇಲೆ*

*ಅಜ್ಜಿ* : *ಈ ಜಾಗದ ಸತ್ವ ಅದು. ನಮ್ ನಮ್ ಜಾಗ್ದಲ್ಲಿ ನಮಗ್ ಸಮಾಧಾನ ಅಲ್ವೇನೋ.*

*(ಗಬ ಗಬ ಊಟ ಮಾಡುತ್ತಿರುವ ಶಂಕರನನ್ನು ನೋಡಿ)*

*.. ಮೆಲ್ಲಗೆ. ಮೆಲ್ಲಗ್ ಊಟ ಮಾಡು. ಬೆಳ್ತಂಗ್ಡಿಗ್ ಹೋಗಿದಾನೆ ಅವ್ನು. ಬರೋಕೆ ಸಂಜೆ ಆಗುತ್ತೆ. ಆರಾಮಾಗಿ ಊಟ ಮಾಡು*

*ಶಂಕರ* : *ಈ ಥರ ಕದ್ದು ಮುಚ್ಚಿ ನಿನ್ನನ್ನ್ ನೋಡೋಕ್ ಬರೋದು ನನಗ್ ಇಷ್ಟ ಇಲ್ಲ ಅಜ್ಜಿ. ಆದ್ರೆ ಇಷ್ಟ್ ಸಮೀಪ ಇದ್ದೂ ನಿನ್ನನ್ನ್ ನೋಡ್ದೆ ಇದ್ರೆ ನನಿಗ್ ಹುಮ್ಮಸ್ಸೇ ಬರಲ್ಲ.*

*(ತಿಂಡಿಯನ್ನು ಇಷ್ಟಪಟ್ಟು)*

*.. ವಾಹ್ ತುಂಬಾ ಚೆನ್ನಾಗಿದೆ ಇದು ಏನಂತೀರಿ ಇದಕ್ಕೆ*

(ಶಾನುಭೋಗರು ಇಲ್ಲವೆಂದು ತಿಳಿದು ಬಂದ ಶಂಕರನನ್ನು ಉಪಚರಿಸುತ್ತಿರುವ ಅಜ್ಜಿ. ಊಟವನ್ನು ಚಪ್ಪರಿಸಿ ತಿನ್ನುತ್ತಿರುವ ಶಂಕರ)

ಶಂಕರ : ಅಜ್ಜಿ, ಇದೇನು?

ಅಜ್ಜಿ : ಬಟಾಟೆ ಸಾಂಗೂ

ಶಂಕರ : ಬಟಾಟೆ ಸಾಂಗೂ?!

ಅಜ್ಜಿ : ಶ್ರೀಮತಿನೆ ಮಾಡಿದ್ದು

| | | |
|---|---|---|
| ಶಂಕರ | : | ಹಮ್ ವೆರಿಗುಡ್ ವೆರಿಗುಡ್ |
| ಅಜ್ಜಿ | : | ಇನ್ನೊಸ್ವಲ್ಪ ಹಾಕುಸ್ಕೊಳೋ |
| ಶಂಕರ | : | ಹಮ್ ಸಾಕು ಸಾಕು<br>(ನೆತ್ತಿಗೇರಿ ಕೆಮ್ಮಲು ಪ್ರಾರಂಭಿಸುತ್ತಾನೆ) |
| ಅಜ್ಜಿ | : | ಮೆಲ್ಲಗೆ, ಗಡಿಬಿಡಿ ಬೇಡ |
| ಶಂಕರ | : | ಯಾರೋ ನೆನ್ಸಕೊತಾಯಿದಾರೆ |
| ಅಜ್ಜಿ | : | ಯಾರದು? |
| ಶಂಕರ | : | ಓ ಅವ್ಳು, ವರಲಕ್ಷ್ಮೀ ಅಂತ.<br>(ಶ್ರೀಮತಿ ಹತ್ತಿರ ನಿಂತು ಕೇಳಿಸಿಕೊಳ್ಳುವಳು)<br>.. ನನ್ ಡೆಲ್ಲಿ ಗೆಳತಿ. ತುಂಬ ಜಾಣೆ ಇದಾಳೆ ಅಜ್ಜಿ. ಡಾಕ್ಟರ್ ಓದಿದಾಳೆ. ಮುಂದೆ ವಿದೇಶಕ್ ಹೋಗ್ತಾಳೆ. ಅವ್ಳೆ ನನ್ ರಿಯಲ್ ಫ್ರೆಂಡು |
| ಶ್ರೀಮತಿ | : | ಬಟಾಟೆ ಸಾಂಗ್ ಮಾಡ್ಲಿಕ್ ಬರ್ತದ ಅವಳ್ಗೆ |
| ಶಂಕರ | : | ಸಾಂಗ್ ಮಾಡಕ್ ಬರಲ್ಲ ಸಾಂಗ್ ಹಾಡಕ್ ಬರುತ್ತೆ<br>(ಶ್ರೀಮತಿ ಕೋಪದಿಂದ ಒಳಗೆ ಹೋಗುತ್ತಾಳೆ, ನಂತರ ಶಂಕರ ಅಜ್ಜಿಗೆ)<br>.. ಸಾಂಗ್ ಅಂದ್ರೆ ಹಾಡು (ಅಜ್ಜಿ ನಗುತ್ತಾರೆ) |

*ಹಸ್ತಪ್ರತಿಯಲ್ಲಿ: (ಚಲನಚಿತ್ರದಲ್ಲಿ ಇಲ್ಲ)*

| | | |
|---|---|---|
| *ಅಜ್ಜಿ* | *:* | *ಈ ನೆಲದ್ ವಿಶ್ವಾಸ ಗಳ್ಸಿದೀಯಾ ನೀನು. ಅದಕ್ಕೇ ನೋಡು ಹೇಗ್ ನೀನ್ ಮುಟ್ಟಿದ್ದೆಲ್ಲಾ ಹಸಿರು ಹೊನ್ನು. ನೆಲಕ್ಕೆ ನೂರು ಕಣ್ಣು. ನಿನ್ ತಂದೆತಾಯಿ ನೋಡ್ಬೇಡ್ವೇನೋ ಇದನ್ನ. ಯಾವಾಗ್ ಕರ್‍ಕೊಂಡ್ ಬರ್‍ತೀ ಅವರನ್ನ?* |
| *ಶಂಕರ* | *:* | *ವೇಷಕಟ್ಕೊಂಡ್ ಯಾವಾಗ್ಲು ಓಡ್ತಾ ಇರೋ ಜನ ಅವ್ರು. ಇದಕ್ಕೆಲ್ಲ ಟೈಮ್ ಇಲ್ಲ ಅವ್ರಿಗೆ.* |
| *ಅಜ್ಜಿ* | *:* | *ಮೈ ಮುರ್‍ದ್ ಏಳ್ತಾ ಇರೋ ಆ ನೆಲ ನೋಡ್ತಾ ಇದ್ರೆ ಇನ್ನೇನು ಬೇಡ. ಭಾಳ ದಿವ್ಸ ಇರ್‍ತೇನೆ ಅಂತ ಭರವಸೆ ಇಲ್ಲಾ ಮಗಾ. ನಾನಿದ್ದಾಗ್ಲೇ ಆ ಮನೆ ಆಗಿದ್ರೆ* |
| *ಶಂಕರ* | *:* | *ಇದೆಂಥ ಮಾತು ಅಜ್ಜಿ. ಹಾಗೆಲ್ಲ ಹೇಳ್ಬಾರ್ದು. ಅಂಗ್ಳಾ ಗೋಡೆ ಎಲ್ಲ ಆಯ್ತು. ಚಾವಣಿ ಒಂದ್ ಏರ್‍ಸ್‌ಬಿಟ್ರೆ ರೆಡಿ. ಈ ಸಲದ ಸುಗ್ಗಿ ಅಲ್ಲೇ. ನಿನ್ನನ್ನ್ ಹೂವಿನ್ಹಂಗೆ ಎತ್ಕೊಂಡ್ ಹೋಗ್ತೀನಿ* |
| *ಅಜ್ಜಿ* | *:* | *ನೋಡೇ ಶಾಂತೂ ಇವನನ್ ಎತ್ತಿ ಆಡ್ಸೋ ಭಾಗ್ಯ* |

*ಸಿಗ್ಲಿಲ್ವಲ್ಲಾ ಅಂತ ನಾನು. ನನ್ನನ್ನೇ ಎತ್ಕೊಂಡ್ ಹೋಗ್ತಾನಂತೆ! ಒಂದ್ ಕಾಲ್ದಲ್ಲಿ ಸೊಂಟದಲ್ಲೊಂದು, ಕಂಕ್ಳಲ್ಲೊಂದು ಮಕ್ಳನ್ನ ಕಟ್ಕೊಂಡ್ ಇಡೀ ಬೆಟ್ಟ ಹತ್ತ್‌ತಿದ್ದೆ. ಬಾವಿ ಹತ್ರದ ಹೆಬ್ಬಲಸಿನ ಮರ ಇದೆ ನೋಡು. ಅದನ್ನೊಬ್ಬೆ ಹತ್ತ್‌ತಿದ್ದೆ. ಪುಟಾಣಿ ಶಾನುಭೋಗ ಕೆಳಗ್ ನಿಂತ್ ಬಾಯ್ ಕಳ್ಕೊಂಡ್ ನೋಡ್ತಿದ್ದ*

*ಶಂಕರ : ಇದೆ ಇದೆ ಇನ್ನೂ ಇದೆ ಆ ಮರ*

*ಅಜ್ಜಿ : ಹೌದಾ, ಬುಡಕ್ಕೆ ಗೆದ್ಲು ಹಿಡ್ದಿಲ್ವಾ?*

*ಶಂಕರ : ಇಲ್ಲ ಅಜ್ಜಿ, ಬಂದಾಗಿನಿಂದ ಅದನ್ನ ಚೆನ್ನಾಗೇ ನೋಡ್ಕೊತಿದಿನಿ*

*ಅಜ್ಜಿ : ಅಂತೂ ಎಲ್ಲಾದ್ರಲ್ಲೂ ನಿಂಗ್ ಒಳ್ಳೇ ತಿಳುವಳಿಕೆ ಬಿಡು*

*ಶಂಕರ : ಹಾಗೇನಿಲ್ಲ ಅಜ್ಜಿ. ನನ್ಗಿಂತ ಚಿಕ್ಕವ ವಿಶೂಗೆ ಜಾಸ್ತಿ ತಿಳುವಳಿಕೆ. ಒಳ್ಳೆ ನನ್ ಗಾರ್ಡಿಯನ್ ಥರ ಹಣ ಕಳಿಸ್ತಾನೆ. ತುಂಬು ಹುರುಪು ಅವ್ನಿಗೆ. ತುಂಬಾ ಅವಸ್ರ ಎಲ್ಲಾದ್ರಲ್ಲೂ*

*ಅಜ್ಜಿ : ಹಾಗಿದ್ರೆ ಅವ್ನಿಗೆ ಮಗೂನೂ ಬೇಗ ಆಗುತ್ತೆ ಬಿಡು*

ನಿರ್ದೇಶಕರ ಟಿಪ್ಪಣಿ:

ದೃಶ್ಯ ಸಮಗ್ರವಾಗಿ ಬಹಳ ದೊಡ್ಡ ದೃಶ್ಯವಾದ್ದರಿಂದ ಚಿತ್ರಕಥೆಯಲ್ಲಿ ಬರುವಂತಹ ಹಲವು ಸಂಭಾಷಣೆಗಳನ್ನು ತಗೆದುಹಾಕಿ ನೇರವಾಗಿ ಶಾನುಭೋಗರು ಹಾಗೂ ಶಂಕರನ ಮಧ್ಯೆ ಇರುವ ಸಂಘರ್ಷವನ್ನು ಎತ್ತಿ ಹಿಡಿಯುವ ಹಾಗೆ ಇಡೀ ದೃಶ್ಯವನ್ನು ಮರುಜೋಡಿಸಿ ಚಿತ್ರೀಕರಣ ಮಾಡಲಾಯಿತು. ಅದು ಬಹಳ ಅದ್ಭುತವಾಗಿ ನಾಟಕೀಯತೆಯನ್ನು ನಿಧಾನವಾಗಿ ಚಿತ್ರದ ಅಚ್ಚುಕಟ್ಟುತನಕ್ಕೆ ಸಾಕ್ಷಿಯಾಗಿ ಮೂಡಿಬಂದಿದೆ. ಅದರಲ್ಲಿ ಬರುವ ಕೆಲವು ಭಾವಚಿತ್ರಗಳನ್ನು ಗಮನಿಸಿದರೆ ಪೀಪಿ ಊದುವುದನ್ನು ಒಂದು ಸಂಕೇತವಾಗಿ ಇಟ್ಟುಕೊಂಡು ಅಜ್ಜಿಯನ್ನ ನೋಡಲು ಓಡಿಬರುವ ಶಂಕರ ಮತ್ತು ಆತನ ಒಡನಾಟ ಉತ್ತಮವಾಗಿ ಮೂಡಿ ಬಂದಿದೆ.

# ದೃಶ್ಯ–62

***ಹಗಲು–ಸೇತುವೆ ಮತ್ತು ಶಾನುಭೋಗನ ಮನೆಯ ಒಳಗೆ***

(ಅತ್ತ ಶಾನುಭೋಗರ ಬರುವಿಕೆಯನ್ನು ಸೂಚಿಸಲು ನೇಮಿಸಿದ್ದ ಹುಡುಗನ ಎದುರಿಗೆ ಶಾನುಭೋಗರು ಬಂದಾಗ ಆ ಹುಡುಗ ಗಲಿಬಿಲಿಯಾಗುತ್ತಾನೆ. ಇತ್ತ ಶಂಕರ ಉಪಹಾರ ಸೇವಿಸುತ್ತ ಇದ್ದಾನೆ)

ಅಜ್ಜಿ : ಅಲ್ವೋ ಶಂಕ್ರ, ಸುಂದರ್ ರಾಯನ್ನ ಪ್ರತಿಮನ್ನ ಯಾವಾಗ್ ಇಲ್ಲಿಗ್ ಕರ್ಕೊಬರ್ತೀಯ? ನೀನ್ ಮಾಡಿರೋ ಕೆಲ್ಸ ಎಲ್ಲ ಅವರ್ ನೋಡ್ಬೇಡ್ವ?

ಶಂಕರ : ವೇಷಕಟ್ಕಂಡ್ ಯಾವಾಗ್ಲು ಓಡ್ತಾರೋ ಜನ ಅವ್ರು ಇಲ್ಲಿಗೆಲ್ಲ ಬರೋದಿಕ್ಕೆ ಅವ್ರಿಗೆಲ್ಲ ಟೈಮಿಲ್ಲ.

ಅಜ್ಜಿ : ಅಲ್ವೋ ನಿನ್ ತಮ್ಮ ನಿಂಗಿಂತ ಮುಂಚೆ ಮದ್ವೆ ಮಾಡ್ಕೊಂಡಿದಾನೆ? ಅದ್ ಹೇಗೋ?

ಶಂಕರ : ಓ ವಿಶೂನ, ಎಲ್ಲಾದ್ರಲ್ಲೂ ಅವಸರ ಅವ್ನಂಗೆ
(ಇಬ್ಬರೂ ನಗುವರು)

ಅಜ್ಜಿ : ಹಾಗಾದ್ರೆ ನಿನಗಿಂತ ಮುಂಚೆ ಅವನು ಅಪ್ಪ ಆಗ್ಬಿಡ್ತಾನೆ.
(ಇಬ್ಬರೂ ನಗುವರು ಅಷ್ಟರಲ್ಲಿ ಶಾನುಭೋಗರು ಮನೆಗೆ ಬಂದು ಇವರನ್ನು ನೋಡಿ)

ಶಾನುಭೋಗ : ಓಹೋ ಓಹೋ ತೆರೆಯ ಮರೆಯಲ್ಲಿ ವಿಶೇಷ ಭೋಜನ. ಅಡಿಗೇನು ವಿಶೇಷ ಇದ್ದ ಹಾಗಿದೆ.
(ಶಂಕರ ತುತ್ತನ್ನು ಅಲ್ಲೇ ಬಿಟ್ಟಿದ್ದನ್ನು ನೋಡಿ)
.. ಹೇ ಮಾಡು ಮಾಡು ಊಟ ಮಾಡು. ನಿಲ್ಲಿಸ್ಬೇಡ.

ಅಜ್ಜಿ : ಛೇ ಊಟದ ಮಧ್ಯೆ ಇದೆಂತದಿದೋ

ಶಾನುಭೋಗ : ಮಧ್ಯೆ ಬರ್ಬಾರ್ದಿತ್ತೆ ನಾನು. ಚಿಂತೆ ಬೇಡ ಊಟ ಮಾಡೆ ಏಳ್ತಾನೆ. ಊಟ ಮಾಡ್ಲಿಕ್ಕೆ ಬಂದೋನಲ್ವೇ. ನಿರ್ಲಜ್ಜಹ ಸದಾ ಸುಖಿಹೀ
(ಎಂದು ವ್ಯಂಗ್ಯವಾಡುತ್ತಾನೆ)
.. ಲಜ್ಜೆ ಅನ್ನೋದು ಅವರ್ ರಕ್ತದಲ್ಲೇ ಇಲ್ಲ.
(ತನ್ನ ಹೆಂಡತಿಗೆ)
.. ಏಯ್ ಏನ್ ಬೇಕೋ ಬಡ್ಸು ಅವನ್ಗೆ.
(ಊಟ ಬಿಟ್ಟು ಏಳುವ ಶಂಕರನನ್ನು ಅಜ್ಜಿ ತಡೆದು)

ಅಜ್ಜಿ : ಏಳ್ಬೇಡ ಏಳ್ಬೇಡ ಕಂದ ರಂಗ ನಾನೆ ನಾನೇನೋ ಅವನ್ನ ಕರ್ದದ್ದೋ

| | | |
|---|---|---|
| ಶಾನುಭೋಗ | : | ನಾನಿಲ್ಲಾಗ ಕಳ್ಳಾಗ್ ಬಂದ್ ಹೋಗೋದಕ್ಕೆ ನಾಚ್ಕೆ ಆಗಲ್ವ ನಿಂಗೆ (ಶಂಕರ ಎದ್ದು ಬರುವನು) |
| ಅಜ್ಜಿ | : | ಶಂಕ್ರ ಹೋಗ್ಬೇಡಪ್ಪ, ಹೋಗ್‌ಬ್ಯಾಡ (ಶಂಕರ ಶಾನುಭೋಗರ ಹತ್ತಿರ ಬಂದು) |
| ಶಂಕರ | : | ನಿಮ್ ಹೊಟ್ಟೆಲಿರೋ ನಂಜು ನಿಮ್ಮನ್ನೇ ಸುಟ್ಟೀತು. ಎಚ್ಚರ (ಎಂದು ಕೈ ತೊಳೆಯಲು ಬರುವನು) |
| ಶಾನುಭೋಗ | : | ಹೋಗ್ ಹೋಗೋ. ಉಂಡ್ ಕೈ ತೋರುಸ್ತೀಯೇನೋ ನನಗೆ ಹೇಯ್ ಹೋಗೋ ಹೋಗೋ.<br>(ಅಜ್ಜಿಗೆ)<br>.. ಕಂಡೋರನ್ನೆಲ್ಲ ಈ ಮನೆಗೆ ಊಟಕ್ಕೆ ಕರಿಯೋದಕ್ಕೆ ನೀನ್ ಯಾರೆ? ಹಾಕಿದ್ ತಿನ್ಕೊಂಡ್ ಸುಮ್ನೆ ಬಿದ್ದಿರೋದಕ್ಕೆ ಏನ್ ದಾಡಿ ನಿಂಗೆ? |
| ಹೆಂಡತಿ | : | ಎಂತ ಮಾತಾಡ್ತೀರಿ ನೀವು? ತಾಯಿ ಇಲ್ಲದ್ ನಿಮ್ಮನ್ನ ಸಾಕಿ ಬೆಳೆಸಿದ ಅಮ್ಮ ಇದೂ |
| ಶಾನುಭೋಗ | : | (ಎಳೆದು ದೂಡಿ) ..ಏಯ್ ಸುಮ್ನಿರೆ. ಬೇರೆ ಗತಿಯಿರ್ಲಿಲ್ಲ ಅದಿಕ್ಕೆ ಬೆಳ್ಸುದ್ಲು. ದತ್ತಣ್ಣ ಬರ್ತಾನೆ ಅವ್ನ ಮಗ ಬರ್ತಾನೆ ಮರಿ ಬರ್ತಾನೆ ಅಂತ ಸರ್ಪಗಾವಲ್ಹಾಕಿದ್ಲು ನನಿಗೇ ಮುಟ್ಲಿಕ್ ಬಿಡ್ಲಿಲ್ಲ ಆ ಜಮೀನ್ನ |
| ಅಜ್ಜಿ | : | ನಿನ್ನದಲ್ವೇ ಅಲ್ಲ ಅದು ಮುಟ್ಟೋದಕ್ಕೆ. ಅದು ಹ್ಯಾಗ್ ಮುಟ್ತೀಯ? ಅಷ್ಟೇ ಅಲ್ದೆ ಈ ಜಾಗ ಕೂಡ ನಿನ್ನದಲ್ಲ. ಅವನದ್ದೇ. ಮಕ್ಕಳ ಮುಂದೆ ಮಾತ್ ಬೇಡ ಅಂತ ಸುಮ್ಮನಿದ್ದೆ. ಯಾಕೋ ಯಾಕೋ ಈ ನೀಚತನ ನಿಂಗೆ ರಂಗ? |
| ಶಾನುಭೋಗ | : | ಏಯ್ ಮುದುಕಿ, ಇನ್ನೊಂದ್ಸಲ ಅವನ್ ಪಕ್ಷ ವಹಿಸಿ ಮಾತಾಡಿದ್ರೆ ನಿನ್ನಾ<br>(ಎಂದು ಕತ್ತುಹಿಸುಕಲು ಹೋಗಿ ಸುಮ್ಮನಾಗುತ್ತಾನೆ) |
| ಅಜ್ಜಿ | : | ಕೂಗ್ಬ್ಯಾಡ. ಕೂಗ್ನಿಂದ ಯಾವ್ ಸತ್ಯಾನು ಮುಚ್ಚಿಡೋಕ್ ಸಾಧ್ಯ ಇಲ್ಲ<br>(ಶಾನುಭೋಗ ಉಗ್ರನಾಗಿ ಹೊರಹೋಗುತ್ತಾನೆ ಹೆಂಡತಿ ಮಕ್ಕಳೆಲ್ಲ ಹೆದರಿ ಅವನಿಗೆ ದಾರಿ ಬಿಟ್ಟು ಓಡಿಹೋಗುತ್ತಾರೆ. ಶಂಕರ ಬಿಟ್ಟುಹೋದ ಎಲೆಯನ್ನು ನೋಡುತ್ತ ಅಜ್ಜಿ ದುಃಖಿಸುತ್ತಾರೆ) |

## ದೃಶ್ಯ–63

***ಹಗಲು–ಶಂಕರನ ಕೃಷಿ ಜಮೀನು***

| | | |
|---|---|---|
| | | (ಶಂಕರ ಹೊಲ ಉಳುಮೆ ಮಾಡುತ್ತಿದ್ದಾನೆ) |
| ಮುತ್ಯ | : | ದತ್ತಣ್ಣ ಸಾಕು |
| ಶಂಕರ | : | ಮುತ್ತಯ್ಯ, ಈ ನೆಲದಲ್ಲಿ ಎಷ್ಟೊಂದು ಪ್ರೀತಿಯಿದೆ. ಈ ಹಸಿರಿನಲ್ಲಿ ಎಷ್ಟೊಂದು ಸೌಂದರ್ಯ ಇದೆ. ಆದ್ರೆ ಇದೇ ನೆಲದಲ್ಲಿ ಹುಟ್ಟಿರೋ ಮನುಷ್ಯರಲ್ಲಿ ಯಾಕಿಷ್ಟು ಕ್ರೌರ್ಯ? |
| ಮುತ್ಯ | : | ಅದೆಲ್ಲ ದೊಡ್ಡ ಮಾತು. ನನಗೆಲ್ಲಿ ಅರ್ಥ ಆಗುತ್ತೆ ಊಟಕ್ಕ್ ಬಾ, ಬಾಪ್ಪ. |
| ಶಂಕರ | : | ಬೇಡ ಮುತ್ತಯ್ಯ, ನಂಗ್ ಹಸ್ವಿಲ್ಲ. ನೀ ಹೋಗ್ ಊಟ ಮಾಡು. |

## ದೃಶ್ಯ–64

***ಹಗಲು–ಶಾನುಭೋಗರ ಮನೆಯ ಒಳಗೆ***

| | | |
|---|---|---|
| | | (ಊಟ ನೀರು ಬಿಟ್ಟಿರುವ ಅಜ್ಜಿಯ ಬಳಿ ಶ್ರೀಮತಿ) |
| ಶ್ರೀಮತಿ | : | ಎರೆಡ್ ದಿನದಿಂದ ಏನೂ ತಿಂದಿಲ್ಲ ನೀನು, ನೀರು ಕುಡ್ದಿಲ್ಲ |
| ಅಜ್ಜಿ | : | ಈ ಮನೆ ಅನ್ನದ ಋಣ ಮುಗೀತು ಶ್ರೀಮತಿ (ಹಾಗೆನ್ನಬೇಡ ಎನ್ನುವಂತೆ ಶ್ರೀಮತಿ ಸೂಚಿಸುತ್ತಾಳೆ ನಂತರ ಏನನ್ನೋ ಜ್ಞಾಪಿಸಿಕೊಂಡು ಅಲ್ಲಿಂದ ಹೊರಡುತ್ತಾಳೆ) |

# ದೃಶ್ಯ–65

***ಹಗಲು–ಬಂಗಾಡಿಯ ಹೊರಭಾಗ ಮತ್ತು ಶಂಕರನ ಮನೆಯ ಹೊರಗೆ***

| | | |
|---|---|---|
| | | (ಶ್ರೀಮತಿ ಆತಂಕದಿಂದ ಶಂಕರನ ಜಮೀನಿನತ್ತ ಓಡಿ ಬರುತ್ತಿದ್ದಾಳೆ) |
| ಶ್ರೀಮತಿ | : | ಮುತ್ತಯ್ಯ.. ಶಂಕರ್.. <br> (ಶಂಕರ ಮುತ್ತಯ್ಯನೊಂದಿಗೆ ಚರ್ಚೆಯಲ್ಲಿರುತ್ತಾನೆ) |
| ಶಂಕರ | : | ಮುತ್ತಯ್ಯ, ನಾಳೆ ಆ ಗದ್ದೆಲ್ ಕೆಲ್ಸ ಶುರು ಮಾಡಣ <br> (ಶ್ರೀಮತಿ ಹತ್ತಿರ ಬಂದು) |
| ಶ್ರೀಮತಿ | : | ಶಂಕರ್, ಶಂಕರ್ ಅಜ್ಜಿ ಅನ್ನ ನೀರು ಮುಟ್ಟಿ ಎರೆಡ್ ದಿನ ಆಯ್ತು. ಬರಿ ಬೆಟ್ಟ ನೋಡ್ತ ಕೂತಿದಾಳೆ. ನಂಗ್ ಭಯ ಆಗ್ತಾ ಇದೆ. |
| ಶಂಕರ | : | ಮುತ್ತಯ್ಯ, ತೊಟ್ಲು ತಗೊಂಡ್ ಬನ್ನಿ <br> (ಮುತ್ತಯ್ಯ ಹೊರಡುತ್ತಾನೆ) |

# ದೃಶ್ಯ–66

***ಹಗಲು–ಶಾನುಭೋಗರ ಮನೆಯ ಒಳಗೆ***

| | | |
|---|---|---|
| | | (ಮನೆ ಒಳಗಡೆ ಹೋಗುವ ಶಂಕರನನ್ನು ತಡೆಯುವ ಶಾನುಭೋಗನನ್ನು ಶಂಕರ ತಳ್ಳಿ ಒಳಗಡೆ ಹೋಗುತ್ತಾನೆ. ಅಜ್ಜಿಯ ಬಳಿ ಬಂದು) |
| ಶಂಕರ | : | ಅಜ್ಜಿ, ಅಜ್ಜಿ ಇಲ್ನೋಡು<br>(ತೀರಾ ನಿತ್ರಾಣಗೊಂಡಿರುವ ಆಕೆಯನ್ನು ನೋಡಿ ಬೇಸರಗೊಳ್ಳುತ್ತ) ..ಬಾ ನಮ್ಮನೆಗೋಗಣ<br>(ಎಂದು ಹೇಳಿ ಅವರನ್ನು ಎತ್ತಿಕೊಂಡು ಹೊರಡುತ್ತಾನೆ. ಶಾನುಭೋಗರ ಮುಂದೆ ಶಂಕರ ಹೋದಾಗ) |
| ಶಾನುಭೋಗ | : | ಹೋಗೆ ಹೋಗೆ.. ಇನ್ನು ನಾನ್ಯಾಕೆ ಬೇಕು ನಿಂಗೆ. ನಾಳೆ ದಿವಾಳಿ ಎಬ್ಸಿ ಊರ್ ಬಿಟ್ ಹೋಗ್ತಾನಲ್ಲ ಆಗೇನ್ ಮಾಡ್ತೀಯ? ನಿನ್ ಹೆಣ ಸುಡ್ಲಿಕ್ಕೆ ಯಾರ್ ಬರ್‍ತಾರೆ? |
| ಎಳಚಿ | : | ಎಂಥ ಮಾತಾಡ್ತೀರಿ ರಂಗ ರಾಯರೆ ನೀವು? ನಿಮ್ಮಂಥವರ ಬಾಯಲ್ಲಿ ಬರೋ ಮಾತಾ ಇದು. |
| ಶಾನುಭೋಗ | : | ಹೇ ಹೋಗು ಮಾರಾಯ ಇವನೊಬ್ಬ<br>(ಅಳುತ್ತಿರುವ ಹೆಂಡತಿಯ ಬಳಿ ಬಂದು)<br>.. ಏ ಅಳುದಿಕ್ಕೆ ಏನಾಗಿದೆ ನಿಂಗೆ<br>(ಅವಳನ್ನು ಎಳೆದು ಹಿಡಿದು)<br>.. ಅವಳಿಗೇನ್ ದಾಡಿಯಾಗಿದೆ? ಅವಳಿನ್ನು ಸತ್ತಿಲ್ಲ. ಇಷ್ಟು ದಿವ್ಸ ಅನ್ನ ಹರವೆ ಕೊಟ್ಟು ಸಾಕಿದ್ದಕ್ಕೆ ನಾಲಕ್ಕು ಜನರ ಮುಂದೆ ನನ್ನ ಕಸ ಮಾಡಿ ಹೋಗಿದಾಳೆ. ಹೋಗ್ಲಿ. ಹೋಯ್ತು ಒಂದ್ ಪೀಡೆ |
| ಶ್ರೀಮತಿ | : | ಅಪ್ಪ.. (ಅಪ್ಪನ ಮಾತನ್ನ ಕೇಳಿ ಅವನನ್ನು ಸುಮ್ಮನಿರಿಸಲು ಬರುತ್ತಾಳೆ) |
| ಶಾನುಭೋಗ | : | ಚುಪ್, ಇನ್ನೊಂದು ಸಾರಿ ಆಕಡೆ ಕಾಲಿಟ್ರೆ<br>(ಅಮ್ಮ ಮಗಳಿಗೆ ಎಚ್ಚರ ಎಂದು ಸಂಜ್ಞೆಮಾಡಿ ಒಳಹೋಗುತ್ತಾನೆ. ಅಜ್ಜಿಯನ್ನು ತೊಟ್ಟಿಲಲ್ಲಿ ಹಾಕಿಕೊಂಡು ಶಂಕರ ಮತ್ತು ಮುತ್ತಯ್ಯ ಹೋಗುತ್ತಿರುವುದನ್ನು ನೋಡುತ್ತ ನಿಲ್ಲುವ ಶ್ರೀಮತಿ ಮತ್ತು ಅವಳ ತಾಯಿ) |

# ದೃಶ್ಯ–67

***ಹಗಲು–ಬಂಗಾಡಿಯ ಸುತ್ತಮುತ್ತಲು ಮತ್ತು ಶಂಕರನ ಮನೆ***
***ಹಾಡು: ಧನ್ಯಳಾದೆ ನಾ ಓ ಭೂಮಿತಾಯಿ (ಅಜ್ಜಿಯ ಪಾಯಿಂಟ್ ಆಫ್ ವ್ಯೂ)***
***ಸಾಹಿತ್ಯ: ವಿ. ಮನೋಹರ್***
***ಹಾಡಿದವರು: ನಂದಿತಾ***

(ಶಂಕರ ಮತ್ತು ಇತರರು ಅಜ್ಜಿಯನ್ನ ತೊಟ್ಟಿಲಲ್ಲಿ ಕೂರಿಸಿಕೊಂಡು ಹೋಗುತ್ತಿದ್ದಾರೆ.. ಹಲವು ವರ್ಷಗಳ ನಂತರ ಬಂಗಾಡಿಯ ಕಾಡು, ಪರಿಸರ ಮತ್ತು ತನ್ನ ಹಳೆಯ ಮನೆಯನ್ನು ನೋಡಿ ಅಜ್ಜಿ ಉಲ್ಲಸಿತಳಾಗುತಾಳೆ)

*ಧನ್ಯಳಾದೆ ನಾ ಓ ಭೂಮಿತಾಯಿ*
*ನಿನ್ನ ಮಡಿಲ ಸೇರೋ ಭಾಗ್ಯ ಬಂತೀಗ ತಾಯಿ*
*ನನ್ನಾ ಸನ್ನಿಧಿ ಸೇರೋ ಕನಸು ಈಡೇರಿತು ಇಂದು*
*ಕಳೆದು ಹೋದ ತವರು ನಿಧಿ ಮರಳಿ ಬಂತು ಇಂದು*
*ನನ್ನ ಬಂಧುವ ನೋಡಲು ಇಷ್ಟು ದಿನ*
*ಆ ದೇವರು ಉಳಿಸಿದನೇ ನನ್ನ*



(ಶಂಕರ ಅವನ ಮನೆಗೆ ಕರೆತಂದಾಗ ಅಜ್ಜಿ ಹಳೆಯ ಮನೆ, ಅಲ್ಲಿಯ ನೆನಪುಗಳನ್ನು ನೆನೆಯುತ್ತಾರೆ. ಈಗ ಹೊಚ್ಚಹೊಸದಾಗಿ ಮನೆ ಸಜ್ಜುಗೊಂಡಿರುವುದನ್ನು ನೋಡಿ ಅತ್ಯಾನಂದವನ್ನು ಹೊಂದುತ್ತಾರೆ.)

ಶಂಕರ : ಅಜ್ಜಿ, ಸಂತೋಷ ಆಯ್ತು
(ತಬ್ಬಿಕೊಂಡು ಹೌದು ಎಂದು ಸೂಚಿಸುತ್ತಾಳೆ.

| | | |
|---|---|---|
| | | ಮುತ್ತಯ್ಯ ಒಂದು ಎಳನೀರನ್ನ ತಂದು ಕೊಡುತ್ತಾನೆ.) .. ಅಜ್ಜಿ, ತಗೋ (ಎಳನೀರನ್ನು ಕುಡಿಸುತ್ತಾನೆ) |
| ಅಜ್ಜಿ | : | ನನ್ನ ಜನ್ಮ ಸಾರ್ಥಕವಾಯ್ತು ಮಗೂ. (ಎಂದು ತನ್ನ ಸಂತೋಷವನ್ನು ವ್ಯಕ್ತಪಡಿಸುತ್ತಾರೆ. ಶಂಕರ ಸಮಾಧಾನಿಸುವ ರೀತಿಯಲ್ಲಿ ಆಕೆಯನ್ನು ನೋಡುತ್ತಾನೆ) |

**ನಿರ್ದೇಶಕರ ಟಿಪ್ಪಣಿ:**

**ಮನೆಯಿಂದ ಅರ್ಧ ಊಟಕ್ಕೆ ಎದ್ದುಬಂದ ಶಂಕರನ ಮನಸ್ಥಿತಿ ತನ್ನ ನೆಲದ ದುಡಿಮೆಯಲ್ಲಿ ತನ್ನೆಲ್ಲ ಕೋಪತಾಪಗಳನ್ನು ಮರೆಯುವುದಕ್ಕೆ ಪ್ರಯತ್ನಿಸುತ್ತಿರುತ್ತಾನೆ. ಅತ್ತ ಅಜ್ಜಿ, ಅನ್ನ ನೀರು ಬಿಟ್ಟು ಉಪವಾಸ ಹಿಡಿದಿದ್ದಾಳೆ. ಇವುಗಳ ಮಧ್ಯೆ ತೊಯ್ದಾಡುತ್ತಿರುವ ಶ್ರೀಮತಿ ಈ ವಿಷಯವನ್ನು ಶಂಕರನಿಗೆ ತಿಳಿಸಿ ಅಜ್ಜಿಯ ಸಂಕಟವನ್ನು ವಿಷದೀಕರಿಸುತ್ತಾಳೆ. ಒಂದು ನಿರ್ಧಾರಕ್ಕೆ ಬಂದ ಶಂಕರ ದೃಶ್ಯ 54ರಲ್ಲಿ ಶಾನುಭೋಗರ ಮನೆಗೆ ಹೋಗಿ ಅಜ್ಜಿಯನ್ನು ತೊಟ್ಟಿಲಲ್ಲಿ ಕೂರಿಸಿಕೊಂಡು ತನ್ನ ಮನೆಯ ಕಡೆಗೆ ಹೆಜ್ಜೆಹಾಕುತ್ತಾನೆ. ಪ್ರಥಮಬಾರಿಗೆ ಅಜ್ಜಿಗೆ ತಾನು ಹುಟ್ಟಿದ ಮನೆಯತ್ತ ಪ್ರಯಾಣಬೆಳೆಸುತ್ತಿದ್ದೇನೆಂದು ತನ್ನ ಜೀವನ ಸಾರ್ಥಕ್ಯವನ್ನು ಆನಂದಿಸುತ್ತಾಳೆ. ಈ ಎಲ್ಲ ದೃಶ್ಯಗಳ ಚಿತ್ರಕಥೆ ಹಾಗೂ ಚಲನಚಿತ್ರದಲ್ಲಿನ ಭಾಗ ಇವುಗಳನ್ನು ಗಮನಿಸಿದಾಗ, ಚಿತ್ರಕಥೆಯಲ್ಲಿದ್ದಂತಹ ಹಲವಾರು ಉದ್ದನೆಯ, ಬೇರೆ ಬೇರೆ ಆಲೋಚನೆಯ ಸಂಭಾಷಣೆಗಳನ್ನು ಕೈಬಿಟ್ಟು ಮರು-ಸೃಷ್ಟಿಯಾಗಿ, ದೃಶ್ಯ ಮತ್ತು ಹಾಡುಗಳು ಅವುಗಳನ್ನು ಸಂಪರ್ಕಿಸುವ ಹಾಗೆ ಬೇರೆಯದೇ ಆದಂತಹ ಚಿತ್ರಿಕೆಗಳನ್ನು ನಾವು ಕಾಣುತ್ತೇವೆ. ಅದರಲ್ಲು ಅಜ್ಜಿ ತೊಟ್ಟಿಲಲ್ಲಿ ಪ್ರಯಾಣಿಸುತ್ತಿರುವಾಗ ಹಿನ್ನಲೆಯ ಸಂಗೀತದ ಬದಲು ಅವಳ ಮನಸ್ಸಿನ ಭಾವನೆಗಳನ್ನು ಹೊರಪಡಿಸುವಂತಹ ಒಂದು ಚಿಕ್ಕಹಾಡೊಂದನ್ನು ಅಲ್ಲಿ ಹಾಕಿದ್ದೇವೆ. ಇದು ನವಿರಾಗಿ ಆಕೆಯ ಒಳಮನಸ್ಸಿನ ಭಾವನೆಗಳನ್ನು ಹೇಳುತ್ತ ಪ್ರೇಕ್ಷಕನನ್ನು ಸೂರೆಗೊಳ್ಳುತ್ತದೆ. ಚಿಗುರಿದ ಕನಸಿನ ಕೆಲವು ಅತಿ ಮುಖ್ಯ ತಿರುವುಗಳಲ್ಲಿ ಒಂದಾದ ಈ ದೃಶ್ಯದಲ್ಲಿ ಕೂಡ ಈ ರೀತಿ ನಾವು ಅದನ್ನು ಚಿತ್ರೀಕರಿಸುವ ಸಮಯದಲ್ಲಿ ಚಿತ್ರಕಥೆಯನ್ನು ಮತ್ತೆ ಮತ್ತೆ ಪ್ರಕ್ರಿಯೆಗೆ ಒಡ್ಡುತ್ತ ಮತ್ತೆ ಮತ್ತೆ ಪರಿಶೀಲಿಸಿದ್ದರ ಪರಿಣಾಮ ಈ ರೀತಿಯ ಅದ್ಭುತವಾದ ದೃಶ್ಯಕಲ್ಪನೆ.**

# ದೃಶ್ಯ-68

*ಹಸ್ತಪ್ರತಿಯಲ್ಲಿ: (ಚಲನಚಿತ್ರದಲ್ಲಿ ಇಲ್ಲ)*
*ಹಗಲು-ದೆಹಲಿಯ ಹೊರಭಾಗ*

| | | |
|---|---|---|
| *ಪ್ರತಿಮಾ* | : | *ವನಮಾಲಾ ಕೈ ಸೀ ಹೈ ವಿಶೂ? ಅಬ್ ಬೈಕ್ ಮೇಂ ನಹೀ ಘುಮಾನಾ ಉಸೆ. ಉಸ್‌ಕಾ ಖಯಾಲ್ ರಖ್ನಾ. ಸಿಂಘಾಲ್ ಸಾಬ್ನೇ ಬೋಲಾ ಹೈ. ಪೆಹಲೀ ಡೆಲಿವರಿ ಹೈ ನಾ ಇಸ್ಲಿಯೇ. ಉಸ್ಕೇ ಯಹಾಂ ಹೋಗಿ. ಮೈನೇಂ ಭೀ ಹಾಂ ಬೋಲಾ ಹೈ ಆಂ. ಹ್ವಾ ಹ್ವಾ ಇಧರ್ ಹೀ ಹೈಂ, ಅಭೀ ಆಯೇ ಹೈ. ಆಜ್ ಉನ್ಕಾ ಆಫೀಸ್ ಮೇ ಲಾಸ್ಟ್ ಡೇ ಥಾ ನ? ಸೆಂಡ್ ಆಫ್ ವಗೈರಾ ಆಯೇ ಹೈ. (ಸುಂದರ್‌ಗೆ) .. ಬಾತ್ ಕರೋ ಜೀ ವಿಶೂ ಸೇ* |
| *ಸುಂದರ್* | : | *ಹಲೋ, ವಿಶೂ ಬೇಟೇ. ಥ್ಯಾಂಕ್ಯೂ. ಅಬ್ತೋ ರಿಟೈರ್ ಹೋಗಯೇ ಭಾಯ್. ಅಬ್ತೋ ಆರಾಮ್ ಹೀ ಆರಾಮ್ ಹೈ. ಟ್ರ್ಯಾನ್ಸ್‌ಫರ್, ಪ್ರಮೋಷನ್, ಮಸ್ಕಾಗಿರಿ, ಚಮ್ಚಾಗಿರಿ ಏ ಸಬ್ ಖತಮ್. ಹ್ವಾಂ ಶಂಕರ್ ಕಾ ಭೀ ಖತ್ ಆಜ್ ಹೀ ಆಯಾ ಹೈ. ಗುಡ್ ನ್ಯೂಸ್. ಬಂಗಾಡೀ ಮೇ ಘರ್ ಬನ್ದಿಯಾ ಹೈ. ಔರ್ ದಾದಿಮಾಕೋ. ಹ್ವಾ ಹ್ವಾಂ ಅಜ್ಜೀಕೋ ಘರ್ ಲಾಯಾ ಹೈ ಉಸ್ನೇ. ಹಮ್ ಲೋಗ್ ಜಾಕೆ ಆಯೇಂಗೆ ಏಕ್ಬಾರ್. ನಹೀ ನಹೀ ತುಂ ತೋ ಜಾಕೇ ಆನಾ ಬೇಟೇ ಅಜ್ಜೀಕೆ ಪಾಸ್ ಏಕ್ ಬಾರ್* |
| *ಪ್ರತಿಮಾ* | : | *ವನಮಾಲಾ ಕೀ ಡೆಲಿವರಿ ಡ್ಯೂ ಹೈ, ತುಂ ಕಿದರ್ ಭೀ ನಹೀ ಜಾವೋಗೇ ಅಭೀ. ಓಕೆ? ಟೇಕ್ ಕೇರ್* |
| *ಡ್ರೈವರ್* | : | *ಅಚ್ಚಾ ಸಾಬ್. ಸಬ್ ಸಾಮಾನ್ ರಖ್ ವುಕಾ ಹ್ವೂ. ಹಮೇ ಭೋಲ್ನಾ ನಹೀ ಸಾಬ್* |
| *ಸುಂದರ್* | : | *ಬೋಲ್ತೋ ಆಪ್ ಜಾಯೇಂಗೆ ಮುಝೇ ಪ್ಯಾರೇಲಾಲ್. ಕ್ಯೂಂಕಿ ಆಪ್ ಕೋ ಏಕ್ ನಯಾ ಸಾಬ್ ಮಿಲ್ಜಾಯೇಂಗೆ ಅಭೀ* |
| *ಡ್ರೈವರ್* | : | *ನಹೀ ಸಾಬ್, ಆಪ್ ಕಿ ಬಾತ್ ಹೀ ಕುಛ್ ಔರ್ ಥೀ. ಆಪ್ ಬಹುತ್ ಅಚ್ಚೇ ಹೈ ಸಾಬ್. ಅಬ್ ಆರಾಮ್ ಕೀಜಿಯೇ ಮೈ ಚಲ್ತಾ ಹ್ವೂ* |
| *ಸುಂದರ್* | : | *ಏಕ್ ಮಿನಿಟ್..<br>(ಹಣ ತೆಗೆದು) .. ತುಮ್ಹಾರೇ ಬಚ್ಚೋಂ ಕೇ ಲಿಯೇ* |

*(ನಂತರ ತನ್ನ ಹೆಂಡತಿಗೆ)*
*.. ಹಾ ಅಬ್ ತೋ ಚೈನ್ ಕೀ ಸಾಸ್ ಲೇಲೂಂಗಾ*

ಪ್ರತಿಮಾ : *ಮೈ ಲೇನೇ ದೋಂಗೀ ತಬ್ ನ? ರಟೈರ್ ಹೋಗಯೇ ಹೋ ತುಮ್. ದೋ ದಿನ್ ಮೇಂ ಕೊಯೀ ಪೂಛೇಗಾ ನಹೀ ತುಮ್ಹೇ. ಕಾಂಟಾಕ್ಟ್ಸ್ ಕನೆಕ್ಷನ್ ಅಭೀ ಭೀ ತಾಜೇ ಹೈ. ಉನ್ಕಾ ಇಸ್ತಮಾಲ್ ಕರೋ. ರೆಆರ್ಟ್ ಯಾ ಪೆಟ್ರೋಲ್ ಬಂಕ್ ಖೋಲೇಂಗೇ, ಬೈಠ್‌ನೇ ನಹೀ ದೋಂಗೀ ತುಮ್ಹೇ. ಕ್ಯಾ ಸೆಂಡ್ ಆಫ್ ಹೈ ಯೇ? ಗಿಫ್ಟ್ ಹೀ ನಹೀ*

ಸುಂದರ್ : *ಗಿಫ್ಟ್ ತೋ ಶಂಕರ್‌ನೇ ದೀ ಹೈ ಪ್ರತಿಮಾ. ಘರ್ ಬನಾಯಾ ಉಸ್ನೇ. ಬುಲಾ ರಹಾ ಹೈ. ದೋ ದಿನ್‌ಕೇ ಲಿಯೇ ಜಾಕೆ ಆಯೇಂ*

ಪ್ರತಿಮಾ : *ಓ ತೋ ಕಾಮ್ಸೇ ಗಯಾ. ಉಸ್ಕೇ ಪೀಛೇ ಆಪ್‌ಕೋ ಭೀ ಕಾಮ್ಸೇ ನಹೀ ಜಾನೇ ದೂಂಗಿ ಮೈಂ. ಚಲೋ ಪೆಟ್ರೋಲಿಯಂ ಮಿನಿಸ್ಟ್ರಿಕೋ ಫೋನ್ ಲಗಾವ್*

# ದೃಶ್ಯ–69

***ಹಗಲು–ದೆಹಲಿ–ಬಿರ್ಲಾ ಮಂದಿರದ ಹೊರಭಾಗ***

| | | |
|---|---|---|
| | | (ಸುಂದರ್ ರಾವ್ ಮತ್ತು ವರಲಕ್ಷ್ಮಿ ದೇವರ ದರ್ಶನ ಮುಗಿಸಿ ಹೊರಬರುತ್ತಿದ್ದಾರೆ) |
| ಸುಂದರ್ | : | ಶಂಕ್ರ ಮೊದ್ಲಿಂದ್ಲು ಹಾಗೆ. ಅವನ್ ಮನಸ್ಸಿಗ್ ಏನಾದ್ರು ಬಂತು ಅಂದ್ರೆ ಮುಗ್ದೇ ಹೋಯ್ತು. ಚಿಕ್ಕಂದಿನಲ್ಲಿ ಅವ್ನು ಗಾಳಿಪಟ ಮಾಡೋಕ್ ಕೂರ್‍ತಿದ್ದ. ಎಲ್ಲವನ್ನೂ ಮರ್‍ತ್‌ಬಿಡ್ತಿದ್ದ. ಆ ಗಾಳಿಪಟ ಏನಾದ್ರು ಹಾರ್‍ದೇ ಇದ್ರೆ ಮತ್ತೆ ಮಾಡೋಕ್ ಕೂರ್‍ತಿದ್ದ. ಊಟ, ತಿಂಡಿ, ನಿದ್ರೆ ಏನೂ ಬೇಡ ಅವನಿಗೆ. |
| ವರೂ | : | ಅವನ ಈ ಬಂಗಾಡಿ ಗಾಳಿಪಟ ಮಾತ್ರ ಪಲ್ಟಿನೇ ಹೊಡೀತಿಲ್ವಲ್ಲ ಅಂಕಲ್. |
| ಸುಂದರ್ | : | ಪ್ರತಿ ಪತ್ರದಲ್ಲೂ ಅವ್ನು ನಿನ್ ಬಗ್ಗೆ ಬರೀತಿರ್‍ತಾನೆ. ನೀನು ಕಮ್ಯೂನಿಟಿ ಮೆಡಿಸಿನ್ ತಗೊಂಡಿದ್ದು ಅವನಿಗೆ ತುಂಬ ಖುಷಿಯಾಗಿದೆ. ಆದ್ರೆ ನೀನ್ ಅವನ ಕಾಗದಗಳಿಗೆ ಉತ್ತರಾನೆ ಬರಿಯೋಲ್ವಂತೆ. ವರಲಕ್ಷ್ಮೀ ಹೀ ಇಸ್ ವೆರಿ ಲೋನ್ಲಿ ಯು ನೋ. ಯಾಕಮ್ಮ ಉತ್ರ ಬರೀತಿಲ್ಲ? |
| ವರೂ | : | ನನಗ್ ಅವ್ನ್ ಕಾಗ್ದ ಬೇಡ, ಅವ್ನೇ ಬೇಕು |
| ಸುಂದರ್ | : | ಹಾಗಂತಾನೆ ಬರೀ ಅವ್ನಿಗೆ |
| ವರೂ | : | ಅವ್ನಿಗೆ ಅದು ಬೇಕಾಗಿಲ್ಲ. ಅವ್ನಿಗ್ ನಾನೇ ಅಲ್ಲಿಗ್ ಬರ್‍ಬೇಕು ಅಂತಿದೆ |
| ಸುಂದರ್ | : | ಹೋಗು ಅಲ್ಲಿಗೆ<br>(ಯೋಚಿಸುತ್ತಿರುವ ವರೂ ಕಂಡು)<br>.. ಯೆಸ್ ಮೈ ಚೈಲ್ಡ್ |
| ವರೂ | : | ಇಂಪಾಸಿಬಲ್, ನಾನ್ಯಾಕ್ ಅಲ್ಲಿಗ್ ಹೋಗ್ಬೇಕು? ನಾನ್ ಅವನ್ಜೊತೆ ಕಂಡಿರೋ ಕನಸೇ ಬೇರೆ<br>(ದುಃಖಿಸುತ್ತಾಳೆ) |
| ಸುಂದರ್ | : | ಒಳ್ಳೆ ಹಟ ಆಯ್ತಲ್ಲ ನಿಂದು<br>(ಬುದ್ಧಿವಾದ ಹೇಳಲು ಪ್ರಯತ್ನಿಸುತ್ತಾನೆ) |
| ವರೂ | : | ಹೌದು ನಂದ್ ಮಾತ್ರ ಹಟ, ಅವನ್ದಲ್ವ |
| ಸುಂದರ್ | : | ಅವ್ನಿಗೆ ನೀನಂದ್ರೆ ತುಂಬ ಅಭಿಮಾನ. ಹಿ ಜಸ್ಟ್ ಅಡೋರ್ಸ್ ಯೂ |
| ವರೂ | : | ಮೀ ಟೂ. ನನ್ಗೂ (ದುಃಖಿಸುತ್ತ) |

| | | |
|---|---|---|
| ಸುಂದರ್ | : | ವಾಟ್ಸ್ ದ ಪ್ರಾಬ್ಲಮ್? ನೀವಿಬ್ರು ಹೀಗೆ ಬೇರೆ ಬೇರೆಯಾಗಿ ಬಾಳ್ಬೇಕ? ಇಬ್ರಲ್ಲ್ ಒಬ್ರಾದ್ರು ತಗ್ಗಲೇಬೇಕಮ್ಮ ಜೀವನ ನಡೀಬೇಕು ಅಂತಂದ್ರೆ. ಈಗ ನಂದೇ ನೋಡು. ಅವ್ನಿಗೆ ಅವನ ಲಕ್ಷ್ಯ ಸಿಕ್ಕಿದೆ ವರಲಕ್ಷ್ಮೀ. ಅವ್ನು ಖಂಡಿತ ಇಲ್ಲಿಗ್ ಬರೋದಿಲ್ಲ. ನೀನು ಅವನ್ಗೋಸ್ಕರ ಇಲ್ಲಿ ಕಾಯ್ಬೇಡಮ್ಮ |
| ವರೂ | : | (ಸುಂದರ್ ಕಾಲಿಗೆ ಬಿದ್ದು)<br>.. ಬರ್ತಿನಿ ಅಂಕಲ್<br>(ಎಂದು ದುಃಖದಿಂದಲೇ ನಿರ್ಗಮಿಸುತ್ತಾಳೆ. ಸುಂದರ್ ರಾವ್ ಆಕೆಯನ್ನೇ ನೋಡುತ್ತ ನಿಲ್ಲುತ್ತಾರೆ) |

## ದೃಶ್ಯ–70

***ರಾತ್ರಿ–ಶಂಕರನ ಮನೆಯ ಹೊರಗೆ***

| | | |
|---|---|---|
| | | (ರಾತ್ರಿಯ ಸಮಯದಲ್ಲಿ ಮನೆಯ ಮುಂದೆ ಮನರಂಜನೆಗಾಗಿ ತಾಳಮದ್ದಳೆ ಕಲೆಯ ಪ್ರದರ್ಶನ ನಡೆಯುತ್ತಿದೆ. ಶಂಕರ ಮತ್ತು ಅಜ್ಜಿ ಕುಳಿತು ವೀಕ್ಷಿಸುತ್ತಿದ್ದಾರೆ) |
| ಪಾತ್ರ1 | : | ಭಳಿರೇ, ಯಾರಲ್ಲಿ? |
| ಪಾತ್ರ2 | : | ಇದೋ ಬಂದೆ. ನಾತ ನಾತ |
| ಪಾತ್ರ1 | : | ಏನದು ನಾತ? |
| ಪಾತ್ರ2 | : | ನೀನೇ ನನ್ನ ನಾತ<br>(ಭಾಗವತರ ಹಾಡು ಆರಂಭವಾಗುತ್ತದೆ) |
| ಅಜ್ಜಿ | : | ಶಂಕ್ರ, ಶ್ರೀಮತಿನೂ ಮಕ್ಳು ಬಂದಿದ್ರೆ ಎಷ್ಟ್ ಚೆನಾಗ್ ಇರ್ತಿತ್ ಅಲ್ಲೇನೋ |
| ಶಂಕರ | : | ಸರಿಹೋಯ್ತು. ಅವ್ರೇನಾದ್ರು ಇಲ್ ಬಂದಿದ್ರೆ ಶ್ಯಾನ್ಭೋಗ್ರ ಕಿರಾತಕ ವೇಷ ನೋಡ್ಬೋದಾಗಿತ್ತು.<br>(ಇಬ್ಬರೂ ನಗುವರು. ಯಕ್ಷಗಾನ ಮುಂದುವರೆಯುತ್ತದೆ. ಆಗ ಅಜ್ಜಿ ಮಂಚದಿಂದ ಎದ್ದು ಏನನ್ನೋ ಗಮನಿಸುತ್ತಾರೆ. ಕರೆಯುವ ಶಂಕರನನ್ನು ಸುಮ್ಮನಿರುವಂತೆ ಹೇಳಿ ಯಕ್ಷಗಾನವನ್ನು ನಿಲ್ಲಿಸುವಂತೆ ಹೇಳುತ್ತಾರೆ) |
| ಅಜ್ಜಿ | : | ನಿಲ್ಸೀ, ನಮ್ ಗದ್ದೆ ಕಡೆ ಏನೋ ಶಬ್ಧ ಬರ್ತಾಯಿದೆ. |
| | | **(ಇಂಟರ್‌ಕಟ್‌ನಲ್ಲಿ)** |
| | | ಗದ್ದೆಯಲ್ಲಿ ಐದಾರು ಮಂದಿ ಫಸಲನ್ನು ಕತ್ತರಿಸುತ್ತಿರುತ್ತಾರೆ) |
| ಮುತ್ಯ | : | ಹೌದೌದು..<br>(ಎಂದಾಗ ನಾಲ್ಕೈದು ಮಂದಿ ಆಳುಗಳು ದೊಣ್ಣೆಗಳನ್ನು ಎತ್ತಿಕೊಂಡು ಗದ್ದೆಯ ಕಡೆಗೆ ಓಡುತ್ತಾರೆ) |

# ದೃಶ್ಯ–71

*ರಾತ್ರಿ–ಶಂಕರನ ಜಮೀನು*

(ಜಮೀನಿನ ಬಳಿ ಶಂಕರ ಮತ್ತು ಅವನ ಕಡೆಯವರು ಮೆಲ್ಲಗೆ ಬರುತ್ತಾರೆ. ಶಂಕರ ಮತ್ತು ಅವನ ಕಡೆಯವರನ್ನು ನೋಡುವ ಪೈರು ಕತ್ತರಿಸುತ್ತಿದ್ದವರು ಓಡಿಹೋಗಲು ಪ್ರಾರಂಭಿಸುತ್ತಾರೆ. ಅವರಲ್ಲಿ ಒಬ್ಬ ಶಂಕರನ ಕೈಗೆ ಸಿಕ್ಕಿಹಾಕಿಕೊಳ್ಳುತ್ತಾನೆ.)

ಶಂಕರ : ಬೆವರ್ ಸುರ್ಸಿ ಬೆಳ್ದುದ್ದನ್ನ ಹಾಳ್ಮಾಡ್ತೀರ? ಕಷ್ಟಪಟ್ ದುಡ್ದಿದ್ದನ್ನ ನಾಶಮಾಡ್ತೀರ (ಸಿಕ್ಕಿಹಾಕಿಕೊಂಡವನು ಬಿಟ್ಟುಬಿಡಿ ಎನ್ನುವಂತೆ ಅಂಗಲಾಚುತ್ತಿರುತ್ತಾನೆ. ಮುತ್ಯ ಬಂದು ಅವನನ್ನು ಶಂಕರನಿಂದ ಬಿಡಿಸುತ್ತಾನೆ)

ಶಂಕರ : ಅವನ್ನ ಮುಗ್ಸಿಬ್ಡ್ತಿನಿ

ಸಿಕ್ಕಿಹಾಕಿಕೊಂಡವ : ನಾವಲ್ಲ.. ನಾವಲ್ಲ..

ಶಂಕರ : ಮತ್ಯಾರು?

ಸಿಕ್ಕಿಹಾಕಿಕೊಂಡವ : ಶಾನುಭೋಗ್ರು..

**ನಿರ್ದೇಶಕರ ಟಿಪ್ಪಣಿ:**

**ದೃಶ್ಯ 70ರಲ್ಲಿ ಶಂಕರನ ಮನೆಯ ಮುಂದೆ ತಾಳ ಮದ್ದಳೆಯೊಂದನ್ನ ನೋಡುತ್ತಾ ಕುಳಿತಿರುವ ಅಜ್ಜಿ ಮತ್ತು ಶಂಕರನ ಮನಸ್ಥಿತಿಗಳು ಬಹಳ ಆನಂದದಾಯಿಕವಾಗಿರುವಾಗಲೇ ಆ ಸಮಯದಲ್ಲಿ ದಕ್ಷಿಣ ಕನ್ನಡದ ಯಾವುದೇ ಸಾಂಸ್ಕೃತಿಕ ಪರಂಪರೆಗಳಲ್ಲೊಂದಾದ ತಾಳ ಮದ್ದಳೆ ಮತ್ತು ಯಕ್ಷಗಾನ ಇವುಗಳನ್ನು ಕೂಡ ಇಡೀ ಚಿತ್ರದಲ್ಲಿ ಸಾರಾಸಗಟಾಗಿ ಮೊದಲಿನಿಂದ ಕೊನೆಯವರೆಗೂ ಕೂಡ ಒಂದು ಸಾಂಸ್ಕೃತಿಕ ನೆಲೆಗಟ್ಟನ್ನು ಕಟ್ಟಿಕೊಡುವಲ್ಲಿ ಈ ದೃಶ್ಯಗಳು ಬಹಳ ಪ್ರಮುಖವಾದ ಅಂಶಗಳಾಗಿ ಕಂಡುಬರುತ್ತದೆ. ಅದರಲ್ಲಿರುವ ಮುಗ್ಧತೆ ಮತ್ತು ಅದರಲ್ಲಿರುವ ಪಾರಂಪರಿಕತನವನ್ನು ಗಮನಿಸಿದಾಗ ನಮಗೆ ನಮ್ಮ ನುಡಿಗಟ್ಟುಗಳು ಮತ್ತು ನಾಟಕೀಯ ಅಂಶಗಳು ಹೇಗೆ ಗ್ರಾಮೀಣ ಪ್ರದೇಶದಲ್ಲಿ ತಮ್ಮ ಸಂಸ್ಕೃತಿಯನ್ನು ಹರಡಿತ್ತು ಎಂಬುದರ ಅರಿವನ್ನು ಮೂಡಿಸುತ್ತದೆ. ಅದರ ಜೊತೆಯಲ್ಲಿಯೇ ಆ ದೃಶ್ಯದಲ್ಲಿ ಬೆಳೆನಾಶಮಾಡುತ್ತಿರುವ ಶಬ್ದ ಆ ವೃದ್ಧೆಯ ಸೂಕ್ಷ್ಮ ಕಿವಿಗೆ ತಲುಪುತ್ತದೆ. ನಂತರ ಗದ್ದೆಕಡೆಗೆ ಓಡಿದ ಶಂಕರ ಗದ್ದೆಯನ್ನು ನಾಶಮಾಡುತ್ತಿದ್ದವರನ್ನು ಹಿಡಿದಾಗ ಅದು ಶಾನುಭೋಗರ ಕ್ರಿಯೆ ಎಂದು ತಿಳಿದು ಅತ್ತ ನಡೆಯುತ್ತಾನೆ. ಪ್ರತಿ ದೃಶ್ಯವನ್ನು ಪ್ರತ್ಯೇಕವಾಗಿ ಇಟ್ಟು ಯೋಚಿಸಿದಾಗ ಅದಕ್ಕೊಂದು ಪ್ರಾರಂಭ, ಮಧ್ಯ ಮತ್ತು ಅಂತಿಮವಿದೆ ಎಂಬುದನ್ನು ನಾವು ಇಲ್ಲಿ ಗಮನಿಸಬಹುದು.**

# ದೃಶ್ಯ–72

***ಹಗಲು–ಬಂಗಾಡಿ***

(ರಾತ್ರಿ ನಡೆದ ಘಟನೆಯನ್ನು ಮನಸ್ಸಿನಲ್ಲಿಟ್ಟುಕೊಂಡು ಉಗ್ರವಾಗಿ ಬರುತ್ತಿರುವ ಶಂಕರ ನೇರವಾಗಿ ಕಾಡಿನ ಮಧ್ಯೆ ಕತ್ತರಿಸಿಟ್ಟಿರುವ ಮರಗಳನ್ನು ವಿಲೇವಾರಿ ಮಾಡುತ್ತಿರುವ ಶಾನುಭೋಗನ ಜಾಗಕ್ಕೆ ಬರುತ್ತಾನೆ.)

ಶಾನುಭೋಗ : ಬಾ.. ಬಾ..

ಶಂಕರ : ಈಗ್ತಾನೆ ಚಿಗರ್ತಾ ಇರೋ ನೆಲಕ್ಕೆ ಬೆಂಕಿ ಹಚ್ಚೋಕ್ ಹೊರ್ಟಿದೀರಲ್ಲ ಎಷ್ಟ್ರೀ ದೈರ್ಯ ನಿಮ್ಗೆ?

ಶಾನುಭೋಗ : ಧೈರ್ಯ ಎಂತದು ಮಾರಾಯ, ಅದು ಬೇಕಾಗಿರೋದು ನಿನಗೆ. ನನ್ನನ್ನ ಎದ್ರಾಕೊಂಡ್ರಂತು ಕ್ವಿಂಟಾಲ್ ಗಟ್ಲೆ ಬೇಕಾಗ್ಬಹುದು. ಬೇಕಿದ್ರೆ ದಿಲ್ಲಿಯಿಂದ ತರ್ಸ್ಕೋ.

ಶಂಕರ : ಶಟಾಪ್. ನೆನ್ನೆ ರಾತ್ರಿ ತನ್ಕ ನಾನ್ ಯಾರ್ ಮೇಲೂ ಕೈ ಮಾಡಿರ್ಲಿಲ್ಲ. ಐ ಡೋಂಟ್ ಲೈಕ್ ದಿಸ್. ಹೊಸ ಭಾಷೆ ಕಲಿಯೋದ್ರಲ್ಲಿ ನಾನ್ಯಾವಗ್ಲೂ ಮುಂದು. ನಿಮ್ಗೀ ಭಾಷೆ ಅರ್ಥ ಆಗೋದಾದ್ರೆ
(ತನ್ನ ಎಡಗೈ ಮುಷ್ಟಿ ಮಾಡಿ ತೋರಿಸಿ)
.. ನಾನ್ ಅದುಕ್ಕು ರೆಡಿ.
(ಕೋಪಗೊಂಡ ಶಾನುಭೋಗ ಅವನ ಕಡೆಯವರಿಗೆ)

ಶಾನುಭೋಗ : ಏ ಹಿಡಿರೋ ಅವನ್ನ
(ಶಾನುಭೋಗರ ಕಡೆಯವರಿಗು ಶಂಕರನಿಗೂ ಕಾಳಗವಾಗುತ್ತದೆ. ಎಲ್ಲರಿಗು ಹೊಡೆದ ನಂತರ ಶಾನುಭೋಗನನ್ನು ಅಟ್ಟಿಸಿಕೊಂಡು ಬರುವ ಶಂಕರನನ್ನು ಮುತ್ತಯ್ಯ ಬಂದು ತಡೆಯುತ್ತಾನೆ )

ಶಂಕರ : ದೇವ್ರಂಥ ಅಜ್ಜಿ ಮನ್ಸ್ ನೋಯಿಸಿದ್ದಿರಿ, ಈ ನೆಲದ್ ಮಾನ ಕಳ್ದಿದ್ದೀರಿ. ನೆನಪಿಡಿ ಈ ಪ್ರಕೃತಿನೆ ನಿಮ್ಗೆ ಸರಿಯಾದ್ ಪಾಠ ಕಲ್ಸುತ್ತೆ.

**ನಿರ್ದೇಶಕರ ಟಿಪ್ಪಣಿ:**

**ದೃಶ್ಯ 70 ಮತ್ತು ದೃಶ್ಯ 71ರ ದೃಶ್ಯಗಳಲ್ಲಿ ಒಂದು ವ್ಯಾಪಾರಿ ಸೂತ್ರದ ಸಿನಿಮಾಗೆ ಬೇಕಾದ ಜಾಗವನ್ನು ಬಹಳ ಸಮರ್ಥವಾಗಿ ಬಳಸಿಕೊಳ್ಳುವ ಅವಕಾಶ ಚಿತ್ರಕಥೆಯಲ್ಲಿ ತಾನಾಗಿ ಒದಗಿ ಬಂದಾಗ ಅದನ್ನು ಸಮಂಜಸವಾಗಿ ಬಳಸುವುದೂ**

ಕೂಡ ಬಹಳ ಮುಖ್ಯವಾಗುತ್ತದೆ. ಶಾನುಭೋಗರ ಕುತಂತ್ರವನ್ನು ಗಮನಿಸಿದ ಶಂಕರ ತಾನೇ ಅವನನ್ನು ಹುಡುಕಿ ಬರುತ್ತಾನೆ ಅವನ ಅನುಯಾಯಿಗಳ ಜೊತೆಯಲ್ಲಿ ಹೊಡೆದಾಡುತ್ತಾನೆ ಕೊನೆಗೆ ಶಾನುಭೋಗರಿಗೆ ಪ್ರಕೃತಿಯೇ ನಿಮ್ಮ ಮೇಲೆ ಕ್ರಮ ಕೈಗೊಳ್ಳಲಿದೆ ಎಂದು ಎಚ್ಚರಿಸುತ್ತಾನೆ. ಇಲ್ಲಿ ಆ ಹೊಡೆದಾಟವನ್ನು ಬಿಟ್ಟೂ ಕೂಡ ಸಿನಿಮಾವನ್ನು ಯೋಚಿಸಬಹುದಿತ್ತು. ಆದರೆ ಸಿನಿಮಾದ ಸಿದ್ಧಸೂತ್ರಗಳನ್ನು ಬಳಸಿಕೊಳ್ಳುವಾಗಲೂ ಕೂಡ ಅದಕ್ಕೊಂದು ಜಾಯಮಾನವನ್ನು ಅದಕ್ಕೊಂದು ಬಲವಾದ ಹಿನ್ನಲೆಯನ್ನು ಕೊಡುವುದು ಬಹಳ ಮುಖ್ಯ ಎಂಬಂತೆ ಈ ದೃಶ್ಯವನ್ನು ಹೆಣೆಯಲಾಗಿದೆ. ಇದು ಯಾವುದೇ ನಾಯಕನಟನನ್ನು ಬಳಸಿದಾಗ ಅನಿವಾರ್ಯತೆ ಎನಿಸಿದರೂ ಕೂಡ ಅದರಲ್ಲಿಯೂ ಬಹಳ ಜವಾಬ್ದಾರಿಯುತವಾಗಿ ಅದನ್ನು ನಿಭಾಯಿಸಿದಾಗ ಉಂಟಾಗುವಂತಹ ಪರಿಣಾಮ ಇಲ್ಲಿ ಸಿಗಲು ಸಾಧ್ಯವಿದೆ.

## ದೃಶ್ಯ–73

***ಹಗಲು–ಶಂಕರನ ಮನೆಯ ಮುಂದಣ ಬಿಸಲ ಮಚ್ಚಿಗೆ***

(ಶಂಕರನ ಮನಃ ಪಟಲದ ಮೇಲೆ ನಾಶವಾದ ಬೆಳೆಯ ಚಿತ್ರಿಕೆಗಳು ದಾಳಿ ಮಾಡಿ ಅವನನ್ನು ವ್ಯಗ್ರನನ್ನಾಗಿಸುತ್ತದೆ. ಅವನ ಈ ಮನಸ್ಥಿಯನ್ನು ಅರಿತ ಅಜ್ಜಿ ಅವನನ್ನು ಸಮಾಧಾನ ಗೊಳಿಸುತ್ತಾಳೆ.)

ಅಜ್ಜಿ : ಶಂಕರ, ಗದ್ದೆ ಇದ್ದ ಮೇಲೆ ಕಳೆ ಇದ್ದದ್ದೆ. ಕಳೆ ಇದೇ ಅಂತ ಗದ್ದೆ ಕೆಲ್ಸ ಬಿಟ್ಬಿಡೋದ. ಕಳೆ ತೆಗ್ದು ಕೆಲ್ಸ ಮುಂದ್ವರ್ಸಬೇಕು. ಆ ರಂಗರಾಯನ ಮೈಯಲ್ ಹರಿತಿರೋದು ರಕ್ತ ಅಲ್ಲ ವಿಷ. ಅವನ್ ನರ್ಕ ಅವ್ನೇ ಅನ್ಭವಿಸ್ತಾನೆ ಬಿಡೂ. ನಿನ್ ಗದ್ದೇಲಿ ಹಾಳಾಗಿರೋದು ಕಾಲ್ ಭಾಗ ಮಾತ್ರ. ಉಳಿದ್ ಭಾಗ ಎಲ್ಲ ಹಾಗೆ ಇದೆ. ಇದೂ ನಿನ್ ಭೂಮಿಯಲ್ಲಿ ಮೊದುಲ್ನೇ ಸುಗ್ಗಿ.

# ದೃಶ್ಯ–74

*ಹಗಲು–ಶಂಕರನ ಜಮೀನು*
*ಹಾಡು: ಬಂಗಾರ ತೆನೆಯೆಲ್ಲ ಬಂಗಾಡಿ ಮನೆಮನೆಗೆ*
*ಸಾಹಿತ್ಯ: ವಿ. ಮನೋಹರ್*
*ಹಾಡಿದವರು: ಶಂಕರ್ ಮಹಾದೇವನ್, ನಂದಿತಾ ಮತ್ತು ಸಂಗಡಿಗರು*

**(ತನ್ನ ಮೊದಲ ಸುಗ್ಗಿಯಾದ್ದರಿಂದ ಮೊದಲು ಅಜ್ಜಿಯ ಕಾಲಿಗೆ ನಮಸ್ಕರಿಸಿ ಆಕೆಯ ಆಶೀರ್ವಾದ ಪಡೆದು ನಂತರ ಮುಂದಿನ ಕಾರ್ಯಗಳತ್ತ ಶಂಕರ ಮುಂದಾಗುತ್ತಾನೆ. ಇತ್ತ ಶ್ರೀಮತಿ ತನ್ನ ತಂದೆಯ ಕಣ್ತಪ್ಪಿಸಿ ಸುಗ್ಗಿ ನಡೆಯುವ ಸ್ಥಳಕ್ಕೆ ಬರುತ್ತಾಳೆ. ಶ್ರೀಮತಿಯನ್ನು ಕಂಡು ಅಜ್ಜಿ ಸಂತೋಷಗೊಳ್ಳುತ್ತಾಳೆ. ಸುಗ್ಗಿಯ ವಿಧಿವಿಧಾನಗಳು ಆರಂಭವಾಗುತ್ತವೆ. ಮುತ್ಯ ಬೆಳೆಗೆ ಮಾಡಬೇಕಾದ ವಿಧಿವಿಧಾನಗಳನ್ನು ಮುಗಿಸುತ್ತಾನೆ. ಇತ್ತ ಅಜ್ಜಿ ಶ್ರೀಮತಿಗೆ ಗುಂಪನ್ನು ಸೇರಿಕೊಳ್ಳುವಂತೆ ಸೂಚಿಸಿ ಅವಳು ಬೇಡವೆಂದರೂ ಅವಳಲ್ಲಿ ಉತ್ಸಾಹ ತುಂಬಿ ಕಳುಹಿಸುತ್ತಾರೆ. ಹಾಡಿನ ಮೂಲಕ ತಮ್ಮ ತಮ್ಮ ಸಂತೋಷಗಳನ್ನು ವ್ಯಕ್ತಪಡಿಸಲು ಆರಂಭಿಸುತ್ತಾರೆ)**

ಬಂಗಾರ ತೆನೆಯೆಲ್ಲ ಬಂಗಾಡಿ ಮನೆಮನೆಗೆ
ಸಂತೋಷ ಹಿರಿಹಿರಿ ಹಿಗ್ಗಿ ಚೆಂದಾದ ಮುಗುಳುನಗೆ
ಸುಗ್ಗಿ ಸಿರಿ ಅರಳಿತು
ಫಲ ಫಲ ಫಲ ಫಲ
ಸವಿಯುವ ಸಿಹಿಫಲ ಹೋ
ತುಂಬೀ ತುಳಿಕಲಿ ಆನಂದ ಕಲರವ
ನಾಡಿಗೇ.. ಕೀರುತಿ..
ಭೂಮಿಗೆ.. ಆರತಿ..

ಸಂತೋಷ ಹಿರಿಹಿರಿ ಹಿಗ್ಗಿ
ಚೆಂದಾದ ಮುಗುಳುನಗೆ
ಬಂಗಾರ ತೆನೆಯೆಲ್ಲ ಬಂಗಾಡಿ ಮನೆಮನೆಗೆ

**(ದಕ್ಷಿಣ ಕನ್ನಡದ ಸ್ಥಳೀಯ ಜಾನಪದ ಕಲೆಗಳನ್ನು ಮತ್ತು ಸುಗ್ಗಿಯ ಸಾಂಪ್ರದಾಯಕ ಸಂದರ್ಭಕ್ಕೆ ಅನುಗುಣವಾಗಿ ಸಂಭ್ರಮ ಪಡುವ ವೇಷ–ಭೂಷಣಗಳನ್ನೂ ಹಾಗೂ ನಡಾವಳಿಗಳನ್ನೂ ಕಲಾತ್ಮಕವಾಗಿ ಬಳಸಲಾಗಿದೆ. ಅಜ್ಜಿ ಶಂಕರನ ಹುಮ್ಮಸ್ಸನ್ನು ನೋಡ ನೋಡುತ್ತಲೇ ತಾನು ತನ್ನ ಅಣ್ಣ ದತ್ತಣ್ಣನೊಡನೆ ಆಚರಿಸಿದ ಅಂದಿನ ಸುಗ್ಗಿಯ ವೈಭವವನ್ನು ನೆನೆಯುತ್ತಾಳೆ)**

ಏನನು ಕೇಳದೆ ಎಲ್ಲವ ನೀಡುವ ದೇವತೆ ಈ ಧರಣಿ
ಸಾವಿರ ಜನುಮಗಳಾದರು ತೀರದು ತಾಯಿಗೆ ನಾವು ಋಣಿ
ಎಲ್ಲಾ ಜೀವಕು ಅನ್ನವ ನೀಡುವ ಸಂತಸದಾ ಚಿಲುಮೆ
ತಾಪವ ನೀಗಿ ಸಂತೈಸುವುದು ಕಾಣಿಸದಾ ಒಲುಮೆ

ಧ್ಯಾನ ದುಡಿಮೆಯಲಿರಲೂ ಧಾನ್ಯದಾ ಹೊನಲೂ
ಧನ್ಯ ದುಡಿಯುವ ಜೀವವೆಲ್ಲವೂ

**(ಈ ಸಂತಸದ ಕ್ಷಣಗಳಲ್ಲಿ ತಾನೂ ಪಾಲ್ಗೊಳ್ಳುತ್ತ ಅಜ್ಜಿಯೂ ತನ್ನ ದನಿಯನ್ನು ಸೇರಿಕೊಳ್ಳುತ್ತಾಳೆ. ಇದರಿಂದ ಶಂಕರ ಮತ್ತು ಶ್ರೀಮತಿ ಇಬ್ಬರಿಗೂ ಮತ್ತಷ್ಟು ಉತ್ಸಾಹ ಮೂಡುತ್ತದೆ)**

ಬೇಸಾಯದರಮನೆಗೆ ತೋರಣ ಬಂಗಾರ್ದ ತದಿರು
ಒಲಿದಾಳು ಧಾನ್ಯಲಕ್ಷ್ಮೀ ಭೂಮಿತುಂಬ ರತ್ನಾದ ಪೈರು
ನೇಗಿಲನೂರು ನೊಗನೂರು ಹೂಡ್ಬಿಟ್ಟೆತ್ತು ಐನೂರು
ಬ್ರಹ್ಮ ವಿಷ್ಣು ಶಿವರ ಪ್ರಿಯ ಮಡದೀರು ಭೂಮಿಗೆ ಬಂದಾರು

**(ಅಜ್ಜಿಯ ಕೈಯಲ್ಲಿ ಶಂಕರ ಧಾನ್ಯದ ದಾನವನ್ನು ಮಾಡಿಸುತ್ತಿದ್ದಾನೆ. ಅಲ್ಲಿ ಶಾನುಭೋಗರ ಪತ್ನಿ, ಎಳಚಿತ್ತಾಯರೂ ಉಪಸ್ಥಿತರಿದ್ದಾರೆ.)**

ಮಂಗಳದಿವಸ ಅಂಗಳ ಧವಸ ಧಾನ್ಯದ ಬೆಳಕಾಯ್ತು
ಭತ್ತದ ಭಾಗ್ಯ ಬಿತ್ತುದುದೆಲ್ಲ ಮುತ್ತಿನ ಹರಳಾಯ್ತು
ಭಾಗ್ಯದ ಲಕ್ಷ್ಮಿಯು ಬರುತಿಹ ಬಾಗಿಲ ತೋರಣ ಚೆಲುವಾಯ್ತು
ಸಿರಿ ಸಿರಿ ಸಂಪದ ಕಲಕಲಕಳೆಯೂ ಹೂರಣ ಸೊಗಸಾಯ್ತು

ಪ್ರೀತಿ ನಗುವಿನ ತೆನೆಯೂ
ಎಲ್ಲ ಮೊಗಮೊಗದೀ
ಅನ್ನಪೂರ್ಣೆಯು ಭಾಗ್ಯ ತಂದಳು

ನಾಡಿಗೆ ಕೀರುತಿ.. ಓ ಭೂಮಿಗೆ ಆರತಿ..

ಬಂಗಾರ ತೆನೆತೆನೆಯೆಲ್ಲ ಬಂಗಾಡಿ ಮನೆಮನೆಗೆ
ಸಂತೋಷ ಹಿರಿಹಿರಿಹಿಗ್ಗಿ ಚೆಂದಾದ ಮುಗುಳು ನಗೆ
ಸುಗ್ಗಿ ಸಿರಿ ಅರಳಿತು

ಗಲಗಲಗಲಗಲ ಸವಿಯುವ ಸಿಹಿ ಫಲ
ತುಂಬೀ ತುಳುಕಲಿ ಆನಂದ ಕಲರವ
ನಾಡಿಗೆ ಕೀರುತಿ.. ಓ ಭೂಮಿಗೆ ಆರತಿ..

**(ಮೂಕಜ್ಜಿಗೆ ತನ್ನ ದತ್ತಣ್ಣನ ಜೊತೆಗೆ ಕಳೆದ ಜೀವನದ ಪ್ರತಿಯೊಂದು ಕ್ಷಣವೂ ಇಂದು ಮತ್ತೆ ಮರುಕಳಿಸಿದಂತೆ ಸಂತೋಷದ ಉತ್ಕಟಾವಸ್ಥೆಯನ್ನು ತಲುಪುತ್ತಾಳೆ. ಇದರಿಂದ ತೀವ್ರ ಹೃದಯಾಘಾತಕ್ಕೆ ಒಳಗಾಗುತ್ತಾಳೆ. ಕುಸಿಯಲಿದ್ದ ಅಜ್ಜಿಯನ್ನು ಕಂಡ ಶಂಕರ ಅವಳನ್ನು ತಕ್ಷಣವೇ ಎತ್ತಿಕೊಂಡು ಮನೆಯತ್ತ ಧಾವಿಸುತ್ತಾನೆ)**

**ನಿರ್ದೇಶಕರ ಟಿಪ್ಪಣಿ**

**ಚಿಂತಿತನಾಗಿದ್ದ ಶಂಕರನನ್ನು ಮತ್ತೆ ಕಾರ್ಯೋನ್ಮುಖನನ್ನಾಗಿ ಮಾಡುವುದು ಅಜ್ಜಿಯ ಮಾತುಗಳು. ಕಳೆದು ಹೋಗಿರುವ ಗದ್ದೆ ಕೆಲವೇ ಕೆಲವಷ್ಟೆ ಆದರೆ ನಿನ್ನ ಮೊದಲ ಸುಗ್ಗಿಯಾದ್ದರಿಂದ ಅದನ್ನು ಅದ್ಭುತವಾಗಿ, ಜೀವಂತವಾಗಿ, ಅದ್ದೂರಿಯಾಗಿ ಮಾಡಬೇಕೆನ್ನುವ ಮಾತುಗಳ ಮುಖಾಂತರ ಆತನನ್ನು ಎಚ್ಚರಿಸುತ್ತಾಳೆ ಮತ್ತು ಆತನನ್ನು ಕಾರ್ಯೋನ್ಮುಖನನ್ನಾಗುವಂತೆ ಮಾಡುತ್ತಾಳೆ. ಸುಗ್ಗಿಯ ಹಾಡಿನ ಇಡೀ ಆಶಯವನ್ನು ಗಮನಿಸಿದಾಗ ಅದರಲ್ಲಿ ಹಲವು ಸಾಂಪ್ರದಾಯಿಕ ಪದಗಳನ್ನು ಮತ್ತು ಸಾಂಪ್ರದಾಯಿಕ ಆಚರಣೆಗಳನ್ನೂ ಕೂಡ ಅಲ್ಲಿ ಮೇಳೈಸಿಕೊಂಡಿರುವುದನ್ನು ನೀವು ಗಮನಿಸಬಹುದು. ತುಳುನಾಡಿನಲ್ಲಿ ಬಳಸುವ ಹಲವು ಪದಗಳು ಅಲ್ಲದೆ ಅಲ್ಲಿಯ ಜಾನಪದೀಯ ಅಂಶಗಳನ್ನು ಒಳಗೊಂಡಂತ ವೇಷಭೂಷಗಳು ಇವೆಲ್ಲದರ ಒಟ್ಟಾರೆ ಸಮಗ್ರ ನಿರೂಪಣೆಯಂತೆ ಈ ಹಾಡು ಕಾಣುತ್ತದೆ. ಅದರ ಮುಖ್ಯ ನಾಟಕೀಯ ಅಂಶ ಪ್ರಾರಂಭವಾಗುವುದು ಅಜ್ಜಿಯೂ ಕೂಡ ಆ ಸಂಭ್ರಮದಲ್ಲಿ ಭಾಗಿಯಾದಾಗ, ತನ್ನೆಲ್ಲ ಚಿಕ್ಕಂದಿನ ನೆನಪುಗಳನ್ನು ಮೆಲುಕು ಹಾಕುತ್ತ ತನ್ನ ಬದುಕು ಸಂಪೂರ್ಣವಾಯಿತು ಎಂಬುದನ್ನು ಅರಿಯುವ ಅಜ್ಜಿ ಅಲ್ಲಿಯೇ ಕುಸಿಯುತ್ತಾಳೆ. ಒಂದು ಸಂಭ್ರಮದ ಆಚರಣೆಗೆ ಮತ್ತೊಂದು ನಾಟಕೀಯ ತಿರುವು ಕೊನೆಯಲ್ಲಿ ಸಿಗುತ್ತದೆ.**

# ದೃಶ್ಯ–75

*ಹಗಲು–ಶಂಕರನ ಮನೆಯ ಪಡಸಾಲೆ*

(ಅಸ್ವಸ್ಥಳಾದ ಅಜ್ಜಿಯನ್ನು ಶಂಕರ ಮನೆಯ ಪಡಸಾಲೆಯಲ್ಲಿ ಮಲಗಿಸುತ್ತಾನೆ. ಇಡೀ ಊರಿಗೆ ಊರೇ ಅಲ್ಲಿ ನೆರೆದಿದೆ. ಎಲ್ಲರ ಮುಖದಲ್ಲೂ ಚಿಂತೆ)

ಶ್ರೀಮತಿ : ಅಜ್ಜಿಗೇನಾಯ್ತು?

ಶಂಕರ : ಅಜ್ಜಿ, ಏನಾಯ್ತು, ಸುಸ್ತಾಯ್ತ?

ಅಜ್ಜಿ : ಯಾರೋ ಕರಿತಿರೋ ಹಾಗ್ ಕಾಣ್ಸ್ತಿದೆ. ದತ್ತಣ್ಣ, ರಂಗನ್ ಮನೆ ಕೋಣೆಲಿ ಗಂಗಾಜಲ ಇಟ್ಟಿದಿನಿ ಬೇಗ್ ಹೋಗಿ ಒಂದಿಷ್ಟ್ ತಂದು ಬಾಯಿಗ್ ಹಾಕೋ ಮಗೂ. ಇನ್ ಹೆಚ್ಹೊತ್ತಿಲ್ಲ ಮಗೂ

*(ಚಲನಚಿತ್ರದಲ್ಲಿ ಇಲ್ಲ)*

*ಶಂಕರ : ಇಲ್ಲ ಇಲ್ಲ. ಮುತ್ತಯ್ಯ ನೋಡು, ಅಜ್ಜಿ ಏನೇನೋ ಹೇಳ್ತಿದಾಳೆ. ಅಜ್ಜೀ, ಅಪ್ಪ, ಅಮ್ಮ ವಿಠೂ ಎಲ್ಲಾ ಬರೋರಿದಾರೆ ಅವರನ್ನೆಲ್ಲ ನೋಡ್ಬೇಕು ನೀನು. ಆ ಒನಕೆ ಅಬ್ಬಿ ಇದ್ಯಲ್ಲ ಈ ಮಳೆಗಾಲ್ದಲ್ಲಿ ಅಲ್ಲೊಂದ್ ವಿದ್ಯುಚ್ಛಕ್ತಿ ಯಂತ್ರ ಹಾಕ್ತೀನಿ. ಅದ್ರಿಂದ ಹತ್ತೋ ದೀಪ ನೋಡ್ಬೇಕು ನೀನು, ಇಲ್ಲಾ ಅಜ್ಜೀ, ಏನೂ ಆಗಿಲ್ಲ. ಸುಸ್ತಾಗಿದೆ ನಿಂಗೆ ಅಷ್ಟೇ. ಎಳಚಿತ್ತರಾಯ್ರೆ ನೀವಾದ್ರು ಹೇಳಿ.*

ಶಂಕರ : ಯಾರಾದ್ರೂ ಹೋಗಿ ಶ್ಯಾನ್ಭೋಗ್ರ ಮನೆಯಿಂದ ಗಂಗಾಜಲ ತನ್ನಿ

ಎಳಚಿ : ಶಂಕ್ರ, ನೀನೆ ಹೋಗ್ ತರ್ಬೇಕಪ್ಪ. ಬೇರೆ ಯಾರ್ ಹೋದ್ರು ಈ ಕೆಲ್ಸ ಆಗೋದಿಲ್ಲ.

ಅಜ್ಜಿ : ಬೇಗ, ತಾರೋ ದತ್ತಣ್ಣ..
(ಶಂಕರ ಹಿಂದೆ ಮುಂದೆ ನೋಡದೆ ಅಲ್ಲಿಂದ ಶಾನುಭೋಗರ ಮನೆಯ ಕಡೆಗೆ ಧಾವಿಸುತ್ತಾನೆ)

## ದೃಶ್ಯ-76

***ಹಗಲು-ಶಾನುಭೋಗರ ಮನೆಹಾದಿ ಮತ್ತು ಮನೆಯ ಒಳಗೆ***

| | | |
|---|---|---|
| | | (ಶಂಕರ ಶಾನುಭೋಗರ ಮನೆಗೆ ಓಡಿಬಂದು, ಮನೆ ಪ್ರವೇಶಿಸಿ) |
| ಶಂಕರ | : | ಶ್ಯಾನ್ಭೋಗ್ರೆ, ಶ್ಯಾನ್ಭೋಗ್ರೆ |
| ಶಾನುಭೋಗ | : | (ಶಂಕರನನ್ನು ತಡೆದು) ಏಯ್ ಏಯ್ ನಿಂತ್ಕೊ ನಿಂತ್ಕೊ. ಎಲ್ ಹೋಗ್ತಾ ಇದಿಯಾ? ಸುಗ್ಗಿ ಊಟಕ್ಕ್ ನಾ ಬರೋದಿಲ್ಲ. |
| ಶಂಕರ | : | ನೋಡಿ ಇದು ಮಾತಾಡೋ ಸಮಯ ಅಲ್ಲ. ಅಜ್ಜಿಗೆ ಗಂಗೋದ್ಕ ಬೇಕಾಗಿತ್ತು. ದೇವ್ರ್ ಕೋಣೆಲಿದೆಯಂತೆ<br>(ಶಾನುಭೋಗರ ಹೆಂಡತಿ ಗಾಬರಿಗೊಂಡು ತರಲು ಹೋಗುತ್ತಾರೆ) |
| ಶಾನುಭೋಗ | : | ಅವ್ಳೆ ಕೇಳುದ್ಲಾ? ಓ ಸಾಯ್ಲಿಕ್ ನಿಮ್ಮನೆ. ಗಂಗೋದ್ಕ ಮಾತ್ರ ಇಲ್ಲಿಂದ ಬೇಕಂತ? ಹಾಗಾದ್ರೆ ಅಲ್ಲ್ಯಾಕ್ ಹೋದ್ಲಂತೆ? |
| ಶಂಕರ | : | ಶ್ಯಾನ್ಭೋಗ್ರೆ ಹೆಚ್ ಸಮ್ಯ ಇಲ್ಲ ದಯವಿಟ್ಟು..<br>(ಅವನ ಮಾತನ್ನು ತಡೆದು) |
| ಶಾನುಭೋಗ | : | ಅವ್ಳು ಈ ಮನೆ ಧಿಕ್ಕರಿಸಿ ಹೋದವಳು ಗಂಗಾಜಲ ಸಿಗೋದಿಲ್ಲ ಹೋಗು |
| ಶಂಕರ | : | ಶ್ಯಾನ್ಭೋಗ್ರೆ ನನ್ ಮಾತ್ ಕೇಳಿ<br>(ಎಂದು ಕೇಳುತ್ತಿರುವಾಗಲೇ ಶಾನುಭೋಗರ ಹೆಂಡತಿ ಗಂಗೋದಕವನ್ನು ತಂದು ಶಂಕರನಿಗೆ ಕೊಡುತ್ತಾರೆ) |
| ಶಾನ್ಭೋಗ್ರ ಹೆಂಡತಿ | : | ಶಂಕ್ರ ತಗೋ ತಗೋ ಇದನ್ನ ಬೇಗ್ ಹೋಗು. ನಾನು ಬರ್ತೇನೆ<br>(ಶಂಕರ ಆಕೆಯನ್ನು ಧನ್ಯಭಾವದಿಂದ ನೋಡಿ ಅಲ್ಲಿಂದ ಹೊರಡುವನು, ತನ್ನ ಮಾತನ್ನು ಮೀರಿ ಗಂಗೋದಕ ಕೊಟ್ಟ ಹೆಂಡತಿಯನ್ನು ಶಾನುಭೋಗ ಹೊಡೆಯುವನು. ಆಕೆ ಅವನಿಂದ ಬಿಡಿಸಿಕೊಂಡು)<br>.. ನಿಮ್ ಕುಟುಂಬಾನೆ ದಿವಾಳಿ ಎದ್ ಹೋದಾಗ ನಿಮ್ಮನ್ನ ಸಾಕಿ ಬೆಳೆಸಿದಂತ ಅಮ್ಮ ಅದು. ಅದ್ರ ಬಾಯಿಗೆ ಗಂಗಾಜಲ ಹಾಕೊ ಅವಕಾಶಾನು ಕಳ್ಕೋಬೇಡಿ. ನಿಮ್ಮ ದುಷ್ಟತನಕ್ಕೆ ಅಷ್ಟಾದ್ರು ಪ್ರಾಯಶ್ಚಿತ್ತ ಮಾಡ್ಕೊಳಿ.. |

(ಅವನ ದುಷ್ಕೃತ್ಯಕ್ಕೆ ಅವನನ್ನು ಹಳಿಯುತ್ತ ಅವನನ್ನು ಧಿಕ್ಕರಿಸಿ ತಾನು ಅಜ್ಜಿಯೆಡೆಗೆ ಧಾವಿಸುತ್ತಾಳೆ. ಇದರಿಂದ ಶಾನುಭೋಗ ಇನ್ನಷ್ಟು ಕುಪಿತನಾಗುತ್ತಾನೆ)

# ದೃಶ್ಯ–77

***ಹಗಲು–ಶಂಕರನ ಮನೆಯ ಹೊರಗೆ***

(ಶಂಕರ ತಂದ ಗಂಗಾಜಲವನ್ನು ಗುಟುಕರಿಸುವ ಅಜ್ಜಿ ಶ್ರೀಮತಿ ಹಾಗು ಶಂಕರರ ಕೈಗಳನ್ನು ಒಂದುಗೂಡಿಸಿ ಮುಂದಿನ ತನ್ನ ಆಶಯವನ್ನು ವ್ಯಕ್ತಪಡಿಸುತ್ತ ಅವರನ್ನೇ ನೋಡುತ್ತ ಅಸುನೀಗುತ್ತಾಳೆ. ಅಲ್ಲಿದ್ದವರೆಲ್ಲರ ದುಃಖವನ್ನು ಕಂಡ ಶಂಕರ)



ಶಂಕರ : ಶ್... ಅಳ್ಬೇಡಿ, ಅಳ್ಬಾರ್ದು ನಾವು. ಈ ಹೊಲ, ಗದ್ದೆ, ಮನೆ ಎಲ್ಲ ನೋಡಿ ಸಮಾಧಾನದಿಂದ್ಲೇ ಹೋಗಿದಾಳೆ ಅಜ್ಜಿ. ಹೌದು ಅವ್ಳನ್ನ ಸಮಾಧಾನ್ದಿಂದ್ಲೇ ಕಳ್ಸ್ಕೊಡ್ಬೇಕು. ಅಳ್ಬಾರ್ದು ನಾವು ಅಳ್ಬಾರ್ದು.
(ಎಂದು ತನ್ನ ದುಃಖವನ್ನು ಹಿಡಿದಿಡುತ್ತ ಆಕೆಯ ಸಾವಿಗೆ ವಿಶಾಲವಾದ ಅರ್ಥವೊಂದನ್ನು ಧ್ವನಿಸುತ್ತಾನೆ)

**ನಿರ್ದೇಶಕರ ಟಿಪ್ಪಣಿ:**

**ದೃಶ್ಯ 75ರಲ್ಲಿ ಅಜ್ಜಿ ತನ್ನ ಕೊನೆಗಾಲವನ್ನು ಸಮೀಪಿಸುತ್ತಿದ್ದೇನೆ ಎಂಬುದನ್ನರಿತು ಗಂಗಾಜಲದ ಆಸೆಯನ್ನು ವ್ಯಕ್ತಪಡಿಸಿದಾಗ ಶಂಕರನೇ ಅದನ್ನು ನೆರವೇರಿಸಬೇಕಾಗುತ್ತದೆ. ಶಾನುಭೋಗನ ವಿರೋಧದ ನಡುವೆಯೂ ಅವನ ಹೆಂಡತಿ ಶಂಕರನಿಗೆ ಗಂಗಾಜಲವನ್ನು ಕೊಡುತ್ತಾಳೆ. ನಿಧಾನವಾಗಿ ಶಾನುಭೋಗನ ಸುತ್ತಮುತ್ತಲಿನ ಎಲ್ಲ ಪಾತ್ರಗಳು ಅವನಿಂದ ದೂರವಾಗುತ್ತ ಅವನ ಮನಸ್ಸಿನಲ್ಲಿ ಅಲ್ಲೋಲ ಕಲ್ಲೋಲವನ್ನು ಎಬ್ಬಿಸಲು ಪ್ರಾರಂಭಿಸುತ್ತದೆ. ಇಲ್ಲಿಯೂ ಕೂಡ ಸೂಕ್ಷ್ಮವಾಗಿ ಗಮನಿಸಿದರೆ ಗಂಗಾಜಲವಿದ್ದಂತಹ ಪಾತ್ರೆಯನ್ನ ಗಮನಿಸಿದಾಗ,**

ಗೋಮುಖವಿರುವುದನ್ನು ನೀವು ಕಾಣಬಹುದು. ಒಟ್ಟಾರೆ ಒಬ್ಬ ಕಲಾನಿರ್ದೇಶಕ ಸಣ್ಣಸಣ್ಣ ಪರಿಕರಗಳನ್ನು ಬಳಸುವ ರೀತಿಯಲ್ಲಿ ಅಥವಾ ದೊಡ್ಡದಾಗಿ ಇಡೀ ಮನೆಯ ಸೆಟ್ ಹಾಕುವಾಗ ಆ ಮನೆಯಲ್ಲಿಯೂ ಕೂಡ ದತ್ತಣ್ಣನ ಮನೆ ಹಾಗೂ ಶಂಕರನ ಮನೆಯನ್ನು ಬೇರೆ ಬೇರೆಯಾಗಿ ಕಾಣಿಸುವುದರ ಮೂಲಕ ಒಬ್ಬ ಕಲಾನಿರ್ದೇಶಕ ತನ್ನೆಲ್ಲ ಚಾಕಚಕ್ಯತೆಯನ್ನು ಇದರಲ್ಲಿ ಮೆರೆದಿದ್ದಾನೆ ಮತ್ತು ದಕ್ಷಿಣ ಕನ್ನಡದ ಸಂಪ್ರದಾಯದ ಎಲ್ಲ ಭಾಗಗಳನ್ನು ಇಲ್ಲಿ ಬಳಸಿಕೊಂಡಿದ್ದಾನೆ ಎಂಬುದನ್ನು ನಾವು ಇಲ್ಲಿ ಗಮನಿಸಬೇಕು. ಅಜ್ಜಿಯ ಪಾತ್ರದ ಪಾತ್ರ ಪೋಷಣೆ ಶಂಕರನ ಬಾಳಿನಲ್ಲಿ ಅದು ತಂದಂತಹ ತಿರುವುಗಳು ಇವುಗಳೂ ಕೂಡ ಭಾವುಕತೆಯ ಉತ್ತುಂಗದ ಕ್ಷಣಗಳನ್ನು ನಮ್ಮದಾಗಿಸುತ್ತದೆ. ಅಜ್ಜಿ ತನ್ನ ಸಾವಿಗೆ ಮುಂಚೆಯೇ ಶ್ರೀಮತಿ ಮತ್ತು ಶಂಕರರ ಕೈಗಳನ್ನು ಒಗ್ಗೂಡಿಸುವುದರ ಮೂಲಕ ಇನ್ನೊಂದು ಆಘಾತಕ್ಕೆ ಅಥವಾ ತಿರುವಿಗೆ ಕಾರಣಳಾಗುತ್ತಾಳೆ. ಇಂತಹ ಹಲವು ಸ್ತರಗಳಲ್ಲಿ ಚಿಗುರಿದ ಕನಸು ಬಹು ಆಯಾಮವುಳ್ಳ, ನೋಡಿದಷ್ಟು ಹೊಸ ಹೊಸ ಆಲೋಚನೆಗಳಿಗೆ ಒಗ್ಗಿಸಿಕೊಳ್ಳುವ ಕ್ರಿಯೆಗೆ ನಮ್ಮನ್ನು ತೊಡಗಿಸುತ್ತದೆ.

# ದೃಶ್ಯ–78

***ರಾತ್ರಿ–ಶಂಕರನ ಮನೆಯ ಪಡಸಾಲೆ***

(ಅಜ್ಜಿ ಮಲಗಿದ್ದ ಜಾಗದಲ್ಲಿ ನೀಲಾಂಜನ ಉರಿಯುತ್ತಿದೆ . ಅದರ ಮುಂದೆಯೇ ಶಂಕರ ಮತ್ತು ಮುತ್ತಯ್ಯ ದುಃಖತಪ್ತರಾಗಿ ಕುಳಿತಿದ್ದಾರೆ)

ಮುತ್ಯ : ಅತ್ತುಬಿಡಿ. ಮನಸ್ಸ್‌ನಲ್ಲಿರೋದ್ ಹೊರಗ್ ಹಾಕಿಬಿಡಿ

(ಶಂಕರ ಅವನನ್ನೇ ನೋಡುತ್ತ ಹೊರಗಡೆ ನೋಡಿದಾಗ ಸೀತಾರಾಮ ಮತ್ತು ಪಾಟೀಲ್ ಬರುತ್ತಿರುವುದು ಕಾಣಿಸುತ್ತದೆ. ಶಂಕರ ದುಃಖದಿಂದ ಸೀತಾರಾಮನನ್ನು ತಬ್ಬಿಕೊಂಡು ಜೋರಾಗಿ ಬಿಕ್ಕಳಿಸಿ ಅಳುವನು)

ಸೀತಾರಾಮ : ಶಂಕರ, ಸಮಾಧಾನ ಮಾಡ್ಕೊಳೋ, ಕಂಟ್ರೋಲ್ ಯುವರ್ ಸೆಲ್ಫ್.

(ದುಃಖತಪ್ತನಾಗಿದ್ದ ಶಂಕರನನ್ನು ಅವನ ಆಪ್ತ ಗೆಳೆಯನಾದ ಸೀತಾರಾಮ ಸಮಾಧಾನಿಸಲು ಪ್ರಯತ್ನಿಸುತ್ತಾನೆ. ಅಜ್ಜಿಯ ಚಿತ್ರಿಕೆಯೊಂದು ನಿಧಾನವಾಗಿ ನೀರಿನಲ್ಲಿ ಕಲಸಿಹೋಗುತ್ತದೆ)

# ದೃಶ್ಯ–79

***ಹಗಲು–ನದಿ ದಡ ಮತ್ತು ಸೇತುವೆ***

| | | |
|---|---|---|
| | | (ಚಪ್ಪಲಿಗಳನ್ನು ಕೈಯಲ್ಲಿ ಹಿಡಿದುಕೊಂಡು ನದಿ ದಾಟಬೇಕೆಂದಿದ್ದ ಶಾನುಭೋಗ ಸೇತುವೆ ಕಡೆ ನೋಡಿ, ಯಾರೂ ಇಲ್ಲದ್ದನ್ನ ಗಮನಿಸಿ ಸೇತುವೆಯ ಮೇಲೆ ಜೋರಾಗಿ ನಡೆದು ಬರುತ್ತಿರುವಾಗ ಎಳಚಿತ್ತಾಯರು ಎದುರಾಗುತ್ತಾರೆ. ಇಬ್ಬರೂ ಪರಸ್ಪರ ದಿಗ್ಭ್ರಮೆಗೊಳ್ಳುತ್ತಾರೆ) |
| ಎಳಚಿ | : | ನಮಸ್ಕಾರ ಶಾನುಭೋಗರೆ, ಎಂತ ವಿಶೇಷ |
| ಶಾನುಭೋಗ | : | (ತೊದಲುತ್ತ) ಯಾಕೆ, ಏನಾಯ್ತು? |
| ಎಳಚಿ | : | ಏನಿಲ್ಲ, ಸೇತುವೆ ಮೇಲೆ ನಡೀತಿದ್ದಿರಲ್ಲಾಂತ |
| ಶಾನುಭೋಗ | : | ಯಾಕೆ ನಡಿಬಾರ್ದೋ |
| ಎಳಚಿ | : | ಹಾಗ್ ಹೇಳುದ್ನೆ, ಶಂಕ್ರ ಕಟ್ಟಿರೋ ಸೇತ್ವೆ ಮೇಲೆ ಕಾಲೆ ಇಡಲ್ಲ ಅಂತ ಶಪಥ ಮಾಡಿದ್ರಲ್ಲ, ಸೇತ್ವೆ ಇದ್ರು ಹೊಳೆಲೇ ನಡ್ಕೊಂಡ್ ಹೋಗ್ತಿದ್ರಲ್ಲ, ಈಗ್ ಯಾಕ್ ಇದ್ರಮೇಲ್ ಬಂದ್ರಿ ಅಂತ ಕೇಳ್ದೆ ಅಷ್ಟೆ. |



| | | |
|---|---|---|
| ಶಾನುಭೋಗ | : | ಹೆ.. ಹೆ.. ಹೆ.. ಏನಿಲ್ಲ, ಇವತ್ತು ಹೊಳೆಲೇ ಹೊರ್ಟಿದ್ದೆ. ಅವ್ನು ಕಟ್ಟಿದ ಸೇತುವೆ ಗಟ್ಟಿ ಉಂಟೋ ಇಲ್ಲವೋ ಅಂತ ಪರೀಕ್ಷೆ ಮಾಡಲು ಬಂದೆ ಅಷ್ಟೆ (ಎಂದು ಕಾಲಿನಲ್ಲಿ ಒಂದಷ್ಟು ಸಲ ತುಳಿದು) .. ಸ್ವಲ್ಪ ಲೂಸ್ ಉಂಟು ಹ್ವಾ |
| ಎಳಚಿ | : | ಹೌದು ಸ್ವಲ್ಪ ಲೂಸ್ ಉಂಟು (ಎಂದು ವ್ಯಂಗ್ಯವಾಗಿ ನಗುತ್ತಾರೆ) |

| | | |
|---|---|---|
| ಶಾನುಭೋಗ | : | ನಗುವಂತ್ತದ್ ಏನಾಯ್ತೀಗ? ಗೊತ್ತುಂಟು ಗೊತ್ತುಂಟು, ನೀವೆಲ್ಲ ಅವನದೇ ಪಾರ್ಟಿ<br>(ಎಳಚಿ ಹೌದು ಎಂದು ತಲೆ ಆಡಿಸುತ್ತಾರೆ)<br>.. ತಮ್ಮ ಆಕಾಶದಲ್ಲಿ ವಿಮಾನ ಬಿಡ್ತಾನೆ, ಇವ ಇಲ್ಲಿ ರೈಲು ಬಿಡ್ತಾನೆ, ರೈಲು ಹತ್ಲಿಕ್ಕೆ ನೀವೆಲ್ಲ ಕೆಳಗಡೆ ಕೂತಿದ್ದೀರಲ್ಲ ಹೋಗಿ ಹೋಗಿ ಅವ್ನೆತ್ಕೊಂಡ್ ಕುಣಿರಿ ಹೋಗಿ |
| ಎಳಚಿ | : | ಶಾನುಭೋಗರೆ |
| ಶಾನುಭೋಗ | : | ಏನು? |
| ಎಳಚಿ | : | ಇದು ಸೇತುವೆ ಹೊಳೆಯಲ್ಲ. ಇದು (ಚಪ್ಪಲಿಗೆ) ಇಲ್ಲಿ ಬೇಡ. ಹಾಕಿಕೊಂಡೆ ನಡೀಬಹುದಲ್ಲ.<br>(ಅವನನ್ನು ಗೇಲಿಮಾಡುತ್ತಾನೆ) |
| ಶಾನುಭೋಗ | : | (ಅವಮಾನಿತನಂತಾಗಿ)<br>.. ಗೊತ್ತುಂಟಯ್ಯ, ನಿನ್ನ ಉಪದೇಶ ನನಗೆ ಬೇಡ<br>(ಎಂದು ಹೇಳುತ್ತ ಕೈಯಲ್ಲಿ ಹಿಡಿದಿದ್ದ ಚಪ್ಪಲಿಗಳನ್ನು ಕಾಲಿಗೆ ಹಾಕಿಕೊಂಡು ಅವಮಾನಿತನಾಗಿ ಹೋಗುವನು. ಎಳಚಿತ್ತಾಯರು ನಗತೊಡಗುತ್ತಾರೆ) |

# ದೃಶ್ಯ–80

***ಹಗಲು–ಶಂಕರನ ಮನೆಯ ಹೊರಗೆ***

| | | |
|---|---|---|
| | | (ಹೊರಗಿನಿಂದ ಬಂದ ಶಂಕರ, ಸೀತಾರಾಮನಿಗೆ) |
| ಶಂಕರ | : | ಏನ್ ಸೀತು, ತಿಂಡಿ ಆಯ್ತು? |
| ಸೀತಾರಾಮ | : | ಓ ಭರ್ಜರಿ ಆಯ್ತಪ್ಪ |
| ಪಾಟೀಲ್ | : | ಅಂತೂ ಶಂಕ್ರ, ನಿನ್ ಖಾಯಂ ಅಡ್ರೆಸ್ ನೀನಾ ಮಾಡ್ಕೊಂಡಿ ಬಿಡು. |
| ಸೀತಾರಾಮ್ | : | ಆಯ್ತೋ, ನಾವ್ ಹೊರ್ಡ್ತೀವಿ |
| ಶಂಕರ | : | ಯಾಕ್ರೋ ಇನ್ನು ಎರೆಡ್ ದಿವ್ಸ ಇದ್ಬಿಟ್ ಹೋಗ್ಬೋದಾಗಿತ್ತಲ್ಲ |
| ಸೀತಾರಾಮ | : | ಸರಿ, ರಜಾ ಹಾಕ್ ಕೂತ್ರೆ ಹೇಗೋ. ಕಷ್ಟಪಟ್ ಸಿಕ್ಕಿರೋ ಕೆಲ್ಸಾನು ಕಳ್ಕೋಬೇಕಾಗುತ್ತೆ ಅಷ್ಟೆ |
| ಶ್ರೀಮತಿ | : | ಬನ್ನಿ ನಿಮ್ಗೂ ತಿಂಡಿ ಕೊಡ್ತೇನೆ |
| ಶಂಕರ | : | ತಿಂಡಿ ಬೇಡ, ನೀನಿನ್ನು ಮನೆಗ್ ಹೋಗಿಲ್ವ?<br>(ಶ್ರೀಮತಿ ಇಲ್ಲ ಎಂದು ಸೂಚಿಸುವಳು)<br>.. ಮೊದ್ಲು ಕಾಫಿ ಕೊಟ್ಟು ಮನೆಗ್ ಹೋಗು. ಇಲ್ಲಾಂದ್ರೆ ಶ್ಯಾನ್ಭೋಗ್ರು ಎಗ್ರಿ ಬೀಳ್ತಾರೆ. ಹ್ಞಾ ಸೀತು.. |
| ಸೀತಾರಾಮ | : | ಹೇಳಪ್ಪ |
| ಶಂಕರ | : | ನಿನ್ನಿಂದ ಒಂದ್ ಸಹಾಯ ಆಗ್ಬೇಕಿತ್ತು. ಈ ಹೊಲಕ್ಕೆ ಎಷ್ಟೇ ಬೇಲಿ ಹಾಕುದ್ರು ಈ ಕಾಡು ಪ್ರಾಣಿಗಳು ನುಗ್ಗೋದ್ ತಪ್ಪೋದಿಲ್ಲ |
| ಸೀತಾರಾಮ | : | ಅಂದ್ರೆ ಹೊಲ ಕಾಯ್ಕೊಂಡಿರು ಅಂತಿಯ? |
| ಶಂಕರ | : | ಹೇಯ್ ಸುಮ್ನೆ ಕೇಳೋ. ಆ ಬೇಲಿಗೆ ಸಣ್ಣಗೆ ವಿದ್ಯುತ್ ಹಾಯಿಸ್ಬೇಕು ಅಂತ.. |
| ಸೀತಾರಾಮ | : | ಇಲ್ಲೆಲ್ಲೋ ಕರೆಂಟ್ ಸಿಗತ್ತೇ |
| ಶಂಕರ | : | ಅದೇ ಕಣೋ ಅಲ್ಲಿ ಅಭೀ ಜಲಪಾತ ಅಂತ ಇದಿಯಲ್ಲ |
| ಸೀತಾರಾಮ | : | ಅಭೀ ಜಲಪಾತ ಅಲ್ಲ.. ಅಬ್ಬೀ ಜಲಪಾತ. |
| ಶಂಕರ | : | ಅದೇ ಈ ಮಳೆಗಾಲ್ದಲ್ಲಿ ಅಲ್ಲೊಂದ್ ಮೈಕ್ರೋ ಹೈಡಲ್ ಜನ್ರೇಟರ್ ಹಾಕ್ಸಣಾಂತ ಅದಿಕ್ ನೀನ್ ಪರ್ಮಿಶನ್ ಕೊಡ್ಸ್ಬೇಕು |
| ಸೀತಾರಾಮ | : | ವಾವ್ ಶಂಕರ್ ಯುವರ್ ಎ ಜೀನಿಯೆಸ್ |
| ಪಾಟೀಲ್ | : | ಸೀತಾರಾಮ, ಹೋಗೋಣೆನ್ಲೇ, ಯಾವ್ ಬಸ್ |

| | | |
|---|---|---|
| | | ಸಿಗ್ತದೋ ಗೊತ್ತಿಲ್ಲ |
| ಶಂಕರ | : | ಹಮ್ ಇನ್ ನೀವು ಹೊರ್ಟ್ಬಿಟ್ರೆ ಈ ಮನೆ ಒಮ್ಮೆಲೆ ಬಣ ಬಣ ಅನ್ಸುತ್ತೆ |
| ಪಾಟೀಲ | : | ಅಲ್ಲೋ ಶಂಕ್ರ. ಎಷ್ಟ್ ದಿನಾಂತ ಹಿಂಗೆ ಇರ್ತಿ. ಹಳೇದ್ನೆಲ್ಲ ಮರ್ತು ಲಗೂನ ಒಂದ್ ಮದ್ವೆ ಆಗು |
| ಶಂಕರ | : | ಸರಿ ಹೋಯ್ತು ಬಿಡು ಈ ಬೆದರು ಬೊಂಬೆನ ಯಾರ್ ಮದ್ವೆಯಾಗ್ತಾರೆ ಹೇಳು<br>(ಶ್ರೀಮತಿ ಅಜ್ಜಿಯ ಫೋಟೋ ನೋಡಿ ಶಂಕರನ ಮಾತುಗಳತ್ತ ಗಮನವಿಡುತ್ತಾಳೆ) |
| ಸೀತಾರಾಮ | : | (ಶ್ರೀಮತಿಯನ್ನು ನೋಡಿ)<br>.. ಐಡಿಯಾ, ಇಲ್ಲೇ ಇದೆ ಒಂದ್ ಸುಂದರವಾದ್ ಗೊಂಬೆ. ಏಯ್ ಕಂಕ್ಕಲ್ ಕೂಸಿಟ್ಕೊಂಡು ಊರೆಲ್ಲ ಸುತ್ತುದ್ರಂತೆ. ಆದ್ರೆ ನೀನು ಕಂಕ್ಕಲ್ ಹೆಂಡ್ತಿನೆ ಇಟ್ಕೊಂಡಿದಿಯ |
| ಶಂಕರ | : | ಏಯ್ ಏಯ್ ಏನ್ ಮಾತಾಡ್ತಿದಿಯೋ |
| ಸೀತಾರಾಮ | : | ಶ್ರೀಮಾನ್, ಶ್ರೀಮತಿನ ಎದ್ರುಗೆ ಇಟ್ಕೊಂಡ್ ಇಷ್ಟೆಲ್ಲ ಆಟ ಆಡ್ತಿದಿಯ. ಶಾನುಭೋಗರ ಮಗಳು ರತ್ನಾದಂತ ಹುಡುಗಿ ಶಾನುಭೋಗರ ಮಗಳು ರತ್ನಾದಂತ..<br>(ಹಾಡುವುದನ್ನು ತಡೆದು ನಿಲ್ಲಿಸಿ) |
| ಶಂಕರ | : | ಹೇಯ್ ಸೀತು ಮೆತ್ತಗ್ ಕಣೋ. ಸರಿ ನಡಿರಿ ಬಸ್ ಸ್ಟ್ಯಾಂಡ್ ವರ್ಗು ಡ್ರಾಪ್ ಮಾಡ್ತಿನಿ<br>(ಕಿಟಕಿಯಿಂದ ಇವರ ಮಾತುಗಳನ್ನು ಆಲಿಸುತ್ತಿರುವ ಶ್ರೀಮತಿ ಸೀತಾರಾಮನ ಮಾತು ಕೇಳಿ ನಾಚುತ್ತಾಳೆ.. ಕನಸಿನ ಹಾಡು ಶುರುವಾಗುತ್ತದೆ) |

# ದೃಶ್ಯ–81

***ಹಾಡು: ಶುಭಯೋಗ ಕೂಡಿ ಬಂತಮ್ಮ***
***ಸಾಹಿತ್ಯ: ವಿ. ಮನೋಹರ್***
***ಹಾಡಿದವರು: ರಾಜೇಶ್ ಕೃಷ್ಣನ್ ಮತ್ತು ನಂದಿತಾ***

ಶುಭಯೋಗ ಕೂಡಿ ಬಂತಮ್ಮ
ಶುಭವೇಳೆ ಮೂಡಿ ಬಂತಮ್ಮ
ನನ್ನಾಸೆ ಜಂ ಅಂತ ನೆರವೇರಿತು
ಕಂಕಣಬಲ ಸರಸರಸರನೆ ಸರಿಹೋಯಿತು
ಇನ್ನೇನು ಬೇಡ ನಂಗೆ ಸಾಕು ಸಾಕು ಜನ್ಮ ಸಾರ್ಥಕ
ಶುಭಯೋಗ ಕೂಡಿ ಬಂತಮ್ಮ
ಶುಭವೇಳೆ ಮೂಡಿ ಬಂತಮ್ಮ

**(ಶಂಕರ ಮದುಮಗನ ದಿರಿಸಿನಲ್ಲಿದ್ದಾನೆ. ಶಾನುಭೋಗರೇ ಮುಂದೆ ನಿಂತು ಸಾಂಪ್ರದಾಯಿಕವಾಗಿ ಮದುವೆಯನ್ನು ನಡೆಸಿಕೊಡುತ್ತಿದ್ದಾರೆ. ಶ್ರೀಮತಿಗೆ ಅತೀವ ಸಂತಸ)**

ಕಲಶ ಕನ್ನಡಿ ತಂದ ಮುಂಜಾನೆ ಸೂರ್ಯನು
ಮುಗಿಲೆ ಅಂತರಪಟ
ಕುಣಿಯುತ ನವಿಲು ಬಾಸಿಂಗ ನೀಡಿತು
ಜೊತೆಗೆ ಮಣಿಮುಕುಟ
ಹಸಿರೆಲೆ ನೀರೆ ಹಸೆಮಣೆ ತೋರೆ
ಧುಮುಕುವ ಧಾರೆ ಎರೆಯಿತು ಧಾರೆ
ಮದುವೆಯ ಬಂಧಕ್ಕೀಗ ಬೆಳ್ಳಿಮೋಡ
ಚಂದ ಹೂಮಳೆ
ಶುಭಯೋಗ ಕೂಡಿ ಬಂತಮ್ಮ
ಶುಭವೇಳೆ ಮೂಡಿ ಬಂತಮ್ಮ

ಅಂತಿಂತ ಗಂಡನಲ್ಲ.. ಧೀರನಲ್ಲ.. ಶೂರನಲ್ಲ..
ಮಲ್ಲರ ಮಲ್ಲ ನಲ್ಲನೂ..
ಕಣ್ಣಲ್ಲಿ ಕಣ್ಣನಿಟ್ಟು ಕಾಯುವವನು
ನೋಟದಲ್ಲೆ ನಲ್ಲೆಯ ಮನಸು ಬಲ್ಲನು..

**(ಪ್ರಥಮ ರಾತ್ರಿ ಸವಿಗನಸನ್ನು ನನಸಾಗಿಸಿಕೊಳ್ಳುತ್ತಾರೆ. ನಂತರದ ದಾಂಪತ್ಯದಲ್ಲಿ ಒಬ್ಬರಿಗೊಬ್ಬರು ಆಸರೆಯಾಗಿ ನಿಲ್ಲುತ್ತಾರೆ.)**

ಸುಂದರ ಬದುಕಿನ ಚಿತ್ತಾರವೆಲ್ಲವೂ
ನಿನಗೆ ಉಡುಗೊರೆಯೂ
ಇಚ್ಚೆಯನರಿತ ಸಂಗಾತಿಯಾದೆ
ನನಗದುವೆ ವರವೂ
ಎಣಿಸದೆ ಸಿಗುವ ಪ್ರೀತಿಯೆ ಸೊಗಸು
ಜೀವನ ವನವೆ ಚಿಗುರಿದ ಕನಸು
ಮನಸ್ಸಿನ ತೋಟದಲ್ಲಿ ಹಾಡಿತೀಗ ಜೀವ ಕೋಗಿಲೆ

ಕನಸೀಗೆ ಬಂತು ಆಕಾರ
ಅಭಿಲಾಷೆಯಾಯ್ತು ಸಾಕಾರ
ಒಂದಾಯ್ತು ಆಹಾ ಹೃದಯಾ ಹೃದಯಾ
ನೂರಾರು ಆಸೆ ಉದಯಾ ಉದಯಾ
ಘಮ ಘಮ ಕಂಪ ಹೀರಿ
ಜೀವ ದುಂಬಿ ತೇಲಿ ತೇಲಿತು

ಕನಸೀಗೆ ಬಂತು ಆಕಾರ
ಅಭಿಲಾಷೆಯಾಯ್ತು ಸಾಕಾರ



(ಹಾಡಿನ ಕೊನೆಯಲ್ಲಿ ಶಂಕರ ಆಯ ತಪ್ಪಿ ನೀರಿನಲ್ಲಿ ಬೀಳುವಂತಾಗುತ್ತಾನೆ. ಶ್ರೀಮತಿ ಅವನನ್ನು ಹಿಡಿಯಲು ಕೈಚಾಚುತ್ತಾಳೆ. ಕನಸಿನಿಂದ ಹೊರಬರುತ್ತಾಳೆ. ಶಾನುಭೋಗ ಶ್ರೀಮತಿಯನ್ನು ಕೂಗುತ್ತಾನೆ. ಅಲ್ಲಿಂದ ಹೊರಡುತ್ತಾಳೆ)

# ದೃಶ್ಯ–82

***ಹಗಲು–ಅಬ್ಬೀ ಜಲಪಾತ***

| | | |
|---|---|---|
| | | (ಅಬ್ಬೀ ಜಲಪಾತದಲ್ಲಿ ಶಂಕರ ವಿದ್ಯುತ್ ಉತ್ಪಾದನೆಯ ಉದ್ದೇಶದಿಂದ ಜನರೇಟರ್‌ನ್ನು ಜೋಡಿಸುವ ಕೆಲಸದಲ್ಲಿ ನಿರತನಾಗಿದ್ದಾನೆ. ತನ್ನ ಕೆಲಸಗಾರರಿಗೆ ಕೆಲಸಗಳನ್ನು ಜಲಪಾತದ ಶಬ್ದವನ್ನೂ ಮೀರಿಸುವಂತೆ ಕೂಗಿ ಹೇಳುತ್ತಿದ್ದಾನೆ) |
| ಶಂಕರ | : | ಕೃಷ್ಣ, ಸರಿಯಾಗ್ ಜೋಡ್ಸು. ಹೋದ್ ಮಳೆಗಾಲ್ದಲ್ಲೆ ಮಾಡ್ಬೇಕಿತ್ತು. ಸುಮ್ನೆ ಟೈಮ್ ಹಾಳ್ಮಾಡುದ್ವಿ. ಈ ಸಲ ಟೆಸ್ಟ್ ಸಕ್ಸ್‌ಸ್‌ಫುಲ್ ಆಗ್ಲೇಬೇಕು.<br>(ನಂತರ)<br>.. ಮುತ್ತಯ್ಯ ಇದ್ನ ಕನೆಕ್ಷನ್ ಕೊಡ್ತಿದ್ದಂಗೇನೆ ಬುರ್ಡೆಲ್ ಲೈಟ್ ಬರುತ್ತೆ |
| ಮುತ್ತಯ್ಯ | : | (ತನ್ನ ಬುರುಡೆಯನ್ನು ತೋರಿಸುತ್ತ) ..ಈ ಬುರ್ಡೆಲಾ?! |
| ಶಂಕರ | : | ಹ್ಞಾಂ ಈ ಬುರಡೇಲು ಬರುತ್ತೆ. ಅದಕ್ಕಿಂತ ಮುಂಚೆ ಆ ಗಾಜಿನ್ ಬುರುಡೇಲ್ ಬರುತ್ತೆ.<br>(ಮುತ್ತಯ್ಯ ಸ್ವಿಚ್ ಬೋರ್ಡನ್ನು ನಮಸ್ಕರಿಸಿ ಸ್ವಿಚ್ ಹಾಕಿದಾಗ ಬೆಳಕು ಬರದಿದ್ದನ್ನು ಕಂಡು) |
| ಮುತ್ತಯ್ಯ | : | ಇಲ್ಲ |
| ಶಂಕರ | : | (ಕೆಲಸಗಾರನಿಗೆ) ಸ್ವಲ್ಪ ಅದನ್ನ ಟೈಟ್ ಮಾಡಿ<br>(ನಂತರ ಮುತ್ತಯ್ಯನಿಗೆ) ..ಬಂತಾ?<br>(ಬೆಳಕು ಬಂದದ್ದನ್ನು ಕಂಡು ಮುತ್ತಯ್ಯ ಖುಷಿಯಾಗಿ) |
| ಮುತ್ತಯ್ಯ | : | ಬಂತು<br>(ದೂರದಲ್ಲಿ ಶಂಕರ್ ಎಂದು ಎರೆಡು ಧ್ವನಿಗಳು ಕೂಗುವ ಧ್ವನಿ ಕೇಳಿಸಿ ಯಾರೆಂದು ನೋಡಿದಾಗ ಶ್ರೀಮತಿ ಎಂಬುದನ್ನು ಗಮನಿಸಿ ಸುಮ್ಮನಾಗುತ್ತಾನೆ. ಮತ್ತೊಮ್ಮೆ ಕೂಗಿದಾಗ ಅಲ್ಲಿ ವರೂ ಬರುತ್ತಿರುವುದನ್ನು ಕಂಡು ಆಶ್ಚರ್ಯಚಕಿತನಾಗಿ ನೋಡುತ್ತಾನೆ. ಹತ್ತಿರ ಬಂದ ವರಲಕ್ಷ್ಮಿಯನ್ನ ಅಪ್ಪಿ ಸಂತೈಸುತ್ತಾನೆ. ಇದನ್ನು ಕಂಡ ಶ್ರೀಮತಿ ಸಿಡಿಮಿಡಿಗೊಳ್ಳುತ್ತಾಳೆ.) |
| ವರೂ | : | ಐ ಯಾಮ್ ಸೋ ಹ್ಯಾಪಿ ಟು ಸೀಯೂ |

| | | |
|---|---|---|
| ಶಂಕರ | : | ಮೈ ಗಾಡ್<br>(ಇದನ್ನೆಲ್ಲ ಶ್ರೀಮತಿ ನೋಡುತ್ತಿರುತ್ತಾಳೆ) |
| ಶಂಕರ | : | ಏನ್ ಇದ್ದಕ್ಕಿದ್ದ ಹಾಗೆ? ಐ ಕಾಂಟ್ ಬಿಲೀವ್ ದಿಸ್ |
| ವರೂ | : | ನೋಡ್ಬೇಕು ಅನ್ಸ್ತು ಫಟಾಫಟ್ ಬಂದ್ಬಿಟ್ಟೆ. ಈವನ್ ಐ ಕಾಂಟ್ ಬಿಲೀವ್ ದಿಸ್. ಏನಿದು ನಿನ್ ಅವತಾರ |
| ಶಂಕರ | : | ನನ್ಗೇ ಗೊತ್ತಿಲ್ಲ ವರೂ. ಹಾಗೆ ಬದ್ಲಾಗೋಯ್ತು. ಸೋ ನೈಸ್ ಐಯಾಮ್ ಸೀಯಿಂಗ್ ಯೂ |
| ವರೂ | : | ಏ ಹಚ್ಸ್ಕೊ ಹಚ್ಸ್ಕೊ ಇನ್ನೂ ಎರೆಡ್ ಹೋಳೀದು ಬಾಕಿ ಇದೆ. |
| ಶಂಕರ | : | (ಶ್ರೀಮತಿಯನ್ನು ನೋಡಿ)<br>ಶ್ರೀಮತಿ, ನಾನ್ಹೇಳ್ತಿದ್ನಲ್ಲ ವರೂ..<br>(ಶ್ರೀಮತಿ ನಗುತ್ತಾಳೆ, ಮುತ್ತಯ್ಯ ಇದೆಲ್ಲವನ್ನು ಕುತೂಹಲದಿಂದ ನೋಡುತ್ತಿರುತ್ತಾನೆ)<br>(ವರೂಗೆ) .. ಬಾ ಮನೆಗ್ ಹೋಗಣ |
| ವರೂ | : | ಓಕೆ.<br>(ವರೂ ಜೊತೆ ಶಂಕರ ಅಷ್ಟು ಸಲಿಗೆಯಿಂದ ಇದ್ದದ್ದನ್ನು ನೋಡಿದ ಮುತ್ತಯ್ಯ ಕಸಿವಿಸಿಗೊಳ್ಳುತ್ತಾನೆ.) |

# ದೃಶ್ಯ–83

***ಹಗಲು–ಶಂಕರನ ಮನೆಯ ಒಳಗೆ***

(ಮನೆಯಲ್ಲಿ ಶಂಕರನ ಚಲನವಲನಗಳನ್ನು, ವರಲಕ್ಷ್ಮಿಯ ಆತ್ಮೀಯತೆಯನ್ನು ಸೂಕ್ಷ್ಮವಾಗಿ ಗಮನಿಸುವ ಶ್ರೀಮತಿ ಅವರಿಬ್ಬರನ್ನು ಬೇರ್ಪಡಿಸುವ ಬಗ್ಗೆ ಚಿಂತಿಸತೊಡಗುತ್ತಾಳೆ)

ವರೂ : ಶ್ರೀಮತಿ..
(ಎಂದು ಸುಮ್ಮನೆ ಆಕೆಯನ್ನ ಕರೆಯುತ್ತಾಳೆ)
.. ಶಂಕರ್ ಮನೆ ತುಂಬ ಚೆನಾಗಿದೆ.

ಶಂಕರ : ಥ್ಯಾಂಕ್ಯೂ

ವರೂ : ಕ್ಯೂಟ್ ಕಿಚನ್

ಶಂಕರ : ಬನ್ನೀ ಡಾಕ್ಟ್ರೇ

ವರೂ : ಶಂಕರ್ ನೋ

ಶಂಕರ : ಓಕೆ. ಏನ್ ಚಾಯ್ ಬೇಕು. ಮಸಾಲ ಚಾಯ್ ಬೇಕ? ಆರ್ಡಿನರಿ ಚಾಯ್ ಬೇಕ?

ವರೂ : ನಿನ್ ಕೈಯಿಂದ ಏನ್ ಕೊಟ್ರು ಚೆನ್ನಾಗಿರುತ್ತೆ. ನಿನ್ನ ಈ ವೇಷ್ದಲ್ ನೋಡೋಕೆ ಮಜಾ ಬರ್ತಾಯಿದೆ

ಶಂಕರ : ಹ್ಯಾವ್ ಫನ್
(ಶ್ರೀಮತಿಗೆ ಅವರಿಬ್ಬರೂ ಜೊತೆಯಲ್ಲಿರುವುದನ್ನ ನೋಡಲಾಗದೆ ವರೂ ಬ್ಯಾಗ್ ತಂದು ವರೂಗೆ)

ಶ್ರೀಮತಿ : ವರಲಕ್ಷ್ಮೀಯವ್ರೆ ಹಂಡಿಲಿ ಬಿಸಿ ಬಿಸಿ ನೀರಿದೆ ಮಿಂದೇ ಬಿಡಿ.

ವರೂ : ನ ನ ನ ಮೊದ್ಲು ಚಾಯ್ ಆಮೇಲ್ ಸ್ನಾನ

ಶಂಕರ : ವರೂ ನಿಂಗೆ ಹಂಡೆ ನೀರಿನ್ ಸ್ನಾನದ್ ಮಜಾ ಗೊತ್ತಿಲ್ಲ ನಾಲಕ್ ಜನ್ಮಕ್ಕಾಗಷ್ಟು ಸ್ನಾನ ಮಾಡ್ಬಹುದು. ಅಷ್ಟು ಬಿಸ್ನೀರಿರುತ್ತೆ.

ವರೂ : ಓ ನಾಲ್ಕು ಜನ್ಮದ್ ಅಗ್ರಿಮೆಂಟಾ
(ಶ್ರೀಮತಿ ಮಧ್ಯ ಪ್ರವೇಶಿಸಿ)

ಶ್ರೀಮತಿ : ನಾನ್ ಚಾ ಮಾಡ್ತೇನೆ. ವರಲಕ್ಷ್ಮೀಯವ್ರೆ ನೀವ್ ಆರಾಮ್ ತಗೋಳಿ
(ವರೂ ಹಿಂದೆ ಸರಿಯುತ್ತಾಳೆ)
.. ಫಟಾಫಟ್

ಶಂಕರ : ಬಾ..

| | | |
|---|---|---|
| | | (ಎಂದು ವರೂ ಹೆಗಲಮೇಲೆ ಕೈ ಹಾಕಿಕೊಂಡು ಹೊರಗಡೆ ಕರೆತರುತ್ತಾನೆ) |
| | | .. ವರೂ ನನ್ಕೈಲಿ ಇನ್ನೂ ನಂಬೋಕಾಗ್ತಿಲ್ಲ. ಐ ಕಾಂಟ್ ಬಿಲೀವ್ ದಿಸ್ |
| | | (ಲಗೇಜ್ ನೋಡಿ).. ಅರೆ ಲಗೇಜು |
| | | (ಒಳಗೆ ಇಡಲು ಹೋಗುತ್ತಾನೆ) |
| ವರೂ | : | ನಿಂಗೊಂದ್ ಸರ್ಪ್ರೈಸ್ ಹೇಳ್ಬೇಕು ಅಂತಿದ್ದೆ ಆಮೇಲ್ ಹೇಳ್ತಿನಿ. ಈಗ್ ನೀನ್ಹೇಳು |
| ಶಂಕರ | : | ಆ ಬನಾರಸ್ ಚಾಚಾ ಹೇಳೀದ್ ಅಂತರ್ನಾದ ನನ್ನ ಎಲ್ಲಿಗ್ ಕರ್ಕೊಂಡ್ ಬಂದಿಬಿಡ್ತು ನೋಡಿದ್ಯ |
| | | (ಶ್ರೀಮತಿ ಮತ್ತೆ ಲಗ್ಗೇಜನ್ನು ತಂದು ಹೊರಗಿಡುತ್ತಾಳೆ) |
| | | .. ನೋಡ್ತಿದ್ದಾಗೆ ಕಣ್ಮುಂದೆನೆ ಮನೆ, ಸೇತುವೆ, ಗದ್ದೆ ಎಲ್ಲ ಆಗ್ಹೋಯ್ತು. |
| ವರೂ | : | ಯು ಆರ್ ಎ ಜೀನಿಯೆಸ್ |
| ಶಂಕರ | : | ಜೀನಿಯಸ್ ಕೀ ಬಚ್ಚೀ ಇದರ ಮೂಲ ಸ್ಫೂರ್ತಿ ಯಾರು ಅಂತ ಗೊತ್ತ? |
| | | (ವರೂ ಯೋಚಿಸುತ್ತಿರುವಾಗ ಶ್ರೀಮತಿ ಮಧ್ಯ ಪ್ರವೇಶಿಸಿ) |
| ಶ್ರೀಮತಿ | : | ನನಿಗ್ ಗೊತ್ತು ನಾನ್ಹೇಳ್ತಿನ್ ನೋಡಿ ಆ ಮೂಲ ಸ್ಫೂರ್ತಿ ನಮ್ಮಜ್ಜಿ |
| | | (ವರೂ ಶಂಕರ ಇಬ್ಬರೂ ಹ್ಹೂ ಎಂದು ಕೊಳ್ಳುತ್ತಾರೆ) |
| | | .. ತಗೊಳಿ (ಚಹಾ ಕೊಟ್ಟು) ಅವರ್ದೇ ಹಂಬಲ ಇದೆಲ್ಲ. ಇಲ್ಲೆ ಜೀವ ಬಿಟ್ಟಿದ್ದು ಅವ್ರು. ಅಷ್ಟೇ ಅಲ್ಲ ಸಾಯೋಕ್ ಮುಂಚೆ ಎಲ್ಲೂ ಹೋಗ್ಬಾರ್ದು ಇಲ್ಲೇ ಇದ್ದು ಕೆಲ್ಸ ಮುಂದ್ವರ್ಸ್ಬೇಕು ಅಂತ ಮಾತ್ಕೂಡ ತಗೊಂಡಿದಾಳೆ (ಎಂದು ತನ್ನ ಕೈಗೆ ಕೈ ಜೋಡಿಸಿ ಶಂಕರನ ಮುಂದೆ ಹಿಡಿಯುತ್ತಾಳೆ) |
| ವರೂ | : | ಹೌದಾ |
| ಶ್ರೀಮತಿ | : | ಬನ್ನಿ ಬನ್ನಿ (ಅವಳನ್ನು ಕರೆದೂಯ್ಯುತ್ತ) |
| | | .. ನೀವ್ ಬೇಗ್ ಬೇಗ ಚಹಾ ಕುಡೀರಿ ಇಲ್ಲಾಂದ್ರೆ ಕೆನೆ ಕಟ್ಬಿಡುತ್ತೆ. |
| | | (ನಂತರ ಶಂಕರನಿಗೆ) |
| | | .. ಇಲ್ನೋಡಿ ನೀವೊಂದ್ನಿಮ್ಷ ಬನ್ನಿ |
| ಶಂಕರ | : | ಏನು? |
| ಶ್ರೀಮತಿ | : | ಮುದ್ರಾಡಿ ಪಂಡಿತ್ರ ಮನೇಲಿ ಕರೆಂಟ್ ವೈರ್ ಬಂದ್ |

| | | |
|---|---|---|
| | | ಬಿದ್ದಿದ್ಯಂತೆ ಆಳುಗಳಿಗ್ ಹೇಳೀ ತರುಸ್ಕೊಳಿ. ಹ್ಹಾ ಅನ್ನ ಇದೆ ಹುರುಳಿ ಕಟ್ಟಿನ್ ಸಾರು ಕುದಿಸಿಟ್ಟು ಹೋಗ್ತೇನೆ<br>(ಶಂಕರ ಅವಳನ್ನು ತಡೆದು) |
| ಶಂಕರ | : | ಶ್ರೀಮತಿ.. ಶ್ರೀಮತಿ..<br>ಇವತ್ತೇನ್ ಶಾಲೆಗ್ ರಜಾನ ಇಲ್ಲಾ ಶ್ಯಾನ್ಭೋಗ್ರು ಮನೇಲ್ ಇಲ್ವಾ? |
| ಶ್ರೀಮತಿ | : | ಹೋಗ್ತೇನಪ್ಪಾ ಹೋಗ್ತೇನೆ. ಗೊತ್ತು ನಿಮಗೆ ತುಂಬ ಮಾತಾಡ್ಲಿಕ್ ಉಂಟು. ಹೋಗ್ತೇನೆ. ಆದ್ರೆ ಮನೆ ಕಿಟ್ಕಿ ಬಾಗ್ಲು ತೆರ್ದಿಟ್ಕೊಂಡೆ ಚರ್ಚೆಮಾಡಿ ಆಯ್ತ?<br>(ಕಿಟಕಿ ತೆರೆಯುವಳು)<br>.. ವರಲಕ್ಷ್ಮೀಯವ್ರೆ ನಿಮ್ ಬಟ್ಟೆಗಳ್ನ ತೊಳಿಯೋಕ್ ಹೋಗ್ಬೇಡಿ. ಸಂಜೆ ನಾನೆ ನದಿ ಹತ್ರ ಹೋಗಿ ಎಲ್ಲ ತೊಳ್ಕೊಡ್ತೇನೆ. ಮೊದ್ಲೇ ನಿಮ್ ಬಚ್ಚಲ ಬಾಗಿಲಿಗೆ ಚಿಲ್ಕ ಇಲ್ಲ.<br>(ವರೂ ಆಶ್ಚರ್ಯಗೊಳ್ಳುವಳು)<br>.. ವರೂ, ವಾವ್, ಲವ್ಲಿ ಅಂತ ಆಕಡೆ ಹೋಗ್ಬಿಡ್ಬೇಡಿ ಮತ್ತೆ. ನಾನ್ ಶಾಲೆಗ್ ಹೋಗ್ಬರ್ತೇನೆ. ಏನಾದ್ರು ಬೇಕಾದ್ರೆ ಪೀಪಿ ಊದಿ.<br>(ಎಂದು ಹೊರಡುವಳು. ವರೂ ಮತ್ತು ಶಂಕರ ಇಬ್ಬರೂ ನಗುತ್ತಾರೆ) |
| ವರೂ | : | ಸೋ ಸ್ವೀಟ್<br>(ಎಂದು ಶ್ರೀಮತಿಯ ಮುಗ್ಧತೆಯನ್ನು ಪ್ರಶಂಸಿಸುವ ವರಲಕ್ಷ್ಮಿಗೆ ಈ ಪರಿಸರ ಮತ್ತು ಜನ ಅಪ್ಯಾಯಮಾನವಾದರೆ ಶಂಕರನಿಗೆ ವರೂಳ ಆತ್ಮೀಯ ಆಗಮನವೇ ಒಂದು ಹೊಸ ಆಸೆಯೊಂದನ್ನು ಚಿಗುರಿಸುತ್ತದೆ) |

## ದೃಶ್ಯ–84

***ಹಗಲು–ಬಂಗಾಡಿಯ ಹೊರಭಾಗ***

| | | |
|---|---|---|
| | | (ಬಂಗಾಡಿಯ ಕಾಡುಮೇಡುಗಳನ್ನು ಎತ್ತರದ ಪ್ರದೇಶವೊಂದರಿಂದ ಬೈನಾಕುಲರ್ ಮೂಲಕ ವೀಕ್ಷಿಸುತ್ತಿರುವ ವರಲಕ್ಷ್ಮಿಗೆ ಪ್ರಕೃತಿ ಸೌಂದರ್ಯ ಅಪ್ರತಿಮವಾಗಿ ಕಾಣಿಸುತ್ತದೆ) |
| ವರೂ | : | ವಾವ್ ವಂಡರ್‌ಫುಲ್, ಎಷ್ಟು ಚೆನಾಗಿದೆ |
| ಶಂಕರ | : | ವರೂ.. ನಿಸರ್ಗದಲ್ಲಿ ಎವೆರಿಥಿಂಗ್ ಇಸ್ ಕನೆಕ್ಟೆಡ್. ನವಿಲು ಗರಿ ಬಿಚ್ತೂ ಅಂದ್ರೆ ಇನ್ನೇನ್ ಮಳೆ ಬರುತ್ತೆ ಅಂತ. ಎಲ್ಲ ಒಂದಕ್ಕೊಂದ್ ಹೊಂದ್ಕೊಂಡಿದೆ. ಯಾವ್ದು ಆಕಸ್ಮಿಕ ಅನ್ಸಾ್ತಯಿಲ್ಲ. |
| ವರೂ | : | ಹಾಗಾದ್ರೆ ನಾನ್ ಬಂದಿದ್ ಆಕಸ್ಮಿಕಾನ? |
| ಶಂಕರ | : | ಆಕಸ್ಮಿಕ ಅಲ್ಲ ತಾಯಿ ಅಫಘಾತ |
| ವರೂ | : | ಬದ್ಮಾಶ್ (ಎಂದು ಹೊಡೆಯಲು ಹೋಗುತ್ತಾಳೆ) .. ಶಂಕರ್ ಈ ನಿನ್ನ ಅಜ್ಞಾತವಾಸ್ದಲ್ಲಿ ಒಂದು ಸಲನಾದ್ರು ನನ್ ನೆನಪಾಗ್ಲಿಲ್ವ ನಿನಗೆ? |



| | | |
|---|---|---|
| ಶಂಕರ | : | ಇಲ್ಲ ಆಗ್ಲಿಲ್ಲ. ನನ್ ಪತ್ರಕ್ ನೀನ್ ಉತ್ರ ಬರೀದೆ ಹೋದ್ರು ಮಕ್ಳ ಥರಾ ನಿನಗ ಪತ್ರ ಬರೀತಾ ಇದ್ನಲ್ಲ ಆಗ್ ನಿನ್ ನೆನಪಾಗ್ಲಿಲ್ಲ. ಹೋಗೆ ಹೋಗೆ ನೆನ್ಪಂತೆ ನೆನ್ಪು. ಕೆಲ್ಸ ಬಿಟ್ರೆ ನನಗಿದ್ದದ್ ಅದೊಂದೆ. (ವರೂ ಭಾವುಕಳಾಗಿ ಶಂಕರನನ್ನು ತಬ್ಬಿಕೊಳ್ಳುವಳು) .. ವರೂ ಅದೇನೊ ಸರ್‌ಪ್ರೈಸ್ ಅಂದ್ಯಲ್ಲ ಏನದು? |

| | | |
|---|---|---|
| ವರೂ | : | ಶಂಕರ್. ನಾನು ಇಲ್ಲೀ<br>(ಏನನ್ನೋ ಹೇಳುವಷ್ಟರಲ್ಲಿ ಯಾರೋ ಶಂಕರನನ್ನು ಕರೆದಂತಾಗುತ್ತದೆ) |
| ಆಳು | : | ಶಂಕ್ರಣ್ಣಾ.. ಶಂಕ್ರಣ್ಣಾ.. |
| ಶಂಕರ | : | ಏನೂ..? |
| ಆಳಿನ ಹೆಂಡತಿ | : | ಒಂದ್ವಾರದಿಂದ ಹೊಟ್ಟೇ ನೋವು, ಚಳಿ ಜ್ವರ<br>(ದುಃಖಿಸುತ್ತಾಳೆ) |
| ಆಳು | : | ಕೈಕಾಲೆಲ್ಲ ಬಿದ್ದಹೋಗಿದೆ |
| ಶಂಕರ | : | ಒಂದ್ ವಾರದಿಂದ ಸುಮ್ನೆ ಕೂತಿದೀರಲ್ಲ ಎಷ್ಟಸಲ ಹೇಳಿದಿನಿ ಜ್ವರ ಬಂದ ತಕ್ಷಣ ಬಂದ್ ಕ್ವಿನೈನ್ ತಗೊಂಡೋಗಿ ಅಂತ. ಸರಿ ಸರಿ ನಡೀರಿ ಕೊಡ್ತಿನಿ.<br>(ಅವರೊಡನೆ ಹೋಗುತ್ತಾನೆ. ಬಂದ ದಿನದಿಂದ ತನ್ನ ಮನದ ಅನಿಸಿಕೆಯೊಂದನ್ನ ತಿಳಿಸಿ ತನ್ನ ಬದುಕಿನ ಭವಿಷ್ಯವನ್ನು ಸ್ಥಿರಮಾಡಿಕೊಳ್ಳಬೇಕೆಂಬ ವರಲಕ್ಷ್ಮಿಯ ಪ್ರಯತ್ನಗಳಿಗೆ ವಿಧಿ ತನ್ನ ಅಡ್ಡಗಾಲನ್ನು ಹಾಕುತ್ತಲೇ ಇರುತ್ತದೆ. ಇದರಿಂದ ವರಲಕ್ಷ್ಮಿ ಚಿಂತಿತಳಾಗುತ್ತಾಳೆ.) |

# ದೃಶ್ಯ–85

***ಹಗಲು–ಶಂಕರನ ಮನೆಯ ಒಳಗೆ***

| | | |
|---|---|---|
| | | (ಶಂಕರ ಮನೆಯಲ್ಲಿ ಔಷಧಿಗಾಗಿ ಹುಡುಕುತ್ತಿರುತ್ತಾನೆ. ಔಷಧಿ ತರುವಷ್ಟರಲ್ಲಿ ವರೂ ಆಕೆಗೆ ಚಿಕಿತ್ಸೆ ನೀಡಿರುತ್ತಾಳೆ ಅದನ್ನು ನೋಡುವ ಶಂಕರ ತನ್ನ ಆಶಯದ ವರಲಕ್ಷ್ಮಿ ಇವಳೇ ಅಲ್ಲವೇ ಮತ್ತು ಅವಳ ಕೆಲಸ ಹೀಗೇ ಹಳ್ಳಿಯವರಿಗೆ ಉಪಯೋಗವಾಗಬೇಕಲ್ಲವೇ ಎಂಬ ಆಲೋಚನೆಯಲ್ಲಿ ಅವಳನ್ನೇ ನೋಡುತ್ತ ನಿಲ್ಲುತ್ತಾನೆ) |
| ಆಳು | : | ಮುದ್ರಾಡಿ ಪಂಡಿತ್ರತ್ತ ಹೋಗ್ತಾಯಿದ್ವಿ. ದಾರಿಲೆ ಹೆದ್ರಿಕೆ ಆಯ್ತು. ಅದಿಕ್ಕೆ ಇಲ್ಲಿಗ್ ಬಂದ್ವಿ ಡಾಕ್ಟ್ರೆ. |
| ಹೆಂಡತಿ | : | ಪುಟ್ಟಿ ಬೇಗ ಹುಷಾರಾಗ್ತಾಳಲ್ವ? |
| ವರೂ | : | ಹೆದ್ರುಬೇಡಮ್ಮ. ಏನು ಆಗಲ್ಲ. ಜ್ವರ ಇಳಿದ್ಮೇಲೆ ಸರಿ ಹೋಗ್ತಾಳೆ. ಆಮೇಲೆ ಈ ಮಾತ್ರೆ ಬೆಳೆಗ್ಗೆ ಸಂಜೆ ಕೊಡಿ ಆಯ್ತ. ಗಂಜಿ ಕುಡ್ಸಿ |
| ಹೆಂಡತಿ | : | ನಿಮ್ಮನ್ನ ದೇವ್ರು ಚೆನ್ನಾಗ್ ಇಟ್ಟಿರ್ಲಮ್ಮ, ಶಂಕ್ರಣ್ಣ ನಿಮ್ಮಿಂದ ತುಂಬ ಉಪ್ಕಾರ ಆಯ್ತು ಬರ್ತೇವೆ. |
| | | (ಹೊರಡುತ್ತಾರೆ. ಶಂಕರ ಮತ್ತು ವರೂ ಅವರ ಮನಃಸ್ಥಿತಿಗಳು ಏಕೀಭವಿಸುವಂತೆ ಭಾಸವಾಗುತ್ತದೆ. ತಮ್ಮ ಮನಸ್ಸಿನ ಇಚ್ಛೆಯಂತೆ ಒಬ್ಬರಲ್ಲೊಬ್ಬರು ಆಕರ್ಷಿತರಾಗುತ್ತಾರೆ ಹಾಗೂ ಆಯಸ್ಕಾಂತಗಳಂತೆ ಹತ್ತಿರವಾಗುತ್ತಾರೆ ಅಷ್ಟರಲ್ಲಿ ಅಲ್ಲಿಗೆ ಬಂದ ಶ್ರೀಮತಿ ಅವರ ಏಕಾಂತವನ್ನು ಭಂಗಗೊಳಿಸುತ್ತಾಳೆ) |
| ಶಂಕರ | : | ಹಾ.. |
| | | (ವರು ಮತ್ತು ಶಂಕರ ಹತ್ತಿರವಾಗುತ್ತಾರೆ. ಅಷ್ಟರಲ್ಲಿ ಪೀಪಿ ಊದುತ್ತಾ ಶ್ರೀಮತಿ ಬರುತ್ತಾಳೆ) |
| ಶ್ರೀಮತಿ | : | ಸುತ್ತಾಡಿ ಬಂದ್ರ ಎಲ್ಲ? |
| ವರೂ | : | ಹೂ.. |
| ಶ್ರೀಮತಿ | : | ಇಲ್ಲಿ ಕಾರು ಇಲ್ಲ ಗೀರು ಇಲ್ಲ. ಬರೀ ಕಾಲು. ಹೇಗಿದೆ ಬಂಗಾಡಿ ? |
| | | (ವರೂ ಚೆನಾಗಿದೆ ಎಂಬ ಸೂಚನೆ ಕೊಡುತ್ತಾಳೆ) |
| | | .. ಸುಸ್ತಾಗಿರ್ಬೇಕಲ್ಲ. |
| ವರೂ | : | ಉಹೂಂ.. |
| ಶ್ರೀಮತಿ | : | ಎರೆಡೇ ದಿನ ತಾನೆ ಅಡ್ಜಸ್ಟ್ ಮಾಡ್ಕೊಳಿ. |

(ಶಂಕರನಿಗೆ ಊಟದ ಡಬ್ಬಿ ತೋರಿಸಿ)
.. ಊಟ..
(ಒಳಗೆ ಹೋಗುತ್ತಾಳೆ)

ಶಂಕರ : ಥ್ಯಾಂಕ್ಸ್ ಫುಡ್ (ವರೂಗೆ ಹೇಳಿ ಒಳಹೋಗುತ್ತಾಳೆ. ಶ್ರೀಮತಿಯ ಮಾತು ಮತ್ತು ನಡವಳಿಕೆಗಳಿಂದ ಶಂಕರ ಮತ್ತು ವರಲಕ್ಷ್ಮಿ ಗೊಂದಲಗೊಂಡರೂ ವಿಶೇಷವಾಗಿ ವರಲಕ್ಷ್ಮಿ ವಿಚಲಿತಳಾಗಿ ನಿಲ್ಲುತ್ತಾಳೆ)

# ದೃಶ್ಯ–86

***ಹಗಲು–ಶಂಕರನ ಮನೆಯ ಒಳಗೆ***

| | | |
|---|---|---|
| ಶಂಕರ | : | (ಒಂದು ಪುಸ್ತಕವನ್ನು ವರೂಗೆ ತೋರಿಸುತ್ತ) ಇದು ಸಾವಯವ ಕೃಷಿ |
| ಶ್ರೀಮತಿ | : | ಹಮ್ ನಡೀರಿ ಹೋಗೋಣ |
| ವರೂ | : | ಎಲ್ಲಿಗೆ? |
| ಶ್ರೀಮತಿ | : | ಎಲ್ಲಗೆ ಅಂದ್ರೆ ನಮ್ಮನೆಗೆ |
| ಶಂಕರ | : | ಹೇ ಶ್ರೀಮತಿ ಅವ್ಳ್ ನನ್ ಗೆಸ್ಟು. ಎರೆಡ್ ವರ್ಷದ್ ಹರ್ಟೇನ ಬಡ್ಡೀ ಸಮೇತ ತೀರ್‍ಸ್ಕೋಬೇಕು. ಇಲ್ಲೇ ಇರ್‍ತಾಳೆ |
| ಶ್ರೀಮತಿ | : | ಹಮ್ ನೀವು ಸರಿ ಗೆಸ್ಟೂ ಇಲ್ಲ ಗೂಸ್ಟೂ ಇಲ್ಲ. ಊರಿನ್ ಜನ್ರ ಕಣ್ಣಿಗ್ ಬಿದ್ರೆ ಮುಗ್ದೇ ಹೋಯ್ತು. ಅದೆಲ್ಲ ನಿಮ್ ದಿಲ್ಲೀಲ್ ನಡೀಬಹುದು ಇಲ್ಲಲ್ಲ. ಇಲ್ಲ್ ಹಗ್ಲಲ್ ಬರ್‍ಲಿಕ್ಕೇ ಹೆದರ್‍ತೇನೆ ನಾನು. ನೀವೊಬ್ರೆ ರಾತ್ರಿ ಇಲ್ಲರೋದ. ಬಿಡ್ತೂ ಅನ್ನಿ |
| ವರೂ | : | ಶಂಕರ್ ಹತ್ರ ಏನೇಲ್ಲ ಮಾತಾಡೋದಿದೆ |
| ಶ್ರೀಮತಿ | : | ನಾಳೆ ಬೆಳೆಗ್ಗೆ ಬಂದು ಸಂಜೆ ತನ್ಕ ಮಾತಾಡಿ ಯಾರ್ ಬೇಡ ಅಂತಾರೆ? ರಾತ್ರಿ ಮಾತ್ರ (ಬೇಡ ಎಂದು ಸೂಚಿಸುತ್ತಾಳೆ) |
| ವರೂ | : | ಶಂಕರ್ ಇಟ್ಸ್ ಸೋ ಸಿಲ್ಲಿ |
| ಶಂಕರ | : | ಇಲ್ಲ ವರೂ ಶ್ರೀಮತಿ ಹೇಳಿದ್ದು ಸರಿಯಾಗೆ ಇದೆ. ನೀ ಅವ್ಳೊಜ್ತೆಲೆ ಹೋಗು |
| ಶ್ರೀಮತಿ | : | ಹ್ಞಾ ನಿಮ್ಗಾಗಿ ಬೆಳದಿಂಗಳ ಊಟ ನಮ್ಮನೇಲಿ. ಆಮೇಲೆ ಅಲ್ಲೆ ಹಾಯಾಗಿ ನಕ್ಷತ್ರಗಳ್ನ ನೋಡ್ತ ಮಲ್ಗ್‌ಬಹುದು. |
| ಶಂಕರ | : | ಗ್ರೇಟ್ ಐಡಿಯ, ನೀನ್ ನಿಜಕ್ಕು ಎಂಜಾಯ್ ಮಾಡ್ತೀಯ. ಆದ್ರೆ ಬೀ ಕೇರ್‌ಫುಲ್ ಹೇಳಿ ಕೇಳಿ ಶ್ರೀಮತಿ ಶ್ಯಾನ್ಭೋಗ್ರ ಮಗ್ಳು ಹಾಲ್ನಂಥ ಬೆಳದಿಂಗ್ಳು ಅಂತ ಗಂಜಿಗೇ ಬೆಳದಿಂಗ್ಳು ಬೆರ್‍ಸ್ಕೊಟ್ಬಿಟಾಳು. |
| ಶ್ರೀಮತಿ | : | ನೋಡಿ ನೋಡಿ ಎಷ್ಟು ಹೊಟ್ಟೆ ಕಿಚ್ಚು. (ವರೂಗೆ) ..ನೀವ್ ಬನ್ನಿ, ಬರ್‍ತೇವೆ |
| ಶಂಕರ | : | ಆಯ್ತು |
| ವರೂ | : | ಬೈ ಶಂಕರ್ |
| ಶಂಕರ | : | ಬೈ (ಶಂಕರ, ಶ್ರೀಮತಿ ಮತ್ತು ವರೂ ಹೋಗುವುದನ್ನೇ |

ನೋಡುತ್ತ ನಿಲ್ಲುತ್ತಾನೆ. ಶ್ರೀಮತಿ ಹೇಳಿದ ಸಮಸ್ಯೆಯ ಉತ್ತರವಾಗಿ ವರಲಕ್ಷ್ಮಿಯನ್ನು ಶಾನುಭೋಗರ ಮನೆಗೆ ಕಳುಹಿಸಿದ ಮೇಲೆ ಶಂಕರ ನಿರಾಳವಾಗುತ್ತಾನೆ)

**ನಿರ್ದೇಶಕರ ಟಿಪ್ಪಣಿ:**

**ಅಜ್ಜಿಯ ಸಾವಿನ ನಂತರ ಅಳುಬಾರದೆ ಕುಳಿತಿದ್ದ/ಅಳಬಾರದು ಎಂದು ಕುಳಿತಿದ್ದ ಶಂಕರನ ಮನಸ್ಸು ಸೀತಾರಾಮನನ್ನು ಕಂಡಕೂಡಲೇ ಬಿಕ್ಕಿ ಬಿಕ್ಕಿ ಅಳುತ್ತದೆ. ಸೀತಾರಾಮ ಕೆಲದಿನಗಳು ಅಲ್ಲಿ ಉಳಿಯುವ ಯೋಚನೆಯಲ್ಲಿ ಬಂದು ಅವನನ್ನು ಸಾಂತ್ವನಿಸುತ್ತಿದ್ದಾನೆ. ಅತ್ತ ಸೇತುವಯನ್ನು ಶಂಕರ ಕಟ್ಟಿದ್ದು ಎಂಬ ಒಂದೇ ಕಾರಣದಿಂದ ಅದರ ಮೇಲೆ ನಡೆಯದೇ ಇದ್ದ ಶಾನುಭೋಗ ಒಮ್ಮೆ ಅದರ ಮೇಲೆ ನಡೆದುಹೋಗುವಾಗ ಎಳಚಿತ್ತಾಯರ ಕೈಗೆ ಸಿಕ್ಕಿಬೀಳುತ್ತಾನೆ. ಜೀವನ ಮುಂದುವರೆಯುತ್ತದೆ ಅಜ್ಜಿಯ ಸಾವಿನ ನಂತರ. ಸೀತಾರಾಮ ಮತ್ತು ಪಾಟೀಲ ಇಬ್ಬರು ಹೊರಟುನಿಂತಾಗ ಶಂಕರನ ಬಾಳಲ್ಲಿ ಮತ್ತೆ ತಾನು ಒಂಟಿ ಭಾವ ವ್ಯಕ್ತವಾಗುತ್ತದೆ. ಆದರೆ ಸೀತಾರಾಮನ ಮಾತುಗಳು ಶ್ರೀಮತಿಯಲ್ಲಿ ಚೆಂದದ ಬದುಕಿನ ಆಸೆಗಳನ್ನು ಮೂಡಿಸುತ್ತದೆ. ಶಾನುಭೋಗರ ಮಗಳನ್ನು ಮದುವೆಯಾಗಬಹುದು ಎನ್ನುವಂತಹ ಸೂಕ್ಷ್ಮಗಳನ್ನು ಆತ ಕೊಡುವುದರಿಂದ ಶ್ರೀಮತಿ ಅವನ ನೆನಪಿಗೆ, ಅವನ ಜೊತೆ ತನ್ನ ಬಾಳನ್ನು ಹೇಗೆ ಕಳೆಯಬಹುದು ಏನಾಗಬಹುದು ಎಂಬ ಮುಂದಾಲೋಚನೆಯೊಂದಿಗೆ ಒಂದು ಹಾಡು ಶ್ರೀಮತಿಯ ಮುಖಾಂತರ ಅನಾವರಣಗೊಳ್ಳುತ್ತದೆ. ಈ ಹಾಡಿನಲ್ಲಿಯೂ ಕೂಡ ಸಾಂಪ್ರದಾಯಿಕವಾದಂತಹ ವಸ್ತುಗಳನ್ನು ಮತ್ತು ಸಂಪ್ರದಾಯಬದ್ಧವಾದ ಆಚರಣೆಗಳ ಜೊತೆಯಲ್ಲೆ ಮದುವೆ ಮಂಟಪ ನಂತರದ ಬದುಕು ಇವುಗಳನ್ನು ಪಡಿಮೂಡಿಸಲಾಗಿದೆ. ಆದರೆ ಇವಿಷ್ಟು ಅವಳ ಕನಸು ಎಂಬುದು ಪ್ರೇಕ್ಷಕನಿಗೆ ಕೊನೆಯ ಕ್ಷಣದಲ್ಲಿ ಅರಿವಾಗುತ್ತದೆ. ದೃಶ್ಯ 82 ಮೊಟ್ಟಮೊದಲ ಬಾರಿಗೆ ವಿದ್ಯುತ್‌ಶಕ್ತಿಯನ್ನು ಜನರೇಟರ್ ಮುಖಾಂತರ ಉತ್ಪಾದಿಸುವ ಕೆಲಸವನ್ನು ಶಂಕರ ಮತ್ತು ಆತನ ಸಂಗಡಿಗರು ಮಾಡುತ್ತಾರೆ. ಶಂಕರನ ಉತ್ಸಾಹ ಹೊಸ ಹೊಸದನ್ನು ಹಳ್ಳಿಯಲ್ಲಿ ಉತ್ಪಾದಿಸುತ್ತ ಅದರ ಮುಖಾಂತರ ಅಲ್ಲಿಯ ಸಂಪನ್ಮೂಲಗಳನ್ನು ಬಳಸಿಕೊಳ್ಳುತ್ತ ವ್ಯವಸಾಯಮಾಡುವುದು ಈ ದಿಸೆಯಲ್ಲಿ ಆತ ತನ್ನ ವಿದ್ಯುತ್‌ಶಕ್ತಿಯ ಪರೀಕ್ಷೆಮಾಡುತ್ತಿರಬೇಕಾದರೆ ಅಲ್ಲಿಗೆ ಬರುವ ವರಲಕ್ಷ್ಮಿ ಹಾಗೂ ಶ್ರೀಮತಿಯನ್ನು ಕಂಡು ಗೊಂದಲಕ್ಕೊಳಗಾಗುತ್ತಾನೆ. ನಂತರ ಚೇತರಿಸಿಕೊಂಡು ವರಲಕ್ಷ್ಮಿಯೊಡನೆ ಬಹಳ ಆತ್ಮೀಯವಾಗಿ ಬೆರೆಯುತ್ತಾನೆ. ಇದನ್ನು ನೋಡುವ ಶ್ರೀಮತಿ ನಿಧಾನವಾಗಿ ಅವರಿಬ್ಬರ ಮಧ್ಯೆ ಬಹಳ ಚಾಕಚಕ್ಯತೆಯಿಂದ ಅವರಿಬ್ಬರು ಹತ್ತಿರವಾಗುವ ಯಾವುದೇ ಸನ್ನಿವೇಶಕ್ಕೆ ಜಾಗಕೊಡದ ಹಾಗೆ ಮನೆಯಲ್ಲಿ ಮತ್ತು ತನಗೆ ಸಿಕ್ಕ ಅವಕಾಶಗಳಲ್ಲಿ ಅದನ್ನು ಸಾಧಿಸುತ್ತಾಳೆ. ವರಲಕ್ಷ್ಮಿ ಏನನ್ನೋ ಹೇಳಬೇಕೆನ್ನುವಷ್ಟರಲ್ಲೇ ಒಂದಲ್ಲ ಒಂದು ಅಡಚಣೆ ಅವಳಿಗೆ ಎದುರಾಗುತ್ತಾ ಹೋಗುತ್ತದೆ. ಚಳಿಜ್ವರ ಹಿಡಿದ ಮಗುವಿನೊಂದಿಗೆ ಬರುವ ಹಳ್ಳಿಗರಿಗೆ ಮಲೇರಿಯಾಗೆ ಔಷಧಿಕೊಡುತ್ತೇನೆಂದು**

ಕರೆತರುವ ಶಂಕರನ ಎದುರಿನಲ್ಲೇ ಡಾ. ವರಲಕ್ಷ್ಮಿ ಆ ಮಗುವಿಗೆ ಚಿಕಿತ್ಸೆ ನೀಡುವುದು ಮತ್ತು ಧೈರ್ಯನೀಡುವುದನ್ನು ಕಂಡು ಸಂತಸಪಡುತ್ತಾನೆ. ವರಲಕ್ಷ್ಮಿ ಅಂದುರಾತ್ರಿ ಶಂಕರನ ಮನೆಯಲ್ಲಿ ಮಲಗಬಾರದು, ಮತ್ತು ಹಳ್ಳಿಯ ಪರಿಸರದಲ್ಲಿ ಹೇಗಿರಬೇಕು ಎಂಬುದನ್ನು ವಿವರಿಸುತ್ತಲೇ ಶ್ರೀಮತಿ ಅವಳನ್ನು ಶಂಕರನಿಂದ ದೂರಮಾಡಿ ತನ್ನ ಮನೆಗೆ ಕರೆದೊಯ್ಯುತ್ತಾಳೆ. ಇಡೀ ದೃಶ್ಯಗಳಲ್ಲಿ ಈ ಮೂರೂ ಪಾತ್ರಗಳು ತಮ್ಮ ಮನದೊಳಗಿನ ಮಾತುಗಳನ್ನಾಡದೆ ಪರಿಸರಕ್ಕೆ ಹೊಂದುಕೊಳ್ಳುವ ಮಾತುಗಳ ಮುಖಾಂತರವೇ ಮಾತನಾಡುತ್ತಿದ್ದರು ಪ್ರೇಕ್ಷಕನಿಗೆ ಅವರ ಒಳಗಿನ ಮಾತುಗಳೂ ಕೂಡ ಸ್ಪಷ್ಟವಾಗಿ ಗೋಚರಿಸುತ್ತಾ ಹೋಗುವುದು ಈ ದೃಶ್ಯಗಳ ಕಲ್ಪನೆಯಲ್ಲಿ ಬಹಳ ಮುಖ್ಯವಾಗಿ ಎದ್ದುಕಾಣುತ್ತದೆ.

# ದೃಶ್ಯ–87

***ರಾತ್ರಿ–ಶಾನುಭೋಗರ ಮನೆಯ ಒಳಗೆ***

| | | |
|---|---|---|
| | | (ರಾತ್ರಿ ಶ್ರೀಮತಿಯ ಮನೆಯಲ್ಲಿ ತಂಗಿರುವ ವರೂ. ಊಟವನ್ನು ಮುಗಿಸಿ ಇನ್ನೇನು ಮಲಗುವ ಸಮಯದಲ್ಲಿ ಶ್ರೀಮತಿ ಅವಳನ್ನು ಮಾತಿಗೆಳೆಯುತ್ತಾಳೆ) |
| ಶ್ರೀಮತಿ | : | ತೀರ್ಕೊಂಡೋರೆಲ್ಲ ನಕ್ಷತ್ರಗಳಾಗ್ತಾರೆ ಅನ್ನೋ ಕಲ್ಪನೆ ಎಷ್ಟು ಚೆಂದ ಅಲ್ಲಾ? ಅವ್ರೆಲ್ಲ ನಮ್ಮನ್ನೇ ಕಣ್ಣಿಟ್ಟು ನೋಡ್ತಿದಾರೆ ಅನ್ಸ್ತದೆ. ಅದ್ರಲ್ಲಿ ಅಜ್ಜೀನು ಇದಾಳಲ್ಲ. ಅವಳ್ ಕಣ್ಣು ಯಾವ್ದಿರ್ಬೋದು ಅಂತ ಯೋಚಿಸ್ತೇನೆ. ಬನ್ನಿ ಮಲ್ಕಳೋಣ. ಅಜ್ಜಿ ಯಾವಾಗ್ಲು ಹೇಳೋಳು ನಮ್ಮ ನಮ್ಮ ಆತ್ಮಸಾಕ್ಷಿ ಹೇಳಿದ್ಹಾಗೆ ನಾವು ನಡ್ಕೊಂಡ್ರೇನೆ ನಿಜವಾದ ನೆಮ್ಮದೀಂತ. |
| ವರೂ | : | ಅಲ್ವ, ಅದಿಕ್ಕೆ ಶ್ರೀಮತಿ. ನನ್ನ ಜೀವನದ ಒಂದ್ ಮುಖ್ಯವಾದ ನಿರ್ಧಾರ ಇಲ್ಲ್ ತಗೋಳಣಾಂತ ಬಂದಿದ್ದೀನಿ. ಆದ್ರೆ ಶಂಕರ್ ಮನ್ಸ್ನಲ್ ಈಗೇನಿದ್ಯೋ ನನಿಗ್ ಗೊತಾಗ್ತಾ ಇಲ್ಲ. |
| ಶ್ರೀಮತಿ | : | ಅವರಿಗೆ ತುಂಬಾ ಅಭಿಮಾನ ನಿಮ್ ಬಗ್ಗೆ. ನಿಮ್ಮ ಹೆಸರೆತ್ತಿದ್ರೇ ಸಾಕು ಅವ್ರ ಕಣ್ಣಲ್ಲಿ ಮಿಂಚು.<br>(ವರೂ ನಗುತ್ತಾಳೆ)<br>.. ನಿಮ್ಮನ್ನ ವರೀ ಅಂತ ಚುಡಾಯಿಸ್ತಾರಂತೆ<br>(ವರೂ ಹೌದು ಎನ್ನುವಂತೆ ಸೂಚಿಸುತ್ತಾಳೆ)<br>.. ನಿಮ್ಮ ರೀತಿ, ನೀತಿ, ಸ್ವತಂತ್ರ ಮನೋಭಾವ ಎಲ್ಲ, ಎಲ್ಲ ಅವರಿಗಿಷ್ಟ. ಅವರು ದಿಲ್ಲಿಯಿಂದ ಹೊರಟ ದಿನ ಸ್ಟೇಷನ್ಗೆ ಬರ್ಲೇ ಇಲ್ವಂತೆ ನೀವು. ಆಗ್ ಬಂದಿದ್ರೆ ಎಲ್ಲ ಸರಿ ಇರ್ತಿತ್ತೋ ಏನೋ.<br>(ಅಳುತ್ತ) .. ಈಗ್ಯಾಕ್ ಬಂದ್ರಿ ನೀವು?<br>(ವರೂ ದಿಗ್ಭ್ರಮೆಗೊಳ್ಳುತ್ತಾಳೆ)<br>.. ಇಲ್ಲಿಗ್ಯಾಕ್ ಬಂದ್ರಿ ನೀವು? ಇಲ್ಲಿಗ್ಯಾಕ್ ಬಂದ್ರಿ?<br>(ಕುಸಿದು ವರೂಳ ಕಾಲು ಹಿಡಿಯುತ್ತಾಳೆ. ವರೂ ಅವಳ ತಲೆ ನೇವರಿಸುತ್ತಾಳೆ) |
| ವರೂ | : | ಯಾಕೆ ಶ್ರೀಮತಿ, ಏಳು. ಏನಿದು ಶ್ರೀಮತಿ? ಏನಾಯ್ತು? |
| ಶ್ರೀಮತಿ | : | ನಿಮ್ಮ ಜಗತ್ತು ತುಂಬಾ ದೊಡ್ಡದಾಗಿದೆ. ತುಂಬ |

ಬುದ್ಧಿವಂತೆ ನೀವು. ದೇಶ ವಿದೇಶಗಳಲ್ಲಿ ಬೇಕಾದ್ದನ್ನ ಸಾಧಿಸಬಹುದು ನೀವು. ಆದ್ರೆ ನಾನು? ನಂಗೆ ಅವ್ರನ್ ಬಿಟ್ರೆ ಬೇರೆ ಏನೂ ಇಲ್ಲ. ಅವ್ರೆ ನನ್ ಜಗತ್ತು. ಅಜ್ಜಿ ಆಸೆನು ಇದೇ ಇತ್ತು. ಅವ್ರನ್ನು ಕಳ್ಕೊಂಡ್ ಬಿಟ್ರೆ ಕುರುಡಾಗ್ಬಿಡ್ತೇನೆ ನಾನು. ದಯವಿಟ್ಟು ದಯವಿಟ್ಟು
(ಕೈ ಮುಗಿದು).. ನನ್ನ ಕನಸನ್ನ ಒಡೀಬೇಡಿ
(ಅವಳಿಗೆ ಶಂಕರನಿಂದ ದೂರವಾಗುವಂತೆ ಹೇಳುತ್ತಾಳೆ. ವರೂ ಈ ಘಟನೆಯಿಂದ, ಅವಳ ಆಶಾಗೋಪುರವೇ ಕುಸಿದು ಬಿದ್ದಂತಾಗಿ ಅತೀವವಾಗಿ ದುಃಖಿತಳಾಗುತ್ತಾಳೆ ಹಾಗೂ ತನ್ನ ಭವಿಷ್ಯದ ಬಗ್ಗೆ ಗೊಂದಲಕ್ಕೊಳಗಾಗುತ್ತಾಳೆ)

**ನಿರ್ದೇಶಕರ ಟಿಪ್ಪಣಿ:**

**ಬೆಳದಿಂಗಳ ಬಿಸಿಲುಮಚ್ಚಿನಲ್ಲಿ ಮಾತನಾಡುತ್ತ ಕುಳಿತ ಶ್ರೀಮತಿ ಮತ್ತು ವರಲಕ್ಷ್ಮಿ, ನಿಧಾನವಾಗಿ ವರೂ ತನ್ನ ಮನದಾಳದ ಆಸೆಯನ್ನು ನೋವನ್ನ ಶ್ರೀಮತಿಗೆ ತೆರೆದಿಡುತ್ತಾಳೆ. ವರೂಗಿರುವ ಹಲವು ಸಾಧ್ಯತೆಗಳನ್ನು ತಿಳಿಸುತ್ತ ಶ್ರೀಮತಿ ತನ್ನ ಪುಟ್ಟ ಪ್ರಪಂಚದಲ್ಲಿ ಶಂಕರನೇ ಎಲ್ಲ ಎಂಬ ಮಾತನ್ನು ಮುಂದಿಟ್ಟು ವರೂಗೆ ಗೊಂದಲವನ್ನುಂಟು ಮಾಡುತ್ತಾಳೆ. ಶ್ರೀಮತಿಯ ಆ ಮಾತುಗಳು ವರೂಳನ್ನು ನಿಜವಾಗಿಯೂ ಯೋಚನೆಗೆ ಹಚ್ಚುತ್ತವೆ. ಈ ದೃಶ್ಯ ಈ ಎರಡೂ ಪಾತ್ರಗಳ ಪ್ರೀತಿಯ ಆಳವನ್ನು ಪರೀಕ್ಷಿಸುವ ದೃಶ್ಯ. ಬಹಳ ಮನೋಜ್ಞವಾಗಿ ಕೆಲವೇ ಸಂಭಾಷಣೆಗಳ ಮುಖಾಂತರ ಈ ದೃಶ್ಯವನ್ನು ಕಟ್ಟಿಕೊಡುವುದರಲ್ಲಿ ಸಂಭಾಷಣೆಕಾರ ಜಯಂತ ಕಾಯ್ಕಿಣಿ ತನ್ನ ಲೇಖನಿಯ ಮಹತ್ವವನ್ನು ಸಾರಿದ್ದಾರೆ.**

# ದೃಶ್ಯ–88

***ಹಗಲು–ಶಂಕರನ ಮನೆಯ ಹೊರಗೆ***

| | | |
|---|---|---|
| | | (ವರಲಕ್ಷ್ಮಿಯು ತತ್‌ಕ್ಷಣವೇ ದೆಹಲಿಗೆ ಹೊರಟು ನಿಂತದ್ದರ ನಿರ್ಧಾರದಿಂದ ಶಂಕರ ಅಸಮಧಾನಗೊಂಡಿದ್ದಾನೆ. ವರೂ ಮುತ್ಯನ ಆರೋಗ್ಯ ಪರೀಕ್ಷಿಸಿ ಅವನಿಗೆ ಬೇಕಾದ ಔಷಧಿಗಳನ್ನು ಸೂಚಿಸುತ್ತಿರುವಂತೆಯೇ ತನ್ನ ನಿರ್ಧಾರದ ಹಿಂದಿರುವ ಅಚಲ ಮನಃಸ್ಥಿಯನ್ನು ಕಾಪಾಡಿಕೊಳ್ಳುತ್ತಾಳೆ) |
| ಶಂಕರ | : | ನಿಂದು ತುಂಬ ಆಯ್ತು ವರೂ, ನಾಲಕ ದಿನ ಹಾಯಾಗ್ ಇದ್ದೋಗು ಅಂದ್ರೆ ಏನೋ ಮಹಾನ್ ಕೆಲ್ಸ ಜ್ಞಾಪಕಕ್ ಬಂದೋರ್ಥರ ಹೊರ್ಟಿದ್ಯಲ್ಲ |
| ಮುತ್ತಯ್ಯ | : | ಅರೆ, ಹೌದು ಮತ್ತೆ. ಕಾರ್ಕಳದ ಗೊಮ್ಮಟೇಶ್ವರನ್ನ ನೋಡ್ಲಿಲ್ಲ. ಯಕ್ಷಗಾನದ ಒಂದ್ ಆಟ ನೋಡ್ಲಿಲ್ಲ. ತಾಜಾ ಬೆಲ್ಲದ ರುಚಿಯನ್ನೂ ನೋಡ್ಲಿಲ್ಲ. ಎಂಥ ಹಟ ನಿಮ್ಮದು? |
| ವರೂ | : | ಈ ಹಟಾ ಎಲ್ಲ ಇವ್ನಿಂದ್ಲೇ ಕಲ್ತಿದ್ದು. ಡೆಲ್ಲಿಲಿ ಏನೆಲ್ಲ ಕೆಲ್ಸ ಇದೆ ಮುತ್ತಯ್ಯ ಅದೆಲ್ಲ ಹಾಗೆ ಬಿಟ್ಬಿಟ್ಟು ಶಂಕರ್‌ನ ಒಂದ್ಸಲ ಫಟಾಫಟಾ ನೋಡ್‌ಹೋಗಣಾಂತ ಬಂದಿದ್ದೆ |
| ಶಂಕರ | : | ನೋಡಾಯ್ತಲ್ಲ. ಇಷ್ಟ ಬೇಗ ಬೋರ್ ಆಗ್ಬಿಟ್ನ ನಿಂಗೆ |
| ವರೂ | : | ಶಂಕರ್. ಹಮ್ ಮುತ್ತಯ್ಯಂಗೆ ಟಾನಿಕ್<br>(ಚೀಟಿ ಕೊಡುತ್ತಾಳೆ)<br>.. ಅಂಡ್ ದ ಸರ್‌ಪ್ರೈಸ್ ಈಸ್ ನನ್ ಸೋಷಿಯಲ್ ಮೆಡಿಕಲ್ ಪ್ರಾಜೆಕ್ಟ್‌ನ ಡೆಲ್ಲಿ ಬೀದಿವಾಸಿಗಳ್ ಬಗ್ಗೆ ಮಾಡಣ ಅಂತ ಇದಿನಿ ಅದೊಂದು ದೊಡ್ಡ ಕೆಲ್ಸ. ನಿನ್ ಬ್ಲೆಸ್ಸಿಂಗ್ಸ್ ತಗೊಂಡ್ಹೋಗಣಾಂತ ಬಂದಿದ್ದೆ. ಶಂಕರ್ ವಿಷ್ ಮಿ ನಾ |
| ಶಂಕರ | : | ನನ್ ವಿಷಶ್ ಯಾವಾಗ್ಲು ಇರುತ್ತೆ ವರೂ. ನೀನ್ ಏನೇ ಮಾಡಿದ್ರು ಸರಿಯಾಗೆ ಮಾಡ್ತೀಯ. ನಾವ್ ಕೆಲ್ಸ ಮಾಡ್ತಿದ್ರೆ ಚಿಂತೆಗಳ್ ಸಮೀಪ ಬರೋಕೆ ಹೆದ್ರುತಾವೆ ಅಲ್ವಾ? |
| ವರೂ | : | ಹಮ್..<br>(ಶ್ರೀಮತಿ ಬಂದು ತಾನು ಬಂದಿರುವುದನ್ನು ಸದ್ದಿನ ಮೂಲಕ ತಿಳಿಸುತ್ತಾಳೆ. ವರೂ ಶ್ರೀಮತಿಯ ಹತ್ತಿರ |

ಬರುತ್ತಾಳೆ)

| | | |
|---|---|---|
| ಶ್ರೀಮತಿ | : | (ವರೂಗೆ) ..ತಗೋಳಿ ಜೇನು. ನಮ್ ಬಂಗಾಡಿಲ್ ಅರಳೋ ಎಲ್ಲಾ ಹೂಗಳ್ ಪ್ರೀತೀನು ಇದ್ರಲ್ ಉಂಟು |
| ವರೂ | : | ಸೋ ಸ್ವೀಟ್ |
| ಶ್ರೀಮತಿ | : | ಹೌದು ಸ್ವೀಟೆ (ವರೂ ನಗುತ್ತ) |
| ವರೂ | : | ನಾ ಬರ್ತೀನಿ<br>(ಎಂದು ಗಾಡಿಯನ್ನು ಹತ್ತುತ್ತಾಳೆ. ಶಂಕರ ಗಾಡಿಯನ್ನು ಮುಂದೆ ಚಲಿಸಬೇಕೆನ್ನುವಷ್ಟರಲ್ಲಿ ಮತ್ತೆ ಇಳಿದು)<br>.. ಒಂದ್ನಿಮ್ಷ ಶಂಕರ್<br>(ಶ್ರೀಮತಿ ಹತ್ತಿರ ಬಂದು)<br>.. ಶ್ರೀಮತಿ ಶ್ರೀಮತಿ..<br>(ಶಂಕರ ಕೊಟ್ಟಿದ್ದ ಉಂಗುರವನ್ನು ಅವಳಿಗೆ ಕೊಡುತ್ತ)<br>.. ವಿಸ್ಮಯದ ಉಂಗುರ ಇದು<br>.. (ಶ್ರೀಮತಿ ನಿರಾಕರಿಸುತ್ತಾಳೆ) |



.. ಕಮಾಲ್ ಕಿ ಅಂಗೂಟಿ ಇದು ನಿನ್ ಕೈಲೆ ಇರ್ಲಿ. ನಿನ್ನನ್ನ ನೋಡಿ ನಂಗೆ ಅಸೂಯೆ ಆಗ್ತಿದೆ.

| | | |
|---|---|---|
| ಶ್ರೀಮತಿ | : | ದೇವ್ರ್ ನಿಮ್ಗೆ ಒಳ್ಳೇದ್ ಮಾಡ್ಲಿ<br>(ವರೂ ಬರ್ತಿನಿ ಎಂದು ಸಂಜ್ಞೆಮಾಡಿ ಅಲ್ಲಿಂದ ಹೊರಡುತ್ತಾಳೆ. ಟಿಲ್ಲರ್ ಹತ್ತಿ ಶ್ರೀಮತಿಗೆ ಬೈ ಹೇಳುತ್ತಾಳೆ. ಶ್ರೀಮತಿಗೆ ವರಲಕ್ಷ್ಮಿಯ ಈ ತ್ಯಾಗ ಗುಣ ಕೃತಜ್ಞತಾಭಾವವನ್ನು ಮೂಡಿಸುತ್ತದೆ. ಕೈಯಲ್ಲಿ ಹಿಡಿದ ಉಂಗುರದ ಜೊತೆಯಲ್ಲಿಯೇ ಸಾಂಕೇತಿಕವಾಗಿ ಅಲ್ಲಿ ಒಣಹಾಕಿದ್ದ ವರಲಕ್ಷ್ಮಿಯ ಉಡುಗೆಗಳೂ ಕೂಡ ಶ್ರೀಮತಿಯ ಪಾಲಿಗೆ ಉಳಿದುಹೋಗುತ್ತವೆ.) |

# ದೃಶ್ಯ–89

*ಹಗಲು–ಸೇತುವೆ*

*(ಚಲನಚಿತ್ರದಲ್ಲಿ ಈ ಸಂಭಾಷಣೆಯನ್ನು ತಗೆದುಹಾಕಲಾಗಿದೆ)*

*ವರೂ : ನಿನ್ನನ್ನ ಒಂಟಿಯಾಗಿ ಬಿಟ್ ಹೋಗ್ತಿದೀನಿ ಅನ್ನಿಸ್ತಾ ಇಲ್ಲ ಶಂಕರ್. ನಿನ್ಜೊತೆ ಒಂದು ಬೆಚ್ಚಗಿನ ಪ್ರಪಂಚಾನೇ ಇಲ್ಲಿದೆ. ಶ್ರೀಮತಿ ಅಡೋರ್ಸ್ ಯೂ. ಮುಗ್ಧವಾದ ಮುದ್ದು ಅದು. ಅವಳನ್ನ ಚೆನ್ನಾಗಿ ನೋಡ್ಕೋ ಮತ್ತು ನಿನ್ನನ್ನೂ ಚೆನ್ನಾಗ್ ನೋಡ್ಕೊಳೋದ್ ಮರೀಬೇಡ. ಪ್ರತೀ ದಿನ ಶೇವ್ ಮಾಡು*

(ಸೇತುವೆಯನ್ನು ದಾಟಿನಿಂತ ಶಂಕರ ವರಲಕ್ಷ್ಮಿ ಬದುಕಿನ ತಮ್ಮ ಸೇತುವೆಯನ್ನು ಕಟ್ಟಲಾಗದೆ ತಮ್ಮ ಮನದೊಳಗಿನ ಮಾತುಗಳನ್ನು ಹೇಳಲಾಗದೆ ಅತೀವ ದುಃಖದಿಂದ ಒಬ್ಬರನ್ನೊಬ್ಬರು ಬೀಳ್ಕೊಡುತ್ತಾರೆ.)



ಶಂಕರ : ನಿಜ ಹೇಳು. ನೀನ್ ಬಂದಿದ್ಯಾಕೆ? ಏಕ್ದಮ್ ಹೋಗ್ತಾಯಿರೋದ್ಯಾಕೆ? ವಾಟ್ಸ್ ಹಾಪನಿಂಗ್ ಇನ್ ಯೂ. ವರೂ ನೀನ್ಜೊತೆ ಮೊದುಲ್ನೆ...
(ಏನನ್ನೋ ಹೇಳಲು ಬರುವ ಶಂಕರನನ್ನು ತಡೆದು)

ವರೂ : ಎವೆರಿಥಿಂಗ್ ಈಸ್ ಫೈನ್. ನೀನೆ ಹೇಳಿದ್ಯಲ್ಲ ಯಾವ್ದು ಆಕಸ್ಮಿಕ ಅಲ್ಲ ಅಂದ್ಕೊಳಣ
(ಅಷ್ಟೇ ಎನ್ನುವ ರೀತಿಯಲ್ಲಿ ಸಂಜ್ಞೆಮಾಡಿ

ಹೊರಡಲನುವಾಗುತ್ತಾಳೆ. ಶಂಕರ ಅವಳನ್ನು ತಡೆದು)

ಶಂಕರ : ವರೂ ಒಬ್ಳೇ ಹೋಗ್ತಿದ್ಯ. ಟೇಕ್ ಕೇರ್

ವರೂ : ಓಂಟಿ ಪ್ರಯಾಣ ಅಭ್ಯಾಸ ಆಗ್ಬಿಟ್ಟಿದೆ. ಬೈ
(ಅಳುತ್ತ ಜೀಪನ್ನತ್ತಿ ಹೊರಡುತ್ತಾಳೆ. ವರಲಕ್ಷ್ಮಿ ಶಂಕರನ ಬಗ್ಗೆ ತನಗಿರುವ ಪ್ರೀತಿಯನ್ನು ಹೇಳಲಾಗದೆ ಮನದಲ್ಲೇ ಮರಗುತ್ತಾಳೆ. ಹಾಗೆಯೇ ಶಂಕರ ಆಕೆ ನಿಜವಾಗಿಯೂ ನನ್ನನ್ನು ಪ್ರೀತಿಸಿ ಬಂದಳೇ ಅಥವಾ ಕೇವಲ ನೋಡಿಕೊಂಡು ಹೋಗಲು ಬಂದಳೇ ಎಂಬ ದ್ವಂದ್ವದಲ್ಲಿ ನಿಲ್ಲುತ್ತಾನೆ.)

# ದೃಶ್ಯ–90

*ಹಗಲು–ಬಂಗಾಡಿ*

| | | |
|---|---|---|
| | | (ದಕ್ಷಿಣ ಕನ್ನಡದ ಜಡಿಮಳೆಯ ಕಾಲದಲ್ಲಿ ತುಂಬಿ ಹರಿಯುವ ನದಿಗಳು, ಜಲಪಾತಗಳ ಮಧ್ಯದಲ್ಲಿ ಶಂಕರ ಜಲವಿದ್ಯುತ್ ಸ್ಥಾವರದ ಉದ್ಘಾಟನಾ ಸಮಾರಂಭದ ವ್ಯವಸ್ಥೆಯಲ್ಲಿದ್ದಾನೆ) |
| ಮೈಕ್‌ನವನು | : | ಹಲೋ 123... 321... ಮಾತಾಡಿಪಾ (ಮೈಕನ್ನು ಪರೀಕ್ಷಿಸಿ ಕೊಡುತ್ತಾನೆ) |
| ಎಳಚಿ | : | ಮಾನ್ಯರೆ ಹಾಗೂ ಇಲ್ಲಿ ಕಿಕ್ಕಿರಿದು ನೆರೆದಿರುವ ಬಂಗಾಡಿಯ ಸಮಸ್ತ ನಾಗರೀಕರೆ (ಪಂಡಿತರು ಮತ್ತು ಮೈಕ್‌ನವನು ಜೋರಾಗಿ ನಗುವರು) .. ಇಲ್ಲಿರೋದ್ ನಾಲಕ್ ಮನೆ ಎಲ್ರೂ ಬಂದಿದಾರೆ. ನೀವೆಂತ ನಗಾಡೋದು? |
| ಪಂಡಿತರು | : | ಅಲ್ಲಾ, ಕಿಕ್ಕಿರಿದು ನೆರೆದ ಅಂದ್ರಲ್ಲ ಅದಿಕ್ಕೆ |
| ಎಳಚಿ | : | ಓ ಕಿಕ್ಕಿರಿದು ಬ್ಯಾಡ, ಹಲ್ಕಿರಿದು ನಿಂತ ಪ್ರೇಕ್ಷಕರೆ ಇಂದು ನಮ್ಮೆಲ್ಲರಿಗೂ ಮೈ ಜುಮ್ಮೆನ್ನಿಸುವ ದಿನ. ಇದಕ್ಕೆ ಕಾರಣ ಪುರುಷರು ನಮ್ಮವರೇ ಆದ ಬಂಗಾಡಿ ಶಂಕರರಾಯರು |

*ಚಲನಚಿತ್ರದಲ್ಲಿ ಈ ಸಂಭಾಷಣೆಯನ್ನು ತಗೆದುಹಾಕಲಾಗಿದೆ:*

| | | |
|---|---|---|
| *ಎಳಚಿ* | *:* | *ಹಳ್ಳಿಯವರೆಲ್ಲ ಪಟ್ಟಣಕ್ಕೆ, ಪಟ್ಟಣದವರೆಲ್ಲ ವಿದೇಶಕ್ಕೆ ಎಂಬಂತಾಗಿರುವ ಇಂದಿನ ಪ್ರವಾಹದ ವಿರುದ್ಧ ಈಜಿ ಬಂದವರು ಅವರು. ಬಂದು ತಮ್ಮ ಪೂರ್ವಿಕರ ಜಾಗದಲ್ಲಿ ನೆಲೆನಿಂತು, ಕೆಲ ಸ್ಥಳೀಯರ ಕುಹಕದ ಪ್ರತಿಶೋಧವನ್ನೂ ಲೆಕ್ಕಿಸದೆ ಭೂಮಿಯ ಕನಸುಗಳನ್ನು ಚಿಗುರಿಸಿದವರು* |
| *ಭಂಗ* | *:* | *ಸ್ಥಳೀಯ ಕುಹಕಗಳ ಹೆಸರು ಹೇಳಿ ಮಾರಾಯ್ರೆ. ಯಾರು ಅದು?* |
| *ಎಳಚಿ* | *:* | *ಅದು ಎಲ್ಲರಿಗೂ ಗೊತ್ತಿದ್ದ ವಿಷಯ. ಅದಿರಲಿ ಶಂಕರ್ ಅವರು ಯಾವ ಸರ್ಕಾರೀ ನೆರವಿಲ್ಲದೆ ತಮ್ಮ ಸ್ವಂತ ಪ್ರತಿಭೆ ಮತ್ತು ಪರಿಶ್ರಮದಿಂದ ಇಂದು ಪುಟ್ಟ ಜಲವಿದ್ಯುತ್ ಸ್ಥಾವರವೊಂದನ್ನು ಸ್ಥಾಪಿಸಿದ್ದಾರೆ.* |

| | | |
|---|---|---|
| ಶಂಕರ | : | (ಕೆಮ್ಮುತ್ತಿರುವ ಶ್ರೀಮತಿಯ ಹತ್ತಿರ ಬಂದು)<br>.. ಎಷ್ಟ್ ಸಾರ್ತಿ ಹೇಳಿದಿನ್ ನಿಂಗೆ ಮಳೆಲ್ ನೆನಿಬೇಡ ಅಂತ ಮೊದ್ಲೇ ಜ್ವರ ಇದೆ ಹೆಚ್ಚಾದ್ರೆ<br>(ಅಲ್ಲೊಬ್ಬನಿಗೆ).. ಕಂಬ್ಳಿ ಕೊಡು<br>(ಅವಳಿಗೆ ಕಂಬಳಿ ಹೊದ್ದಿಸುತ್ತಾನೆ) |
| ಎಳಚಿ | : | ನಮ್ಮ ಬಂಗಾಡಿಯ ಬೆಟ್ಟಕ್ಕೆ ಬೇಲಿಯನ್ನು ಹಾಕಿ ಯಾವ ದುಷ್ಟ ಮೃಗಗಳೂ ಅಲ್ಲಿ ಸುಳಿಯದ ಹಾಗೆ ವಿದ್ಯುತ್ ಹರಿಸಿದ್ದಾರೆ.<br>(ಭಾಷಣವನ್ನು ಹೊಳೆ ದಾಟುತ್ತಿರುವ ಶಾನುಭೋಗರು ಕೇಳಿಸಿಕೊಳ್ಳುತ್ತಾರೆ)<br>.. ಅಷ್ಟೇ ಅಲ್ಲ ಇಲ್ಲಿರುವ ನಾಲ್ಕು ಮನೆಗಳಿಗೆ ಉಚಿತವಾಗಿ ಒಂದೊಂದು ವಿದ್ಯುತ್ ದೀಪಗಳನ್ನೂ ಕರುಣಿಸಿದ್ದಾರೆ. ಈಗ ಈ ವಿದ್ಯುತ್ ಸ್ಥಾವರದ ಉದ್ಘಾಟನೆ. |

*ಚಲನಚಿತ್ರದಲ್ಲಿ ಈ ಸಂಭಾಷಣೆಯನ್ನು ತಗೆದುಹಾಕಲಾಗಿದೆ:*

| | | |
|---|---|---|
| *ಶಂಕರ* | – | *ಸ್ನೇಹಿತರೆ ನಮ್ಮ ಈ ಸೀಮೆಯ ಅತ್ಯಂತ ಹಿರೀಕರಾದ ಮತ್ತಯ್ಯನವರ ಅಮೃತಹಸ್ತದಿಂದ ಈಗ ಉದ್ಘಾಟನೆ*<br>*(ಅರಿಶಿನ ಕುಂಕುಮ ಎರಚುವ ಶ್ರೀಮತಿಗೆ)*<br>*.. ಶ್ರೀಮತಿ ಅರಿಶಿನ ಕುಂಕುಮ ಯಾಕೆ? ವಿದ್ಯುಚ್ಛಕ್ತಿ ಗಂಡೋ ಹೆಣ್ಣೋ?* |
| *ಶ್ರೀಮತಿ* | *:* | *ವಿದ್ಯುತ್ತು, ಶಕ್ತಿ. ಶಕ್ತಿ ಯಾವಾಗಲೂ ಹೆಣ್ಣು!!* |



| | | |
|---|---|---|
| ಶಂಕರ | : | ಮುತ್ತಯ್ಯ |
| ಮುತ್ತಯ್ಯ | : | ನಾನ? |

| | | |
|---|---|---|
| ಶಂಕರ | : | ಆ ಸ್ವಿಚ್ ಆನ್ ಮಾಡು<br>(ಮುತ್ತಯ್ಯ ಕೈಮುಗಿದು ಸ್ವಿಚ್ ಆನ್ ಮಾಡುತ್ತಾನೆ. ದೀಪ ಬೆಳಗುತ್ತದೆ. ಎಲ್ಲರೂ ಸಂಭ್ರಮಿಸುತ್ತಾರೆ. ಶಂಕರನ ಪ್ರಯೋಗ ಯಶಸ್ವಿಯಾಗಿದೆ. ಮಳೆಗಾಲದಲ್ಲಿ ತುಂಬಿ ಹರಿಯುವ ಅಬ್ಬೀ ಜಲಪಾತದ ಉಪಯೋಗ ಇಂದು ಇಡೀ ಬಂಗಾಡಿಗೆ ಸಿಗಲಿದೆ) |

*ಚಲನಚಿತ್ರದಲ್ಲಿ ಈ ಸಂಭಾಷಣೆಯನ್ನು ತಗೆದುಹಾಕಲಾಗಿದೆ:*

| | | |
|---|---|---|
| *ಎಳಚಿ* | *:* | *ಈಗ ಬೇಲಿಯ ವಿದ್ಯುದೀಕರಣ ಬನ್ನಿ ಭಂಗ ಮಾಸ್ತ್ರೆ* |
| *ಭಂಗ* | *:* | *ಏ ಹಾಗೆಲ್ಲ ಉದ್ಘಾಟನೆ ಆಗಲಿಲ್ಲ. ಬೇಲಿ ಮುಟ್ಟಿದಾಗ ಜುಂ ಎಂದು ಶಾಕ್ ಹೊಡೆದರೇನೆ ಉದ್ಘಾಟನೆ. ಮುಟ್ಟಿ ಎಳಚಿತ್ತರಾಯರೇ ಮುಟ್ಟಿ* |
| *ಎಳಚಿ* | *:* | *ಛೇ ಛೇ ನೀವು ಅಧ್ಯಕ್ಷರು. ಮೊದಲು ನಿಮ್ಮ ಅಮೃತಹಸ್ತದಲ್ಲೇ ಆಗಬೇಕು.* |
| *ಭಂಗ* | *:* | *ಛೇ ಛೇ ಆಮೇಲೆ ಅದು ಮೃತ ಹಸ್ತವಾದರೆ ಕಷ್ಟವಯ್ಯಾ. ನನ್ನ ಅಧ್ಯಕ್ಷ ಭಾಷಣ ಬೇರೆ ಉಂಟಲ್ಲಾ* |
| *ಎಳಚಿ* | *:* | *ಅದೆಲ್ಲಾ ಆಮೇಲೆ. ಮೊದಲು ಮುಟ್ಟಿ* |
| *ಶ್ರೀಮತಿ* | *:* | *ಝುಮ್ ಅಂತ ಮುಟ್ಟಿಬಿಡಿ* |
| *ಭಂಗ* | *:* | *ಝುಂ.. (ಮುಟ್ಟಿದ ನಂತರ)<br>.. ಆಹಾ, ಆಹಾ ಮಜಾ ಉಂಟು ಆಂ* |
| *ಶಂಕರ* | *:* | *ಮಳೇಲ್ ನೆನೀಬೇಡ ಶ್ರೀಮತಿ. ಮನೆಗ್ ಹೋಗು* |
| *ಶ್ರೀಮತಿ* | *:* | *ಇದನ್ನ ಮುಟ್ಟಿದ್ರೆ ಜ್ವರಾ ಹೋಗುತ್ತಾ?* |
| *ಭಂಗ* | *:* | *ನನ್ನ ಅಧ್ಯಕ್ಷ ಭಾಷಣ* |
| *ಎಳಚಿ* | *:* | *ಅದನ್ನ ನಮ್ಮನೇಲಿ ಮಾಡಿ ಬನ್ನಿ* |
| *ಭಂಗ* | *:* | *ಸರಿ. ಒಂದ್ಸಲ ಮುಟ್ಟಿ ಬರ್ತೇನೆ* |

# ದೃಶ್ಯ–91

***ಹಗಲು–ನದಿ ದಂಡೆ***

| | | |
|---|---|---|
| | | (ಬಿಡುವಿಲ್ಲದ ಮಳೆಯಲ್ಲಿ ಅತ್ತ ಸಮಾರಂಭ ನಡೆಯುತ್ತಿದ್ದರೂ ಇತ್ತ ಮೈಕ್ ಸೆಟ್ಟಿನವ ಇನ್ನೊಂದು ಊರಿನತ್ತ ಹೊರಟವನು ಸೇತುವೆಯ ಬಳಿ ಶಾನುಭೋಗರಿಗೆ ಎದುರಾಗುತ್ತಾನೆ) |
| ಮೈಕಿನವನು | : | ಶಾನುಭೋಗರೆ ನೀವೆಂತ ಇತ್ತ ಹೊರಟದ್ದು. ಅಲ್ಲಿ ಶಂಕರಣ್ಣನ ಕರೆಂಟು ಉದ್ಘಾಟನೆ. ಮೈಕ್ ಸೆಟ್ಟೆಲ್ಲ ನಂದೆ. ನೀವೆಂತ ಉಲ್ಟ ಹೊರಟದ್ದು |
| ಶಾನುಭೋಗ | : | ಉಲ್ಟ ನಾನಲ್ಲ ನೀನುಲ್ಟ. ಈ ಊರಿನ ಜನಾ ಉಲ್ಟ. |
| ಮೈಕಿನವನು | : | ಶ್ಯಾನುಭೊಗರೆ ಮತ್ತೆ ನಿಮ್ಮ ಮಗಳನ್ನು ಅಲ್ಲಿ ಕಳ್ಸಿದಿರಿ. ಅವಳು ಉಲ್ಟಾ ಎಂದು ನೀವು ಹೇಳುವುದಾ? |
| ಶಾನುಭೋಗ | : | ಏಯ್ ಹೋಗೋ ಹೋಗೋ ಫಿರ್ಕೀಸು |
| ಮೈಕಿನವನು | : | ಶ್ಯಾನುಭೋಗ್ರೆ ಒಂದು ಮಾತ್ ಹೇಳುವೆ. ಶಂಕರಣ್ಣ ಒಳ್ಳೆ ಕುಳ. ಕೂತಲ್ಲೆ ನಿಮಗೊಬ್ಬ ಒಳ್ಳೆ ಅಳಿಯ ಸಿಕ್ಕಿದ. ಮಗಳ ಮದುವೆಗೆ ಉಂಟಲ್ಲ ಮೈಕ್‌ಸೆಟ್ 123 ಎಲ್ಲ ನಂದೆ. ಕಮ್ಮಿಲಿ ಮಾಡಿಕೊಡುವ. ಬರ‍್ಲಾ |
| | | (ಸೈಕಲ್ ಹತ್ತಿ ಹೊರಡುತ್ತಾನೆ. ಜಲಸ್ಥಾವರದ ಉದ್ಘಾಟನಾ ಸಮಾರಂಭವೇ ಶಾನುಭೋಗರ ಎದೆಯಲ್ಲಿ ಕಿಚ್ಚಿಟ್ಟಿದ್ದರೆ, ಅದಕ್ಕೆ ಮತ್ತಷ್ಟು ಎಣ್ಣೆ ಸುರಿದಂತಾಗಿ ಗಾಳಿಯಲ್ಲಿ ಹಿಂದುಮುಂದಾದ ಛತ್ರಿಯನ್ನು ಸರಿಪಡಿಸಿಕೊಳ್ಳುತ್ತ ಕ್ರೋಧದಿಂದ ಮನೆಯತ್ತ ಹೆಜ್ಜೆಹಾಕುತ್ತಾರೆ) |

# ದೃಶ್ಯ–92

***ಹಗಲು–ಶಾನುಭೋಗರ ಮನೆಯ ಒಳಗೆ***

| | | |
|---|---|---|
| | | (ಮನೆಗೆ ಕೋಪೋದ್ರಿಕ್ತರಾಗಿ ಬರುವ ಶಾನುಭೋಗರು ಶಂಕರನ ಪ್ರಯೋಗದಿಂದಾಗಿ ತಮ್ಮ ಮನೆಯಲ್ಲಿಯೇ ಹೊತ್ತಿ ಉರಿಯುತ್ತಿರುವ ವಿದ್ಯುತ್ ದೀಪವನ್ನು ಕಂಡು ಇನ್ನಷ್ಟು ಕುಪಿತರಾಗುತ್ತಾರೆ. ಕೈಯಲ್ಲಿದ್ದ ತಮ್ಮ ಬ್ಯಾಗಿನಿಂದ ಆ ದೀಪವನ್ನು ಹೊಡೆದು ಹಾಕಿ) |
| ಶಾನುಭೋಗ | : | ನನ್ನ ಮನೆಗ್ ಬೆಳಕ್ ಕೊಡೋದಕ್ಕೆ ಇವನ್ಯಾರು. ಶ್ರೀಮತಿ.. (ಜೋರಾಗಿ ಕೂಗುತ್ತ ಒಳಗಡೆ ಬರುವನು) (ತನ್ನ ಹೆಂಡತಿಗೆ) ಶ್ರೀಮತಿ ಎಲ್ಲೇ.. ಎಲ್ಲೇ ಶ್ರೀಮತಿ? ನಿನ್ನೇ ಕೇಳ್ತಾಯಿರೋದು ಶ್ರೀಮತಿ ಎಲ್ಲೆ? |
| ಹೆಂಡತಿ | : | ಶಾಲೆಗ್ ಹೋಗಿದಾಳೆ |
| ಶಾನುಭೋಗ | : | ನನ್ ಕಣ್ಣ್‌ಗೆ ಮಣ್ಣಾಕ್ತಿದಿರ ತಾಯಿ ಮಗಳು ಸೇರ್ಕೊಂಡು. ಈ ಮಳೆಗಾಲ್ದಲ್ಲಿ ಯಾವ್ ಶಾಲೆನೆ ಅದು. ನೆನ್ನೆ ಇಡೀ ರಾತ್ರಿ ಜ್ವರ ಅಂತಿದ್ದೆ ಅವ್ಳಿಗೆ. ಎಲ್ಹೋಯ್ತು ಜ್ವರ ಈಗ. ಆ ಮನೆ ಹಾಳ್ನಿಂದೆ ಭೂ ಬಿಟ್ಟಿದ್ಯಾ ನಿನ್ನ ಮಗಳ್ನ? |



| | | |
|---|---|---|
| ಹೆಂಡತಿ | : | ಅಯ್ಯಯ್ಯೋ ಎಂಥ ಮಾತೂಂತ ಆಡ್ತೀರ? (ಚಪ್ಪಲಿ, ಛತ್ರಿಯನ್ನು ಬಿಸಾಕಿ ಹೆಂಡತಿಯನ್ನು ಎಳೆದು ಹೊರಗೆ ಸುರಿಯುತ್ತಿರುವ ಮಳೆಗೆ ತಳ್ಳುತ್ತಾನೆ) |

| | | |
|---|---|---|
| ಶಾನುಭೋಗ | : | ಎಂಥ ಮಾತು? ಏನ್ ಎಂಥ ಮಾತು? ಹ್ಹಾ ಏಯ್ ಪಟ್ಟಣದ ಹುಡ್ಗ ಅವ್ನು ರುಚಿ ರುಚಿ ನೋಡಿ ಹೋಗ್ತಾನೆ. ಎಂಥಾ ಭಂಡ ಧೈರ್ಯ ಬಂತೇ ನಿನಗೆ<br>(ಅವಳಿಗೆ ಕಾಲಿಂದ ಒದೆಯುತ್ತಾನೆ)<br>.. ನಾನು ಕಾರ್ಕಳದಲ್ಲಿ ಮೂರ್ತಿ ವಕೀಲ್ರ ಮಗನ್ಜೊತೆ ಮದ್ವೆ ಮಾತುಕತೆ ನಡುಸ್ತಾ ಇದ್ರೆ ಇಲ್ಲಿ ಅವಳ್ನ ಸಗಣಿ ತಿನ್ನೋದಕ್ಕೆ ಕಳ್ಸಿದಿಯಾ ನೀನು<br>(ಶ್ರೀಮತಿ ಬಂದು ದಿಗ್ಭ್ರಾಂತಿಗೊಳ್ಳುವಳು)<br>.. ಮರ್ಯಾದೆ ಇಲ್ವಾ ನಿನಗೆ<br>(ಹೊಡೆಯುತ್ತ) .. ನನ್ನ ಮಾತು ಅಂದ್ರೆ ಅಷ್ಟು ಸತಾರ್ವಾ? ಕೊಂದು ಬಿಡ್ತೇನೆ<br>(ಶ್ರೀಮತಿ ಅಪ್ಪ ಅಮ್ಮನ ಬಳಿಗೆ ಓಡಿ ಬರುತ್ತಾಳೆ. ಮಗಳನ್ನು ನೋಡಿ)<br>.. ನೋಡೆ ನೋಡೆ ನಿನ್ನ ಮಗಳ ಅವತಾರಾನ.<br>(ನಂತರ ತನ್ನ ಮಗಳಿಗೆ)<br>.. ಕೂಸೆ ಬಾ ಕೂಸೆ (ಎಳೆದೊಯ್ಯುತ್ತಾನೆ) |
| ಶ್ರೀಮತಿ | : | ಅಪ್ಪಾ ಯಾಕಪ್ಪ. |
| ಶಾನುಭೋಗ | : | ನೀನ್ ಈ ಮನೆಯಿಂದ ಹೊರಗ್ ಹೋಗೋಹಾಗಿಲ್ಲ. ನಡಿಯೇ ಒಳಗೆ<br>(ಅವಳನ್ನು ಕೋಣೆಗೆ ದೂಡಿ ಬಾಗಿಲನ್ನು ಹಾಕುತ್ತಾನೆ. ಇತ್ತ ಹೆಂಡತಿ ಬೇಡಿ ಬೇಡಿ ಎಂದು ಅಂಗಲಾಚುತ್ತಿರುತ್ತಾಳೆ)<br>.. ಇವಳ್ ಜ್ವರಾ ಎಲ್ಲ ಇಳ್ಸಿಬಿಡ್ತೇನೆ. ನಾಳೆನೆ ಇವಳ್ ಮದ್ವೇನ ನಿಶ್ಚಯ ಮಾಡಿ ಬರ್ತೇನೆ |
| ಶ್ರೀಮತಿ | : | (ಕಿಟಕಿಯಿಂದ) ಅಪ್ಪಾ ಅಪ್ಪಾ ಬಿಡಪ್ಪ |
| ಶಾನುಭೋಗ | : | ಏಯ್ ನೀನಿನ್ನು ಮನೆಯಿಂದ ಹೊರಗ್ ಹೋಗೋದು ಗಂಡನ ಮನೆಗ್ ಹೋಗ್ವಾಗ ಮಾತ್ರ.<br>(ಅಷ್ಟರಲ್ಲಿ ಯಾರೋ ಶಾನುಭೋಗರನ್ನು ಕೂಗುತ್ತ ಓಡಿಬರುತ್ತಾರೆ)<br>.. ಏನಾಯ್ತೋ? |
| ಆಳು | : | ಬಸೂಗೆ ಏನೋ ಆಗ್ಬಿಟಿದೆ |
| ಶಾನುಭೋಗ | : | ಏನೋ? ಏನಾಯ್ತೋ? |
| ಆಳು | : | ಬಸೂ, ಬೇಲಿ ಮುಟ್ಟಿದ್ದೆ ನೆಗದ್ ಬಿದ್ದ |
| ಶಾನುಭೋಗ | : | ಏನೂ ಬೇಲಿ ಮುಟ್ಟಿ ನೆಗದ್ ಬಿದ್ನಾ? ಶಾಕು, ನನಗೂ ಅದೇ ಬೇಕು |

(ಶಾನುಭೋಗರ ಮನಸ್ಸಿನಲ್ಲಿ ಆಲೋಚನೆಯೊಂದು ಹೊಳೆಯುತ್ತದೆ. ತನ್ನ ಕುತಂತ್ರಕ್ಕೆ ಈ ಪ್ರಸಂಗವನ್ನು ಬಳಸಿಕೊಳ್ಳಲು ಯೋಚಿಸುತ್ತ ನಿಲ್ಲುತ್ತಾನೆ.)

**ನಿರ್ದೇಶಕರ ಟಿಪ್ಪಣಿ:**

**ವರಲಕ್ಷ್ಮಿ ಮತ್ತು ಶ್ರೀಮತಿ ಒಂದು ಒಪ್ಪಂದಕ್ಕೆ ಬಂದಿದ್ದಾರೆ ಎನ್ನುವಂತೆ ಆದರೆ ಒಬ್ಬರಿಗೊಬ್ಬರು ಹೇಳಿಕೊಳ್ಳದೆ ತಮ್ಮ ತಮ್ಮ ಗುರಿಗಳತ್ತ ಹೆಜ್ಜೆಹಾಕುವ ಈ ಎರೆಡೂ ದೃಶ್ಯಗಳು ಹಾಗೆಯೇ ಶಂಕರನಲ್ಲಿಗೆ ಬಂದು ತನ್ನ ಬದುಕನ್ನು ಸ್ಥಿರಗೊಳಿಸಕೊಳ್ಳಬೇಕೆಂದು ಬರುವ ವರಲಕ್ಷ್ಮಿ ತನ್ನ ದಿಕ್ಕು ಬೇರೆ ಎಂಬುದನ್ನು ಅರಿತು ಹೊರಡುವಳು. ಶ್ರೀಮತಿಗಾಗಿ ತನ್ನದೇ ಆದ ಒಂದು ನಿರ್ಧಾರವನ್ನು ಕೈಗೊಳ್ಳುವುದು ಬಹೂ ಸೂಕ್ಷ್ಮವಾಗಿ ಪ್ರೇಕ್ಷಕನ ಮನಸ್ಸನ್ನು ಸೂರೆಗೊಳ್ಳುವಲ್ಲಿ ಯಶಸ್ವಿಯಾಗುತ್ತದೆ. ಶಂಕರ ತನ್ನ ಚಿಗುರಿದ ಕನಸನ್ನು ನನಸಾಗಿಸಿಕೊಳ್ಳುವತ್ತ ಎದುರಾಗುವ ಪ್ರತಿಯೊಂದು ತಿರುವಿನಲ್ಲಿಯೂ ತನ್ನ ಮನೋಸ್ಥೈರ್ಯವನ್ನು ಕಾಪಾಡಿಕೊಳ್ಳುತ್ತಾ ಬರುತ್ತಾನೆ. ಶಂಕರನ ಪಾತ್ರ ಪೋಷಣೆಯಲ್ಲಿ ಈ ರೀತಿಯ ಒಂದು ನಿರ್ದಿಷ್ಟ ದೃಢತೆಯನ್ನು ಇಡೀ ಚಿತ್ರದಲ್ಲಿ ನಾವು ಕಾಣಬಹುದು. ಇದಕ್ಕಾಗಿಯೇ ಶಿವರಾಮ ಕಾರಂತರ ಇಡೀ ಕಾದಂಬರಿ ನಮಗೆ ಅಪ್ಯಾಯಮಾನವಾಗಿ ಸಾಗುತ್ತಾ ಹೋಗುತ್ತದೆ. ನಮ್ಮ ಕಣ್ಣಮುಂದೆ ಒಂದು ಹೊಸ ಪ್ರಪಂಚವನ್ನು ಸೃಷ್ಟಿಸುತ್ತದೆ. ದೃಶ್ಯ 91ರಲ್ಲಿ ವಿದ್ಯುತ್ ಶಕ್ತಿ ಸ್ಥಾವರದ ಉದ್ಘಾಟನೆ ಮತ್ತು ಅದಕ್ಕೆ ಸಂಬಂಧಪಟ್ಟ ಪೂಜೆಪುನಸ್ಕಾರಗಳು ನಡೆಯುತ್ತಿರುವಾಗ ಸತತವಾಗಿ ಮಳೆ ಬೀಳುತ್ತಿರುವುದರಿಂದ ಮಲೆನಾಡು ಅಂದರೆ ಮಳೆಯ ನಾಡು ಎನ್ನುವುದನ್ನು ಸೂಚ್ಯವಾಗಿ ಹೇಳುವಂತಹ ಪ್ರಯತ್ನ ಇದಾಗಿದೆ. ಹಲವಾರು ದೃಶ್ಯಗಳು ಮಳೆಯಲ್ಲೇ ನಡೆಯುವಂತಹ ಕ್ರಿಯೆಯನ್ನು ನಾವು ಕಾಣಬಹುದು. ನಮ್ಮ ಚಿತ್ರೀಕರಣ ಸಮಯದಲ್ಲಿ ನಾವು ಎದುರಿಸಿದ ಹಲವಾರು ತೊಂದರೆಗಳನ್ನು ನಾವು ಗಮನಿಸಿದಾಗ ಗೌರಿಶಂಕರ್ ತನ್ನ ಅದ್ಭುತವಾದ ತಂತ್ರಗಾರಿಕೆಯನ್ನು ಮತ್ತು ಅದರ ಮುಖಾಂತರ ತಾನೊಬ್ಬ ಶ್ರೇಷ್ಠ ಛಾಯಾಗ್ರಾಹಕ ಎಂಬುದನ್ನು ಸಾಬೀತು ಪಡಿಸಿದ್ದಾರೆಂಬುದರಲ್ಲಿ ಎರಡನೇ ಮಾತಿಲ್ಲ. ಗೌರಿ ಪ್ರತಿ ದೃಶ್ಯದ ಒಟ್ಟಾರೆ ಸ್ವರೂಪವನ್ನು ಬಳಸಿಕೊಂಡಿರುವ ರೀತಿ ಇದು. ನಿಜವಾದ ಮಳೆಯಲ್ಲಿಯೂ ನಾವು ಹಲವಾರು ದೃಶ್ಯಗಳನ್ನು ಚಿತ್ರೀಕರಿಸಿದ್ದೇವೆ ಮತ್ತು ಕೆಲವು ಕಡೆ ಮಳೆಯನ್ನು ಬಳಸಿಕೊಂಡಿದ್ದೇವೆ. ಈ ಎರಡನ್ನೂ ಕೂಡ ಚಿತ್ರದ ಮಳೆಯ ಗಾಢತೆಯಲ್ಲಿ ಕಾಣಬಹುದು. ಶ್ರೀಮತಿ ತನ್ನ ಪ್ರೀತಿಯನ್ನು ತನ್ನ ಒಡನಾಟವನ್ನು ಶಂಕರನ ಜೊತೆ ಹೆಚ್ಚಿಸಿಕೊಂಡಷ್ಟು ಶಾನುಭೋಗನ ಕುತಂತ್ರಗಳು ಹೆಚ್ಚುತ್ತಲೇ ಹೋಗುತ್ತದೆ ಎಂಬುದನ್ನು ಈ ದೃಶ್ಯಗಳು ಕಾಣಿಸುತ್ತವೆ. ಆ ಉದ್ಘಾಟನೆಯ ಪೂಜೆಗೆ ಹೋಗಿ ಬಂದ ಶ್ರೀಮತಿಯನ್ನು ಕೂಡಿ ಹಾಕುತ್ತಾನೆ. ತಾನು ಅವಳಿಗೊಂದು ಗಂಡನ್ನು ಹುಡುಕಿರುವ ಬಗ್ಗೆ ತಿಳಿಸುತ್ತ ಆ ಕೆಲಸವನ್ನು ಪ್ರಾರಂಭಿಸಿದ್ದೇನೆ ಮತ್ತು ಮನೆಯಿಂದ ಹೊರಗೆ ಹೋದರೆ ಅದು ನಿನ್ನ ಮದುವೆಯ**

ನಂತರವೇ ಎಂದು ತಾಕೀತು ಮಾಡಿ ಹೋಗುತ್ತಾನೆ. ಆಳುಗಳು ವಿದ್ಯುತ್ ಶಾಕ್ ಹೊಡೆದ ಆಳನ್ನು ಎತ್ತಿಕೊಂಡು ಬರುವುದನ್ನು ಶಾನುಭೋಗ ತನ್ನ ಉದ್ದೇಶಕ್ಕೆ ಬಳಸಿಕೊಳ್ಳುತ್ತಾನೆ. ಹೀಗೆ ಶಾನುಭೋಗನ ಸಣ್ಣತನ ಅವನನ್ನೇ ಹೇಗೆ ನಿಧಾನವಾಗಿ ನುಂಗಿಹಾಕುತ್ತದೆ ಎನ್ನುವುದಕ್ಕೆ ಒಂದು ಮುನ್ನುಡಿಯನ್ನು ಬರೆಯುತ್ತದೆ.

# ದೃಶ್ಯ–93

***ಹಗಲು–ಸೇತುವೆ***

| | | |
|---|---|---|
| | | (ಸೇತುವೆಯ ಬಳಿ ಧಾರಾಕಾರ ಮಳೆ. ಈ ಮಳೆಯಲ್ಲೂ ಶಾನುಭೋಗರು ಕೊಟ್ಟ ದೂರಿನ ಅನ್ವಯ ಅದರ ಪರಿಶೀಲನೆಗಾಗಿ ಜಿಲ್ಲಾಧಿಕಾರಿಗಳು ಹಾಗೂ ತಹಶೀಲ್ದಾರರು ವಾಹನಗಳಲ್ಲಿ ಸೇತುವೆಯ ಬಳಿ ಬರುತ್ತಾರೆ. ಅವರನ್ನು ಸ್ವಾಗತಿಸಲು ಶಾನುಭೋಗರು ಮತ್ತು ಉಳಿದ ಜನ ಅಲ್ಲಿ ನೆರೆದಿದ್ದಾರೆ. ಹಾರ ಹಾಕಲು ಹೋದ ಶಾನುಭೋಗರನ್ನು ತಡೆದು ಜಿಲ್ಲಾಧಿಕಾರಿಗಳು) |
| ಜಿಲ್ಲಾಧಿಕಾರಿ | : | ಇರ್ಲಿ ಇರ್ಲಿ. |
| ಶಾನುಭೋಗ | : | ಕೊಡೆ ಕೊಡು. ನಮಸ್ಕಾರ<br>(ಕೊಡೆಯನ್ನು ಇನ್ನೊಬ್ಬನಿಂದ ಕಿತ್ತುಕೊಂಡು ಜಿಲ್ಲಾಧಿಕಾರಿಗಳಿಗೆ ಹಿಡಿಯಲು ಬರುವಾಗ ಜಿಲ್ಲಾಧಿಕಾರಿಗಳು) |
| ಜಿಲ್ಲಾಧಿಕಾರಿ | : | ಹೀಗೆ ನೀವು. ಮೇಲಧಿಕಾರಿಗಳ್ ಕಾರ್ಯ ಹಾಳ್ಮಾಡೋದು. ಕೊಡೆ ಹಿಡ್ದೂ ಹಿಡ್ದು..<br>(ಬೆಟ್ಟವನ್ನ ನೋಡುತ್ತ ಸಂತೋಷದಿಂದ)<br>.. ಇದೇನ ಬಂಗಾಡಿ ಬೆಟ್ಟ? |



| | | |
|---|---|---|
| ತಹಶೀಲ್ದಾರ | : | ಹೌದು ಸರ್ |
| ಜಿಲ್ಲಾಧಿಕಾರಿ | : | ಮಳೆ ನಿಲ್ಲೋವರ್ಗು ಇಲ್ಲೇ ಇದ್ದು ಆಮೇಲ್ ಹೋಗ್ಬೋದಲ್ವ? |
| ತಹಶೀಲ್ದಾರ | : | ಹಾಗಾದ್ರೆ ಎರೆಡ್ ತಿಂಗ್ಳು ಇಲ್ಲೇ ನಿಂತ್ ಕಾಯ್ಬೇಕಾಗುತ್ತೆ. |

(ಜಿಲ್ಲಾಧಿಕಾರಿಗಳು ಅಚ್ಚರಿಗೊಳ್ಳುವರು)
.. ಒಂದ್ಸಲ ಹಿಡ್ದ ಮಳೆ ತಿಂಗ್ಳುಗಟ್ಲೆ ಬಿಡೋದೆ ಇಲ್ಲ
(ಪೂರ್ತಿಯಾಗಿ ವಿವರಿಸುತ್ತಾನೆ)

ಜಿಲ್ಲಾಧಿಕಾರಿ : ಸರಿ ನಡೀರಿ. (ಸೇತುವೆಯ ಮೇಲೆ ಮುಂದುವರೆಯುತ್ತ) ಅಲ್ಲಾ ಈ ಏರಿಯಾಗೆ ಯಾವ್ ಸೇತುವೇನು ಮಂಜೂರಾಗಿಲ್ಲ. ಸರ್ಕಾರಿ ದಾಖ್ಲೇಲಿ ಮಂಜೂರಾಗಿರೊ ಸೇತ್ವೇಗಳೇ ಹಕೀಕತ್ನಲ್ ಮಾಯಾ ಆಗಿರೋದನ್ ನೋಡಿದೀವಿ. ಇಲ್ಲಿ ಸ್ಯಾಂಕ್ಷನ್ನೆ ಆಗ್ದೆ ಸೇತ್ವೆ ಮೂಡ್ಬಿಟಿದ್ಯಲ್ಲ. ಈ ಪವಾಡ ಮಾಡ್ದೋರ್‍ಯಾರು?
(ಎಂದು ಅಚ್ಚರಿ ವ್ಯಕ್ತಪಡಿಸಿ ಅವನ ಬಗ್ಗೆ ಕೇಳಿದರೆ ತಹಶೀಲ್ದಾರ ಮತ್ತು ಶಾನುಭೋಗ ಛಾಡಿ ಹೇಳಲು ಆರಂಭಿಸುತ್ತಾರೆ)

ತಹಶೀಲ್ದಾರ : ಅವ್ನೇ ಅವ್ನೇ ಸಾರ್
(ಶಾನುಭೋಗನಿಗೆ) .. ಸುಮ್ನಿದೀರಲ್ರಿ ಹೇಳ್ರಿ

ಶಾನುಭೋಗ : ಅಷ್ಟೇ ಅಲ್ಲ ಸಾರ್. ನನ್ನೊಂದ್ಮಾತೂ ಕೇಳ್ಲಿಲ್ಲ. ಪರ್ಮಿಶನ್ ಬೇರೆ ತಗಂಡಿಲ್ಲ. ಜಲಪಾತಕ್ಕೆ ಮಿಷನ್ ಹಾಕಿ ಕರೆಂಟ್ ಮಾಡಿದಾನೆ. ಬೆಟ್ಟಕ್ಕೆ ಬೇಲಿ ಹಾಕಿ ಕರೆಂಟ್ ಹಾಯ್ಸಿದಾನೆ. ಸತ್ತೇ ಹೋದ ಸಾರ್ ಒಬ್ಬ ಕರೆಂಟ್ ಶಾಕ್ ಹೊಡ್ದು

ಜಿಲ್ಲಾಧಿಕಾರಿ : ವಾಟ್

ತಹಶೀಲ್ದಾರ : ನಿಜಾ ಸಾರ್

ಶಾನುಭೋಗ : ಅದಕ್ಕೆ ಸಾರ್ ನಿಮ್ಮನ್ನಿಲ್ ಕರ್ಸಿದ್ದು.
(ಸೇತುವೆಯ ಮೇಲೆ ನಡೆದು ಹೊರಟ ಜಿಲ್ಲಾಧಿಕಾರಿಗಳಿಗೆ ಈ ವಿಪರೀತ ಸುದ್ದಿಗಳನ್ನು ಶಾನುಭೋಗರು ಹಾಗೂ ತಹಶೀಲ್ದಾರರು ನೀಡುತ್ತ ಶಂಕರನ ಬಗ್ಗೆ ತಪ್ಪು ಅಭಿಪ್ರಾಯ ಮೂಡಿಸಲು ಪ್ರಯತ್ನಿಸುತ್ತಾರೆ.)

# ದೃಶ್ಯ–94

*ಹಗಲು–ಅಬ್ಬೀ ಜಲಪಾತ*

(ಅಬ್ಬೀ ಜಲಪಾತದ ಅಡಿಯಲ್ಲಿ ಜನರೇಟರ್ ತನ್ನ ಕಾರ್ಯ ನಿರ್ವಹಿಸುತ್ತಿದೆ. ಅದನ್ನು ತನಿಖಾಧಿಕಾರಿಯಾಗಿ ಬಂದಿರುವ ಜಿಲ್ಲಾಧಿಕಾರಿಗಳು ಪರೀಕ್ಷಿಸುತ್ತಿದ್ದಾರೆ)

ಜಿಲ್ಲಾಧಿಕಾರಿ : ಶಂಕರ್ ರಾವ್ ಈ ಜನರೇಟರ್‌ನ ಇನ್ಸ್ಟಾಲ್ ಮಾಡಿ ಆಪರೇಟ್ ಮಾಡೋಕೆ ನಿಮ್ಹತ್ರ ಲೈಸೆನ್ಸ್ ಇದ್ಯಾ?

ಶಂಕರ : ಅಫ್ ಕೋರ್ಸ್ ಸರ್. ಕೃಷ್ಣ ಆ ಪರ್ಮಿಟ್ ತಗೋಂಡ್ಬಾ (ತಹಶೀಲ್ದಾರ ಮತ್ತು ಶಾನುಭೋಗ ಕೋಪದಿಂದ ಮುಖಮುಖ ನೋಡಿಕೊಳ್ಳುತ್ತಾರೆ)
.. ನನ್ನನ್ನ ಇಂಡಿಪೆಂಡೆಂಟ್ ಪವರ್ ಪ್ರೊಡ್ಯೂಸರ್ ಅಂತ ಕನ್ಸಿಡರ್ ಮಾಡಿ ಸರ್ಕಾರದವ್ರು ಈ ಪರ್ಮೀಷನ್ ಕೊಟ್ಟಿದಾರೆ.

ಜಿಲ್ಲಾಧಿಕಾರಿ : ದಟ್ಸ್ ಫೈನ್ ಶಂಕರ್. ಆದ್ರೆ ನಿಮ್ ಬೇಲಿ ಕರೆಂಟ್ನಿಂದ ಒಬ್ಬ ವ್ಯಕ್ತಿ ಪ್ರಾಣಕ್ ಅಪಾಯ ಬಂತು ಅಂತ ಕಂಪ್ಲೆಂಟ್ ಬಂದಿದೆ.

ಶಂಕರ : ಇಂಪಾಸಿಬಲ್ ಸರ್. ಒಬ್ಬ ಮನುಷ್ಯನ್ ಪ್ರಾಣಕ್ಕೆ ವಿಪ್ಪತ್ ಬರ್ಬೇಕಾದ್ರೆ ಕನಿಷ್ಟ 100 ವೋಲ್ಟ್ ಕರೆಂಟ್ ಬೇಕು. ಆದ್ರೆ ಇದ್ರಲ್ಲಿರೋದು ಕೇವಲ ಹತ್ತರಿಂದ ಹದಿನೈದು ವೋಲ್ಟ್ ಮಾತ್ರ. ಪ್ರಾಣಿಗಳ್ ಚರ್ಮಕ್ಕೆ ರೆಸಿಸ್ಟೆಂಟ್ ಪವರ್ ಕಮ್ಮಿ ಇರೋದ್ರಿಂದ ತಂತಿ ಸಮೀಪ ಬರೋಕು ಹೆದರುತ್ವೆ. ಅಕಸ್ಮಾತ್ ಟಚ್ ಆದ್ರೂ ಮೈಗ್ ಜುಮ್ ಅಂದ್ರೆ ಓಡೋಗ್ತಾವೆ. ಇದು ಪ್ರಾಣೀಗಳಿಗೆ ಮಾತ್ರ ಒಂದು ಸಣ್ಣ ಶಾಕ್ ಅಷ್ಟೆ.
(ಜಿಲ್ಲಾಧಿಕಾರಿಗಳ ಪ್ರಶ್ನೆಗೆ ಸಮರ್ಥವಾದ ಉತ್ತರವನ್ನು ವಿವರಿಸಿ ಹೇಳುತ್ತಾನೆ)

ಶಾನುಭೋಗ : ಇಲ್ಲ ಸಾಹೇಬ್ರೆ ಇಲ್ಲ ಇದು ಬರೀ ಸುಳ್ಳು. ನಾನೀಗಷ್ಟೇ ಮುಟ್ ಬಂದೆ ನಂಗು ಹೊಡೀತು ಶಾಕು

ಶಂಕರ : ಅದೇ ಹೇಳ್ತಿರೋದ್ ನಾನು, ಇದು ಪ್ರಾಣಿಗಳಿಗ್ ಮಾತ್ರ ಅಂತ
(ಮುತ್ತಯ್ಯ ಮತ್ತಿತರರು ನಗುತ್ತಾರೆ)

ಜಿಲ್ಲಾಧಿಕಾರಿ : ಆರ್ ಯು ಶೋರ್ ಮಿ.ಶಂಕರ್?

ಶಂಕರ : ಶ್ಯೂರ್ ಸರ್. ಬೇಕಾದ್ರೆ ಟಸ್ಟ್ ಮಾಡ್ ನೋಡಿ.

ಮುತ್ತಯ್ಯ ಆನ್ ಮಾಡು.
(ಮುತ್ತಯ್ಯ ಹೋಗುವನು)
.. ಬನ್ನಿ ಸರ್
(ಮುತ್ತಯ್ಯ ಸ್ವಿಚ್ ಹಾಕುವನು ಆಗ ಜಿಲ್ಲಾಧಿಕಾರಿಗಳು ಶಾನುಭೋಗರಿಗೆ)

ಜಿಲ್ಲಾಧಿಕಾರಿ : ರೀ ನೀವ್ ಮುಟ್ರೀ

ಶಾನುಭೋಗ : ಅಯ್ಯಯ್ಯೋ ನಾನ? ಸರ್ ನೀವೆ ಮುಟ್ಟಿ ಸರ್.

ಜಿಲ್ಲಾಧಿಕಾರಿ : (ತಹಶೀಲ್ದಾರರಿಗೆ) ರೀ ನೀವ್ ಮುಟ್ರೀ

ತಹಶೀಲ್ದಾರ : ಸಾರ್ ನೀವ್ ಸೀನಿಯರ್ರು. ನೀವ್ ಮುಟ್ಟೋಕ್ ಮುಂಚೆ ನಾನ್ ಹ್ಯಾಗ್ ಮುಟ್ಲೀ ಸರ್?

ಶಂಕರ : ಐ ವಿಲ್ ಡೂ ಇಟ್ ಸರ್
(ಎಂದು ತಾನೇ ಮುಟ್ಟುತ್ತಾನೆ. ಆತನಿಗೆ ಕಡಿಮೆ ಪ್ರಮಾಣದ ವಿದ್ಯುತ್ ತಾಗುತ್ತದೆ. ನಂತರ ಜಿಲ್ಲಾಧಿಕಾರಿಗಳು ಮುಟ್ಟಿನೋಡುತ್ತಾರೆ)

ಜಿಲ್ಲಾಧಿಕಾರಿ : ಈ ಕರೆಂಟ್‌ಗ್ಯಾರ್ ಸಾಯ್ತಾರೆ? ಯಾರ್ರೀ ಅದ್ ಸತ್ತಿದ್ದು?

ಬಸೂ : ನಾನೇ ಸರ್ ಸತ್ತಿದ್ದು ಬಸೂ
(ಎಂದು ಕೈ ಎತ್ತುತ್ತಾನೆ. ನಂತರ ಹತ್ತಿರ ಬಂದು)
.. ಏನ್ ಸಾರ್ ಹೊಡೀತು ಶಾಕು ಪಡ್ಚಾನೆ ಆಗ್ಬಿಡ್ತಾ ಇದ್ದೆ. ಒಂಚೂರ್ ನೂರ್ ಗ್ರಾಮ್ ಅಷ್ಟು ಜೀವ ಉಳ್ಕೊಬಿಟ್ಟಿತ್ತು ಸಾರ್.

ಜಿಲ್ಲಾಧಿಕಾರಿ : ಎಲ್ ಹೊಡೀತು ಶಾಕು?

ಬಸೂ : ಇಲ್ಲಿ ಇಲ್ಲಿ ಸಾರ್ (ತನ್ನ ಕೈ ತೋರಿಸುವನು)

ಜಿಲ್ಲಾಧಿಕಾರಿ : ನಿನ್ಗೆಲ್ ಹೊಡೀತು ಅಂತಲ್ಲ ಯಾವ್ ಪ್ರದೇಶ್ದಲ್ ಹೊಡೀತು. ಮನೇಲ, ಬೆಟ್ಟದಲ್ಲಾ, ಕಾಡ್ನಲ್ಲ?

ಬಸೂ : ಕಾಡ್ನಲ್ಲಿ ಸಾರ್

ಜಿಲ್ಲಾಧಿಕಾರಿ : ಕಾಡ್‌ಗ್ಯಾಕ್ ಹೋಗಿದ್ದೆ

ಬಸೂ : ಅದೇ ನಮ್ ಶಾನುಭೋಗ್ರು ಒಂದ್ ನಾಟಾ ಎಳಿಬೇಕೂಂತ ಹೇಳಿದ್ರು ಸಾರ್
(ಎಂದಾಗ ಶಾನುಭೋಗ ಅವನನ್ನು ಎಳೆದು)

ಶಾನುಭೋಗ : ಏಯ್ ನಾನೆಲ್ಲೋ ಹೇಳ್ದೆ, ಸಾಹೇಬ್ರೆ ಶಾಕ್ ಹೊಡ್ದಿದ್ಯಲ್ಲ ಅದಿಕ್ಕೆ ಏನೇನೋ ಹೇಳ್ತಿದಾನೆ. ಹುಚ್ಚು ನನ್ಮಗನೆ.

ಜಿಲ್ಲಾಧಿಕಾರಿ : (ಬಸೂನನ್ನು ತಮ್ಮೆಡೆಗೆ ಕರೆದು)
ನಿಮ್ ಶ್ಯಾನ್ಭೋಗ್ರುದು ನಾಟೋ ವ್ಯವಹಾರ ಬೇರೆ ಇದ್ಯೋ ಬಹಳ ದೊಡ್ಡ ಕುಳಾನ

| | | |
|---|---|---|
| ಬಸೂ | : | ಮತ್ತೆ ವಾರಕ್ಕೊಂದು ಟ್ರಕ್ ಲೋಡು ಖಾತ್ರಿ ಸರ್ (ಶಾನುಭೋಗ ಮತ್ತು ತಹಶೀಲ್ದಾರ ಮುಖ ಮುಖ ನೋಡಿಕೊಂಡು ತಲೆತಗ್ಗಿಸಿ ನಿಲ್ಲುತ್ತಾರೆ) |
| ಜಿಲ್ಲಾಧಿಕಾರಿ | : | (ಪೋಲೀಸ್ ಅಧಿಕಾರಿಯೊಬ್ಬನನ್ನು ಕರೆದು) ಸುದರ್ಶನ್ ಇವನ್ನ ಕರ್‍ಕೊಂಡೋಗಿ ಬಕ್ಷೀಶ್ ಕೊಡಿ |
| ಬಸೂ | : | ಸಂತೋಷ ಸರ್. ಬಕ್ಷೀಸು ಬಕ್ಷೀಸು |
| ಸುದರ್ಶನ್ | : | ಬನ್ರೀ ಬನ್ರೀ ಕೊಡ್ತೀನ್ ಬನ್ರಿ (ಎಂದು ಬಸೂನನ್ನು ಎಳೆದೊಯ್ಯುತ್ತಾರೆ. ಇತ್ತ ಜಿಲ್ಲಾಧಿಕಾರಿಗಳು ತನಿಖೆಯನ್ನು ಮುಗಿಸಿ ಸೇತುವೆ ಮೇಲೆ ಹಿಂತಿರುಗಿ ಹೊರಡುತ್ತಿದ್ದಾರೆ.) |
| ಜಿಲ್ಲಾಧಿಕಾರಿ | : | ನಿಮ್ಗೊಂಚೂರು ಮಾನ ಮರ್ಯಾದೆ ಇಲ್ವೇನ್ರಿ? ಒಬ್ಬ ಪ್ರಾಮಾಣಿಕ ಮನುಷ್ಯ ಎರೆಡ್ ಒಳ್ಳೇ ಕೆಲ್ಸ ಮಾಡಿದಾನೆ ಅಂದ್ರೆ ಅದನ್ನ ಸಹಿಸೋಕು ಆಗಲ್ವ ನಿಮ್ಗೆ. ಅವನ್ನ ಕೊಲೆಗಾರನ್ನ್ ಮಾಡೋಕ್ಹೊರ್‍ಟಿದಿರ? ಸದ್ಯ ನಿಮ್ ಪಾಯಿಂಟ್ ಪ್ರೂವ್ ಮಾಡ್ಬೇಕೂಂತ ಆ ಬಸೂನ ನಿಜ್ವಾಗ್ಲು ಮುಗ್ಸಬಿಡ್ಲಿಲ್ವಲ್ಲ. ಅದಕ್ಕೂ ಹೇಸೋರಲ್ಲ ನೀವು. (ಶಂಕರನನ್ನು ಹತ್ತಿರ ಕರೆದು) .. ಬೇಜಾರ್ ಮಾಡ್ಕೊಬೇಡಿ ಶಂಕರ್. ಕಂಗ್ರಾಚ್ಯುಲೇಶನ್. ಅದ್ಭುತ್ವಾದ್ ಕೆಲ್ಸಾನೆ ಮಾಡಿದಿರ. ಈ ಸಾರಿ ನಿಮ್ ಹೆಸರ್ನ ರಾಷ್ಟ್ರ ಪ್ರಶಸ್ತಿಗೆ ರೆಕಮೆಂಡ್ ಮಾಡ್ತಿನಿ. |
| ಶಂಕರ | : | ಛೆ ಛೆ ಇಲ್ಲ ಸರ್, ನಾನ್ ಪ್ರಶಸ್ತಿಗಾಗ್ ಇದನ್ ಮಾಡ್ಲಿಲ್ಲ. ನನ್ ಸಂತೋಷಕ್ಕಾಗ್ ಇದನ್ನ ಮಾಡ್ತಿದಿನಿ ಅಷ್ಟೆ. ನಿಮಗ್ ಸಹಾಯ ಮಾಡ್ಲೇಬೇಕು ಅಂದ್ರೆ ಬಂಗಾಡಿಗೆ ಒಂದ್ ಆರೋಗ್ಯ ಕೇಂದ್ರ ಕೊಡ್ಸಿ. ಈ ಸೀಮೆ ಜನಗಳಿಗೆ ಉಪ್ಕಾರ ಮಾಡ್ದಾಗ್ ಆಗುತ್ತೆ. |
| ಜಿಲ್ಲಾಧಿಕಾರಿ | : | (ನಗುತ್ತ).. ಎಲ್ಲ ವಿದ್ಯಾವಂತ್ರು ನಿಮ್ಹಾಗೆ ಇರ್ತಾರೇನ್ರಿ. ಹಳ್ಳಿಗಳಿಗೆ ಬರೋಕೆ ಡಾಕ್ಟ್ರು ಹಿಂದೇಟ್ಹಾಕ್ತಾರೆ. ಬಲವಂತವಾಗೆ ಟ್ರಾನ್ಸ್‌ಫರ್ ಮಾಡಿದ್ರೆ ಅವ್ರಿಗೇ ಖಾಯಿಲೆ ಬಂದು ಓಡ್ಹೋಗ್ತಾರೆ. ಒಂದ್ಸಾರಿ ಬನ್ನಿ ನಮ್ ಆಫೀಸ್ಗೆ ಕೂತ್ಕೊಂಡ್ ಮಾತಾಡೋಣ |
| ಶಂಕರ | : | ಆಯ್ತು ಸರ್. ಇಟ್ಸ್ ಮೈ ಪ್ಲೆಶರ್ |
| ಜಿಲ್ಲಾಧಿಕಾರಿ | : | ಬೈ ನಮಸ್ತೆ (ಹೊರಡುವ ಸಮಯದಲ್ಲಿ ಶಾನುಭೋಗ ಮಧ್ಯ ಬಂದು) |

| | | |
|---|---|---|
| ಶಾನುಭೋಗ | : | ಸಾಹೇಬ್ರೆ ಒಂದು |
| ಜಿಲ್ಲಾಧಿಕಾರಿ | : | (ಅವನನ್ನು ತಡೆದು)<br>ನೀನ್ ಮಾತಾಡ್ಬೇಡ. ನಿನ್ನ ಸಸ್ಪೆಂಡ್ ಮಾಡಿದಿನಿ ಈ ಕ್ಷಣದಿಂದ<br>(ಶಾನುಭೋಗ ತನ್ನ ವಸ್ತುಗಳನ್ನು ಬಿಸಾಡಿ ಜಿಲ್ಲಾಧಿಕಾರಿಗಳನ್ನು ಎಳೆದೊಯ್ಯುತ್ತ) |
| ಶಾನುಭೋಗ | : | ಸಾಹೇಬ್ರೆ ಒಂದ್ನಿಮ್ಷ ಈ ಕಡೆ ಬನ್ನಿ. ನಿಮ್ಹುತ್ರ ಒಂದು ಮುಖ್ಯವಾದ ವಿಚಾರ ಮಾತಾಡ್ಬೇಕು. |
| ಜಿಲ್ಲಾಧಿಕಾರಿ | : | ಏನ್ ಮಾತಾಡ್ಬೇಕೊ ಅದನ್ನ ಇಲ್ಲೆ ಮಾತಾಡ್ರಿ. ಬಿಡ್ರಿ ಕೈನ |
| ಶಾನುಭೋಗ | : | ಎಲ್ರೆದುರು ಹೇಳ್ಳಿಕ್ ಆಗೋದಿಲ್ಲ. ಮಾಮೂಲು ಸರಿಯಾಗಿ ತಲ್ಪಿಸಿದ್ದೇನೆ. ಬೇಕಾದ್ರೆ ತಹಶೀಲ್ದಾರರನ್ನೇ ಕೇಳಿ.<br>(ಜಿಲ್ಲಾಧಿಕಾರಿಗಳು ತಹಶೀಲ್ದಾರನನ್ನು ಉಗ್ರವಾಗಿ ನೋಡುತ್ತ ಶಾನುಭೋಗನ ಕಡೆ ತಿರುಗಿ) |
| ಜಿಲ್ಲಾಧಿಕಾರಿ | : | ಏನಂದೆ? ಇನ್ನೊಂದ್ಸಾರಿ ಹೇಳು |
| ಶಾನುಭೋಗ | : | ಸಾಹೇಬ್ರೆ ನೀವೆಲ್ರೆದುರು ಯಾಕ್ ರೇಗಾಡ್ತಿದಿರ ಅಂತ ನನಿಗ್ ಚೆನ್ನಾಗ್ ಗೊತ್ತು. ಹೊಸ್ದಾಗ್ ಬಂದಿದ್ದೀರಲ್ಲ ನಿಮ್ ವಜನ್ನು ಎಲ್ರಿಗು ಗೊತ್ತಾಗ್ಲಿ ಅಂತ. ನಾಳೆ ಬೆಳೆಗ್ಗೇನೆ ತಲಪಿಸ್ತೀನಿ ಲಕೋಟೆ. ನಿಮ್ಮ ಅಪೇಕ್ಷೆ ಏನೂಂತ ಗೊತ್ತಾದ್ರೆ.. |



| | | |
|---|---|---|
| ಜಿಲ್ಲಾಧಿಕಾರಿ | : | (ಉಗ್ರವಾಗಿ ಛತ್ರಿಯನ್ನು ಬಿಸಾಕಿ)<br>ಶಟ್ ಅಪ್, ನನ್ಗೆ ಲಂಚ ಕೊಡೋಕ್ ಬರ್ತೀಯ. ಯು ಆರ್ ಡಿಸ್‌ಮಿಸ್ಡ್. ಗೆಟ್‌ಲಾಸ್ಟ್. |

(ಶಾನುಭೋಗ ಜಿಲ್ಲಾಧಿಕಾರಿಗಳ ಕಾಲಿಗೆ ಬೀಳುತ್ತ)

ಶಾನುಭೋಗ : ಹೀಗೆ ಮಾಡ್ಬೇಡಿ ಸಾಹೇಬ್ರೆ. ಇನ್ನೊಮ್ಮೆ ಮಾಡೋದಿಲ್ಲ ಸಾಹೇಬ್ರೆ

ಜಿಲ್ಲಾಧಿಕಾರಿ : (ತಹಶೀಲ್ದಾರನಿಗೆ) ರೀ... ಆ ಡಿಎಫ್‌ಒಗೆ ಹೇಳಿ ಈ ಬೆಟ್ಟ ಎಲ್ಲ ಮಹಜರ್ ಮಾಡ್ಸಿ ಅಂಡ್ ಐ ವಾಂಟ್ ದಿ ರಿಪೋರ್ಟ್ ಬೈ ದಿಸ್ ವೀಕೆಂಡ್

ತಹಶೀಲ್ದಾರ : ಎಸ್ ಸರ್..

(ತಹಶೀಲ್ದಾರರ ಕಾರು ಹೋದ ನಂತರ ಶಂಕರ ಕೆಳಗೆ ಬಿದ್ದಿದ್ದ ಶಾನುಭೋಗರನ್ನು ನೋಡಿ ಅಲ್ಲಿಂದ ಹೊರಡಲನುವಾಗುತ್ತಾನೆ.)

ಶಾನುಭೋಗ : ಹೇಯ್ ದಿಲ್ಲಿ ಮಗನೇ ಸಂತೋಷ ಆಯ್ತು

(ಶಂಕರ ಹೋಗುತ್ತಲೇ ಇರುತ್ತಾನೆ)

.. ನಾನು ಬಿದ್ದು ಒದ್ದಾಡಿದ್ದನ್ ನೋಡಿ ತೃಪ್ತಿಯಾಯ್ತ, ನಿನ್ನನ್ನ ಬೇರ್ ಸಹಿತ ಬೇರ್ ಸಹಿತ ಕಿತ್ತು ಹಾಕ್ತೇನೆ. ನಾಶ ಮಾಡ್ತೇನೆ ನಿನ್ನ ದಿಲ್ಲಿ ದರ್ಬಾರು. ನಿನ್ನ ಇಡೀ ಸಾಮ್ರಾಜ್ಯನ ಉಡುಗಿಸ್ತೀನಿ.

(ಧಾರಾಕಾರ ಮಳೆಯ ಮಳೆಯಿಂದಾಗಿ ಇಡೀ ವಾತಾವರಣ ತಣ್ಣಗಿದ್ದರೂ ಶಾನುಭೋಗರ ಅಸೂಯೆಯ ಜ್ವಾಲೆ ಅವರನ್ನು ದಹಿಸತೊಡಗುತ್ತದೆ. ಇದರಿಂದಾಗಿ ವ್ಯಯಕ್ತಿಕ ದ್ವೇಷದ ದಳ್ಳುರಿ ಬಂಗಾಡಿಯನ್ನು ಆವರಿಸುತ್ತದೆ)

**ನಿರ್ದೇಶಕರ ಟಿಪ್ಪಣಿ:**

**ದೃಶ್ಯ 93ರಲ್ಲಿ ಜಿಲ್ಲಾಧಿಕಾರಿಗಳು ಮತ್ತು ತಹಶೀಲ್ದಾರರು ಸೇತುವೆಯ ಬಳಿ ಬಂದು ಅಲ್ಲಿಂದ ಶಂಕರ ವಿದ್ಯುತ್‌ಶಕ್ತಿ ತಯಾರು ಮಾಡುತ್ತಿದ್ದ ಜಾಗಕ್ಕೆ ಬಂದು ಶಾನುಭೋಗರು ಕೊಟ್ಟಿದ್ದಂತಹ ಮೂಕರ್ಜಿಯನ್ನು ಪರಿಶೀಲಿಸುತ್ತಿದ್ದಾರೆ ಆದರೆ ಶಾನುಭೋಗರ ವಿಧಿವೈಪರೀತ್ಯವೋ ಏನೋ ಒಟ್ಟಿನಲ್ಲಿ ಅವೆಲ್ಲವೂ ಶಂಕರನ ಪರವಾಗಿ ಕೈಗೂಡುತ್ತದೆ. ಜಿಲ್ಲಾಧಿಕಾರಿಗಳಿಗೆ ಶಾನುಭೋಗರು ಕೊಟ್ಟಿರುವ ದೂರುಗಳೆಲ್ಲವು ತಪ್ಪು ಎಂದು ಗೊತ್ತಾಗುತ್ತದೆ. ಸೇತುವೆ ಕಟ್ಟಿದ್ದಕ್ಕೆ ಮತ್ತು ವಿದ್ಯುತ್‌ನ್ನು ತಯಾರಿಸುತ್ತಿರುವುದಕ್ಕೆ ಶಂಕರನನ್ನು ಶ್ಲಾಘಿಸುತ್ತ ಆತನ ಪರವಾಗಿ ಮತ್ತಷ್ಟು ಕೆಲಸ ಮಾಡಿಕೊಡುವುದರ ಬಗ್ಗೆ ಹೇಳಿ ಹೊರಡುತ್ತಾರೆ. ಆದರೆ ಶಾನುಭೋಗ ಲಂಚಕೊಡಲು ಹೋಗುವ ಉದ್ಧಟತನದಿಂದಾಗಿ ಜಿಲ್ಲಾಧಿಕಾರಿಗಳು ಶಾನುಭೋಗನನ್ನು ಕೆಲಸದಿಂದ ತಗೆದುಹಾಕುತ್ತಾರೆ. ಇಡೀ ಕೃತ್ಯಕ್ಕೆ ಶಾನುಭೋಗನೇ ಕಾರಣನೆಂದು ಇಡೀ ಕಾಡನ್ನು ಸಮೀಕ್ಷೆಮಾಡಲು ತಿಳಿಸಿ ಹೊರಡುತ್ತಾರೆ. ಅವರೆಲ್ಲರು ಹೋದ ಮೇಲೆ ಶಂಕರ ಮತ್ತು ಶಾನುಭೋಗರಿಬ್ಬರೇ ಉಳಿದಾಗ ಶಂಕರ ಮಾತಿಲ್ಲದೇ ಹೊರಡುತ್ತಿರುವ ಸಂದರ್ಭದಲ್ಲಿ**

ಶಾನುಭೋಗ ತನ್ನ ಇಡೀ ಕ್ರೌರ್ಯವನ್ನು, ತನ್ನೊಳಗಿನ ಕುತಂತ್ರವನ್ನು ಪ್ರತಿನಿಧಿಸುವ ಹಾಗೆ ಮಾತುಗಳನ್ನಾಡುತ್ತಾನೆ. ಈ ದೃಶ್ಯ 93 ಮತ್ತು 94ರಲ್ಲಿ ಮೂಡಿಬಂದಿದೆ. ಆದರೆ ಚಿತ್ರಕಥೆಯಲ್ಲಿ ನಾವು ಬರೆದುಕೊಂಡಿದ್ದ ಸಂಭಾಷಣೆ ಹಾಗೂ ಚಿತ್ರಕಥೆಯ ಒಟ್ಟಾರೆ ಸ್ವರೂಪ ನಾವು ಚಿತ್ರಿಸುತ್ತಿದ್ದ ಚಿತ್ರೀಕರಣ ತಾಣದಲ್ಲಿ ಸಾಕಷ್ಟು ಬದಲಾವಣೆಗಳನ್ನು ತಂದುಕೊಟ್ಟಿದೆ. ಒಂದು ಬಹು ದೊಡ್ಡ ದೃಶ್ಯ 94 ಸಮರ್ಥಕವಾಗಿ, ಮಾತುಗಳ ಮೂಲಕ ಮತ್ತು ಇಡೀ ದೃಶ್ಯ ಮಳೆಯಲ್ಲಿಯೇ ನಡೆಯುವುದರ ಮೂಲಕ ತನ್ನ ಪ್ರಭಾವವನ್ನು ಅದ್ಭುತವಾಗಿ ಸಮೀಕರಿಸುತ್ತದೆ. ವಿದ್ಯುತ್ ಶಕ್ತಿಯ ಜಾಗದಲ್ಲಿನ ಹಾಗೂ ಸೇತುವೆಯನ್ನು ಕಟ್ಟಿದಂತಹ ಕಲಾನಿರ್ದೇಶನ ತಂಡದ ಕೆಲಸ ಇಲ್ಲಿ ಬಹಳ ಮುಖ್ಯವಾಗಿ ಕಣ್ಣಿಗೆ ಕಟ್ಟುತ್ತದೆ.

# ದೃಶ್ಯ–95

***ಹಗಲು–ಶಾನುಭೋಗರ ಮನೆಯ ಒಳಗೆ***

| | | |
|---|---|---|
| | | (ನಿರಂತರ ಮಳೆಯ ಮಧ್ಯೆ ಕೋಣೆಯಲ್ಲಿ ಕೂಡಿಹಾಕಿರುವ ದುಃಖವೂ ತನ್ನದೇ ದುಃಖವೆಂಬಂತೆ ತಾಯಿಯೂ ಅಳುತ್ತಿದ್ದಾಳೆ.) |
| ಶ್ರೀಮತಿ | : | ಅಮ್ಮಾ, ಒಂದ್ಸಲ ಶಂಕರ್‌ನ ನೋಡ್ಲಿಕ್ ಬಿಡಮ್ಮ. ಈಗ್ಲೂ ನಾನ್ ಶಂಕರ್ಗೆ ಹೇಳ್ದೆ ಹೋದ್ರೆ ಮತ್ತ್ ಯಾವಾಗ್ಲಮ್ಮ? ಒಂದ್ಸಲ ಶಂಕರ್‌ನ ಕಂಡ್ರೆ ಎಲ್ಲ ಸರಿ ಹೋಗ್ತದೆ. ಬಿಡಮ್ಮ ಬಿಡಮ್ಮ. ಇನ್ನೇನ್ ಅಪ್ಪ ಬಂದೇ ಬಿಡ್ತಾನೆ. ಈ ಪಂಜರದಿಂದ ತಗೆದು ನನ್ನನ್ನ ತಿರುಗಿ ಇನ್ನೊಂದ್ ಪಂಜರಕ್ ಕಳುಸ್ತಾನೆ. ಆಮೇಲೆ ನಾನು ಬಾಗಿಲುಗಳೇ ಇಲ್ಲದ ಕಿಟಕಿಗಳೇ ಇಲ್ಲದ ಒಂದು ಸುಭದ್ರವಾದ ಸುಭೀಕ್ಷವಾದ ಮನೆಯ ಗೃಹಲಕ್ಷ್ಮಿಯಾಗ್ತೇನೆ. ನಿನ್ನ ಹಾಗೆ.<br>(ತಾಯಿ ಅವಳನ್ನು ಆಶ್ಚರ್ಯದಿಂದ ನೋಡುತ್ತಾರೆ)<br>.. ಮೈ ಮನಸ್ಸು ಎರೆಡೂ ಅಡವಿಟ್ಟು ಆಯುಷ್ಯ ಕಳೀತೇನೆ. ನಿನ್ನ ಹಾಗೆ. ನಿರಂತರವಾಗಿ ಬಾಳಿಡೀ ನಡಿಯೋ ಒಂದು ಸುಧೀರ್ಘ ಆತ್ಮಹತ್ಯೆ<br>(ತಾಯಿ ಬೇಡ ಎನ್ನುವ ಸೂಚನೆ ನೀಡುತ್ತಾಳೆ. ಶ್ರೀಮತಿ ಒಳಗೆ ದುಃಖಿಸುತ್ತಾಳೆ. ತಾಯಿ ಬಾಗಿಲನ್ನು ತೆರೆಯುತ್ತಾರೆ ಶ್ರೀಮತಿ ಹೊರಗೆ ಬಂದು ತಾಯಿಯನ್ನ ನೋಡಿದಾಗ) |
| ತಾಯಿ | : | ಹೋಗು ಕಂದ ಹೋಗು<br>(ಶ್ರೀಮತಿ ಓಡಿಹೋಗುವಾಗ ಅವಳನ್ನು ತಾಯಿ ತಡೆದು)<br>.. ನಿಂತ್ಕೋ, ಬಾಯಿಲ್ಲಿ ಹಿಂಬಾಗ್ಲಿಂದ ಹೋಗ್ಬೇಡ, ಮುಂಬಾಗ್ಲಿಂದಾನೆ ಹೋಗು<br>(ಆಗ ಇಬ್ಬರೂ ಪರಸ್ಪರ ತಬ್ಬಿಕೊಳ್ಳುತ್ತಾರೆ. ನಂತರ ಅವಳ ಮೈ ಮುಟ್ಟಿ)<br>.. ನಿನ್ನ ಮೈ ಸುಡ್ತಾ ಇದೆ. ಈ ಜ್ವರದಲ್ ಹೇಗಮ್ಮ ಹೋಗ್ತಿಯ ಸ್ವಲ್ಪ ಇರು<br>(ಒಂದು ಕಂಬಳಿಯನ್ನು ಕೊಟ್ಟು)<br>.. ಹೊದ್ಕೊ ಹೊದ್ಕೊ |

(ಅವಳಿಗೆ ಛತ್ರಿಯನ್ನ ಕೊಡುತ್ತಾರೆ)
ಮಳೆಲ್ ನೆನೀಬೇಡ ಬಾ
(ತಬ್ಬಿಕೊಂಡು)
.. ಕಂದ ಎಲ್ಲ ಸರಿ ಹೋಗುತ್ತೆ

ಶ್ರೀಮತಿ : ಬರ್ತೀನಮ್ಮ
(ತಾಯಿ ಅವಳಿಗೆ ಛತ್ರಿ ಮತ್ತು ಕಂಬಳಿಯನ್ನು ಹೊದ್ದಿಸಿ ಭಾವುಕಳಾಗಿ ಬೀಳ್ಕೊಡುತ್ತಾರೆ. ತಾಯಿಯ ಕಣ್ಣೀರು ಮಳೆಯ ನಿರಂತರತೆಯಂತೆಯೇ ಕಾಣುತ್ತದೆ)

**ನಿರ್ದೇಶಕರ ಟಿಪ್ಪಣಿ:**
**ಶ್ರೀಮತಿ ತನ್ನನ್ನು ಮನೆಯಿಂದ ಕಳುಹಿಸಿಕೊಡುವಂತೆ ಅಮ್ಮನನ್ನು ಕೇಳುವ ಸಂಭಾಷಣೆ ಮೊನಚು ತಾಯಿಗೆ ತಟ್ಟುತ್ತದೆ. ಈ ದೃಶ್ಯದ ಮೂಲ ಕಲ್ಪನೆಯೇ ಜಯಂತ ಕಾಯ್ಕಿಣಿಯವರ ಒಂದು ಸೃಜನಶೀಲ ಸಂಭಾಷಣಾ ಪ್ರಕ್ರಿಯೆಯಾಗಿ ಮೂಡಿಬಂದಿದೆ. ಆಕೆ ಹೇಳುವ ನಿನ್ನ ಹಾಗೇ ಎಂಬ ಪದದ ವ್ಯಾಪ್ತಿಯನ್ನು ಅರಿತುಕೊಳ್ಳುವ ತಾಯಿ ಶ್ರೀಮತಿಯೂ ತನ್ನ ಹಾಗೆ ಅಗಬಾರದೆಂದು ಬಾಗಿಲು ತೆರೆದು ಕಳುಹಿಸುತ್ತಾಳೆ. ಇಂತಹ ಸಂಭಾಷಣೆಗಳ ಸಮೂಹವನ್ನೆ ಇಡೀ ಚಿಗುರಿದ ಕನಸಿನ ಉದ್ದಕ್ಕು ಕಾಣಬಹುದು.**

# ದೃಶ್ಯ–96

***ಹಗಲು–ಬಂಗಾಡಿ***

(ಮಳೆಯಲ್ಲಿ ನೆನೆಯುತ್ತ ಶ್ರೀಮತಿ ಶಂಕರನ ಮನೆಯ ಕಡೆಗೆ ಓಡಿ ಬರುತ್ತಿರುವ ಸಮಯದಲ್ಲಿ ಅವಳ ಛತ್ರಿ ಹಾರಿಹೋಗುತ್ತದೆ. ಹಾಗೆ ಮುಂದುವರೆದಾಗ ಅವಳಿಗೆ ಜ್ವರ ಜಾಸ್ತಿಯಾಗುತ್ತ ಕುಸಿದು ಬೀಳುತ್ತಾಳೆ. ಆದರೂ ಎದ್ದು ಜ್ವರದಲ್ಲಿ ನರಳುತ್ತ ಓಡುತ್ತಾಳೆ. ಅಂತಿಮವಾಗಿ ನಿತ್ರಾಣವಾಗಿ ಶಂಕರನ ಮನೆಯನ್ನು ತಲುಪುತ್ತಾಳೆ. ಮನೆಯನ್ನು ಪ್ರವೇಶಿಸಿಸಲು ಎಡಗಾಲಿಡಬೇಕೆನ್ನುವಷ್ಟರಲ್ಲಿ ಯೋಚಿಸಿ ಬಲಗಾಲಿಟ್ಟು ಬರುತ್ತಾಳೆ. ಚಳಿಯಲ್ಲಿ ನಡುಗುತ್ತ ಅಜ್ಜಿಯ ಭಾವಚಿತ್ರದ ಬಳಿ ಬಂದು)

ಶ್ರೀಮತಿ : ಅಜ್ಜಿ, ನಾನ್ ಬಂದ್ಬಿಟ್ಟೆ ಅಜ್ಜಿ. ನಾನ್ ಬಂದ್ಬಿಟ್ಟೆ ಇಲ್ಲಿಗೆ. (ನಿತ್ರಾಣಳಾಗಿ ಜ್ವರ ಪೀಡಿತಳಾಗಿ ಹಸಿವಿನಿಂದ ಕಂಗಾಲಾಗಿದ್ದರೂ ಶಂಕರನ ಮನೆಯನ್ನು ತನ್ನ ಮನೆಯನ್ನಾಗಿಸಿಕೊಂಡ ಶ್ರೀಮತಿಗೆ ಆತ್ಮತೃಪ್ತಿಯಿದೆ)

# ದೃಶ್ಯ–97

***ಹಗಲು–ಅಬ್ಬೀ ಜಲಪಾತ***

| | | |
|---|---|---|
| | | (ಜಲಪಾತದ ಬಳಿ ವಿದ್ಯುತ್ ಸ್ಥಾವರದ ರಿಪೇರಿ ಕಾರ್ಯದಲ್ಲಿ ತೊಡಗಿದ್ದಾನೆ) |
| ಶಂಕರ | : | ಭೈರ, ಎಂಟ್ನೆ ನಂಬರ್ ಸ್ಪ್ಯಾನರ್ ಇಲ್ವ? |
| ಭೈರ | : | ಮನೇಲಿದೆ, ಹೋಗಿ ತಂದ್ಬಿಡ್ಲ |
| ಶಂಕರ | : | ಏನು ಬೇಡ, ನಾನೆ ಹೋಗಿ ತಂದ್ಬಿಡ್ತಿನಿ. ಆ ಪೈಪ್ನ ಸರಿಯಾಗ್ ಕಟ್ಟು. ಇಲ್ಲ ಮಳೆಗ್ ಹೊಡ್ಕಂಡ್ ಬಂದ್ಬಿಡುತ್ತೆ<br>(ಇದೇ ಸಮಯಕ್ಕಾಗಿ ಮರೆಯಲ್ಲಿ ಹೊಂಚು ಹಾಕಿ ಕಾಯುತ್ತಿದ್ದ ಶಾನುಭೋಗರ ಆಳುಗಳು) |
| ಒಬ್ಬ | : | ಶಂಕ್ರ ಮನೆಗ್ ಹೋಗ್ತಾ ಇದಾನೆ. ಇದೇ ಸರಿಯಾದ ಸಮಯ. |
| ಇನ್ನೊಬ್ಬ | : | ಉಡಾಯ್ಸಿ ಬಿಡುವ. ಬಾ..<br>(ಎಂದು ತಮ್ಮ ಸಂಚಿನ ಮೊದಲ ಹೆಜ್ಜೆಗಳನ್ನು ಇಡತೊಡಗುತ್ತಾರೆ) |

# ದೃಶ್ಯ–98

***ಹಗಲು–ಶಂಕರನ ಮನೆಯ ಹೊರಗೆ***

| | | |
|---|---|---|
| | | (ಜಿಟಿಜಿಟಿ ಮಳೆಯಲ್ಲೇ ನೆನೆದು ಶಂಕರ ತನ್ನ ಮನೆಯ ಬಳಿ ಬಂದಾಗ ವರೂ ಕುಳಿತಿರುವ ಹಾಗೆ ಕಾಣಿಸುತ್ತದೆ ನಂತರ ಯಾರೆಂದು ಗೊತ್ತಾಗದೆ ಹತ್ತಿರ ಬಂದು ನೋಡಿದಾಗ ಶ್ರೀಮತಿ ವರೂ ಬಿಟ್ಟು ಹೋದ ಬಟ್ಟೆಯನ್ನು ಧರಿಸಿದ್ದಾಳೆ) |
| ಶಂಕರ | : | ಶ್ರೀಮತಿ, ಈ ಬಟ್ಟೆ ನೋಡಿ ನಾ ವರೂನೆ ಬಂದ್ಲು ಅಂತ ತಿಳ್ಕೊಂಡಿದ್ದೆ<br>(ಎನ್ನುತ್ತಿದ್ದಂತೆ ಶ್ರೀಮತಿ ಶಂಕರನನ್ನು ಹಿಂದಿನಿಂದ ಅಪ್ಪಿಕೊಳ್ಳುತ್ತಾಳೆ)<br>.. ಶ್ರೀಮತಿ, ಯಾಕೆ? ಏನಾಯ್ತು? (ಮೈಮುಟ್ಟಿ)<br>.. ಅರೆ ಮೈಯೆಲ್ಲ ಇಷ್ಟು ಸುಡ್ತಾಯಿದೆ |



| | | |
|---|---|---|
| ಶ್ರೀಮತಿ | : | ನಾನ್ ಮನೆ ಬಿಟ್ಟು ಬಂದ್ಬಿಟ್ಟೆ ಶಂಕರ್. ಇಲ್ಲಿಗೇ ಬಂದ್ಬಿಟ್ಟೆ |
| ಶಂಕರ | : | ಎಂಥ ಕೆಲ್ಸ ಮಾಡ್ದೆ ನೀನು, ಮಳೇಲೆ ನೆನ್ಕೊಂಡ್ ಬಂದ್ಯ<br>(ಅವಳನ್ನು ಮಂಚದ ಮೇಲೆ ಕೂರಿಸಿ ಅವಳಿಗೆ ಹೊದಿಕೆ ಹೊದಿಸುತ್ತಾ..)<br>.. ಮೈ ಕೈ ಎಲ್ಲ ಸುಡ್ತಾಯಿದೆ. ಏನ್ ಹುಚ್ಚನ |
| ಶ್ರೀಮತಿ | : | ನನ್ನ ಬಿಡ್ಬೇಡಿ ಶಂಕರ್. ನನ್ನ ಬಿಟ್ ಹೋಗ್ಬೇಡಿ |
| ಶಂಕರ | : | ಯಾಕ್ ಏನೇನೋ ಮಾತಾಡ್ತಿದ್ಯ ಓ ಜ್ವರ ನೆತ್ತಗೇರ್ತಿರ್ಬೇಕು ಓಂದ್ನಿಮ್ಷ ಇರು |

(ಔಷಧಿ ತರಲು ಹೋಗುವ ಶಂಕರನನ್ನು ತಡೆದು)

ಶ್ರೀಮತಿ : ಶಂಕರ್ ಬೇಡ. ಸಮೀಪನೆ ಇರಿ ಅಷ್ಟ್ ಸಾಕು. ಎಲ್ಲಾ ಬಿಟ್ಟು ಬಂದ್ಬಿಟ್ಟೆ. ಬಲ್ಗಾಲ್ ಇಟ್ಟೇ ನಾನ್ ಒಳ್ಗಡೆ ಬಂದಿದ್ದೇನೆ. ನನ್ನ ಬಿಡ್ಬೇಡಿ

ಶಂಕರ : ಶ್ರೀಮತಿ ಆ್ಯಂಟಿಬಯಾಟಿಕ್ ತಗಳ್ದೇ ಹೋದ್ರೆ ಜ್ವರ ಜಾಸ್ತಿಯಾಗುತ್ತೆ. ನೀನ್ ಮಲ್ಕೊ. ಓಂದ್ನಿಮ್ಷ ಬರ್ತಿನಿ (ಎಂದು ಒಳಗಡೆ ಹೋಗಿ ಔಷಧಿಗಾಗಿ ಹುಡುಕುತ್ತಾನೆ. ಅಷ್ಟರಲ್ಲಿ ಶ್ರೀಮತಿ ಪೂರಾ ನಿತ್ರಾಣಳಾಗಿರುತ್ತಾಳೆ)

ಶಂಕರ : ಶ್ರೀಮತಿ ಸದ್ಯಕ್ ಇದ್ ತಗೋ. ಆಮೇಲ್ ಡಾಕ್ಟ್ರತ್ರ ಹೋಗೋಣ

ಶ್ರೀಮತಿ : ಬೇಡ, ಬೇಡ

ಶಂಕರ : ಶ್ರೀಮತಿ ಹಟ ಮಾಡ್ಬೇಡ. ನನ್ ಮಾತ್ಕೇಳು. ತಗೋ. (ಔಷಧಿ ಕುಡಿಸುವಷ್ಟರಲ್ಲಿ ಶಾನುಭೋಗ ಅದನ್ನು ತಳ್ಳಿ ಒಡೆದುಹಾಕುತ್ತಾನೆ. ನಂತರ ಶ್ರೀಮತಿಯನ್ನು ಎಳೆದುಕೊಂಡು)

ಶಾನುಭೋಗ : ನಡಿಯೆ ಮನೆಗೆ.. (ಎಳೆದುಕೊಂಡು ಹೋಗುತ್ತಿರುವಾಗ)

ಶಂಕರ : ನೋಡಿ ಜ್ವರ ಏರ್ತಾಯಿದೆ ಅವ್ಳಿಗೆ. ಅದೂ ಅಲ್ದೆ ಮಳೇಲ್ ತೊಯ್ದು ತೊಪ್ಪೆಯಾಗ್ ಬಂದಿದಾಳೆ

ಶಾನುಭೋಗ : ಒಹೋ ಅದಿಕ್ಕೆ ನೀನ್ ಇವ್ಳ್ ಬಟ್ಟೆನು ಬದ್ಲಾಯಿಸ್ಬಿಟ್ಯ?

ಶಂಕರ : ಮೊದುಲ್ನೆ ಸಲ ಈ ಮನೆಗ್ ಕಾಲಿಡ್ತಿದಿರಿ ಕೆಟ್ ಮಾತಾಡ್ಬೇಡಿ

(ತನ್ನನ್ನು ಎಳೆದೊಯ್ಯುತ್ತಿರುವ ತಂದೆಯನ್ನು ತಡೆಯುವ ಶ್ರೀಮತಿಗೆ ಶಾನುಭೋಗ)

ಶಾನುಭೋಗ : ನಾನಲ್ಲಿ ಮದ್ವೆ ತಯಾರಿ ಮಾಡ್ತಾ ಇದ್ರೆ ನೀನಿಲ್ಲಿದಿಯ ಮಾನಗೇಡಿ ನಾಲಕ್ ಜನಕ್ ಗೊತ್ತಾಗೊ ಮುಂಚೆ ನಡಿಯೇ ಮನೆಗೆ

(ಬಲವಾದ ಸ್ಫೋಟದ ಸದ್ದಾಗಿ ಮನೆಯ ವಿದ್ಯುತ್ ಆರಿಹೋಗುತ್ತದೆ)

ಶಾನುಭೋಗ : ಕೇಳಿಸ್ತ? ನಿನ್ನ ಸಾಮ್ರಾಜ್ಯದ ಮೊದುಲ್ನೆ ಕೀರ್ತಿ ಕಳಶ ಪಡ್ಚಾ. ನಿನ್ನ ವಿದ್ಯುತ್ ಯಂತ್ರ ಕಲಾಷ್

(ನರಳುತ್ತಿರುವ ಶ್ರೀಮತಿಯನ್ನ ಎಳೆದು) .. ನಡಿಯೇ

(ಶಂಕರ ಎದುರಿಗೆ ಅಡ್ಡಲಾಗಿ ನಿಲ್ಲುತ್ತಾನೆ)

.. ಏಯ್ ನನ್ನ ಮಗಳನ್ನ ನನ್ ಮನೆಗ್ ಕರ್ಕೊಂಡ್ಹೋಗುತ್ತಿದ್ದೇನೆ. ಯಾವ್ ಡಿಸಿ ಸಾಹೇಬನೂ ತಡಿಯೋ ಹಾಗಿಲ್ಲ, ತಡಿಯೋದಿಕ್ ನೀನ್ಯಾರೋ ಲೇ..

| | | |
|---|---|---|
| ಶಂಕರ | : | ನಾನೂ ಇವಳ ಕೈ ಹಿಡಿಯೊ ಗಂಡ<br>(ಎಂದಾಗ ಶ್ರೀಮತಿ ಪುಳಕಿತಳಾಗುತ್ತಾಳೆ)<br>.. ಇದೂ ಇವಳ ಮನೆ<br>(ತಂದೆಯಿಂದ ಬಿಡಿಸಿಕೊಂಡು ಶಂಕರನನ್ನು ತಬ್ಬಿಕೊಳ್ಳುತ್ತಾಳೆ. ಶಾನುಭೋಗ ಸುಮ್ಮನೆ ನೋಡುತ್ತಿರುತ್ತಾನೆ) |



| | | |
|---|---|---|
| ಶಂಕರ | : | ಹೆದ್ರುಕೊಬೇಡ ಶ್ರೀಮತಿ... ಧೈರ್ಯವಾಗಿರು ನಾನಿದಿನಿ<br>(ಶ್ರೀಮತಿಯತ್ತ ಕೈ ಹಾಕಲು ಬರುವ ಶಾನುಭೋಗನಿಗೆ ಶಂಕರ ಹೊಡೆಯುತ್ತಾನೆ. ನೆಲಕ್ಕೆ ಬಿದ್ದ ಶ್ರೀಮತಿಗೆ ಜ್ವರ ಜಾಸ್ತಿಯಾಗಿ ಕೈಕಾಲು ಒದರತೊಡಗುತ್ತಾಳೆ. ಅಷ್ಟರಲ್ಲಿ ಅವಳ ತಾಯಿಯೂ ಅಲ್ಲಿಗೆ ಬರುತ್ತಾರೆ. ಶಂಕರ ಅವಳನ್ನು ಮನೆಯ ಅಂಗಳದ ಮಂಚಕ್ಕೆ ತಂದು ಮಲಗಿಸಿ ಕಂಬಳಿಯನ್ನು ಹೊದ್ದಿಸುತ್ತಾನೆ. ಸಹಾಯಕ್ಕೆ ತನ್ನ ಆಳುಗಳನ್ನು ಕೂಗುತ್ತಾನೆ)<br>.. ಜ್ವರ ಜಾಸ್ತಿಯಾಗ್ತಿದೆ. ಬೆಳ್ತಂಗಡಿ ಡಾಕ್ಟ್ರತ್ರ ಕರ್ಕೊಂಡ್ ಹೋಗ್ಬೇಕು.<br>(ನಂತರ ಅವಳನ್ನು ಕಂಬಳಿಯಿಂದ ಹೊದ್ದಿಸಿಕೊಂಡು ಬರುವ ಆಳಿಗೆ)<br>.. ಕೃಷ್ಣ ಮುದ್ರಾಡಿಯಿಂದ ಜೀಪ್ ತಗೊಂಡು ಸೇತ್ವೆ ಆಚೆ ಬಾ.. (ಎದುರಿಗೆ ಬರುವ ಮುತ್ತಯ್ಯನಿಗೆ)<br>.. ಮುತ್ತಯ್ಯ ನೀನು ಬಂದ್ಬುಡು ಸೇತ್ವೆ ಹತ್ರ<br>(ಅವರೆಲ್ಲರು ಹೋದ ಮೇಲೆ ಏನೋ ನೆನಪಾದವನಂತೆ ಶಾನುಭೋಗ ಸೇತುವೆ.. ಸೇತುವೆ.. ಎಂದು ಅದನ್ನು ಉಡಾಯಿಸಲು ತನ್ನ ಆಳುಗಳಿಗೆ ಅಪ್ಪಣೆ ಕೊಟ್ಟಿರುವ |

ಬಗ್ಗೆ ನೆನಪಿಸಿಕೊಳ್ಳುತ್ತಾನೆ)

ಶಾನುಭೋಗ : ಏಯ್ ಬೇಡ್ರೋ
(ಎಂದು ಅದನ್ನು ತಡೆಯಲು ಬರುತ್ತಾನೆ)

**ನಿರ್ದೇಶಕರ ಟಿಪ್ಪಣಿ:**

**ಏಕೆಂದರೆ ಕಥೆಯ ಸಂಘರ್ಷದ ಹಾದಿ ಸಂಕಷ್ಟದ ತುತ್ತ ತುದಿಯತ್ತ ಸಾಗುತ್ತಿರುವ ಆ ರಭಸಕ್ಕೆ ಇತ್ತ ಜ್ವರದಲ್ಲೂ ಓಡಿಬಂದು ಶಂಕರನ ಮನೆಗೆ ಬರುವ ಶ್ರೀಮತಿ ಅತ್ತ ಜಲಪಾತದಲ್ಲಿ ಕೆಲಸ ಮಾಡುತ್ತಿದ್ದ ಬೇಕಾಗಿದ್ದ ಒಂದು ಸಾಮಾಗ್ರಿ ತರಲು ಆತನೇ ಮನೆಗೆ ಬಂದಾಗವರಲಕ್ಷ್ಮಿಯ ಉಡುಗೆಯಲ್ಲಿ ಶ್ರೀಮತಿಯನ್ನು ಕಂಡು ವಿಚಲಿತನಾಗುತ್ತಾನೆ. ವರಲಕ್ಷ್ಮೀ ಬಿಟ್ಟುಹೋಗಿದ್ದ ಬಟ್ಟೆಯನ್ನು ಶ್ರೀಮತಿ ತೊಟ್ಟಿದ್ದಾಳೆ. ಅದರ ಮುಖಾಂತರ ವರಲಕ್ಷ್ಮಿಯ ಆಶಯವಾಗಿ ಶ್ರೀಮತಿ ಶಂಕರನಿಗೆ ಸಾಕ್ಷಾತ್ಕಾರವಾಗುತ್ತಾಳೆ. ಜ್ವರದ ತಾಪದಿಂದಗಿ ಆಕೆಯ ಮನಸ್ಥಿತಿ ಹದಗೆಡುತ್ತಾ ಹೋಗುವುದನ್ನು ಕಂಡ ಶಂಕರ ಕ್ವಿನೈನ್ ಮಾತ್ರೆಗಾಗಿ ಹುಡುಕಾಡಿ ಅದಿಲ್ಲದಿದ್ದಾಗ ಅದಕ್ಕೆ ಸಂಬಂಧ ಪಟ್ಟಂತಹ ಟಾನಿಕ್‌ನ್ನು ಕುಡಿಸುವಷ್ಟರಲ್ಲಿ ಶಾನುಭೋಗ ಬಂದು ಅದನ್ನು ಒಡೆದುಹಾಕುತ್ತಾನೆ. ಈ ಸಂಘರ್ಷದಲ್ಲಿ ಕೆಳಗೆ ಬಿದ್ದ ಶ್ರೀಮತಿ ಜ್ವರದ ಉತ್ತುಂಗ ಸ್ಥಿತಿಗೆ ತಲುಪುತ್ತಾಳೆ. ತಕ್ಷಣವೆ ಆಕೆಯನ್ನು ಬೆಳ್ತಂಗಡಿಗೆ ಕರೆದುಕೊಂಡು ಹೋಗಲೇಬೇಕಾದ ಅನಿವಾರ್ಯತೆ ಬಂದಾಗ ಶಂಕರ ಆಕೆಯನ್ನು ಎತ್ತಿಕೊಂಡು ಹೋಗುತ್ತ ಸೇತುವೆಯ ಕಡೆಗೆಹೋಗುತ್ತ ಆ ಕಡೆಯಿಂದ ಜೀಪ್ ತರುವಂತೆ ಹೇಳಿ ಹೊರಡುತ್ತಾನೆ. ಆದರೆ ಶಾನುಭೋಗ ಈಗಾಗಲೇ ಸೇತುವೆಯನ್ನು ಉಡಾಯಿಸಲು ತನ್ನವರಿಗೆ ಹೇಳಿದ್ದರಿಂದ ದಿಕ್ಕೆಡುತ್ತಾನೆ. ಈ ಎಲ್ಲ ದೃಶ್ಯಗಳು ಸಂಘರ್ಷದ ಅಥವಾ ಮುಕ್ತಾಯದ ಹಂತದ ಹತ್ತಿರವಾಗುತ್ತಿದ್ದಂತೆ ಎಲ್ಲ ಪಾತ್ರಗಳು ಒಂದು ಕಡೆ ಕೇಂದ್ರಿತವಾಗಿ ಒಂದು ಘರ್ಷಣೆಯನ್ನು ಒಟ್ಟಾಗಿಸಿಕೊಳ್ಳುವತ್ತ ಸಾಗುತ್ತವೆ. ನಿಧಾನವಾಗಿ ಸಿನಿಮಾದ ರಭಸ ಈ ದೃಶ್ಯಗಳ ಮೂಲಕ ಮುಕ್ತಾಯದತ್ತ ಸರಿಯತೊಡಗುತ್ತದೆ.**

# ದೃಶ್ಯ–99

***ಹಗಲು–ಬಂಗಾಡಿ ದಾರಿ***

(ಭಯಂಕರಮಳೆಯಲ್ಲಿ ಶ್ರೀಮತಿಯನ್ನು ಎತ್ತಿಕೊಂಡು ಓಡುತ್ತಿರುವ ಶಂಕರ ಮತ್ತು ಅತ್ತ ಸೇತುವೆಗೆ ಮದ್ದುಗುಂಡುಗಳನ್ನು ಜೋಡಿಸುತ್ತಿರುವ ಶಾನುಭೋಗರ ಕಡೆಯವರು ಮತ್ತೊಂದೆಡೆ ಶಂಕರನನ್ನು ತಡೆಯಲು ಓಡಿ ಬರುತ್ತಿರುವ ಶಾನುಭೋಗ)

ಶಾನುಭೋಗ : ಬೇಡ ಶಂಕ್ರ ಹೋಗ್ಬೇಡ. ಸೇತ್ವೆ ಮೇಲೆ ಹೋಗ್ಬೇಡ ಶಂಕ್ರ.
(ಹತ್ತಿರ ಬರುವ ಶಂಕರನನ್ನು ತಡೆಯುತ್ತ)
.. ಬೇಡಪ್ಪ ಹೋಗ್ಬೇಡಿ
(ಅವನನ್ನು ಪಕ್ಕಕ್ಕೆ ದೂಡಿ ಶಂಕರ ಮುಂದಕ್ಕೆ ಚಲಿಸುತ್ತಾನೆ. ತಕ್ಷಣ ಬಾಂಬನ್ನು ಒತ್ತಿ ಸೇತುವೆಯ ಅರ್ಧಭಾಗವನ್ನು ನಾಶಮಾಡುತ್ತಾರೆ. ಶಂಕರ ವಾಪಾಸ್ ಬಂದು)
.. ಮುತ್ತಯ್ಯ ಶ್ರೀಮತಿನ ಮನೆಗ್ ಕರ್‍ಕೊಂಡ್ಹೋಗಿ. ನಾನ್ ಪಂಡಿತ್ರು ಮನೆಯಿಂದ ಔಷಧಿ ತರ್‍ತೀನಿ
(ನದಿಗೆ ಹಾರಿ ಈಜತೋಡಗುತ್ತಾನೆ. ಶಾನುಭೋಗ ಬೇಡವೆಂದು ಕೂಗುತ್ತಿರುತ್ತಾನೆ. ಇತ್ತ ಮನೆಯಲ್ಲಿ ಶ್ರೀಮತಿ ಶಂಕರನ ಕನವರಿಕೆ ಮಾಡುತ್ತಿರುತ್ತಾಳೆ. ಶಂಕರ ಹೇಗೂ ಈಜಿ ದಡಸೇರುತ್ತಾನೆ. ಮನೆಯಲ್ಲಿ ತಾಯಿ ಶ್ರೀಮತಿಯ ತಲೆಗೆ ತಣ್ಣೀರು ಬಟ್ಟೆ ಹಾಕಿ ಸಾಂತ್ವನ ಹೇಳುತ್ತಿರುತ್ತಾರೆ. ಶ್ರೀಮತಿ ಅತೀವ ಜ್ವರದಿಂದ ನರಳುತ್ತಿರುತ್ತಾಳೆ)

ತಾಯಿ : ಪುಟ್ಟೀ ಇನ್ನೇನ್ ಶಂಕ್ರ ಬಂದ್ಬಿಡ್ತಾನೆ. ಪುಟ್ಟೀ ಮಾತಾಡು..
(ಎಂದು ಅವಳನ್ನು ಎಚ್ಚರವಿಡಲು ಪ್ರಯತ್ನಸುತ್ತಲೇ ಇರುತ್ತಾರೆ)

## ದೃಶ್ಯ–100

***ಹಗಲು–ಮುದ್ರಾಡಿ ಪಂಡಿತರ ಮನೆಯ ಹೊರಗೆ***

(ಸುರಿಯುತ್ತಿರುವ ಧಾರಾಕಾರ ಮಳೆಯಲ್ಲಿಯೇ ಶಂಕರ ಪಂಡಿತರ ಕೈಯಿಂದ ಮದ್ದನ್ನು ಪಡೆದು ಹೊರಡುತ್ತಾನೆ)

ಪಂಡಿತರು : ಇದನ್ನ ಅರ್ಧ ಘಂಟೆಗೊಂದ್ಸಲ ಎರೆಡೆರೆಡ್ ಚಮ್ಚ ಕುಡುಸ್ತಾ ಇರಿ. ಮತ್ತೆ ಮಾತಾಡಿಸ್ತಾಯಿರಿ ಆಯ್ತ. ಅವಳಿಗೆ ಎಚ್ಚರ ತಪ್ದೇ ಇರ್ಲಿ

ಶಂಕರ : ಪಂಡಿತ್ರೆ ಹೇಗಾದ್ರು ಕಾರ್ ಮಾಡ್ಕೊಂಡು ಡಾಕ್ಟ್ರನ್ನ ಕರ್ಕೊಂಡ್ ಬಂದ್ಬಿಡಿ

ಪಂಡಿತರು : ಆಯ್ತಾಯ್ತು..

(ಯಾವುದೇ ವೈದ್ಯಕೀಯ ಸೌಲಭ್ಯಗಳಿಲ್ಲದ ಮಲೆನಾಡಿನ ಪರಿಸ್ಥಿತಿಯನ್ನು ಇಲ್ಲಿ ಗಮನಿಸಬಹುದು)

## ದೃಶ್ಯ–101

*ಹಗಲು–ಶಂಕರನ ಮನೆಯ ಹೊರಗೆ*

(ಇತ್ತ ಶ್ರೀಮತಿ ಜ್ವರದ ಉತ್ಕಟಾವಸ್ಥೆಯಲ್ಲಿ ಶಂಕರನ ತೀವ್ರವಾದ ಕನವರಿಕೆ ಮಾಡುತ್ತಲೇ ಇರುತ್ತಾಳೆ. ಆಕೆ ಜ್ವರದ ಒಂದು ತೀವ್ರತೆಯಲ್ಲಿ ತೀವ್ರವಾಗಿ ನರಳುತ್ತಿದ್ದಾಳೆ)

ಶ್ರೀಮತಿ : ಶಂಕರ್ ನನ್ನ ಬಿಟ್ ಹೋಗ್ಬೇಡಿ
(ಶಂಕರ ಅಷ್ಟರಲ್ಲಿ ಔಷಧಿಯನ್ನು ತರುತ್ತಾನೆ ಶ್ರೀಮತಿಯ ಹತ್ತಿರ ಬಂದು)

*ಚಲನಚಿತ್ರದಲ್ಲಿ ಈ ಸಂಭಾಷಣೆಯನ್ನು ತಗೆದುಹಾಕಲಾಗಿದೆ:*

***ಶಂಕರ : ಶ್ರೀಮತಿ..***

***ಶ್ರೀಮತಿ : ಯಾಕಿಷ್ಟು ತಡ***

***ಶಂಕರ : ಶ್ರೀಮತಿ***

***ಶ್ರೀಮತಿ : ಇನ್ನೊಂದ್ಸಾರ್ತಿ ಕರೀರಿ ಹಾಗೆ***

***ಶಂಕರ : ಶ್ರೀಮತಿ, ಮೊದ್ಲು ಈ ಔಷಧಿ ತಗೋ. ಕಾರ್ಕಳದ ಡಾಕ್ಟ್ರು ಇನ್ನೇನ್ ಬಂದ್ಬಿಡ್ತಾರೆ.***
***(ಮಂಪರಿಗೆ ಹೋಗುತ್ತಿರುವ ಶ್ರೀಮತಿಗೆ)***
***.. ನೋಡು ನೋಡು ಏನು ಆಗಿಲ್ಲ ನಿಂಗೆ***

ಶಂಕರ : ಶ್ರೀಮತಿ, ಮೊದ್ಲು ಈ ಔಷಧಿ ಕುಡಿ..
(ಕುಡಿಸುತ್ತಾನೆ) .. ಇನ್ನು ಸ್ವಲ್ಪ. ಬೆಳೆಗ್ಗೆ ನೆರೆ ಕಡ್ಮೆಯಾಗ್ತಿದ್ದಂಗೇನೆ ಆಸ್ಪತ್ರೆಗೋಗಣ.. ನೋಡು ನೋಡು ನಿನಗೇನು ಆಗಿಲ್ಲ. ಧೈರ್ಯವಾಗಿರು ಧೈರ್ಯವಾಗಿರು. ನೀನು ಈ ಮನೆ ನಡ್ಸ್ಕಂಡ್ ಹೋಗೋದ್ ಬೇಡ್ವ? ಅಜ್ಜಿಗ್ ಮಾತ್ ಕೊಟ್ಟಿದಿವಿ ನಾವು..

ಶ್ರೀಮತಿ : ಇದು ಕನಸಾ?

ಶಂಕರ : ಕನಸಲ್ಲ ಶ್ರೀಮತಿ ನಿಜ, ಕಾಣಿಸ್ತಾರೋದು, ಅನ್ನಿಸ್ತಾರೋದು ಎಲ್ಲ ನಿಜ..
(ಎಂದಾಗ ಅವನನ್ನು ತಬ್ಬಿಕೊಳ್ಳುತ್ತಾಳೆ)

ಶ್ರೀಮತಿ : ನಂಗಿಷ್ಟೆ ಸಾಕು

ಶಂಕರ : ನನಿಗ್ ನೀನ್ ಬೇಕು. ನೀನ್ ಬೇಕು ಶ್ರೀಮತಿ. ಈ ಬದುಕು ತುಂಬ ಸುಂದರವಾಗಿದೆ. ಹಟ ಮಾಡು ನೀನ್ಯಾವಾಗ್ಲು ಮಾಡ್ತಿರ್ತೀಯಲ್ಲ ಹಾಗೆ ಹಟಮಾಡು. ನನ್ಜೊತೆ ಇರ್ತೀನಂತ ಹಟಮಾಡು. ಪಟಪಟ ಅಂತ ಮಾತಾಡು ಶ್ರೀಮತಿ. ನೀನಿಲ್ದೆ ನನಗೇನು ಇಲ್ಲ ಶ್ರೀಮತಿ. ನನಗೆ ನೀನ್ ಬೇಕು.
(ಎಂದು ದುಃಖಿಸುತ್ತಾನೆ. ಆಗ ಶ್ರೀಮತಿ ವರೂ ಕೊಟ್ಟ ಉಂಗುರವನ್ನು ಕಷ್ಟಪಟ್ಟು ಹಿಂತಿರುಗಿಸುತ್ತ)



ಶ್ರೀಮತಿ : (ಕ್ಷೀಣಿಸುತ್ತ..) ಶಂಕರ್..
(ಅವನ ಕೈಗಳನ್ನು ಹಿಡಿದು ಪ್ರಾಣವನ್ನು ಬಿಡುತ್ತಾಳೆ. ಶಂಕರ್ ದಿಗ್ಭ್ರಮೆಗೊಂಡು ಜೋರಾಗಿ ಆಕೆಯ ಹೆಸರನ್ನು ಕೂಗುತ್ತಾನೆ. ಎಲ್ಲರೂ ದುಃಖಿಸುತ್ತಾರೆ. ಅವನ ಕೂಗು ಇಡೀ ಬಂಗಾಡಿಯಲ್ಲಿ ಮಾರ್ದನಿಗೊಳ್ಳುತ್ತದೆ.)

**ನಿರ್ದೇಶಕರ ಟಿಪ್ಪಣಿ:**

**ಶಾನುಭೋಗ ತಾನೇ ಭಸ್ಮಾಸುರನ ಹಾಗೆ ಸೇತುವೆಯನ್ನು ಧ್ವಂಸ ಮಾಡಲು ಹೇಳಿ ತನ್ನ ಮಗಳೇ ಅತ್ತ ಕಡೆ ಸಾವು–ಬದುಕಿನ ಹೋರಾಟದತ್ತ ಹೊರಟಿರುವ ಸ್ಥಿತಿಯಲ್ಲಿದ್ದಾಗ ಅದನ್ನು ತಡೆಯಲು ಹೋಗುತ್ತಾನೆ ಆದರೆ ವಿಧಿ ಬೇರೊಂದು ಯೋಚನೆಯನ್ನು ಮಾಡಿರುತ್ತದೆ. ಸೇತುವೆ ನಾಶವಾಗುತ್ತದೆ. ಆದರೂ ಧೃತಿಗೆಡದೆ ಶಂಕರ ಶ್ರೀಮತಿಯನ್ನು ಮುತ್ಯನೊಡನೆ ಕಳುಹಿಸಿ ತಾನು ಪ್ರವಾಹದಲ್ಲಿ ಈಜಿ, ಸೀತಾರಾಮನ ತಂದೆಯ ಮನೆಗೆ ಹೋಗಿ ಅಲ್ಲಿಂದ ಔಷಧಿಯನ್ನು ತಗೆದುಕೊಂಡು ಬಂದು ಶ್ರೀಮತಿಗೆ ಕುಡಿಸುತ್ತಾನೆ. ಅವನಲ್ಲೀಗ ಶ್ರೀಮತಿಯನ್ನು ಉಳಿಸಿಕೊಳ್ಳುವ ಕಾತರತೆ ಮತ್ತು ಬದುಕಿನ ಬದ್ಧತೆಯನ್ನು ಕಾಣುತ್ತೇವೆ. ಆದರೆ ಶ್ರೀಮತಿ ವಿರುದ್ಧ ದಿಕ್ಕಿನಲ್ಲಿ**

ಸಾಗುತ್ತಾಳೆ. ತನ್ನ ಕೈಗೆ ಬಂದಿದ್ದ ವರಲಕ್ಷ್ಮಿಯ ಉಂಗುರವನ್ನು ತಿರುಗಿ ಶಂಕರನಿಗೆ ಕೊಡುತ್ತ ತನ್ನ ಆಸೆ, ಆಕಾಂಕ್ಷೆ ಮತ್ತು ಕನಸು ಎಲ್ಲವನ್ನು ತ್ಯಜಿಸಿ ಕಣ್ಣುಮುಚ್ಚುತ್ತಾಳೆ. ಈ ದೃಶ್ಯದ ಸನ್ನಿವೇಶದ ಒಟ್ಟಾರೆ ಚಿತ್ರೀಕರಣ ಹಾಗೂ ಅದರ ಪ್ರತಿಫಲ ಅದ್ಭುತವಾಗಿದೆ. ಕಾರಣ ಇದೊಂದು ಸಾಂಘಿಕ ಕ್ರಿಯೆ. ಮುಖ್ಯಪಾತ್ರಧಾರಿಗಳಂತು ಇಡೀ ಚಿತ್ರದ ಈ ಭಾವುಕ ತಿರುವನ್ನು ಬಹಳ ಕಾಯ, ವಾಚ, ಮನಸಾ ಅಭಿನಯಿಸಿದ್ದಾರೆ ಎಂಬುದರಲ್ಲಿ ಎರಡನೇ ಮಾತಿಲ್ಲ. ನಟ ಶಿವರಾಜ್‌ಕುಮಾರ್ ತನ್ನ ಅಭಿನಯದ ಹಲವು ಮಜಲುಗಳಲ್ಲಿ ಚಿಗುರಿದ ಕನಸನ್ನು ಈ ತುತ್ತತುದಿಗೆ ಇಡಿಸುವಂತಹ ಕ್ಷಣ ಅದ್ಭುತವಾದಂತಹ ಅನುಭವವೊಂದನ್ನು ಕೊಡುತ್ತದೆ. ಈ ದೃಷ್ಟಿಯಲ್ಲಿ ಅದಕ್ಕೆ ಪೂರಕವಾಗಿ ಗೌರಿಶಂಕರ್‌ರವರ ಛಾಯಾಗ್ರಹಣ, ಮನೋಹರ್‌ರವರ ಸಂಗೀತ ಮತ್ತು ಇಡೀ ಚಿತ್ರಕಥೆಯನ್ನು ಕಟ್ಟುವಲ್ಲಿ ನಾನು ಮತ್ತು ಜಯಂತ ಕಾಯ್ಕಿಣಿ ಕೆಲವೇ ಸಂಭಾಷಣೆಗಳನ್ನು ಬಳಸಿಯೂ ಕೂಡ ಅದ್ಭುತವಾದ ಪರಿಣಾಮವನ್ನು ತರಬಲ್ಲ ದೃಶ್ಯ ಕಲ್ಪನೆ ಇವುಗಳೆಲ್ಲದರಿಂದಾಗಿ ಸಾಹಸ ದೃಶ್ಯಗಳನ್ನೂ ಕೂಡ ಬಹಳ ನೈಜವಾಗಿ ಮನೋಜ್ಞವಾಗಿ ಮೂಡಿಬರಲು ಕಾರಣ. ನಾವೆಲ್ಲೂ ವೈಭವೀಕರಿಸಲು ಹೋಗದೆ ಚಿತ್ರದ ಚೌಕಟ್ಟಿಗೆ ಬೇಕಾದಂತಹ ಘನತೆಯನ್ನು ಗಹನತೆಯನ್ನು ತರಲು ಪ್ರಯತ್ನಿಸಿದ್ದು. ಇಡೀ ಚಿತ್ರ ತಂಡ ಸುಮಾರು ಮೂವತ್ತು ದಿನಗಳ ಕಾಲ ಮಳೆಯಲ್ಲೇ ಕೆಲಸಮಾಡುತ್ತ ನೆಲೆಸಿತ್ತು ಎನ್ನುವುದನ್ನು ಮತ್ತು ಇತ್ತೀಚಿನ ದಿನಗಳಲ್ಲಿ ನಾವು ಕಾಣುವ ಕೇವಲ ಮಾತಿನ ಬದ್ಧತೆಗೆ ಮೀರಿದಂತಹ ಶ್ರಮಿಕ ಬದ್ಧತೆಯನ್ನು ಈ ಚಿತ್ರದಲ್ಲಿ ಕಾಣುತ್ತೇವೆ. ಶ್ರೀಮತಿಯನ್ನು ಕಳೆದುಕೊಂಡ ಶಂಕರನ ಮನಸ್ಥಿತಿ ಮತ್ತು ಅದರ ಹಿನ್ನಲೆಯಲ್ಲಿ ಬರುವ ಆಲಾಪ ಮನೋಹರ್‌ರವರ ಸೃಜನಶೀಲ ಪ್ರಕ್ರಿಯೆ. ಒಟ್ಟಾರೆ ಇಡೀ ತಂಡದ ಶ್ರಮ ಅಥವಾ ಪರಿಶ್ರಮ ಇಲ್ಲಿ ಎದ್ದುಕಾಣುತ್ತದೆ.

# ದೃಶ್ಯ–102

***ಹಗಲು–ಬಂಗಾಡಿ***

(ನಿರಂತರ ಮಳೆಯೇ ಈ ಬದುಕಿನ ವೈರುಧ್ಯಕ್ಕೆ ಸಾಕ್ಷಿಯಾಗಿ ನಿಂತಂತೆ ನಿಧಾನವಾಗಿ ಋತುಗಳು ಬದಲಾಗಿ ಮತ್ತೆ ಹಲ ದಿನಗಳ ನಂತರ ಬಂಗಾಡಿ ಕಣ್ಣುಬಿಡುತ್ತದೆ.)

ಶಾನುಭೋಗ : ಸೇತ್ವೆ, ಸೇತ್ವೆ ಕಟ್ಬೇಕು. ಶ್ರೀಮತೀನ ಆಸ್ಪತೆಗ್ ಕರ್‍ಕೊಂಡ್ ಹೋಗ್ಬೇಕು. ಸೇತ್ವೆ ಕಟ್ಬೇಕು. ಶ್ರೀಮತೀನ ಆಸ್ಪತೆಗ್ ಕರ್‍ಕೊಂಡ್ ಹೋಗ್ಬೇಕು.

(ಶಾನುಭೋಗ ರಂಗರಾಯರು ಅಲ್ಲಿ ಇಲ್ಲಿ ಬಿದ್ದ ಕಲ್ಲುಗಳನ್ನು ಜೋಡಿಸುತ್ತಿದ್ದಾರೆ. ಸ್ವಯಂಕೃತ ಅಪರಾಧಗಳಿಂದಾಗಿ ಪ್ರಜ್ಞೆಕಳೆದುಕೊಂಡ ಶಾನುಭೋಗ ರಂಗರಾಯರು ಮಗಳ ನೆನಪಿನಲ್ಲಿ ಹುಚ್ಚರಾಗಿದ್ದಾರೆ)

## ದೃಶ್ಯ–103

***ಹಗಲು–ಶಂಕರನ ಮನೆಯ ಒಳಗೆ***

(ಅಜ್ಜಿಯ ಚಿತ್ರಪಟದ ಮುಂದೆ ನಿಂತ ಶಂಕರನ ನೆನಪುಗಳು ಅವನನ್ನು ಕಾಡತೊಡಗುತ್ತವೆ. ತನ್ನ ಬಾಳಿನಲ್ಲಿ ಕಳೆದು ಹೋದ ಶ್ರೀಮತಿ ಮತ್ತು ಅಜ್ಜಿಯರ ಚಿತ್ರಿಕೆಗಳು ಅವನ ಮನಃ ಪಟಲದಲ್ಲಿ ಮೂಡುತ್ತವೆ. ಇದರಿಂದಾಗಿ ಊರಿಂದ ಹೊರಟೇ ಬಿಡಲು ಶಂಕರ ನಿರ್ಧರಿಸುತ್ತಾನೆ. ಹೊರಟೇ ಬಿಡುತ್ತಾನೆ)

## ದೃಶ್ಯ–104

***ಹಗಲು–ಬಂಗಾಡಿ ಬೆಟ್ಟದ ಮಧ್ಯೆ***

| | | |
|---|---|---|
| | | (ವಿಶಾಲವಾದ ಹಸಿರಿನ ಮಧ್ಯದಲ್ಲಿರುವ ಬಂಗಾಡಿಯನ್ನು ಬಿಟ್ಟು ಹೊರಡುತ್ತಿರುವ ಮನಸ್ಸು ಕಲ್ಲಿನಂತಾಗಿದ್ದರೂ ಮುತ್ತಯ್ಯ ಅದನ್ನು ಕರಗಿಸಲು ಪ್ರಯತ್ನಿಸುತ್ತಾನೆ) |
| ಶಂಕರ | : | ಇಲ್ಲ ಮುತ್ತಯ್ಯ.. |
| ಮುತ್ತಯ್ಯ | : | ಹೀಗೆ ಮಾಡ್ಬೇಡ, ಆತುರದಲ್ಲಿ ತೀರ್ಮಾನ ತಗೋಬೇಡ ದತ್ತಣ್ಣ. ನನ್ ಮಾತ್ಕೇಳೋ.. |
| ಶಂಕರ | : | ನಾನ್ಯಾಕ್ ಬಂದೆ ಇಲ್ಲಿಗೆ? ಬಂದು ಏನನ್ನ ಸಾಧಿಸ್ದೆ? ನೆಲ ನಂಬಿ ಬಂದಿದ್ದ ನಾನು ಹಾಗೆ ಇದಿನಿ ಆದ್ರೆ ನನ್ನನ್ನ ನಂಬ್ಕೊಂಡ್ ಬಂದ ಅಜ್ಜಿ, ಶ್ರೀಮತಿ ಯಾಕ್ ಕಣ್ಮರೆಯಾದ್ರು? ನನ್ ಕೈಹಿಡ್ದು ಕೆಲ್ಸಕ್ ಹಚ್ದವ್ರೆ ಯಾಕ್ ನನ್ನಿಂದ ದೂರ ಹೊರ್ಟ್ಹೋದ್ರು? ನನಿಗ್ ಒಂದು ಅರ್ಥ ಆಗ್ತಿಲ್ಲ |
| ಮುತ್ತಯ್ಯ | : | ಛೇ ಮಳ್ಳ.. ಮಳ್ಳ ನೀನು. ನನ್ನನ್ನ್ ನೋಡೋ ಮರಿಮಕ್ಕಳ ಸಾವನ್ನೆ ಕಣ್ಣಾರೆ ಕಂಡಿದ್ದೀನಿ ಆದ್ರು ಏನೂ ಆಗ್ದೆ ಯಾಕಿನ್ನು ಬದ್ಕಿದ್ದೀನಿ. ನಾವು ಬದುಕ್ಕಿದ್ದೀವಿ ಅನ್ನೋ ಒಂದೆ ಕಾರಣ ಸಾಕು ಮಗ ಇನ್ನೂ ಚೆನ್ನಾಗ್ ಬದುಕೋದಿಕ್ಕೆ. ನಡಿ ನಡಿ ಕೆಲ್ಸ ಶುರುಮಾಡುವ |



| | | |
|---|---|---|
| ಶಂಕರ | : | ಇಲ್ಲ ಮುತ್ತಯ್ಯ. ನನಗಿಲ್ ಯಾರಿದಾರೆ? ಹೊರ್ಟ್ಹೋಗ್ತೀನ್ ನಾನ್ ದಿಲ್ಲಿಗೆ. ನಾನ್ ವಾಪಾಸ್ |

ಹೊರ್ಟೋಗ್ತಿನಿ
(ಅಷ್ಟರಲ್ಲಿ ಶಂಕರ್ ಎಂದು ಯಾರೋ ಕೂಗಿದಂತಾಗುತ್ತದೆ ಯಾರೆಂದು ನೋಡಿದಾಗ ಅದು ಅಪ್ಪ ಸುಂದರ್ ರಾವ್ ಆಗಿರುತ್ತಾರೆ)

ಸುಂದರ್ : ಶಂಕರ..

ಶಂಕರ : ಅಪ್ಪಾ.. (ಓಡಿ ಹತ್ತಿರಕ್ಕೆ ಬಂದು ದುಃಖತಪ್ತನಾಗಿ ಜೋರಾಗಿ ತಂದೆಯನ್ನು ತಬ್ಬಿಕೊಳ್ಳುತ್ತಾನೆ)

ಸುಂದರ್ : ಶಂಕರ, ಯಾರೂ ಎಲ್ಲೂ ಹೋಗ್ಬೇಕಾಗಿಲ್ಲ. ನಿನ್ನ ಮುಂಗುರಳನ್ನ ನೇವರಿಸಿ ಬೀಸ್ತಾ ಇರೋ ಈ ಗಾಳೀಲಿ ಅಜ್ಜಿ ಉಸಿರಿದೆ. ಇಲ್ಲಿನ ಪ್ರತಿ ಹೊಸ ಚಿಗುರಿನ ಕಣ್ಣಿಂದ ಶ್ರೀಮತಿ ನಿನ್ನನ್ನ ನೋಡ್ತಿದಾಳೆ. ಮತ್ತಿಲ್ಲಿಗೆ ನಾನಷ್ಟೇ ಅಲ್ಲ ಯಾರ್ ಬಂದಿದಾರೆ ನೋಡು..
(ಅವನ ತಾಯಿಯನ್ನು ತೋರಿಸುತ್ತಾನೆ)

ತಾಯಿ : ಬೇಟಾ..
(ಶಂಕರ ಅವರ ಬಳಿಗೆ ಓಡಿ ಹೋಗಿ ತಬ್ಬಿಕೊಳ್ಳುತ್ತಾನೆ)
.. ಶಂಕರ್ ಬೇಟಾ, ನಾನು ನಿನ್ಜೊತೆಲಿ ಇರ್ತಿನೋ..
(ಕನ್ನಡದಲ್ಲಿ ಹೇಳುತ್ತಾಳೆ)

ಶಂಕರ : ಬಾಮ್ಮ..
(ತಂದೆ ತಾಯಿಯರಿಬ್ಬರನ್ನು ತಬ್ಬಿಕೊಂಡು ತನ್ನ ಮನೆಗೆ ಕರೆತರುತ್ತಾನೆ. ಮನೆಯ ಹೆಬ್ಬಾಗಿಲಿಗೆ ಬಂದಾಗ ವರಲಕ್ಷ್ಮೀಯೂ ಬಂದು ಅವನಿಗಾಗಿ ಬಾಗಿಲಲ್ಲಿ ಕಾಯುತ್ತಿರುವುದನ್ನು ನೋಡುವ ಶಂಕರ ಅವಳ ಹತ್ತಿರ ಬರುತ್ತಾನೆ. ವರಲಕ್ಷ್ಮೀಯೂ ಸಂತೋಷದಿಂದ ಹತ್ತಿರ ಬರುತ್ತಾಳೆ. ಇಬ್ಬರೂ ಒಂದಾಗುತ್ತಾರೆ)

(ನಂತರ ಬಂಗಾಡಿಯಲ್ಲಿ ಅವರ ಹೊಸಜೀವನ ವರಲಕ್ಷ್ಮೀ ಮತ್ತು ಶಂಕರನ ತಾಯಿ ವೈದ್ಯಕೀಯ ನೆರವುಗಳನ್ನು ನೀಡುವುದರೊಂದಿಗೆ ಹಾಗೂ ಶಂಕರ ಮತ್ತು ಸುಂದರ ರಾಯರು ವ್ಯವಸಾಯದಲ್ಲಿ ಇಡೀ ಹಳ್ಳಿಗೆ ನೆರವು ನೀಡುವುದರೊಂದಿಗೆ ಎಲ್ಲರ ಕನಸು ಮತ್ತೆ ಚಿಗುರುತ್ತದೆ)

ನಿರ್ದೇಶಕರ ಟಿಪ್ಪಣಿ:
ದೃಶ್ಯ 104 ತಾನು ಯಾಕೆ ಇಲ್ಲಿಗೆ ಬಂದೆ ಎನ್ನುವ ಪ್ರಶ್ನೆಯೊಡನೆ ಶಂಕರ ಹೊರಟುನಿಂತಾಗ ನಾವು ಬದುಕಿದ್ದೇವೆ ಎನ್ನುವುದೇ ಬದುಕಿಗೆ ಸಾಕ್ಷಿ ಎನ್ನುವ ಮಾತಿನ ಮೂಲಕ ಮುತ್ಯ ಶಂಕರನಿಗೆ ಬದುಕಿನತ್ತ ಮುಖಮಾಡಲು ತಿಳಿಸುತ್ತಾನೆ. ಆದರೆ ವಿಮುಖ ಮನಸ್ಥಿತಿಯಲ್ಲಿದ್ದ ಶಂಕರನಿಗೆ ತನ್ನ ತಂದೆ ಮತ್ತು ತಾಯಿಯೂ ಕೂಡ ಅಲ್ಲಿಗೆ ಬಂದದ್ದು ಹೊಸ ಉತ್ಸಾಹವೊಂದನ್ನು ನೀಡುತ್ತದೆ. ಅವರೊಡನೆ ಮನೆಗೆ ಬಂದಾಗ ವರಲಕ್ಷ್ಮಿಯೂ ಬಂದಿರುವುದನ್ನು ಕಂಡಾಗಲಂತೂ ತನ್ನ ಬದುಕು ಇಲ್ಲೇ ಎಂಬುದು ಅರಿವಿಗೆ ಬರುತ್ತದೆ. ಮತ್ತು ಅದನ್ನು ಅಷ್ಟೇ ಸಮಂಜಸವಾಗಿ, ಸಮರ್ಪಕವಾಗಿ ಬಳಸಿಕೊಳ್ಳಲು ನಿರ್ಧರಿಸುತ್ತಾನೆ. ಚಿಗುರಿದ ಕನಸಿಗೆ ಒಂದು ಸಂಭ್ರಮದ ಮುಕ್ತಾಯ ದೊರೆಯುತ್ತದೆ. ಇಡೀ ಚಿತ್ರದ ಆಶಯ ಮತ್ತು ಚಿತ್ರದ ಒಳಗಿನ ಹೂರಣವನ್ನು ಒಂದು ಅನುಭವವಾಗಿಸುವತ್ತ ಎಲ್ಲ ನಟನಟಿಯರ ತಂಡ ಬಹಳ ಪಕ್ವವಾಗಿ ಆ ಪಾತ್ರಗಳನ್ನು ಅನುಭವಿಸುವುದರ ಮುಖಾಂತರ ಮತ್ತು ಆಯಾ ತಂತ್ರಜ್ಞರು ತಮಗೆ ಸಂಬಂಧಪಟ್ಟ ಕೆಲಸಗಳನ್ನು ಅತಿ ಸೂಕ್ಷ್ಮತೆಯಿಂದ, ಕಲೆಗಾರಿಕೆಯಿಂದ ಕಟ್ಟಿಕೊಟ್ಟಿದ್ದರಿಂದ ಒಟ್ಟಾರೆಯಾಗಿ ಈ ಚಿತ್ರ ಇಂದಿನ ಸಾಮಾಜಿಕ ಪರಿಸರದಲ್ಲಿ ಮೂಲ ಬೇರುಗಳನ್ನು ಹುಡುಕುವ ಹಲವು ಮನಸ್ಸುಗಳು ತಮ್ಮ ಮೂಲ ಜಾಗಗಳತ್ತ ಮುಖಮಾಡುವಂತೆ ಒಂದು ಅನುಭವವನ್ನು ಕೊಡುವುದರಲ್ಲಿ ಯಶಸ್ವಿಯಾಗಿದೆ. ಕನ್ನಡ ಚಲನಚಿತ್ರರಂಗದ ಇತಿಹಾಸದಲ್ಲಿ ಇಂತಹ ಅಮೋಘ ಪ್ರಯತ್ನಗಳನ್ನು ನಾವು ಕಾಣುತ್ತೇವೆ. ಕೃಷಿಕ ಸಮುದಾಯದ, ಶ್ರಮಿಕ ಸಮುದಾಯದ ಬದುಕಿನ ಜೊತೆಯಲ್ಲೆ ನಮ್ಮ ಸಮಾಜಮುಖಿ ಜೀವನವಿದೆ ಎಂಬುದನ್ನು ನಾವು ಅರ್ಥಮಾಡಿಕೊಳ್ಳಬೇಕಾದ್ದು ಬಹಳ ಮುಖ್ಯ ಎಂದು ಡಾ.ರಾಜ್ ಕುಮಾರ್‌ರವರ ಬಂಗಾರದ ಮನುಷ್ಯದ ನಂತರ ಅಷ್ಟೇ ಸಮರ್ಥವಾಗಿ ಶಿವರಾಜ್ ಕುಮಾರ್‌ರವರ ಜೊತೆಯಲ್ಲಿ ನಿರ್ಮಿಸಿದ ಚಿಗುರಿದ ಕನಸು ಧ್ವನಿಸುತ್ತದೆ. ಈ ಅಪೂರ್ವ ಚಿತ್ರದ ಚಿತ್ರಕಥೆ ಸುಮಾರು 104 ದೃಶ್ಯಗಳಿದ್ದರೂ ಕೂಡ ಚಲನಚಿತ್ರದಲ್ಲಿ ಕಾಣುವುದು ಅದರ ಸಂಕಲಿತ ಆವೃತ್ತಿ. ಇಂತಹ ಪ್ರಯತ್ನಗಳು ಇಂದಿಗೂ ಆಗಲಿ ಎಂಬುದಕ್ಕೆ ಆಧಾರವಾಗಿ ಈ ಚಿತ್ರಕಥೆಯನ್ನು ನಿಮಗೆ ಅರ್ಪಿಸುತ್ತಿದ್ದೇನೆ.

# ಮುಕ್ತಾಯ

**ಸಹ–ನಿರ್ದೇಶನ**
ರಘುನಂದನ್.ಬಿ

**ಸಹಾಯಕ ನಿರ್ದೇಶಕ**
ಶೇಖರ್.ಕೆ
ರಾಜು ಮೊಕಾಶಿ ಜಮಖಂಡಿ
ಸುನೀಲ್ ಹುಡ್ಗಿ

**ಸಾಹಿತ್ಯ**
ವಿ.ಮನೋಹರ್
ಜಯಂತ ಕಾಯ್ಕಿಣಿ

**ನಿರ್ಮಾಣ ನಿರ್ವಹಣೆ**
ಚೆನ್ನ
ಮಲ್ಲಿಕಾರ್ಜುನ.ಕೆ

**ಹಿನ್ನಲೆ ಸಂಗೀತ ಸಹಾಯ**
ಸ್ಯಾಕ್ಸ್ ರಾಜಾ

**ಹಿನ್ನಲೆ ಗಾಯಕರು**
ಡಾ.ರಾಜ್‌ಕುಮಾರ್
ಉದಿತ್ ನಾರಾಯಣ್
ಶಂಕರ್ ಮಹದೇವನ್
ಶಿವರಾಜ್‌ಕುಮಾರ್
ರಾಜೇಶ್ ಕೃಷ್ಣನ್
ಮಹಾಲಕ್ಷ್ಮೀ ಅಯ್ಯರ್
ನಂದಿತ
ಎ.ಪಿ.ಪಟ್ನಾಯಕ್
ಗೀತಾ ಬಾಲಸುಬ್ರಮಣ್ಯಂ
ಮಾ.ಕಿಷನ್
ಸೇಸಮ್ಮ ಉಪ್ಪಿನಂಗಡಿ
ವಸುಧಾ ಗಿರಿಧರ್

**ಪ್ರಸಾದನ**
ಮೇಕಪ್ ನಾಣಿ
ದಿನೇಶಾಚಾರ್

**ವಸ್ತ್ರಾಲಂಕಾರ**
ವೆಂಕಟೇಶ
ಸಾಯಿಬಾಬು

**ಕೇಶಾಲಂಕಾರ**
ಸುಮನ್
ಗಿರೀಶ್

**ಸ್ಥಿರ ಚಿತ್ರಣ**
ಬದರಿನಾಥ್
ಹರೀಶ್

**ತಾಂತ್ರಿಕ ಸಹಾಯಕರು ಛಾಯಾಗ್ರಹಣ**
ಉಮೇಶ್ ಎಂ ವೇದಮೂರ್ತಿ

**ಕಲೆ**
ರಘು ಗಣಪತಿ

**ಸಂಕಲನ ಸಹಾಯ**
ವಿನೋದ್ ಮನೋಹರ್
ವಿದ್ಯಾ ಮನೋಹರ್, ಬಾಬು

**ಸಾಹಸ**
ಪ್ರೇಮ್
ಜಗ್ಗು

**ನೃತ್ಯ**
ಬನ್‌ಸೆಂಟ್ ರಂಗನಾಯಕಿ

**ಪ್ರಸಾದನ**
ನಾರಾಯಣ
ರಾಮು
ರವಿ ಬಾಬು
ರಾಜು

**ವಸ್ತ್ರಾಲಂಕಾರ**
ಗೌಡ ಪುಟ್ಟಸ್ವಾಮಿ

**ಸ್ಟಿಡಿ ಕ್ಯಾಮೆರಾ**
ರಾಮು

*ಸಹಾಯ*
ಪ್ರಕಾಶ್

**ಧ್ವನಿದಾನ**
ಗಾಯಿತ್ರಿ ಅನಂತನಾಗ್
ಹರಿಣಿ ಕೃಷ್ಣಮೂರ್ತಿ
ಕೀರ್ತಿ
ಮುರಳಿ
ಪ್ರಭಂಜನ್
ಕಲ್ಪನಾ ನಾಗನಾಥ್
ಜಯರಾಜ್
ಮಂಜು
ಆಶಾ
ಜಾಫರ್ ಮೊಯಿದ್ದೀನ್
ಅನಿತಾ

**ಡಿಟಿಎಸ್**
ದೀಪನ್ ಚಟರ್ಜಿ 4ಫ್ರೇಮ್

**ಎಫೆಕ್ಟ್ಸ್**
ಲಿಯೋ ವಿಷನ್

**ಪತ್ರಿಕಾ ಸಂಪರ್ಕ**
ಹರೀಶ್

**ಪ್ರಚಾರ ಕಲೆ**
ಗಂಗಾಧರ್ ಸೋಮು

**ಸೌಂಡ್ ಎಫೆಕ್ಟ್ಸ್**
ರಾಜನ್

**ಸಂಕಲನ ಕೇಂದ್ರ**
ಪೂರ್ಣಿಮಾ ಪ್ರೊಡಕ್ಷನ್ ಆ್ಯವಿಡ್
ಬೆಂಗಳೂರು

**ನಿರ್ವಹಣೆ**
ರಮೇಶ್ ಕೋಲಾರ

*ಸಹಾಯ*
ರವಿ
ದೇವೇಂದ್ರ

**ವರ್ಣ ಸಂಸ್ಕರಣೆ**
ಪ್ರಸಾದ್ ವರ್ಣ ಸಂಸ್ಕರಣ ಕೇಂದ್ರ
ಬೆಂಗಳೂರು

**ಹೊರಾಂಗಣ ಚಿತ್ರೀಕರಣ ಘಟಕ**
ಪೂರ್ಣಿಮಾ ಹೊರಾಂಗಣ ಚಿತ್ರೀಕರಣ
ಘಟಕ, ಬೆಂಗಳೂರು

**ಬೆಳಕು**
ಮುಕುಂದ, ದೇವರಾಜ್
ಸುಧಾಕರ್, ರವೀಂದ್ರ
ಬಸವರಾಜ್, ವಾಲೆಮೋಹನ್
ನಾರಾಯಣ್, ನಾಗರಾಜ್

**ಎಲೆಕ್ಟ್ರೀಷಿಯೆನ್**
ಸಭಾಪತಿ ನಂಜಪ್ಪ

**ಕ್ಯಾಮೆರಾ ಸಹಾಯಕರು**
ಪ್ರಕಾಶ್
ಬದ್ರಿ ನಾರಾಯಣ್
ಶ್ಯಾಮ್
ಪ್ರಸನ್ನ

**ಹಾಡುಗಳ ಧ್ವನಿಮುದ್ರಣ,**
**ಪುನರ್ ಧ್ವನಿಮುದ್ರಣ,**
**ಮಾತುಗಳ ಜೋಡಣೆ**
ಆಕಾಶ್ ರೆಕಾರ್ಡಿಂಗ್ ಥಿಯೇಟರ್
ಬೆಂಗಳೂರು

**ಹಾಡುಗಳ ಧ್ವನಿಮುದ್ರಣ**
ಮುರಳಿ

**ಮಾತುಗಳ ಜೋಡಣೆ**
ಆನಂದ್ ವೈ ಎಸ್

**ಧ್ವನಿಗ್ರಹಣ**
ಶ್ರೀಧರ್
ಮಂಜು

**ನಿರ್ಮಾಣ ಸಹಾಯಕರು**
ದೇವರಾಜ್
ಕುಳ್ಳ ಸೀನ
ದೊಡ್ಡ ಮೂರ್ತಿ
ಕುಮಾರ್
ರುದ್ರಯ್ಯ
ಮುರುಗೇಶ್
ಸಿದ್ದಯ್ಯ
ಮಹದೇವ್

**ಮೆಸ್**
ಸೀನ, ಮಹೇಶ
ಶ್ರೀನಿವಾಸ, ಶಿವ

**ವಾಹನ ಕಲಾವಿದರು**
ಮರಿಯಪ್ಪ
ಬಾಬು
ಪ್ರಕಾಶ್
ರಾಮುಶೆಟ್ಟಿ
ಶಿವರಾಜ್

**ಕಲಾವಿದರು**
ರತ್ನಮಾಲ
ಅಂಜಲಿ
ನಂದಿನಿ
ಶೋಭ
ನಿರುಪಮಾ ಗುಪ್ತಾ
ಅಮಿತಾಬ್ ಶ್ರೀವಾತ್ಸವ್
ಎಂ.ಕೆ.ಮಠ.ಉಪ್ಪಿನಂಗಡಿ
ರಘುನಂದನ್.ಬಿ
ರಾಜೇಶ್
ರಘು
ಯಲ್ಲಪ್ಪ
ಪ್ರಕಾಶ್
ಶ್ರೀಧರ್
ಕನ್ನಯ್ಯ
ಪ್ರಕಾಶ್
ದಿನೇಶ್
ಉಮೇಶ್
ಕಿಶೋರ್
ಸೂರಜ್
ಪವನ್‌ಕುಮಾರ್
ಫಬಿತ್ರೋ
ಪಂಕಜ್

**ಹಂಚಿಕೆದಾರರು**

ಶ್ರೀ ವಜ್ರೇಶ್ವರಿ ಕಂಬೈನ್ಸ್, ಬೆಂಗಳೂರು
ಶ್ರೀ ವಜ್ರೇಶ್ವರಿ ಮೂವೀಸ್, ಹುಬ್ಬಳ್ಳಿ

**ನಿರ್ಮಾಪಕರು**

ಶ್ರೀಮತಿ ಪಾರ್ವತಮ್ಮ ರಾಜ್‌ಕುಮಾರ್

**ಚಿತ್ರಕಥೆ-ನಿರ್ದೇಶನ**

ಟಿ.ಎಸ್.ನಾಗಾಭರಣ